ಸಂಕಲನ ೧೧



ಸಂಪಾದಕರು:

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈ ಬರೆಹದ ಅಥವಾ ಟೈಪ್ ಮಾಡಿದ ಇಲ್ಲವೆ ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೨. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಸ್ವೀಕೃತವಾಗುವ ಯಾವುದೇ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಈ ಕುರಿತು ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೩. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವ-ವಿಳಾಸದ ಕವರ್ ಅಥವಾ ಅಂಚೆ ಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೪. ಸ್ವೀಕೃತಿ ಮತ್ತು ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾ ಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೫. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦ - ೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

ವಿನಂತಿ

೧. ಸಂಕಲನವನ್ನು ಮೆಚ್ಚಿ ಅನೇಕರು ಪತ್ರ ಬರೆದಿದ್ದಾರೆ, ಹೇಳಿದ್ದಾರೆ. ಆದರೆ ಪತ್ರಿಕೆಯ ಬುನಾದಿಯನ್ನು ಆರ್ಥಿಕವಾಗಿ ಭದ್ರಪಡಿಸದಿದ್ದರೆ ಪ್ರತಿನಿತ್ಯ ಏರುತ್ತಿರುವ ಈಗಿನ ಬೆಲೆಗಳ ನಡುವೆ ಇದನ್ನು ನಡೆಸುವುದು ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ ಸಂಕಲನವನ್ನು ಪ್ರೀತಿಸುವ ಗೆಳೆಯರು ತಮ್ಮ ಸ್ನೇಹವಲಯದ ಕನಿಷ್ಠ ಇಬ್ಬಿಬ್ಬರನ್ನಾದರೂ ಚಂದಾದಾರರನ್ನಾಗಿ ಮಾಡಿಕೊಡಲು ವಿನಂತಿ.

೨. ಈ ವರ್ಷದ ನವಂಬರ್ ೨೦೦೩ ರಲ್ಲಿ ಪ್ರಕಟವಾಗುವ ಸಂಕಲನ - ೧೨ ತಲುಪಿದ ಕೂಡಲೇ ಮುಂದಿನ ವರ್ಷದ ೨೦೦೪ ರಲ್ಲಿ ಬರುವ ಸಂಕಲನ ೧೩ - ೧೮ ರ ವರೆಗಿನ ಆರು ಸಂಚಿಕೆಗಳ ಚಂದಾ ಹಣ ರೂ. ೧೫೦/- ನ್ನು ನೆನಪೋಲೆಗಳಿಗಾಗಿ ಕಾಯದೆ ದಯವಿಟ್ಟು ಎಂ.ಓ. / ಡಿ.ಡಿ. / ಚೆಕ್ ಕಳಿಸಿ ಸಹಕರಿಸಿರಿ.

೩. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೪. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ೧೦೦/- ಕಳಿಸಲಾಗುವುದು.

ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೧೧

೧೪ ಸಪ್ಟಂಬರ್ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

RNI No. KARKAN 14160 / 10 / 1 / 2002 - TC

SANKALANA : A Kannada Literary Magazine
Volume 2, Issue 5 : 14 Septermber 2003
Edited by **Dr. Siddhaling Pattanshetti**
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Ptd. by Saraswati Offset Printers, Shivaji Rd. Dharwad-1

•

•

•

ಸಂಕಲನ - ೧೧ :
ಸಂಪುಟ ೨, ಸಂಚಿಕೆ ೫ : ೧೪ ಸಪ್ಟಂಬರ್ ೨೦೦೩

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ -೫೮೦ ೦೦೪
✆ ೦೮೩೬-೨೪೬ ೨೬೧೮
E-mail : spattanshetti@indiatimes.com
: spattanshetti@sify.com

ಸಂಕಲನ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೪
ಮತ್ತು ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೩ ರಲ್ಲಿ ಪ್ರಕಟವಾಗುವ ಸಂಕಲನದ ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/- ಚಂದಾ ಹಣವನ್ನು ಮನಿಆರ್ಡರ್ / ಕ್ರಾಸ್ ಮಾಡಿದ ಡಿ. ಡಿ. / ಚೆಕ್ ಮೂಲಕ **ಸಂಕಲನ** ಅಥವಾ ಸಂಪಾದಕರ ಹೆಸರಿಗೆ ಕಳಿಸುವುದು. ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಛಾಯಾಕ್ಷರಣ : ಬಿಜಿಗ್ರಾಫಿಕ್ಸ್, ೧ ನೇ ಮೇನ್, ವಿಜಯನಗರ, ಧಾರವಾಡ - ೩

ಸಂಪಾದಕರ ಮಾತು

'ಭಾರತೀಸುತ' ಎಂಬ ಸಾಹಿತ್ಯನಾಮದಿಂದ ಪ್ರಖ್ಯಾತರಾಗಿದ್ದ ಮಡಿಕೇರಿಯ ಎಸ್. ಆರ್. ನಾರಾಯಣರಾವ್ ಕನ್ನಡ ಕಾದಂಬರಿಲೋಕವನ್ನು ಶ್ರೀಮಂತಗೊಳಿಸಿದ್ದವರು. ಸ್ವಾತಂತ್ರ್ಯ ಹೋರಾಟಗಾರ, ನಾಡು-ನುಡಿ ಅಭಿಮಾನಿ, ಚಿಂತಕ, ಉದಾರಹೃದಯಿಯಾಗಿದ್ದ ಅವರು ತಮ್ಮ ಸುತ್ತಣ ಜನಜೀವನದ ಸಂಸ್ಕೃತಿಯನ್ನು ಚಿತ್ರಿಸಿ ಅದಕ್ಕೆ ಹೆಚ್ಚಿನ ಲೋಕಮನ್ನಣೆ, ಗೌರವ, ಪ್ರೀತಿ ಸಿಗುವಂತೆ ಮಾಡಿದ್ದರು. ಬದುಕಿನುದ್ದಕ್ಕೂ ಬಡತನ, ನಿರ್ಲಕ್ಷ್ಯ, ತಾತ್ಸಾರಗಳನ್ನೇ ಅನುಭವಿಸಿದ್ದರೂ ಒಂದು ಬಗೆಯ ಛಲದಿಂದ ಬದುಕಿದ್ದರು, ಸ್ವಯಂನಿರ್ಮಿತ ಆದರ್ಶಗಳ ಶಿಕ್ಷಕರಾಗಿದ್ದರು, ಲೇಖಕರಾಗಿದ್ದರು.

ಭಾರತೀಸುತರ ಮಗಳು ಕುಸುಮಾ ಶಾನಭಾಗರಿಗೆ ತಮ್ಮ ತಾಯಿ -ತಂದೆಯವರನ್ನು ಕುರಿತು 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಗೆ ಒಂದು ಲೇಖನ ಬರೆದುಕೊಡಲು ಬಹಳ ಹಿಂದೆಯೇ ಕೇಳಿಕೊಂಡಿದ್ದೆವು.. ಅವರ ಲೇಖನ ಕೈಗೆ ಬಂದಾಗ ಸಹಜ ಕುತೂಹಲದಿಂದ ಭಾರತೀಸುತರ ಬಗ್ಗೆ 'ಕರ್ನಾಟಕ - ಕನ್ನಡ ವಿಷಯ ವಿಶ್ವಕೋಶ'ದಲ್ಲಿ ಬಂದ ಲೇಖನ ಓದಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ೧೯೭೯ ರಲ್ಲಿ ಪ್ರಕಟಿಸಿದ ಡೆಮಿ ೧/೪ ಆಕಾರದ ೧೬೮೬ ಪುಟಗಳ ಬೃಹತ್ ಕೃತಿಯ ಈ ಲೇಖನದಲ್ಲಿ ಭಾರತೀಸುತರ ಜನ್ಮದಿನಾಂಕ, ಶಾಲೆ, ಶಾಲಾಶಿಕ್ಷಕರು, ಸೆರೆಮನೆಯಲ್ಲಿ ಸಂಗಾತಿಗಳಾಗಿದ್ದ ರಾಷ್ಟ್ರಖ್ಯಾತಿಯ ಚಿಂತಕರು ಮುಂತಾದವರ ಬಗೆಗಿನ ವಿವರಗಳು, ಹಾಗೂ ಕುಸುಮಾ ಅವರು ನೀಡಿದ ವಿವರಗಳಲ್ಲಿ ಅಂತರ ಕಂಡುಬಂದವು. ಭಾರತೀಸುತರು ತೀರುವಾಗ ಇನ್ನೂ ಚಿಕ್ಕವಳಾಗಿದ್ದ ಕುಸುಮಾಳೇ ತಪ್ಪಿರಬಹುದೆಂದು ಭಾವಿಸಿ, ಆ ಸಂದೇಹಗಳನ್ನು ಪಟ್ಟಿಮಾಡಿ 'ವಿಶ್ವಕೋಶ'ದಲ್ಲಿ ಬಂದಿರುವ ವಿವರಗಳನ್ನು ಇನ್ನೊಮ್ಮೆ ನೋಡಿ ತಮ್ಮ ಲೇಖನವನ್ನು ಪರಿಷ್ಕರಿಸಿ ಕೊಡುವಂತೆ ತಿಳಿಸಿದೆವು. ಸ್ವತಃ ಲೇಖಕಿ, ಪತ್ರಕರ್ತೆ, ಜಿಜ್ಞಾಸುವಾಗಿರುವ ಕುಸುಮಾ ಎಲ್ಲವನ್ನೂ ಪರಿಷ್ಕರಿಸಿ ತಮ್ಮ ಲೇಖನ ಎಲ್ಲ ರೀತಿಯಿಂದ ನಿರ್ದುಷ್ಟವಾಗಿದೆ ಎಂದು ತಿಳಿಸಿದರು. ಆ ಲೇಖನ **ಸಂಕಲನ-೧೧** ರಲ್ಲಿ ಪ್ರಕಟವಾಗಿದೆ.

ಈಗ ನಮ್ಮ ಜಿಜ್ಞಾಸೆ ಮತ್ತು ಚಿಂತೆ 'ಕರ್ನಾಟಕ' ವಿಶ್ವಕೋಶದ ಅಥೆಂಟಿಸಿಟಿ ಮತ್ತು ಸತ್ಯತೆಯ ಬಗ್ಗೆ. ಒಂದು ವಿಶ್ವಕೋಶದಲ್ಲಿ ಸೇರ್ಪಡೆಯಾಗುವ ಲೇಖನವನ್ನು ತಯಾರಿಸುವವರು ಮಾಡಿಕೊಳ್ಳುವ ಸಿದ್ಧತೆ, ಸಂಪಾದಕರು ಪರಿಷ್ಕರಿಸುವ ವಿಧಾನ, ಪ್ರಕಟಿಸುವ ಸಂಸ್ಥೆಯ ಗೌರವ ಎಲ್ಲವನ್ನೂ ಸಂಶಯದಿಂದ ನೋಡುವ ಪ್ರಸಂಗ ಯಾಕೆ ಬರಬೇಕು ? ಕನ್ನಡದಲ್ಲಿ ಇಂಥ ಕೃತಿಗಳು ಮತ್ತೆ ಮತ್ತೆ ಪ್ರಕಟವಾಗುವಂಥವಲ್ಲ. ಭಾರತೀಸುತರು ತೀರಿದ್ದು ೧೯೭೬ ರಲ್ಲಿ. ಈ ವಿಶ್ವಕೋಶ ಪ್ರಕಟವಾದದ್ದು ೧೯೭೯ ರಲ್ಲಿ. ಅಂದರೆ ಬಹುಶಃ ೧೯೭೭ - ೭೮ ರಲ್ಲಿ ಬರೆಯಲ್ಪಟ್ಟಿರಬಹುದಾದ ಪ್ರಸ್ತುತ ಲೇಖನದಲ್ಲಿ ಇಂಥ ಪ್ರಮಾದಗಳು ಸೇರುವಷ್ಟು ಕಾಲದ ಅಂತರವಂತೂ ಖಂಡಿತ ಆಗಿರಲಿಲ್ಲ. ಆದರೆ ಕಾಲಾನಂತರದಲ್ಲಿ ಇಂಥ ಬರೆಹಗಳು ನಿರಂತರವಾಗಿ ದೋಷಗಳನ್ನೇ ಬಿತ್ತುತ್ತ ಬೆಳೆಸುತ್ತ ಮುಂದಿನ ಪೀಳಿಗೆಗಳನ್ನು ಜ್ಞಾನಾಕಾಂಕ್ಷಿಗಳನ್ನು ತಪ್ಪುದಾರಿಗಳಲ್ಲಿ ನಡೆಸಿದರೆ ಯಾರನ್ನು ದೂರಬೇಕು ? ತಿದ್ದುಪಡಿಗಳನ್ನು ಯಾರುಯಾರಿಗೆ ಹೇಗೆ ತಿಳಿಸಬೇಕು ? ಬಹುಶಃ ಸರ್ಚ್, ರಿಸರ್ಚ್; ಶೋಧನೆ, ಸಂಶೋಧನೆ, ಪರಿಶೋಧನೆ ಮುಂತಾದ ಹುಡುಕಾಟದ ಪದಗಳನ್ನು ನೆನೆಸಿ ಸಮಾಧಾನ ಪಡುವುದೇ ಲೇಸೇನೊ.

೧ ಸಪ್ಟಂಬರ್, ೨೦೦೩
ಹೊಮನೆ, ಧಾರವಾಡ - ೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

ಸಂಪಾದಕರ ಮಾತು / ೩

೧. ನನ್ನ ಅಣ್ಣ ನನ್ನ ಅಮ್ಮ : 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೫ : ಕುಸುಮಾ ಶಾನಭಾಗ / ೫ - ೧೧

೨. ಕವಿತೆಗಳು : ೧. ಮಿಣಿಗವನಗಳು ೨. ವಲಸೆ ಹಕ್ಕಿಗಳು : ಜಂಬಣ್ಣ ಅಮರಚಿಂತ / ೧೨ - ೧೩

೩. ಸಂಘಾತ : ಕವಿತೆ : ವಾಸಂತಿ ಪ್ರಭಾಕರ ನಾಯಕ/ ೧೩ - ೧೪

೪. ಇರಲಿ ಬಿಡು ಅವರು ಅಲ್ಲೆ : ಕವಿತೆ : ನಿರ್ಮಲ ವೀರಣ್ಣ/ ೧೪

೫. ಕೇರಳದ ನಾಯರ್ ಸಮಾಜದಲ್ಲಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ : ವಿಶ್ಲೇಷಣೆ : ಮುರಳೀಧರನ್ ಟಿ. / ಪಾರ್ವತಿ ಜಿ. ಐತಾಳ್/ ೧೫ - ೨೧

೬. ಅಕ್ಷರದ ಮೂಲಕ ಬಿಡುಗಡೆ : ಪಾಲೊ ಫ್ರೇರೀಯ ಕೆಲವು ವಿಚಾರಗಳು : ಪುನರ್ವಾಚನ : ಸಿ. ನಾಗಣ್ಣ / ೨೨ - ೨೯

೭. ಪ್ರೀತಿ : ಕವಿತೆ : ಹಾ. ವೆಂ. ನಾಗೇಶ್ / ೨೯ - ೩೦

೮. ಗೀತಾ ನಾಗಭೂಷಣ ಅವರ ಕಾದಂಬರಿ 'ಬದುಕು' : ಲಲಿತಾ ಸಿದ್ದಬಸವಯ್ಯ /೩೦ - ೩೫

೯. 'ಮಾತಾಡುವ ಮರ' : ವಿಶೇಷ ಚಿಂತನೆ : ಹರಿಯಪ್ಪ ಪೇಜಾವರ / ೩೫ - ೪೨

೧೦. ಮಾಳವಾಡರ ಆತ್ಮಕಥೆ 'ದಾರಿ ಸಾಗಿದೆ' : ಪರಿವೀಕ್ಷಣೆ : ಶಶಿಧರ ತೋಡಕರ / ೪೩ -೪೬

೧೧. ಚೇಂಜ್ ಆಫ್ ಗಾರ್ಡ್ಸ್ : ಕತೆ : ಆರ್ಯ / ೪೬ - ೫೩

೧೨. ಗಟ್ಟಿಗಿತ್ತಿ : ನಾಟಕ : ಎಚ್. ಎಸ್. ಉಮೇಶ / ೫೩ - ೫೯

೧೩. ನಿನ್ನ ಘನರೂಪದೊಳೆಂದು ಮೋಹಮುಡಂಗಿರ್ದುದೋ ! : ಲಲಿತ ನಿಬಂಧ : ವಸಂತಕುಮಾರ ಪೆರ್ಲ / ೬೦ - ೬೫

೧೪. ಪುಸ್ತಕ ಪರಿಶೀಲನೆ : / ೬೫ - ೭೭

೧. ಬಹುಮುಖಿ : ಎಂ. ಪಿ. ಪ್ರಕಾಶ್ : ಚಂದ್ರಶೇಖರ ವಸ್ತ್ರದ, ೨. ಎಲೆ ಎಸೆದ ಮರ : ಕೆ. ಪಿ. ಮೃತ್ಯುಂಜಯ, ೩. ಇಹದ ಸ್ವರ : ಲಲಿತಾ ಸಿದ್ದಬಸವಯ್ಯ : ಅಶೋಕ ಶೆಟ್ಟರ್, ೪. ಸಾಹಿತ್ಯದ ಸಪ್ತಧಾತುಗಳು : ಯಶವಂತ ಚಿತ್ತಾಲ : ರಾಮಚಂದ್ರ ದೇವ, ೫. ಮುಗಿಲ ಸಾಲು : ವಸಂತಕುಮಾರ ಪೆರ್ಲ, ೬. ಬಣ್ಣ ಬಯಲು : ಡಿ. ಎಸ್. ಚೌಗಲೆ, ೭. ಶ್ರೀ ಮುದುಗಲ್ಲು ವೆಂಕೋಬಶೆಟ್ಟರು : ಏಳಂಜಿ ಹನುಮಂತಶೆಟ್ಟಿ, ೮. ನೆನಪಿನ ಹೂಗೊನೆ : ಎಂ. ಸಿ. ಅಂಟಿನ, ೯. ಅನೂಹ್ಯ : ಗಣೇಶ ಪ್ರಸಾದ ಪಾಂಡೇಲು, ೧೦. ತಮ : ಬಸವರಾಜ ಪಿ. ಡೋಣೂರ : ಜಿ. ಎಂ. ಹೆಗಡೆ, ೧೧. ಇಂಗ್ಲೆಂಡ್ ಕವನಗಳು : ನಾ. ದಾಮೋದರ ಶೆಟ್ಟಿ, ೧೨. ಉದಕದೊಳಗಣ ಬೆಂಕಿ : ಮಹಾಂತಪ್ಪ ನಂದೂರ : ಜಗದೀಶ ಮಂಗಳೂರಮಠ, ೧೩. ಬೆಡಗಿನೆದುರಿನ ಬೆರಗು : ಮೋಹನ ನಾಗಮ್ಮನವರ : ಅಪ್ಪಾಸಾಹೇಬ ಸನದಿ, ೧೪. ಕಾಡುಕೋಳಿ - ಜೋಡಿನವಿಲು : ಕಿಕ್ಕೇರಿ ನಾರಾಯಣ : ಸಂಪಿಗೆ ತೋಂಟದಾರ್ಯ, ೧೫. ಎಲ್ಲ ಕವಿತೆಗಳು : ಜಿ.ಎಸ್.ಅವಧಾನಿ : ಆರ್. ಎಂ. ಹೆಗಡೆ, ೧೬. ಬಿಡಿಹರಳು : ಲಲತಾ ಸಿದ್ದಬಸವಯ್ಯ : ಎಂ. ಆರ್. ಮುಂದಾರವಲ್ಲಿ

೧೫. ಸಂಕಲನ : ಅನಿಸಿಕೆ : ೭೭ - ೭೯

೧೬. ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ : ೮೦ + ಆವರಣ ಪುಟ ೩

ನನ್ನ ಅಣ್ಣ ನನ್ನ ಅಮ್ಮ

ಕುಸುಮಾ ಶಾನಭಾಗ

ಆತನ ಬರವಣಿಗೆಯ ಮೊದಲ ಓದುಗಳು ಅವಳು. 'ಚೆನ್ನಾಗಿದೆ' ಎಂಬ ಮೊದಲ ಪ್ರೋತ್ಸಾಹದ ಮಾತು ಆಕೆಯಿಂದಲೇ ಆತನಿಗೆ. ತನ್ನ ಸೋಮಾರಿತನದಿಂದಲೋ ಅಲಕ್ಷ್ಯದಿಂದಲೋ ತೊಂದರೆಯಾಗಿ ಆಕೆಗೆ ಸಿಟ್ಟುಬಂದಿದೆ ಎಂದು ಗೊತ್ತಾದ ಕೂಡಲೇ ಆತ ಸದ್ದಿಲ್ಲದೆ ಜಾಗ ಖಾಲಿ ಮಾಡಿ ಹೊರಗಿನ ಜಗುಲಿಯ ಕುರ್ಚಿಯಲ್ಲಿ ಕುಳಿತು ಏನೂ ಆಗಿಲ್ಲವೆಂಬಂತೆ ಮಿಕಿ-ಮಿಕಿ ನೋಡುತ್ತಿದ್ದ. ಆತ ಬರೆಯುತ್ತಿದ್ದಾಗ ತಾನು ಜೋರಾಗಿ ಗೊಣಗಿ ಅಡ್ಡಿಪಡಿಸಿದೆ ಎಂದು ಆಕೆಗೆ ಗೊತ್ತಾದ ಕೂಡಲೇ ಅಡುಗೆಕೋಣೆಗೆ ಹೋಗಿ ಕೊಳದಪ್ಪಲೆಯಲ್ಲಿ ಮಾಡಿಟ್ಟಿದ್ದ ಬೆಲ್ಲದ ಕಾಫಿಗೆ ಹಾಲು ಬೆರೆಸಿ ಕುದಿಯುವಷ್ಟು ಬಿಸಿ ಮಾಡಿ ಲೋಟದಲ್ಲಿ ತುಂಬಿ ಅವನೆದುರು ಹಾಜರಾಗುತ್ತಿದ್ದಳು. ಆತ ಸೇದುತ್ತಿದ್ದ ಬೀಡಿಯಲ್ಲಿ ಬೆಂಕಿಯಿಲ್ಲದ್ದು ಗೊತ್ತಾಗಿ ಬೆಂಕಿಕಡ್ಡಿ ಗೀರಿ ಹತ್ತಿಸಿಕೊಡುತ್ತಿದ್ದಳು. ಹೀಗೆ ಒಬ್ಬರ ಮೇಲೊಬ್ಬರು ಸಿಟ್ಟಾಗಿದ್ದಾಗ ಸದ್ದು-ಗದ್ದಲ ಮಾಡದೆ ತಣ್ಣಗಾಗುತ್ತಿದ್ದರು. 'ಒಲವು' ಅವರ ಬದುಕಿನ ಉಸಿರಾಗಿತ್ತು. ಆತ ನನ್ನ ತಂದೆ ಶ್ಯಾನುಭೋಗರ ರಾಮಯ್ಯ ನಾರಾಯಣ ರಾವ್, ಆಕೆ ನನ್ನ ತಾಯಿ ನಾಗವೇಣಿ. ಆಲೋಚನೆ, ವಿಚಾರಗಳಲ್ಲಿ ಅವರಿಬ್ಬರಿಗೆ ಪೂರ್ವ ಪಶ್ಚಿಮದ ಅಂತರ. ಆದರೆ ಹೊಂದಾಣಿಕೆಯಲ್ಲಿ ಅಂತರವಿಲ್ಲದ ಸಂಬಂಧ.

ತಂದೆ ಹುಟ್ಟಿದ್ದು ೧೯೧೫ ಮೇ ೧೪ ರಂದು, ನಮ್ಮ ಅಜ್ಜಿಯ ತವರೂರು ಪುತ್ತೂರಾಯನ ಹೊಂಡದಲ್ಲಿ (ಮಡಿಕೇರಿ ಸಮೀಪ). ತಂದೆಯ ಹಳ್ಳಿ ಚಯ್ಯಂಡಾಣೆಗೆ ಹತ್ತಿರದ ದಾರೋಟು. ನಮ್ಮಜ್ಜಿ ಸುಬ್ಬಮ್ಮ ಬಾಣಂತನ ಮುಗಿಸಿಕೊಂಡು ಮಗುವನ್ನು ಕರಕೊಂಡು ದಾರೋಟಿಗೆ ಎತ್ತಿನಗಾಡಿಯಲ್ಲಿ ಹೋದರಂತೆ. ದಾರಿಯಲ್ಲಿ ಕಾಡುಪ್ರಾಣಿಗಳು ಎರಗಬಹುದೆಂಬ ಭೀತಿ ಇತ್ತಂತೆ. ಆ ಕಾಲಕ್ಕೆ ಅದು ಬಹಳ ದೂರದ ಪ್ರಯಾಣವಾಗಿತ್ತಂತೆ. ಅವರಿಗೆ ದಾರೋಟು ತಲುಪಲು ಒಂದು ದಿನವೇ ಬೇಕಾಯಿತಂತೆ. ಈಗ ಎರಡು ಗಂಟೆಯೂ ಬೇಡ. ತಂದೆಗೆ ಎರಡು ವರ್ಷವಿದ್ದಾಗ ಅವರ ತಂದೆ ರಾಮಯ್ಯ ಮತ್ತು ಚಿಕ್ಕಪ್ಪ ದಾರೋಟು ಬಿಟ್ಟು ಬಿಳಿಗೇರಿಗೆ ಬಂದು ನೆಲಸಿದರು (ಮಡಿಕೇರಿಯಿಂದ ಏಳೆಂಟು ಮೈಲು ದೂರ). ಅಜ್ಜ ಶ್ಯಾನುಭೋಗಿಕೆ ಮಾಡುತ್ತಿದ್ದರು. ಚಿಕ್ಕಜ್ಜ ಸುಬ್ರಾಯರು ಶಿಕ್ಷಕರಾದರು. ಅವರಿಬ್ಬರಿಗೂ ಇಂಗ್ಲೀಷು ಭಾಷೆ ಚೆನ್ನಾಗಿ ಬರುತ್ತಿತ್ತು. ನಮ್ಮಜ್ಜನಿಗೆ ಬಹಳ ಸಿಟ್ಟಿತ್ತೆಂದು ಅಜ್ಜಿ ಹೇಳುತ್ತಿದ್ದರು. ತಂದೆಗೆ ಏಳು ವರ್ಷವಿದ್ದಾಗ ಅಜ್ಜ ತೀರಿಕೊಂಡರು. ನಮ್ಮ ಚಿಕ್ಕಪ್ಪ ಭೀಮಣ್ಣ ಆಗ ಹಸುಗೂಸು. ಇಬ್ಬರು ಎಳೆ ಮಕ್ಕಳನ್ನು ಕಟ್ಟಿಕೊಂಡು ನಮ್ಮ ಅಜ್ಜಿ ಆ ದಿನಗಳಲ್ಲಿ ಬಹಳ ಕಷ್ಟಪಟ್ಟರಂತೆ. ಆ ಕಾಲದಲ್ಲಿ ಸ್ತ್ರೀಯರು ಗದ್ದೆ ಉಳಬಾರದಿತ್ತು. ಆಳುಕಾಳುಗಳಿಲ್ಲದೆ ನಮ್ಮ ಅಜ್ಜಿಯೇ ಸ್ವತಃ ಗದ್ದೆ ಉತ್ತು, ಬಿತ್ತಿ ನಾಟಿ ಮಾಡಿಕೊಳ್ಳುತ್ತಿದ್ದರಂತೆ. ಅವರೊಟ್ಟಿಗೆ ಅವರ ವಿಧವೆ ತಂಗಿ ಗಂಗಮ್ಮ ಇರುತ್ತಿದ್ದರು. ಅವರಿಗೆ ಸಣ್ಣದರಲ್ಲಿ ಸನ್ನಿ ಜ್ವರ ಬಂದು ಕಾಲು ಸ್ವಲ್ಪ ಕುಂಟಾಗಿತ್ತು. ಕಿರುನಾಲಗೆ ಸೇದಿ ಹೋಗಿತ್ತು. ಅವರು ಪೇಂಟು, ಷರ್ಟು ಹಾಕಿಕೊಂಡು ತೋಟದ ಕೆಲಸ ಮಾಡುತ್ತಿದ್ದರು.

ತಂದೆ ಮಡಿಕೇರಿ ಶಾಲೆಗೆ ಸೇರಿಕೊಂಡಿದ್ದರು. ದಿನವೂ ಬಿಳಿಗೇರಿಯಿಂದ ನಡೆದುಕೊಂಡೇ ಹೋಗುತ್ತಿದ್ದರು. ಶುಕ್ರವಾರದ ಮಡಿಕೇರಿ ಸಂತೆಗೆ ಮನೆಯಲ್ಲಿ ಬೆಳೆದ ತರಕಾರಿಗಳನ್ನು ಹೊತ್ತು ತಂದು ಮಾರುತ್ತಿದ್ದರು. ಈ ಹಣದಲ್ಲಿ ಮನೆಗೆ ಬೇಳೆ, ಎಣ್ಣೆ, ಬೆಲ್ಲ ಕೊಳ್ಳುತ್ತಿದ್ದರು. ಒಮ್ಮೆ

ಮಳೆಗಾಲದಲ್ಲಿ ಸಂತೆಗೆ ಬಾಳೆಕಾಯಿ ಹೊತ್ತು ತರುತ್ತಿದ್ದಾಗ ತಂದೆ ಮಳೆಗೆ ನೆನೆದು ತೊಪ್ಪೆಯಾದರಂತೆ. ಕೊಡಗಿನ ಗೌರಮ್ಮ ತಂದೆಯನ್ನು ನೋಡಿ ಮನೆಯೊಳಗೆ ಕರೆದರಂತೆ (ಅವರ ತವರುಮನೆ ಮಡಿಕೇರಿ. ಸಂತೆಗೆ ಹತ್ತಿರದಲ್ಲಿದೆ.) ಮೈ ಒರೆಸಿಕೊಳ್ಳಲು ಮುಂಡು ಕೊಟ್ಟು, ಉಟ್ಟುಕೊಳ್ಳಲು ಪಂಚೆ ನೀಡಿದರಂತೆ. ಅವರು ಕೊಡಗಿನ ಗೌರಮ್ಮನ ಬಗ್ಗೆ ಬರೆದ ಲೇಖನದಲ್ಲಿ ಈ ಘಟನೆಯನ್ನು ನೆನಪಿಸಿಕೊಂಡಿದ್ದಾರೆ.

ನಮ್ಮ ಅಜ್ಜಿ ಅನಕ್ಷರಸ್ಥೆ. ಮಾತಿಗೊಂದು ಹಾಡು ಕಟ್ಟುತ್ತಿದ್ದರು. ಅವರ ಈ ಶಕ್ತಿ ತಂದೆಗೆ ಬಂದಿರಬೇಕು. ಶಾಲೆಯಲ್ಲಿ ಓದುತ್ತಿದ್ದಾಗ ಒಂದು ಕಥೆ ಬರೆದರಂತೆ. ಮಡಿಕೇರಿಯ ಹೈಸ್ಕೂಲಿನಲ್ಲಿ ಆಗ ಅಧ್ಯಾಪಕರಾಗಿದ್ದ ಪಂಜೆ ಮಂಗೇಶರಾಯರು ಆ ಕಥೆಯನ್ನು ಓದಿ ಮೆಚ್ಚಿಕೊಂಡು, ಪ್ರಕಟಿಸಲೆಂದು ಎಂಟಾಣೆ ಕೊಟ್ಟರಂತೆ. ತಂದೆಗೆ ಹದಿಮೂರು ವರ್ಷವಿದ್ದಾಗ 'ಪೃಥ್ವಿರಾಜ' ಎಂಬ ಸಣ್ಣ ಕಾದಂಬರಿಯನ್ನು ಬರೆದರಂತೆ. ಈಗ ಇಪ್ಪತ್ತೈದು ವರ್ಷಗಳ ಹಿಂದೆಯೂ ಈ ಕಾದಂಬರಿಯ ಹಸ್ತಪ್ರತಿ ಮಕ್ಕಿ ಸುಬ್ರಾಯರೆಂಬ ನಮ್ಮ ದೂರದ ಸಂಬಂಧಿ ಬಳಿಯಿತ್ತು. ಶಾಲೆಗೆ ಬಿಡುವಿದ್ದಾಗ ತಂದೆ ಗದ್ದೆ-ತೋಟಗಳಲ್ಲಿಯೂ ತಾಯಿ ಜತೆ ಕೆಲಸ ಮಾಡುತ್ತಿದ್ದರು.

ತಂದೆ ಹೈಸ್ಕೂಲಿಗೆ ತಲುಪಿದ ಮೇಲೆ ಸ್ವಾತಂತ್ರ್ಯ ಚಳುವಳಿ ಬಿಸಿ ಕೊಡಗಿಗೂ ತಗುಲಿತು. ಅನೇಕರು ಚಳುವಳಿಗೆ ಇಳಿದರು. ತಂದೆಯೂ ಅಜ್ಜಿಗೆ ಹೇಳದೆ ಚಳುವಳಿ ಸೇರಿದರು. ಅವರನ್ನು ಬಂಧಿಸಿ ಕೇರಳದ ತಲಚೇರಿ ಜೈಲಿನಲ್ಲಿಟ್ಟರಂತೆ. ಅಲ್ಲಿ ತಂದೆಗೆ ಕಮ್ಯುನಿಸ್ಟ್ ಧುರೀಣ ಇಎಂಎಸ್ ನಂಬೂದರಿಪಾಡ್ (ಆಗ ಅವರು ಕಾಂಗ್ರೆಸ್‌ನಲ್ಲಿದ್ದರು) ಪರಿಚಯವಾಯಿತು. ಅವರ ಪ್ರಭಾವದಿಂದ ತಂದೆ ಸಾಹಿತ್ಯ, ರಾಜಕೀಯ ಕೃತಿಗಳನ್ನು ಓದಲಾರಂಭಿಸಿದರು. ಇಎಂಎಸ್ ಅವರು ಶ್ರೀಮಂತರಾಗಿದ್ದು ತಮ್ಮ ಆಸ್ತಿಯನ್ನೆಲ್ಲ ದೇಶಕ್ಕೆ ಕೊಟ್ಟುಬಿಟ್ಟರಂತೆ. ಇದರಿಂದ ಪ್ರಭಾವಿತರಾದ ನಮ್ಮ ತಂದೆ ನಮ್ಮ ಅಜ್ಜಿ ಮತ್ತು ಚಿಕ್ಕಪ್ಪನ ಬದುಕಿಗೆ ಆಸರೆಯಾಗಿದ್ದ ಆಸ್ತಿಯನ್ನು ದೇಶಕ್ಕೆ ಬಿಟ್ಟುಕೊಟ್ಟರಂತೆ. ತಂದೆಯ ಈ ಭಾವೋದ್ವೇಗದ ಕೆಲಸ ಅಜ್ಜಿಗೆ ಸಂಕಷ್ಟವನ್ನು ನೀಡಿತು. ಅವರು ಆಸ್ತಿ ಕೈಬಿಟ್ಟು ಹೋಗುತ್ತಿದೆ ಎಂದು ಎದೆ ಬಡಿದುಕೊಂಡು ಮಡಿಕೇರಿಯಲ್ಲಿದ್ದ ಚಿಕ್ಕಜ್ಜನ ಮನೆಗೆ ಹೋಗಿ ಉಳಿಸಿಕೊಡುವಂತೆ ಬೇಡಿದರಂತೆ. ನಮ್ಮ ಚಿಕ್ಕಜ್ಜನ ಪರಿಶ್ರಮದಿಂದ ಆಸ್ತಿ ಉಳಿಯಿತು.

ಚಳುವಳಿಗೆಂದು ಮನೆ ಬಿಟ್ಟು ಓಡಿ ಹೋದ ತಂದೆ ಮತ್ತೆ ಮನೆಗೆ ಬಂದದ್ದು ಹಲವು ವರ್ಷಗಳ ನಂತರವೇ. ಒಮ್ಮೆ ಜೈಲಿನಿಂದ ಬಿಡುಗಡೆಯಾದ ಮೇಲೆ ಮಲಬಾರಿನಲ್ಲಿ ಬಂದರು ಕಾರ್ಮಿಕರೊಟ್ಟಿಗೆ ಕೆಲಸಕ್ಕೆ ನಿಂತರು. ಆ ಕಾರ್ಮಿಕರ ಸಂಘಟನೆ ಕಟ್ಟಿದರು. ಮುಂದೆ ಅಲ್ಲಿ ಹರಿಜನರೊಟ್ಟಿಗೆ ಕೆಲಸ ಮಾಡಿದರು. ಈ ಸುದ್ದಿ ಕೊಡಗಿನ ಹವ್ಯಕ ಬ್ರಾಹ್ಮಣ ಸಮಾಜಕ್ಕೆ ತಲುಪಿ ಅದು ತಂದೆಯನ್ನು ಜಾತಿಯಿಂದ ಹೊರಗಿಟ್ಟಿತು. ಸ್ವಭಾವತಃ ಬಹಳ ಕಡಿಮೆ ಮಾತಿನವರಾಗಿದ್ದ ನಮ್ಮ ತಂದೆ ಏನೂ ಟೀಕೆ ಮಾಡಿರಲಿಲ್ಲವಂತೆ ಈ ಬಗ್ಗೆ. ತಲೆಗೂ ಹಚ್ಚಿಕೊಂಡಿರಲಿಲ್ಲವಂತೆ. ತಂದೆ ಮತ್ತೆ ಬಿಳಿಗೇರಿಗೆ ತಾಯಿಯನ್ನು ನೋಡಲು ಬಂದಾಗ ಅವರ ಸಿಟ್ಟು ಆರಿರಲಿಲ್ಲ. ತಂದೆಯ ಅವಾಂತರದಿಂದ ಅವರು ಸಾಕಷ್ಟು ಕಷ್ಟ ಅನುಭವಿಸಿದ್ದರು. ಜಾತಿಯಿಂದ ಹೊರಗೆ ಹಾಕಿದ್ದ ಮಗನನ್ನು ಅವರಿಗೆ ಮನೆಯೊಳಗೆ ಸೇರಿಸುವುದು ಕಷ್ಟವಾಯಿತು. ಮನೆಯ ಅಂಗಳದಲ್ಲಿ ಊಟ-ತಿಂಡಿ ಹಾಕುತ್ತಿದ್ದರಂತೆ. ದೊಡ್ಡ ಮಗನನ್ನು ಶಾಲೆಗೆ ಕಳುಹಿಸಿ ಕಹಿ ಅನುಭವವಾಯಿತೆಂದು ಅಜ್ಜಿ ನಮ್ಮ ಚಿಕ್ಕಪ್ಪನನ್ನು ಶಾಲೆಗೆ ಕಳುಹಿಸದಿರಲು ನಿರ್ಧರಿಸಿದರು. ಚಿಕ್ಕಪ್ಪನಿಗೆ ವಿದ್ಯೆ ದೊರಕದ

ನೋವು ತಂದೆಯವರಿಗಿತ್ತು. ಮುಂದೆ ಚಿಕ್ಕಪ್ಪನ ಹಿರಿ ಮಗ ಶಿವರಾಮ ಬಿಳಿಗೇರಿಯಲ್ಲಿ ಮಾಧ್ಯಮಿಕ ಶಾಲೆ ಮುಗಿಸಿದ ನಂತರ ಮೆಟ್ರಿಕ್ ವರೆಗೆ ನಮ್ಮ ಮನೆಯಲ್ಲಿ ಇದ್ದು ಓದಿದ. ತಂದೆಗೆ ಮಡಿಕೇರಿಗೆ ವರ್ಗವಾದ ಮೇಲೆ ಚಿಕ್ಕಪ್ಪನ ಎರಡನೇ ಮಗ ಶ್ರೀನಿವಾಸ, ಮಗಳು ಭವಾನಿ ಶಾಲೆಗೆ ಹೋಗುವಾಗ ಮಧ್ಯಾಹ್ನದ ಊಟಕ್ಕೆ ನಮ್ಮಲ್ಲಿಗೆ ಬರುತ್ತಿದ್ದರು.

ತಂದೆಯವರು ವೈನಾಡಿನಲ್ಲಿ ಜಿನಚಂದ್ರ ಎಂಬುವರ ಟೀ ತೋಟದಲ್ಲಿ ಮೇಸ್ತ್ರಿಯಾಗಿ ಕೆಲಸಕ್ಕೆ ನಿಂತರು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಬುಡಕಟ್ಟು ಜನ ಪಣಿಯರ ರೀತಿ-ನೀತಿಗಳನ್ನು ಹತ್ತಿರ ನೋಡಿದರು. ನಂಬೂದರಿ ಬ್ರಾಹ್ಮಣರ ಆಚಾರ-ಪದ್ಧತಿಗಳನ್ನು ಗಮನಿಸಿದರು. ಇವೆಲ್ಲ ಅವರ 'ಪಣಿಯರ ಕೂಸು', 'ಚಿಗುರು ಹಾಸಿಗೆ' ಕಾದಂಬರಿಗಳಲ್ಲಿ ಬಂದಿವೆ. ವೈನಾಡಿನಲ್ಲಿರುವಾಗ ತಂದೆಗೆ ೨೬ ವರ್ಷ ವಯಸ್ಸು. ಕೊಡಗಿನಲ್ಲಿ ಅವರನ್ನು ವಿವಾಹವಾಗಲು ಹುಡುಗಿಯರು ಒಪ್ಪುತ್ತಿರಲಿಲ್ಲ. ಜೈಲಿಗೆ ಹೋದವನು ಎಂದೇ ಹೇಳುತ್ತಿದ್ದರು. ಇತರ ನಂಟರಿಷ್ಟರು ತಂದೆಯನ್ನು 'ಜಾತಿ' ಇಲ್ಲದವನೆಂದು ಕಡೆಗಣ್ಣಿನಿಂದ ನೋಡುತ್ತಿದ್ದರು.

ತಂದೆಯಂತೆಯೇ ಬಾಲ್ಯದಲ್ಲಿ ಕಷ್ಟ ಅನುಭವಿಸಿದ್ದ ತಾಯಿ ವಿವಾಹಕ್ಕೆ ತಂದೆಗಾಗಿಯೇ ಕಾದಿರುವಂತಿತ್ತು, ಅವರಿಬ್ಬರ ವಿವಾಹದ ಘಟನೆ. ತಂದೆಯ ಅಕ್ಕ (ಕುಟುಂಬ ಸಂಬಂಧಿ) ಮತ್ತು ಭಾವ ಮೈಸೂರಿನಲ್ಲಿದ್ದರು. ತಂದೆ ಅವರ ಮನೆಗೆ ಹೋದಾಗಲೆಲ್ಲ ಅವರಿಗೆ ವಿವಾಹವಾಗಲು ಹೇಳುತ್ತಿದ್ದರು. ಯಾವುದಕ್ಕೂ ತಂದೆ ಮಾತಾಡುತ್ತಿರಲಿಲ್ಲವಂತೆ. ಈ ಭಾವನವರಿಗೆ ನಮ್ಮ ತಾಯಿಯ ತಂದೆ ನಾರಾಯಣ ಅವರ ಪರಿಚಯವೂ ಚೆನ್ನಾಗಿತ್ತು. ಅವರು ಮಡಿಕೇರಿ-ವಿರಾಜಪೇಟೆ ಹೀಗೆ ಮುನ್ಸೀಫ್ ಕಚೇರಿಗಳಲ್ಲಿ ಗುಮಾಸ್ತರಾಗಿ ದುಡಿದಿದ್ದರು. ಅವರ ಮೊದಲ ಹೆಂಡತಿ ತೀರಿಕೊಂಡಿದ್ದರು. ಎರಡನೇ ಹೆಂಡತಿಯಲ್ಲಿ ತಾಯಿಯ ಅಣ್ಣ ಮತ್ತು ತಾಯಿ ಇಬ್ಬರು ಮಕ್ಕಳಿದ್ದರು. ತಾಯಿ ಆರು ತಿಂಗಳ ಮಗುವಿರುವಾಗಲೇ ಈ ಅಜ್ಜಿ ತೀರಿಕೊಂಡರು. ಅಜ್ಜ ಮತ್ತೊಂದು ಮದುವೆ, ಮತ್ತೊಂದು ಮದುವೆ ಎಂದು ನಾಲ್ಕು ಬಾರಿ ವಿವಾಹವಾದರು. ಅವರ ನಾಲ್ಕನೇ ಹೆಂಡತಿಗೂ ಅವರಿಗೂ ಅಪ್ಪ-ಮಗಳ ವಯಸ್ಸಿನ ಅಂತರವಿತ್ತು. ತೀರ ಬಡವರ ಮನೆಯಿಂದ ಬಂದ ಆಕೆ ವಿಧವೆಯಾಗಿದ್ದಳು. ಅಜ್ಜನಿಗೆ ಸಮಾಜದಲ್ಲಿ ಗೌರವ ಕಡಿಮೆಯಾಯಿತು. ಅವರು ಸಮಾರಂಭಗಳಿಗೆ ಹೋದರೆ ಅವರಿಗೆ ಸಹಪಂಕ್ತಿ ಭೋಜನ ಇರುತ್ತಿರಲಿಲ್ಲ. ಒಮ್ಮೆ ಹತ್ತಿರದ ಸಂಬಂಧಿ ಮದುವೆಯಲ್ಲಿ ಅಜ್ಜ ಸಹಪಂಕ್ತಿ ಭೋಜನಕ್ಕೆ ಕುಳಿತಾಗ ಹಿರಿಯ ಬ್ರಾಹ್ಮಣರು ಗಲಾಟೆ ಮಾಡಿ ಎಬ್ಬಿಸಿದರಂತೆ. ಹಾಗೆ ಎಬ್ಬಿಸಿದವರಲ್ಲಿ ಒಬ್ಬರಿಗೆ ಸಂಸಾರದ ಹೊರಗೆ ಮಾಪಿಳ್ಳೆ ಸ್ತ್ರೀಯೊಬ್ಬರೊಡನೆ ಸಂಬಂಧವಿತ್ತಂತೆ. ನಮ್ಮಜ್ಜ ಸಿಟ್ಟಾಗಿ ಈ ಸಂಬಂಧ ನ್ಯಾಯವೇ ಎಂದು ಪ್ರಶ್ನಿಸಿದ್ದರಂತೆ. ನಮ್ಮ ಅಜ್ಜ ವಿಧವೆಯನ್ನು ವಿವಾಹವಾದರು ಎಂಬ ಕಾರಣಕ್ಕೆ ನಮ್ಮ ತಾಯಿಯನ್ನು ಕೊಡಗಿನ ಬ್ರಾಹ್ಮಣರು ವಿವಾಹವಾಗಲು ಮುಂದೆ ಬರಲಿಲ್ಲ. ತಂದೆಯ ಭಾವ ನಮ್ಮಜ್ಜನಿಗೆ ಹೇಳಿ ಒಪ್ಪಿಸಿ ತಂದೆ-ತಾಯಿಯ ವಿವಾಹಕ್ಕೆ ಏರ್ಪಾಟು ಮಾಡಿದರಂತೆ. ನಮ್ಮಜ್ಜನಿಗೆ ಆಸ್ತಿಯಿಲ್ಲದ, ಜಾತಿಯಿಂದ ಬಹಿಷ್ಕೃತನಾದ ಹುಡುಗನಿಗೆ ಮಗಳನ್ನು ಕೊಡಲು ಮನಸ್ಸಿರಲಿಲ್ಲವಂತೆ. ಆದರೆ ತಾನಿರುವ ಸ್ಥಿತಿಯನ್ನೂ ಯೋಚಿಸಿಕೊಂಡು ವಿವಾಹ ಮಾಡಿಕೊಡಲು ಒಪ್ಪಿದ್ದರಂತೆ. ಹೀಗೆ ಈ ನಾಲ್ಕು ಜನರ ಸಮ್ಮುಖದಲ್ಲಿ ತಂದೆ-ತಾಯಿ ೧೯೪೧ ರಲ್ಲಿ ವಿವಾಹವಾದರು. ಆಗ ತಾಯಿಗೆ ವರ್ಷ ೧೪. ಅಜ್ಜ ಕತ್ತಾಳೆ ನಾರಿನ ಎರಡು ಜರಿ ಸೀರೆಗಳನ್ನು ಕೊಟ್ಟಿದ್ದರು. ತಂದೆ ನೂಲಿನಲ್ಲಿ ಪೋಣಿಸಿದ ಕರಿಮಣಿ ಸರವನ್ನು ತಾಯಿಗೆ ಕಟ್ಟಿದರಂತೆ. ತಂದೆ ಬದುಕಿರುವ ವರೆಗೂ ನಮ್ಮ ತಾಯಿ ಹಾಗೆ ಬೆಚ್ಚೋಲೆ ಗೌರಮ್ಮನಂತೆಯೇ ಇದ್ದರು.

೧೯೪೨ ರಲ್ಲಿ ತಂದೆ ವೈನಾಡು ಬಿಟ್ಟು ಸೋಮವಾರಪೇಟೆ ಸಮೀಪದ ರಾಮಸ್ವಾಮಿ ಕಣಿವೆಯಲ್ಲಿ ಪ್ರೈಮರಿ ಶಾಲೆ ಶಿಕ್ಷಕರಾಗಿ ಸೇರಿದರು. ಮುಂದೆ ಮೆಟ್ರಿಕ್ ಪಾಸ್ ಮಾಡಿ, ಕನ್ನಡ ಪಂಡಿತ ಪರೀಕ್ಷೆ ಮಾಡಿಕೊಂಡರು. ವಿರಾಜಪೇಟೆಯ ಸರ್ಕಾರಿ ಹೈಸ್ಕೂಲು, ಮಡಿಕೇರಿ ಜೂನಿಯರ್ ಕಾಲೇಜಿನಲ್ಲಿ ಶಿಕ್ಷಕರಾಗಿದ್ದರು. ಶಿಕ್ಷಕರಾಗಿ ತಂದೆ ಕಟ್ಟುನಿಟ್ಟಿನ ಮನುಷ್ಯ. ನಾವೆಲ್ಲ ಚಿಕ್ಕವರಾಗಿದ್ದಾಗ ನಡೆದ ಘಟನೆ ನೆನಪಾಗುತ್ತದೆ. ವಿರಾಜಪೇಟೆಯಲ್ಲಿದ್ದಾಗ ತಂದೆ ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದ ಹುಡುಗನೊಬ್ಬನನ್ನು ಹಿಡಿದರು. ಅವನು ಅದೇ ರಾತ್ರಿ ಕೈಯಲ್ಲಿ ಹಗ್ಗ, ಕತ್ತಿಗಳನ್ನು ಹಿಡಿದುಕೊಂಡು ಮನೆಗೆ ಬಂದ. ತಂದೆಗೆ ತನ್ನನ್ನು ಕತ್ತಿಯಲ್ಲಿ ಕಡಿದು ಹಾಕುವಂತೆ ಒತ್ತಾಯಿಸಿದ. ಇಲ್ಲದಿದ್ದಲ್ಲಿ ನಮ್ಮ ಮನೆಯಲ್ಲಿ ನೇಣು ಹಾಕಿಕೊಳ್ಳುವುದಾಗಿ ಬೆದರಿಸಿದ. ತಂದೆ ಅವನನ್ನು ಹೇಗೆ ಸಮಾಧಾನಪಡಿಸಿದರೊ ಗೊತ್ತಿಲ್ಲ. ರಾತ್ರಿ ಬಹಳ ಹೊತ್ತಿನ ವರೆಗೂ ಕಿರುಚಾಡುತ್ತಲೇ ಇದ್ದ. ಇನ್ನೊಮ್ಮೆ ನಕಲು ಮಾಡುತ್ತಿದ್ದ ಹುಡುಗಿ ಸಿಕ್ಕುಬಿದ್ದಳು. ಪರೀಕ್ಷಾಧಿಕಾರಿ ಆಕೆಯನ್ನು ಸಸ್ಪೆಂಡ್ ಮಾಡಿದರು. ಅವಮಾನದಿಂದ ಆಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ತಂದೆಗೆ ಆಗ ಬಹಳ ಆಘಾತವಾಗಿತ್ತು.

ಮನೆ ವ್ಯವಹಾರದಲ್ಲಿ ತಂದೆ ಬಹಳ ಸೋಮಾರಿ. ಆಗೆಲ್ಲ ಅಡುಗೆಗೆ ಸೌದೆ ಬಳಸುತ್ತಿದ್ದೆವು. ಎಲ್ಲರ ಮನೆಯಲ್ಲಿ ಮಳೆಗಾಲಕ್ಕೆ ಸೌದೆ ಸಂಗ್ರಹಿಸಿಟ್ಟುಕೊಂಡಿದ್ದರೆ ನಾವು ಮಾತ್ರ ಸೌದೆ ಗಾಡಿಗಾಗಿ ಸುರಿವ ಮಳೆಯಲ್ಲಿ ರಸ್ತೆಗಳಲ್ಲಿ ಕಾಯುತ್ತ ನಿಲ್ಲುತ್ತಿದ್ದೆವು. ಸೌದೆ ಗಾಡಿ ಸಿಕ್ಕಿದರೂ ಸೌದೆ ಒಡೆಯುವವರು ಸಿಗುತ್ತಿರಲಿಲ್ಲ. ಆಗ ತಂದೆಯವರೇ ಸೌದೆ ಒಡೀತಿದ್ದರು. ನಾವು ನೀರಿಳಿಯುತ್ತಿದ್ದ ಸೌದೆಯನ್ನು ಬಚ್ಚಲಲ್ಲಿ ಒಟ್ಟುತ್ತಿದ್ದೆವು. ತಾಯಿಗೆ ಮಾತ್ರ ಅಡುಗೆ ಮಾಡುವಾಗ ಬೆಂಕಿ ಉರಿಯದೆ ಕೊಳವೆಯಲ್ಲಿ ಊದುವುದೇ ಕೆಲಸವಾಗುತ್ತಿತ್ತು. ಮನೆಯೆಲ್ಲಾ ಹೊಗೆ ತುಂಬಿಕೊಂಡಿರುತ್ತಿತ್ತು. ಮಳೆಗಾಲಕ್ಕೆ ಮೊದಲೇ ತಾಯಿ ಎಚ್ಚರಿಸಿದರೂ ತಂದೆ ಸೌದೆ ತರಲು ವ್ಯವಸ್ಥೆ ಮಾಡುತ್ತಿರಲಿಲ್ಲ. ಕಣ್ಣು ಉರಿ, ತಲೆ ನೋವಿನಿಂದ ತಾಯಿ ಹಸಿ ಸೌದೆ ಕುಟ್ಟಿ ಸಿಟ್ಟು ಪ್ರದರ್ಶಿಸುವಾಗಲೆಲ್ಲ ತಂದೆ ಘನ ಗಂಭೀರ ಮೌನ ವಹಿಸುತ್ತಿದ್ದರು. ತಾಯಿ ರೇಗಿಕೊಂಡು ಸುಮ್ಮನಾಗುತ್ತಿದ್ದರು. ಕಾಲಿನ ಉಗುರು ಬೆಳೆದು ಮಳೆಗಾಲದಲ್ಲಿ ಮಣ್ಣು ಸೇರಿಕೊಂಡು ಕೊಳೆತರೂ ತಂದೆ ಉಗುರು ಕತ್ತರಿಸಿಕೊಳ್ಳುತ್ತಿರಲಿಲ್ಲ. ನಾವು ಮಕ್ಕಳೇ ಅವರ ಕಾಲಿನ ಉಗುರು, ಕೈ ಉಗುರು ಕತ್ತರಿಸಿಕೊಡುತ್ತಿದ್ದೆವು. ಎಲ್ಲಿಗಾದರು ಬೇರೆ ಊರಿಗೆ ಹೋಗಲಿದ್ದರೆ ಚೀಲಕ್ಕೆ ಬಟ್ಟೆಗಳನ್ನು, ಮಾರಲಿರುವ ಪುಸ್ತಕಗಳನ್ನು ಮಕ್ಕಳೇ ಪ್ಯಾಕ್ ಮಾಡಿಕೊಡುವುದಾಗಿತ್ತು. ಕೊನೆಗೆ ಒಗೆದ ಕರವಸ್ತ್ರಗಳನ್ನು ಕೋಟಿನ ಜೇಬಿನಲ್ಲಿ ಇಟ್ಟುಕೊಡಬೇಕಾಗಿತ್ತು. ತಾಯಿ ಗೊಣಗಿದರು, ರೇಗಿದರು ತಂದೆಗೆ ಮಾತ್ರ ಮನೆಯಲ್ಲಿ ತಾಯಿ ಇದ್ದರೇ ಸರಿ. ಹಿರಿ ಮಗಳ ಮನೆಗೆ ಎರಡು ವಾರಕ್ಕೆ ಅಂತ ಹೋದವರು ವಾರದೊಳಗೆ ಬರಬೇಕಾಗುತ್ತಿತ್ತು. ಯಾಕಂದರೆ ತಂದೆ ಟೆಲಿಗ್ರಾಂ ಕೊಟ್ಟುಬಿಡುತ್ತಿದ್ದರು.

ತಂದೆ-ತಾಯಿ ಇಬ್ಬರಿಗೂ ಕೋಪ ಕಡಿಮೆ ಇರಲಿಲ್ಲ. ನಾವು ಒಟ್ಟು ಹತ್ತು ಮಕ್ಕಳು. ನಮ್ಮ ಅಣ್ಣ ಮತ್ತು ತಮ್ಮ ಇಬ್ಬರು ನಾವು ಚಿಕ್ಕವರಾಗಿದ್ದಾಗಲೇ ತೀರಿಕೊಂಡರು. ನಂತರದಲ್ಲಿ ನಾವು ಆರು ಜನ ಹೆಣ್ಣುಮಕ್ಕಳು, ಇಬ್ಬರು ಹುಡುಗರು ಇದ್ದೆವು. ಮಕ್ಕಳಲ್ಲಿ ಹೆಣ್ಣು-ಗಂಡು ಎಂದು ತಂದೆ-ತಾಯಿ ಇಬ್ಬರೂ ವ್ಯತ್ಯಾಸ ಮಾಡಲಿಲ್ಲ. ನನ್ನ ಇಬ್ಬರು ಅಕ್ಕಂದಿರು ಕಲಿಯುವುದರಲ್ಲಿ ಭಾಷಣದಲ್ಲಿ ಚುರುಕು. ತಂದೆಗೆ ಅವರಲ್ಲಿ ವಿಶೇಷ ಮಮತೆ. ನನ್ನ ಒತ್ತಿನ ತಂಗಿ ವೀಣಾ ಬಹಳ ಸಾಧು ಸ್ವಭಾವದವಳು. ಯಾರು ಹೊಡೆದರು, ಗದರಿದರು ಧ್ವನಿ ಎತ್ತುತ್ತಿರಲಿಲ್ಲ. ತಾಯಿಗೆ ಈಕೆಯೆಂದರೆ ಸಾಕು. ತುಂಬಾ ಪ್ರೀತಿಸುತ್ತಿದ್ದರು. ನಾನು, ನಮ್ಮ ತಮ್ಮ ಉದಯ ಹಟ, ಜಗಳ,

ಸುಳ್ಳು ಹೇಳುವುದರಲ್ಲಿ ಮುಂದಿದ್ದೆವು. ನಮಗಿಬ್ಬರಿಗೂ ಬೆತ್ತಕ್ಕೆ ಎಣ್ಣೆ ಹಚ್ಚಿ ತಂದೆ ಹೊಡೆಯುತ್ತಿದ್ದರು. ಒಮ್ಮೆ ನನ್ನ ಹಟವನ್ನು ನೋಡಿ ಬೇಸತ್ತ ತಂದೆ ನನ್ನನ್ನು ಕೋಣೆಗೆಳೆದುಕೊಂಡು ಹೋಗಿ ಮಂಚದ ಕಾಲಿಗೆ ಕಟ್ಟಿ ಮೆಣಸಿನ ಹೊಗೆ ಹಾಕಿದ್ದರು. ತಮ್ಮನನ್ನು ಕೊರೆಯುವ ಚಳಿಯಲ್ಲಿ ಬಚ್ಚಲಿಗೆ ಎಳೆದುಕೊಂಡು ಹೋಗಿ ಕೂರಿಸಿ ಬಿಂದಿಗೆ ತುಂಬಾ ತಣ್ಣೀರು ಸುರಿದಿದ್ದರು. ತಾಯಿಯವರೂ ನಾನು ಜಗಳವಾಡುವಾಗ ತಾಳ್ಮೆಗೆಟ್ಟು ನನ್ನ ಬಾಯಿಗೇ ಬರೆಯಿಟ್ಟಿದ್ದರು. ಹಾಗಾಗಿ ನಾವು ತಂದೆ-ತಾಯಿಯವರೊಡನೆ ಸಲಿಗೆಯಿಂದ ಇದ್ದರೂ ಹೆದರಬೇಕಾದಲ್ಲಿ ಬಹಳ ಹೆದರುತ್ತಿದ್ದೆವು. ಇನ್ನು ನನ್ನ ಎರಡನೇ ತಮ್ಮ ವಿಜಯಶಂಕರ, ತಂಗಿಯರಾದ ಸ್ವರ್ಣ, ಶ್ಯಾಮಲಾ ಒಳ್ಳೆ ಮಕ್ಕಳಾಗಿದ್ದರು. ಅವರೆಲ್ಲ ತಂದೆಯ ಪೆಟ್ಟಿನ ಬಿಸಿ ಉಂಡವರಲ್ಲ.

ನಾವು ವಿರಾಜಪೇಟೆಗೆ ಬಂದ ನಂತರ ನಂಟರಿಷ್ಟರು ಒಬ್ಬೊಬ್ಬರಾಗಿ ಮನೆಗೆ ಬರಲಾರಂಭಿಸಿದರು. ತಂದೆ ನಮ್ಮ ತಾಯಿಯನ್ನು ವಿವಾಹವಾದ ನಂತರ ನಮ್ಮ ಅಜ್ಜಿ ಮನೆಗೆ ಹೋಗಿದ್ದರು. ನಮ್ಮ ಚಿಕ್ಕಪ್ಪ, ಅಜ್ಜಿ ಅವರನ್ನು ಆದರದಿಂದಲೇ ನೋಡಿದರು. ನಮ್ಮ ಮನೆ ಬಸ್ ನಿಲ್ದಾಣಕ್ಕೆ ಹತ್ತಿರವಿದ್ದುದರಿಂದ ಬಂಧು-ಬಳಗದಲ್ಲಿ, ಕಾಯಿಲೆ ಬಿದ್ದವರು ನಮ್ಮಲ್ಲಿಗೆ ಬಂದು ಆಸ್ಪತ್ರೆಗೆ ಸೇರುತ್ತಿದ್ದರು. ಅವರೊಡನೆ ರಾತ್ರಿ ಉಳಿದುಕೊಳ್ಳುವುದು, ಅವರ ಬಟ್ಟೆ ಒಗೆಯುವುದು ಇಂಥ ಕೆಲಸ ನಾವು ಮಕ್ಕಳು ಮಾಡಬೇಕಾಗುತ್ತಿತ್ತು. ತಂದೆಗೆ ಹೆಸರೂ ಬಂದ ಮೇಲೆ ನಮ್ಮಲ್ಲಿ ನಂಟರು ತಪ್ಪುತ್ತಿರಲಿಲ್ಲ. ತಂದೆಯನ್ನು ನಿಕೃಷ್ಟವಾಗಿ ನೋಡುತ್ತಿದ್ದವರೂ ನಮ್ಮಲ್ಲಿ ಉಳಿದು, ಉಂಡು ಹೋಗುತ್ತಿದ್ದರು.

ತಂದೆಯೊಬ್ಬರ ಸಂಬಳದಿಂದ ತಾಯಿ ನಮ್ಮೆಲ್ಲರ ಹೊಟ್ಟೆ-ಬಟ್ಟೆ ವೆಚ್ಚ, ನಂಟರನ್ನು ಸರಿದೂಗಿಸಿಕೊಂಡು ಹೋಗಬೇಕಿತ್ತು. ಅವರಿಗೆ ಬಹಳ ಕಷ್ಟವಾಗುತ್ತಿತ್ತು. ಎಷ್ಟೋ ಸಲ ಬಕಾಸುರರಂತೆ ತಿನ್ನುವ ನಮ್ಮನ್ನು ಪುಸಲಾಯಿಸಿ, ಹೊಗಳಿ ಅಟ್ಟಕ್ಕೇರಿಸಿ ಅರೆಹೊಟ್ಟೆಯಲ್ಲಿ ಎಬ್ಬಿಸುತ್ತಿದ್ದರು. ನಮಗೆಲ್ಲ ಬೆಳಿಗ್ಗೆ ಗಂಜಿ ಮಾಡಿ, ತಂದೆಗೆ ಮಾತ್ರ ಗೋಧಿ ರೊಟ್ಟಿ ಮಾಡುತ್ತಿದ್ದರು ತಾಯಿ. ನಾನು - ನನ್ನ ತಮ್ಮ ಇಬ್ಬರು ಈ ರೊಟ್ಟಿಯನ್ನು ಕದ್ದು ತಿಂದ ದಿನಗಳೂ ಇದ್ದವು. ತಾಯಿ ವರ್ಷ ಬಿಟ್ಟು ವರ್ಷ ಬಸುರಿ - ಬಾಣಂತಿ ಎಂದು ಮಲಗಿರುತ್ತಿದ್ದುದರಿಂದ ನನ್ನ ಅಕ್ಕಂದಿರಾದ ನಳಿನಿ, ಲತಾ, ನಾನು ಗಾಣದ ಎತ್ತುಗಳಂತೆ ಮನೆಯಲ್ಲಿ ದುಡಿಯುತ್ತಿದ್ದೆವು. ಬರುವ ನಂಟರಿಷ್ಟರನ್ನು ಸುಧಾರಿಸುತ್ತಿದ್ದೆವು. ನಮ್ಮ ಬಾಲ್ಯದ ದಿನಗಳಲ್ಲಿ ಆಸ್ಪತ್ರೆ - ಮನೆ ಅಂತ ಓಡಾಡಿದ ಸಂದರ್ಭಗಳೇ ಹೆಚ್ಚು.

ತಂದೆಯವರು ೧೯೬೫ ರಲ್ಲಿ ನಮ್ಮ ಅಡುಗೆಮನೆಯಲ್ಲಿ ಸಣ್ಣದೊಂದು ಕ್ರಾಂತಿ ಮಾಡಿದರು. ಅಂದರೆ ಇಂಡಾಲಿಯಂನ ಪ್ರೆಸ್ಟೀಜು ಕುಕ್ಕರ್ ತಂದರು. ಅದಕ್ಕೆ ಕಡಿಮೆ ಸೀಮೆಣ್ಣೆ ಸಾಕು. ಬೇಗ ಅಡುಗೆ ಆಗುತ್ತೆ... ಹೀಗೆಲ್ಲ ತಂದೆ ಲೆಕ್ಕ ಹಾಕಿದ್ದರು. ಇದು ಬಂದ ಆರಂಭದ ದಿನಗಳಲ್ಲೆಲ್ಲಾ ಕುಕ್ಕರ್‌ನಲ್ಲಿ ಬೇಳೆ, ತರಕಾರಿ, ಅಕ್ಕಿ ಬೇಯಲಿಡುವುದು ತಂದೆಯದೇ ಕೆಲಸ. ಅವರೇನೋ ಸಾಹಸ ಮಾಡುತ್ತಿದ್ದಾರೆಂದು ತಾಯಿ, ನಾವು ಮಕ್ಕಳು ಅವರ ಸುತ್ತು ನಿಂತಿರುತ್ತಿದ್ದೆವು. ತಾಯಿಗೆ ಕುಕ್ಕರ್ ಹೇಗೆ ಬಳಸಬೇಕು, ಯಾವಾಗ ವೈಟ್ ಹಾಕಬೇಕು, ಯಾವಾಗ ತೆಗೆಯಬೇಕು ಎಂದೆಲ್ಲಾ ತಂದೆ ಕ್ಲಾಸು ತೆಗೆದುಕೊಂಡಿದ್ದರು. ಮತ್ತೆ ತಂದೆ ಸೀಮೆಣ್ಣೆಯನ್ನು ತರಲು ಉದಾಸೀನ ಮಾಡಿದಾಗ ತಾಯಿ ಕೋಪದಿಂದ ಕುಕ್ಕರ್ ಹೊರಗೆಲ್ಲಾ ಬೂದಿ ಬಳಿದು ಸೌದೆ ಒಲೆಯ ಮೇಲೆ ಬೇಯಲು ಇಡುತ್ತಿದ್ದರು.

ಧಾರವಾಡದ ದ. ಬಾ. ಕುಲಕರ್ಣಿ, ಶೇಡಬಾಳದ ಮಿರ್ಜಿ ಅಣ್ಣಾರಾಯರು ತಂದೆಯ ಆತ್ಮೀಯ ಸ್ನೇಹಿತರಾಗಿದ್ದರು. ಅವರು ನಮ್ಮಲ್ಲಿಗೆ ಬಂದು ಉಳಿಯುತ್ತಿದ್ದರು. ಆಗೆಲ್ಲ ತಂದೆಗೆ ಹಾಲಿಟ್ಟು ಪಾಯಸ ಮಾಡಿ ಅವರಿಗೆ ಉಣಿಸುವ ಉತ್ಸಾಹ. ತಾಯಿ ಅಕ್ಕಿಯನ್ನು ರುಬ್ಬಿ

[illegible]

[illegible]

[illegible]

[illegible] ಆದರೆ ಅವರಿಗೆ ಆತ್ಮಸ್ಥೈರ್ಯ ಜಾಸ್ತಿ.

[illegible]

ಕೆಲಸ ಮಾಡಿದರು. ಇಂಥ ಒಂದು ದಿನ ಅವರ ಕಾದಂಬರಿಯೊಂದು ಸಿನಿಮಾ ಮಾಡಲು ಯಾರೋ ನಿರ್ದೇಶಕರು ಮುಂದೆ ಬಂದರು. ಅವರು ಮನೆಗೆ ಬಂದಾಗ ತಂದೆ ಬೆಳಿಗ್ಗೆಯಲ್ಲಿ ತೋಟಕ್ಕೆ ಹೋಗಿದ್ದರು. ನನ್ನ ತಮ್ಮ ಅವರನ್ನು ತೋಟಕ್ಕೆ ಕರೆದುಕೊಂಡು ಹೋದ. ತಂದೆ ಕಳೆ ಕೀಳುತ್ತಿದ್ದರಂತೆ. ಆ ನಿರ್ದೇಶಕರು ತಂದೆಯನ್ನು ಕೆಲಸದವರೆಂದೇ ತಿಳಿದಿದ್ದರಂತೆ. ನನ್ನ ತಮ್ಮ ತಂದೆಗೆ ಅವರು ಬಂದ ವಿಷಯ ತಿಳಿಸಿದಾಗ ಅವರು ಕೈ-ಕಾಲು ತೊಳೆದು ನಿರ್ದೇಶಕರಿದ್ದಲ್ಲಿಗೆ ಬಂದಾಗ ಅವರಿಗೆ ಈ ವ್ಯಕ್ತಿಯೇ ನಾರಾಯಣ ರಾವ್ ಎಂದು ತಿಳಿದು ಆಶ್ಚರ್ಯವಾಯಿತಂತೆ.

ತುಂಬಾ ಆರೋಗ್ಯವಾಗಿ, ಚಟುವಟಿಕೆಯಿಂದ ಇದ್ದ ತಂದೆಯವರು ೧೯೭೬ ಏಪ್ರಿಲ್ ೪ ರಂದು ಹೃದಯಾಘಾತದಿಂದ ತೀರಿಕೊಂಡರು. ಇದಕ್ಕೆ ಮೂರು ದಿನಗಳ ಮೊದಲು ಅವರಿಗೆ ಪಾರ್ಶ್ವವಾಯು ಬಡಿದಿತ್ತು.

ತಂದೆಗಿಂತ ನಮ್ಮ ತಾಯಿ ನೋವುಂಡದ್ದು ಹೆಚ್ಚು. ಅವರು ತಂದೆಯನ್ನು ಎಂದೂ ಚಿನ್ನ ಬೇಕು, ರೇಷ್ಮೆ ಸೀರೆ ಬೇಕು ಎಂದು ಕೇಳಿಲ್ಲ. ನಾವು ಮಕ್ಕಳು ಯಾರೂ ಈ ರೀತಿಯ ಬೇಡಿಕೆಗಳನ್ನು ತಂದೆಗೆ ಇಟ್ಟಿರಲಿಲ್ಲ. ಇದ್ದುದರಲ್ಲಿ ತೃಪ್ತಿಯಿಂದ ಬದುಕಲು ಕಲಿಸಿದ್ದರು. ತಂದೆ ತೀರಿದ ನಂತರ ನನ್ನ ತಮ್ಮ ಉದಯಶಂಕರ ತೋಟ ನೋಡಿಕೊಳ್ಳುತ್ತಿದ್ದ. ನನ್ನ ತಂಗಿ ವೀಣಾ ೧೯೮೮ ರಲ್ಲಿ ಅಂಡಾಶಯ ಕ್ಯಾನ್ಸರ್‌ನಿಂದ ತೀರಿಕೊಂಡಳು. ಅವಳ ಮಗನಿಗೆ ಆಗ ಎರಡೂವರೆ ವರ್ಷ. ನಮ್ಮ ತಾಯಿಗೆ ಇದು ಮತ್ತೊಂದು ಆಘಾತವಾಗಿತ್ತು. ಮತ್ತೆ ಏಳು ವರ್ಷಗಳಲ್ಲಿ ನನ್ನ ತಮ್ಮ ಉದಯ ಕಾಮಾಲೆಯಾಗಿ ತೀರಿಕೊಂಡ. ಅವನ ವಿವಾಹವಾಗಿ ಎರಡು ವರ್ಷ ಪೂರ್ತಿಯಾಗಿತ್ತಷ್ಟೆ. ಅವನಿಗೆ ತಾನು ಸಾಯುವುದು ಮೊದಲೇ ಗೊತ್ತಾಗಿತ್ತು. ತಾಯಿಯನ್ನು ಹತ್ತಿರ ಕುಳ್ಳಿರಿಸಿಕೊಂಡು ತನ್ನಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಬೇಕೆಂದು ಕೈ ಮುಗಿದನಂತೆ. ತಾಯಿಗೆ ಈ ಸನ್ನಿವೇಶ ಎದುರಿಸುವುದು ಬಹಳ ಕಷ್ಟವಾಯಿತಂತೆ. ಮಗನಿಗೆ ಧೈರ್ಯ ಹೇಳಿ, ವಾರ್ಡಿನಿಂದ ಹೊರಗೆ ಬಂದು ಬಿಕ್ಕಿ-ಬಿಕ್ಕಿ ಅತ್ತರಂತೆ. ತಮ್ಮ ಹೋದ ಮರುವರ್ಷವೇ ಕಾಲು ಜಾರಿಬಿದ್ದು ಅವರ ಕಾಲು ಮುರಿಯಿತು. ಮಕ್ಕಳು ನೊಂದುಕೊಂಡಾರೆಂದು ನಮ್ಮ ತಾಯಿ ನರಳುತ್ತಲೂ ಇರಲಿಲ್ಲ.

ನೋವಿನ ಮೇಲೆ ನೋವುಂಡ ನಮ್ಮ ತಾಯಿಗೆ ಈಗ ೭೭ ವರ್ಷ. ಈಗ ಅವರು ಮೊಮ್ಮಕ್ಕಳನ್ನು ನೋಡಿ ಸಂತೋಷಪಡುತ್ತಾರೆ. ಅವರ ಮೊಮ್ಮಕ್ಕಳು ಪ್ರತಿಭಾಶಾಲಿಗಳಾಗಿದ್ದು ವಿದೇಶಗಳಲ್ಲಿ ದೊಡ್ಡ ಹುದ್ದೆಗಳಲ್ಲಿದ್ದಾರೆ. ನನ್ನ ಎರಡನೇ ಅಕ್ಕನ ಮಗ ವಿಜ್ಞಾನ ವಿಷಯದಲ್ಲಿ ಅಮೆರಿಕಾದಲ್ಲೂ ಸ್ವಲ್ಪ ಮಟ್ಟಿಗೆ ಮನ್ನಣೆ ಪಡೆದಿದ್ದಾನೆ. ಈ ಜನವರಿಯಲ್ಲಿ ಅವನು ಮನೆಗೆ ಬಂದಾಗ ನಮ್ಮ ತಾಯಿ "ಕಂದ, ನೀನು ನೊಬೆಲ್ ಬಹುಮಾನ ಪಡೀಬೇಕು. ನಾನು ಹೇಳಿದ್ದು ಗೊತ್ತಾಯ್ತು ?" ಹೇಳಿ ಕೆನ್ನೆಗೆ ಮುತ್ತನ್ನಿಕ್ಕಿದರಂತೆ. ಅವರಿಗೆ ನೊಬೆಲ್ ಬಹುಮಾನ ಯಾರಿಗೆ ಸಿಗುತ್ತೆ, ಹೇಗೆ ಕೊಡುತ್ತಾರೆ, ಎಲ್ಲಿ ಕೊಡುತ್ತಾರೆ, ಎಂಬುದೇನೂ ಗೊತ್ತಿಲ್ಲ. ಅವರಿಗೆ ಇದೆಲ್ಲ ಹೇಳಿ ನಿರಾಶೆಪಡಿಸುವುದು ಬೇಡವೆಂದು "ಆಗಲಿ ಅಜ್ಜಿ" ಎಂದು ಮೊಮ್ಮಗ ಹೇಳಿದಾಗ ಅವರ ಮುಖದಲ್ಲಿ ಮಂದಹಾಸ ಮೂಡಿತ್ತು. ಹಿರಿಮೊಮ್ಮಗ ಶ್ರೇಷ್ಠ ವೈದ್ಯನಾಗಬೇಕು. ವೀಣಾ ಮಗ ಉನ್ನತ ಪದವಿಗೇರಬೇಕು.... ಹೀಗೆ ನಮ್ಮ ತಾಯಿ ಈ ಮುಪ್ಪಿನಲ್ಲೂ ಕನಸು ಕಾಣುತ್ತಾರೆ.

ನನ್ನ ತಂದೆ ಎಸ್. ಆರ್. ನಾರಾಯಣ ರಾವ್ 'ಭಾರತೀಸುತ' ಕಾವ್ಯನಾಮದಿಂದ ಕಥೆ-ಕಾದಂಬರಿಗಳನ್ನು ಬರೆಯುತ್ತಿದ್ದರು.

ಕುಸುಮಾ ಶಾನಭಾಗ, ೧೧/೧೬, ಎಂಐಜಿ 'ಎವರ್' ಫ್ಲ್ಯಾಟ್, ನಂದಿನಿ ಲೇಔಟ್
ಬೆಂಗಳೂರು - ೫೬೦ ೦೯೬ ☎: ೦೮೦ - ೩೪೯ ೨೩೬೭

ಜಂಬಣ್ಣ ಅಮರಚಿಂತ

೧. ಮಿನಿಗವನಗಳು

೧

ಮುಳ್ಳು ತಿಳಿಸಿತೆನಗೆ
ಮೃದುತ್ವ ಎಂಥದೆಂಬುದು
ಮರಣ ತಿಳಿಸಿತೆನಗೆ
ಜೀವನ ಎಂಥದೆಂಬುದು
ನಾನೆಂಥ ಕೃತಘ್ನನಯ್ಯಾ
ಅರಿಯದೆ ಎರಡನ್ನೂ ದ್ವೇಷಿಸಿದೆ

೨

ರೋಷ ಕೂಡ ಆಗಬಹುದು
ಸೌಂದರ್ಯದ ಕೋಶ
ರೋಷದಿ ಹೆಡೆ ಬಿಚ್ಚಿದಾಗ ಹಾವು
ಹೆಡೆಯಲ್ಲ ಅದೊಂದು ಸುಂದರ ಹೂವು

೩

ನಾನು—
ಒಡೆದು ಚೂರು ಚೂರಾದ ಕನ್ನಡಿ
ದಯವಿಟ್ಟು ನೋಡಿ ನಡೆಯಿರಿ ನೀವು
ಗಾಯವಾಗಿ ಆಗದಿರಲಿ ನಿಮಗೆ ನೋವು

೪

ಯುಗಯುಗಗಳಿಂದ
ಅವನ ನಿರೀಕ್ಷೆಯಲ್ಲಿದ್ದೆವು
ಬಂದವನು ಮತ್ತೆ ಯಾರೂ ಅಲ್ಲ
ಪ್ರವಾದಿ ರೂಪದ ಹಂತಕನು

೫

ಕಣ್ಣುಗಳ್ಯಾಕ ರಕ್ತರಂಜಿತ
ಗಾಜಿನ ಕನಸು ಕಂಡ ಫಲಿತ

೬

ಹೀರೆಯುವರ ಮುಖ ಕಂಡು
ಗಾಬರಿ ಪಡುವವರಿಗೆ
ತಮ್ಮ ಮುಖ ನೋಡಿಕೊಳ್ಳಲು
.ಒಂದು ಕನ್ನಡಿ ಕೊಡಿ

೭

ನೀರಿಲ್ಲದ ಮೋಡಗಳು
ನೆರಳಿಲ್ಲದ ಗಿಡಗಳು
ಬರಗಾಲದ ಜೊತೆ ರಾಜಿ ಮಾಡಿಕೊಂಡಿವೆ

೮

ದೇಹ ಸೌಂದರ್ಯಕ್ಕೆ
ಬ್ಯೂಟಿ ಕ್ಲಿನಿಕ್‌ಗಳು
ಆತ್ಮ ಸೌಂದರ್ಯಕ್ಕೆ ?

೯

ಸರೋವರದ ಟಬ್ಬಿನಲ್ಲಿ
ಜಾರಿ ಬಿದ್ದ ಸಾಬೂನು ಬಿಲ್ಲೆ
ಚಂದ್ರಾಮ

೧೦

ತುಂಡರಿಸಬಹುದು ವೀಣೆಯ ತಂತಿ ನೀವು
ತಾಳ ಮದ್ದಲೆ ಕುಟ್ಟಿ ಪುಡಿ ಮಾಡಬಹುದು
ಕೋಗಿಲೆಗೆ ಯಾಕಯ್ಯಾ
ನಿಮ್ಮ ತಾಳ ಹಿಮ್ಮೇಳ
ಅದು ತನ್ನ ಹಾಡು ತಾನೇ ಹಾಡುವುದು

೨. ವಲಸೆ ಹಕ್ಕಿಗಳು

ಬೆಳ್ಳಕ್ಕಿ ಸಾಲಾಗಿ ಹಾರಿ ಬಂದಾವೊ
ಬಾನ ಬಯಲಲ್ಲಿ ಮೂಡಿ ಬಂದಾವೊ

ಪೂರ್ವ ಪಶ್ಚಿಮ ಜೋಡು ರೆಕ್ಕೆಯ ತೊಟ್ಟು
ಶಾಂತಿ ಸೂಸುವ ಬಿಳಿ ಉಡುಪನುಟ್ಟು
ರಶಿಯಾ, ಜರ್ಮನಿ, ಫ್ರಾನ್ಸಿನಿಂದ
ಇಟಲಿ, ಇಂಗ್ಲೆಂಡಿನ ಮೂಲೆಗಳಿಂದ
ಹಾರಿ ಬಂದಾವೊ ಹಕ್ಕಿ ತೂರಿ ಬಂದಾವೊ
ಈ ಮಣ್ಣಿಗೆ ಮನಸೋತು ಕೂಡಿ ಬಂದಾವೊ

ಸ್ವಾರ್ಥ ಕೊರೆದ ಗಡಿ ರೇಖೆಗಳ ದಾಟಿ
ವಿಶ್ವ ಹೃದಯದ ವೀಣೆಯ ಮೀಟಿ
"ಈ ಗಾಳಿ, ಈ ನೀರು, ಈ ಬೆಳಕಿನ ಪೈರು
ಈ ಕಾನು, ಈ ಬಾನು ನಮ್ಮ ನಿಮ್ಮದು
ಅರಳಿರುವ ಸೃಷ್ಟಿ ಚೆಲುವು ಎಲ್ಲರದು"
ವಿಶ್ವದೈಕ್ಯಗೀತೆ ಹಾಡುತ ಬಂದಾವೊ
ತುಳಿಯದ ದಾರಿ ತುಳಿಯುತ ಬಂದಾವೊ

ವೀಸಾ ಬೇಕಿಲ್ಲ, ಬೇಕಿಲ್ಲ ಪಾಸುಪೋರ್ಟು
ಹಾರಲು ನಿಷೇಧಿಸಿಲ್ಲ ಯಾವ ದೇಶದ ಕೋರ್ಟು
ವಿಶ್ವದಕ್ಷಿಯಾಗಿ ಹಾರಿಬರುವ ಪಕ್ಷಿ
ವಿಶ್ವವನ್ನೇ ವಾಸದ ಗೂಡು ಮಾಡಿಕೊಂಡು
ನೆಲೆಸಲು ವಲಸೆ ಹಕ್ಕಿ ಹಾರಿ ಬಂದಾವೊ
ಬಾನ ಬಯಲಲ್ಲಿ ಮೂಡಿ ಬಂದಾವೊ

ಜಂಬಣ್ಣ ಅಮರಚಿಂತ, ೧೦-೫-೯೭, ಮಕ್ತಲ ಪೇಟೆ, ರಾಯಚೂರು - ೫೮೪ ೧೦೨

ಸಂಘಾತ

ವಾಸಂತಿ ಪ್ರಭಾಕರ ನಾಯಕ

ಆಸೆಯ ರಾಶಿಗಳಲಿ ಬಯಕೆಯ ಬೆಟ್ಟಗಳಲಿ ಸುತ್ತಿ ಸಂ-
ಭ್ರಮಿಸುವ ನನ್ನ ಮೃದುಮಧುರ ಮೈ ಮನಗಳು
ಈತನ ಗಾರ್ಹಪತ್ಯಾಗ್ನಿಯ ಹವನ ದ್ರವ್ಯಗಳಾದವೇ ?

ಪಾತಾಳದಲಿ ಹುಟ್ಟಿ ಮುಗಿಲಲ್ಲಿ ಮುಳುಗಿ
ಮತ್ತೆ ನಸುಕಿನಲಿ ಸುಮವಾಗಿ ಅರಳಿ
ಕಾಯಾಗಿ ಬಲಿತು ಹಣ್ಣಾಗಿ ಕಳಿತು
ಬೀಜವಾಗಿ ಮೊಳಕೆಯೊಡೆವ ನನ್ನ ಆಸೆಯ ಬೀಜ
ಈತನ ದಕ್ಷಿಣಾಗ್ನಿಯಲಿ ದಹಿಸಿ ಹೋಯಿತೇ ?

ಅಂದು ಲೋಪಾಮುದ್ರೆಯು ಒಡಲ ನುಡಿಯೊಂದು
ಮುನಿ ಅಗಸ್ತ್ಯನ ತಪದ ತಾಪಕ್ಕೆ ಸೆರೆತ
ಗಡ್ಡ ಮೀಸೆಗಳಡಗಿದ ತುಟಿಯಂಚಿನಲೂ
ವಸಂತದ ಲಾಸ್ಯ ಮೂಡಿದ್ದು
ಈತನರಿವಿಗೆ ಬಾರದೆ ಹೋಯಿತೇ ?

ಮೊರೆವ ಆಕಾಶವ ಚಾಚುವ ಗಂಧವತಿ ನಾನು
ಮಾತು ಮೌನಗಳಲಿ ಹರಿವ ನಾದಮಯಿ ನಾನು
ಅಗ್ನಿಪರ್ವತಲೊಂದು ಅಂತರ್ಗಾಮಿ ಜಲದ ಸೆಲೆ ನಾನು
ತೃಷೆಯ ತಣಿಸುವ ಅಮೃತವರ್ಷಿಣಿ ನಾನು
ಅಗ್ನಿಕುಂಡ ಆರಿಸಬಲ್ಲೆ
ಅಮೃತಕಲಶ ಹಂಚಬಲ್ಲೆ
ಪ್ರೀತಿ ಪನ್ನೀರು ಒಸರಿಸಬಲ್ಲೆ

ಆದರೆ ಸಖಿ.
ಸಖಿ ನನ್ನವ ಮೂಢನಾದನಲ್ಲೆ,
ಮೋಹ ಮಾಯೆಯ
ಭ್ರಮೆಯ ಬಲೆಯಲ್ಲಿ
ಸಿಲುಕಿಬಿಟ್ಟೆನಲ್ಲೆ.

ವಾಸಂತಿ ಪ್ರಭಾಕರ ನಾಯಕ, ೧ನೇ ಕ್ರಾಸ್, ಬರಗೇರಿ ಬಿಡಿ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ - ೫೭೭ ೫೦೧ ☎: ೦೮೧೯೪ - ೪೨ ೬೫೨

ಇರಲಿ ಬಿಡು ಅವರು ಅಲ್ಲೆ

ನಿರ್ಮಲ ವೀರಣ್ಣ

ಕೇಳಬೇಡವೆ ನಲ್ಲೆ ಚಂದ್ರ, ತಾರೆಯರ ತಂದುಕೊಡಿರೆಂದು
ಅವರು ಅಲ್ಲೇ ಚೆಂದ. ಇರಲಿ ಬಿಡು ಅಲ್ಲೆ.

ನಿನ್ನೊಬ್ಬಳ ಆಸೆಗಾಗಿ ಕಸಿಯಲಾರೆ ಎಲ್ಲರ ಕನಸುಗಳನ್ನ,
ಅಳಿಸಲಾರೆ ಬೆಳದಿಂಗಳ ರಾತ್ರಿಯನ್ನ.
ತಂದೇಕೆ ಶೋಕೇಸಿನಲ್ಲಿ ಇರಿಸೋ ಬಯಕೆ ನಲ್ಲೆ
ಇರಲಿ ಬಿಡು ಅವರು ಅಲ್ಲೆ.

ನಿನ್ನಿಂದ ಹೇಗೆ ಕಾಣಲಿ ಬೆಳದಿಂಗಳಿಲ್ಲದೆ ನಲ್ಲೆ
ನಿನ್ನ ಮುಡಿಗೇರುವ ಮಲ್ಲಿಗೆ ಬಿರಿದು ಕಂಪು ಸೂಸದೆ ನಲ್ಲೆ
ಬೇಡವೇ ಈ ಹಠದ ಬೇಡಿಕೆ, ಈಡೇರಿಸಲಾಗದ ಕೋರಿಕೆ
ಇರಲಿ ಬಿಡು ಅವರು ಅಲ್ಲೆ.

ನಿರ್ಮಲ ವೀರಣ್ಣ, ೬೬೦೬, ಮಧು ಮಹೇಶ ನಿಲಯ, ೩ನೇ ಕ್ರಾಸ್, ೧ನೇ ಲಿಂಕ್ ರಸ್ತೆ, ಎಸ್‌ಐಟಿ ರಸ್ತೆ, ತುಮಕೂರು - ೫೭೨ ೧೦೨ ☎: ೦೮೧೬ - ೨೨೭ ೦೨೮೮

ಕೇರಳದ ನಾಯರ್ ಸಮಾಜದಲ್ಲಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ

ಮುರಳೀಧರನ್ ಟಿ. ಸಂಕ್ಷಿಪ್ತ ಭಾವಾನುವಾದ : ಪಾರ್ವತಿ ಜಿ. ಐತಾಳ್

ಭೂಪಟದಲ್ಲಿ ಕೇರಳವೆಂದರೆ ಭಾರತದ ನೈಋತ್ಯ ಭಾಗದಲ್ಲಿರುವ ಉದ್ದನೆಯ ಕಿರಿದಾದ ಒಂದು ತುಂಡು ಭೂಪ್ರದೇಶ. ಪ್ರಾಕ್ತನ ಶೋಧಗಳ ಪ್ರಕಾರ ಸುಮಾರು ಕ್ರಿ. ಶ. ೭೦೦ ರ ಕಾಲದಲ್ಲಿ ಇದು ಉತ್ತರದಲ್ಲಿ ಮಲಬಾರ್, ಮಧ್ಯೆ ಕೊಚ್ಚಿ ಮತ್ತು ದಕ್ಷಿಣದಲ್ಲಿ ತಿರುವಾಂಕೂರು ಎಂಬ ಮೂರು ಪ್ರಮುಖ ಶ್ರೀಮಂತ ರಾಜ್ಯಗಳಿಂದ ಕೂಡಿದ ಒಂದು ಪ್ರದೇಶವಾಗಿತ್ತು. ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲಿಷರೇ ಮೊದಲಾದ ವಿದೇಶೀಯರ ಆಗಮನದೊಂದಿಗೆ ಇಲ್ಲಿ ೧೯ ನೇ ಶತಮಾನದ ತನಕ ಕಾಲಕಾಲಕ್ಕೆ ಸಾಮಾಜಿಕ ಜೀವನಕ್ರಮದಲ್ಲಿ ಮಾತ್ರವಲ್ಲದೆ ರಾಜಕೀಯವಾದ ಸ್ಥಿತಿಗತಿಗಳಲ್ಲೂ ಬದಲಾವಣೆಗಳು ಆಗುತ್ತಲೇ ಇದ್ದುವು. ಈ ಪ್ರದೇಶದ ಒಟ್ಟು ಜನಸಂಖ್ಯೆಯ ೨೦% ದಷ್ಟು ಮಂದಿ ನಾಯರ್‌ಗಳಾಗಿದ್ದರು. ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಇವರು ಮೇಲ್ಮಟ್ಟದಲ್ಲಿದ್ದು ಆರಾಮವಾದ ಬದುಕನ್ನು ಸಾಗಿಸುತ್ತಿದ್ದರು. ಈ ಜನಾಂಗದ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಬಗ್ಗೆ ಸಾಮಾನ್ಯ ಜನರ ತಿಳುವಳಿಕೆಯ ಪ್ರಕಾರ ಸ್ತ್ರೀಯರು ತಮ್ಮ ವಿವಾಹದ ನಂತರವೂ ತಾವು ಹುಟ್ಟಿ ಬೆಳೆದ ಮನೆಗಳಲ್ಲೇ ಉಳಿಯುತ್ತಿದ್ದು ಅವರ ಮಕ್ಕಳು ತಾಯಿಯ ಕುಟುಂಬದ ಹೆಸರು ಮತ್ತು ಆಸ್ತಿಗಳಿಗೆ ವಾರಸುದಾರರಾಗಿರುತ್ತಿದ್ದರು. ಪುರುಷರೂ ಕೂಡಾ ತಮ್ಮ ತಮ್ಮ ಮನೆಗಳಲ್ಲೇ ವಾಸಿಸುತ್ತಿದ್ದು ತಮ್ಮ ಪತ್ನಿಯರನ್ನು ಸಂಜೆ ಹೊತ್ತಿಗೆ ಮಾತ್ರ ಕಾಣಲು ಹೋಗುತ್ತಿದ್ದರು. ಅವರಲ್ಲಿ ಕಾನೂನು ರೀತ್ಯಾ ವಿವಾಹಗಳು ನಡೆಯುತ್ತಿರಲಿಲ್ಲ. ಬದಲಾಗಿ ಸ್ತ್ರೀ ಪುರುಷರ ನಡುವೆ 'ಸಂಬಂಧಂ' ಎಂಬ ಸಾಮಾಜಿಕ ಸಮ್ಮತಿ ಇರುವ ಸಂಬಂಧಗಳಿಗೆ ಮಾತ್ರ ಅವಕಾಶವಿತ್ತು. ಇದು ತೀರಾ ಸರಳವಾದ ಒಂದು ಸಮಾರಂಭವಾಗಿರುತ್ತಿದ್ದು ಅದನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಬೇಕೆನಿಸಿದಾಗ ಅತ್ಯಂತ ಸುಲಭವಾಗಿ ಈ ಸಂಬಂಧವನ್ನು ಕಡಿದುಕೊಳ್ಳುವುದು ಸಾಧ್ಯವಿತ್ತು. ಅಲ್ಲದೆ ಓರ್ವ ಪುರುಷ ಅಥವಾ ಸ್ತ್ರೀಯು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಸಂಬಂಧಗಳನ್ನು ಇಟ್ಟುಕೊಳ್ಳಬಹುದಾಗಿತ್ತು. ನಾಯರ್‌ಗಳು ಒಂದೇ ತಲೆಮಾರಿಗೆ ಸೇರಿದ 'ತಾವಳಿ' ಎಂಬ ಹಲವು ಶಾಖೆಗಳಿಂದ ಕೂಡಿದ 'ತರವಾಡು' ಎಂಬ ಕೂಡು ಕುಟುಂಬಗಳಲ್ಲಿ ವಾಸಿಸುತ್ತಿದ್ದರು. ಕುಟುಂಬದ ಆಸ್ತಿಯು ಅವಿಭಾಜ್ಯವೆಂದು ಪರಿಗಣಿಸಲ್ಪಟ್ಟಿದ್ದರೂ ನಿರ್ವಹಣೆ ಕಷ್ಟವೆಂದು ಕಂಡಾಗ ಕೆಲವು ತಾವಳಿಗಳು ಆಸ್ತಿಯ ಸಣ್ಣ ಭಾಗವನ್ನು ತಮ್ಮೊಂದಿಗೆ ತೆಗೆದುಕೊಂಡು ಮೂಲ ತರವಾಡಿನಿಂದ ಬೇರೆ ಹೋಗಿ ತಮ್ಮದೇ ಆದ ತರವಾಡುಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದುವು. ತರವಾಡಿನ ಹಿರಿಯ ಗಂಡಸು ಕುಟುಂಬದ ಒಟ್ಟು ಸದಸ್ಯರು ಮತ್ತು ಆಸ್ತಿಯ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದು ಆತನನ್ನು 'ಕಾರಣವರ್' ಎಂದು ಕರೆಯುತ್ತಿದ್ದರು. ಹೀಗೆ ಒಂದು ತರವಾಡಿನ ಮೂಲ ಸಂರಚನೆಯಲ್ಲಿ ಮುಖ್ಯವಾಗಿ ಒಬ್ಬ ಕಾರಣವರ್, ಆತನ ಸಹೋದರಿಯರು ಮತ್ತು ಅವರ ಮಕ್ಕಳು ಇರುತ್ತಿದ್ದರು.

ನಾಯರ್‌ಗಳು ಮುಖ್ಯವಾಗಿ ಜಮೀನ್ದಾರಿ ವರ್ಗಕ್ಕೆ ಸೇರಿದ್ದು ತೆಂಗು, ಭತ್ತ ಮತ್ತು ಸಾಂಬಾರ ಜಿನಸುಗಳನ್ನು ಬೆಳೆಸುತ್ತಿದ್ದರು. ತಮ್ಮ ಕೃಷಿ ಭೂಮಿಗಳಲ್ಲಿ ದುಡಿಯಲು ಇವರು ನಿಮ್ನವರ್ಗಕ್ಕೆ ಸೇರಿದ ಹೊಲೆಯರನ್ನು ನೇಮಿಸಿಕೊಳ್ಳುತ್ತಿದ್ದರು. ಈ ಹೊಲೆಯರು ತಮ್ಮ ಜೀವನ

ನಿರ್ವಹಣೆಗೋಸ್ಕರ ಪೂರ್ತಿಯಾಗಿ ಇವರ ಮೇಲೆ ಅವಲಂಬಿತರಾಗಿರುತ್ತಿದ್ದರು. ಭೂಮಿಯಲ್ಲಿ ದುಡಿಯದೇ ಇದ್ದ ನಾಯರ್ ಗಂಡಸರನ್ನು ಸಾಮಂತ ರಾಜರುಗಳು ತಮ್ಮ ಸೇನಾದಳಗಳಿಗೆ ಸೇರಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ನಾಯರ್ ಸ್ತ್ರೀಯರು ಬ್ರಾಹ್ಮಣ ಸಮುದಾಯದ ನಂಬೂದಿರಿ ಗಂಡಸರ ಜೊತೆ ಸಂಬಂಧವಿಟ್ಟುಕೊಳ್ಳುವುದೂ ಇತ್ತು. ಈ ನಂಬೂದಿರಿಗಳು ಮಲಬಾರ್ ತೀರಕ್ಕೆ ಎಲ್ಲಿಂದಲೋ ಬಂದು ನೆಲೆಸಿ ಆ ಪ್ರದೇಶದಲ್ಲಿ ಸಾಕಷ್ಟು ಆರ್ಥಿಕ ಹಾಗೂ ಸಾಮಾಜಿಕ ಪ್ರಾಧಾನ್ಯವನ್ನು ಪಡೆದರೆಂದು ತಿಳಿದುಕೊಳ್ಳಲಾಗಿತ್ತು. ಅವರದ್ದು ಪಿತೃಪ್ರಧಾನ ಸಮಾಜವಾಗಿತ್ತು. ಮಾತ್ರವಲ್ಲದೆ ಕುಟುಂಬದ ಅತ್ಯಂತ ಹಿರಿಯ ಗಂಡಸಿಗೆ ಮಾತ್ರ ತನ್ನ ಸ್ವಂತ ಸಮುದಾಯದ ಹೆಣ್ಣನ್ನು ಮದುವೆಯಾಗುವ ಹಕ್ಕಿತ್ತು. ಉಳಿದವರೆಲ್ಲರೂ ನಾಯರ್ ಸ್ತ್ರೀಯರೊಂದಿಗೆ ಸಂಬಂಧವಿಟ್ಟುಕೊಳ್ಳಬೇಕಾಗಿತ್ತು. ಕುಟುಂಬದ ಹಿರಿಯ ಸದಸ್ಯನು ಒಂದಕ್ಕಿಂತ ಹೆಚ್ಚು ಬಾರಿ ಮದುವೆಯಾಗಬಹುದಿತ್ತು; ಹಾಗೂ ಮದುವೆಯಾದ ನಂತರ ಈ ಸ್ತ್ರೀಯರು ತಮ್ಮ ಗಂಡನ ಮನೆಯಲ್ಲಿ ವಾಸಿಸುತ್ತಿದ್ದರು. ಆತನಿಗೆ ಇತರ ನಾಯರ್ ಸ್ತ್ರೀಯರೊಂದಿಗೂ ಸಂಬಂಧ ಇಟ್ಟುಕೊಳ್ಳುವ ಸ್ವಾತಂತ್ರ್ಯವಿತ್ತು. ಆದರೆ ಅಲ್ಲಿ ಹುಟ್ಟಿದ ಮಕ್ಕಳಿಗೆ ಮಾತ್ರ ಕುಟುಂಬದ ಆಸ್ತಿಯ ಮೇಲೆ ಹಕ್ಕು ಇರಲಿಲ್ಲ. ಅಲ್ಲದೆ ಅವರು ನಂಬೂದಿರಿಗಳಾಗದೆ ನಾಯರ್‌ಗಳಾಗಿಯೇ ಉಳಿದು ತಮ್ಮ ತಾಯಂದಿರ ಕುಟುಂಬ ಹಾಗೂ ಸಮುದಾಯಗಳಿಗೆ ಸೇರಿದವರಾಗಿ ಉಳಿಯುತ್ತಿದ್ದರು.

ಈ ಪದ್ಧತಿಯಿಂದಾಗಿ ಹೆಚ್ಚು ಕಷ್ಟವಾಗುತ್ತಿದ್ದುದು ನಂಬೂದಿರಿ ಸ್ತ್ರೀಯರಿಗೆ. ಅವರು ಒಂದೋ ಅವಿವಾಹಿತರಾಗಿ ಉಳಿಯಬೇಕಾಗಿತ್ತು. ಇಲ್ಲವೇ ಅವರು ಮುದುಕರನ್ನು ಮದುವೆಯಾಗಬೇಕಾಗುತ್ತಿತ್ತು. ಸದಾ ಬಹಳ ಕಟ್ಟುನಿಟ್ಟಾಗಿ ಮುಖದ ಮೇಲೆ ಅವಗುಂಠನ ಧರಿಸಿಕೊಂಡು ಇರಬೇಕಾಗಿತ್ತು. ಸಾರ್ವಜನಿಕರ ಮುಂದೆ ಅವರು ಓಡಾಡುವುದು ನಿಷಿದ್ಧವಾಗಿತ್ತು. ಲೈಂಗಿಕ ಸ್ವಾತಂತ್ರ್ಯವೇ ಇಲ್ಲದ ಅವರು ಒಂದು ವೇಳೆ ತಮ್ಮ ಗಂಡಂದಿರ ಹೊರತಾಗಿ ಬೇರೆ ಯಾವನಾದರೂ ಪುರುಷನೊಂದಿಗೆ ಸಂಪರ್ಕವಿಟ್ಟುಕೊಂಡದ್ದು ಸಾಬೀತಾದರೆ ವಿಚಾರಣೆಗೆ ಗುರಿಯಾಗಿ ಬಹಿಷ್ಕರಿಸಲ್ಪಡುತ್ತಿದ್ದರು. ಆದರೆ ನಂಬೂದಿರಿ ಮತ್ತು ನಾಯರ್ ಗಂಡಸರಿಗೆ ಮತ್ತು ನಾಯರ್ ಸ್ತ್ರೀಯರಿಗೆ ಈ ಪದ್ಧತಿಯಡಿ ಯಥೇಚ್ಛವಾದ ಲೈಂಗಿಕ ಸ್ವಾತಂತ್ರ್ಯವಿತ್ತು.

ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಗಟ್ಟಿಗೊಳಿಸಿದ ನಂತರ ಈ ಸಂಪ್ರದಾಯವು ಕಟುವಾದ ಟೀಕೆಗೊಳಗಾಯಿತು. ವಸಾಹತುಶಾಹಿಯ ಒಂದು ಭಾಗವಾಗಿ ಬಂದ ಈವಾಂಜಲಿಕಲ್ ಮತಪ್ರವರ್ತಕರು ಅನೇಕ ಇಂಗ್ಲಿಷ್ ಶಾಲೆಗಳನ್ನು ತೆರೆದು ಈ ಪ್ರದೇಶದ ಶೈಕ್ಷಣಿಕ ಪದ್ಧತಿಯನ್ನು ಬದಲಾಯಿಸಲು ಪ್ರಯತ್ನಿಸುವುದರೊಂದಿಗೆ ಮರುಚಿಂತನೆ ಪ್ರಾರಂಭವಾಯಿತು. ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಅನೇಕ ಮಂದಿ ಮಲಯಾಳಿ ಸುಧಾರಕರು ಮತ್ತು ಬುದ್ಧಿಜೀವಿಗಳು ಕಾರ್ಯೋನ್ಮುಖರಾದರು. ಆಶ್ಚರ್ಯವೆಂದರೆ ಈ ಸ್ಥಾನೀಯ ಸುಧಾರಕರು ಮತ್ತು ವಸಾಹತುಶಾಹಿಯ ಪ್ರತಿನಿಧಿಗಳು ನಾಯರ್ ಸಂಬಂಧಗಳ ಬಗ್ಗೆ ಹೊಂದಿದ ಅಭಿಪ್ರಾಯಗಳು ಒಂದೇ ಆಗಿದ್ದವು. ಈ ಪದ್ಧತಿಯು ಅನೈತಿಕ ಹಾಗೂ ಅನಾರೋಗ್ಯಕರವೆಂದು ಮನಗಂಡ ಅವರು ಅದನ್ನು ತೊಡೆದುಹಾಕಲು ಪ್ರಯತ್ನಿಸಿದರು. ಇದೇ ಸಮಯದಲ್ಲಿ ಅನೇಕ ಸಾಮಾಜಿಕ ಸಂಘಟನೆಗಳು ತಲೆಯೆತ್ತಿದವು. ವಸಾಹತುಶಾಹಿ ಅಧಿಕಾರ ಶಕ್ತಿಗಳು ಹೊಸ ಕಾನೂನುಗಳ ಒಂದು ಕಂತೆಯನ್ನೇ ಪ್ರಸ್ತುತಪಡಿಸಿದವು. ೧೮೯೬ರಲ್ಲಿ ನಾಯರ್ ಸಮುದಾಯದ ಸಂಬಂಧಮ್‌ಗಳ ಪುನರ್‌ಪರಿಶೀಲನೆಗಾಗಿ ಜಾರಿಗೆ ತಂದ ಮಲಬಾರ್ ವಿವಾಹ ಕಾಯಿದೆ ಇವುಗಳಲ್ಲಿ

ಪ್ರಮುಖವಾದುದು. ನಾಯರ್ ಸಮುದಾಯದ ಕೆಲವು ಮಂದಿ ಪ್ರಮುಖರು ಮತ್ತು ಬ್ರಿಟಿಷ್ ಸದಸ್ಯರನ್ನೊಳಗೊಂಡಿದ್ದ ಈ ಸಮಿತಿಯು ಈ ಪದ್ಧತಿಯನ್ನು ಅನಾಗರಿಕವೆಂದು ನಿರ್ಧರಿಸಿತು. ತತ್ಪರಿಣಾಮವಾಗಿ ಸ್ವೇಚ್ಛಾಸಂಬಂಧಗಳು ನಿಷೇಧಿಸಲ್ಪಟ್ಟು ನಾಯರ್‌ಗಳ ಸಂಬಂಧಮ್‌ಗಳು ಕಾನೂನು ರೀತ್ಯಾ ವಿವಾಹಗಳೆಂದು ಘೋಷಿತವಾದವು.

ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲಿ ಜೀವಿಸಿದ್ದ ನಾಯರ್ ಜನಾಂಗದ ಸದಸ್ಯರಿಗೆ ತಮ್ಮ ಪೂರ್ವಜರ ಅನೈತಿಕತೆಯ ಬಗ್ಗೆ ಸಾಕಷ್ಟು ನಾಚಿಕೆಯಿತ್ತು. ನಾಯರ್ ಮಾತೃಪ್ರಧಾನ ಕುಟುಂಬಗಳಿಗೆ ಸೇರಿದ ಹೊಸ ತಲೆಮಾರಿನವರು ಬರೆದ ಕಥೆ-ಕಾದಂಬರಿಗಳಲ್ಲಿ ಸಂಬಂಧಮ್‌ಗಳನ್ನು ಅನಾಗರಿಕ ಪದ್ಧತಿ ಎಂದು ಹೇಳಲಾಗಿದೆ. ಅದನ್ನು ತೊಡೆದುಹಾಕುವ ಉದ್ದೇಶದಿಂದ ಹೊಸ ವಿವಾಹ ಕಾಯಿದೆಯು ಜ್ಯಾರಿಯಾಗುವುದರೊಂದಿಗೆ ಭೂ ಸುಧಾರಣೆಯ ಹೊಸ ಆರ್ಥಿಕ ವ್ಯವಸ್ಥೆಯು ಕೇರಳದಲ್ಲಿದ್ದ ಜಮೀನ್ದಾರಿ ಪದ್ಧತಿಯನ್ನು ತೆಗೆದುಹಾಕಿತು. ೧೯೭೬ ರಲ್ಲಿ ಕೇರಳ ಸರಕಾರದ ಕಾನೂನು ನಾಯರ್ ಜನಾಂಗದಲ್ಲೂ ಪಿತೃಪ್ರಧಾನ ವ್ಯವಸ್ಥೆಯನ್ನು ಜ್ಯಾರಿಗೆ ತಂದಿತು. ಅದೃಷ್ಟವಶಾತ್ ಸ್ತ್ರೀಯರ ಆಸ್ತಿಯ ಹಕ್ಕು ಮತ್ತು ಕುಟುಂಬದ ಹೆಸರಿನ ಮೇಲಿನ ಹಕ್ಕುಗಳು ಹಾಗೆಯೇ ಉಳಿದವು.

ಹೀಗೆ ಕೇರಳದ ನಾಯರ್ ಸಂಸ್ಕೃತಿಯು ಇಡಿಯ ದೇಶದ ಸಂಸ್ಕೃತಿಯೊಂದಿಗೆ ವಿಲೀನಗೊಂಡಿತು. ಆದರೂ ಕೇರಳದ ವೈಶಿಷ್ಟ್ಯವು ಗಮನಾರ್ಹವಾಗಿತ್ತು. ೬೦ ರ ದಶಕದ ಕೊನೆಯ ಮತ್ತು ೭೦ ರ ದಶಕದ ಪ್ರಾರಂಭದ ವರ್ಷಗಳಲ್ಲಿ ಸಾಕ್ಷರತಾ ರಂಗದಲ್ಲಿ –ಮುಖ್ಯವಾಗಿ ಮಹಿಳಾ ಸಾಕ್ಷರತೆ– ಕುಟುಂಬಯೋಜನೆ, ಮಕ್ಕಳ ಕಲ್ಯಾಣ, ಶಿಶುಮರಣಗಳ ಪ್ರಮಾಣದಲ್ಲಿ ಇಳಿತವೇ ಮುಂತಾದ ವಿಚಾರಗಳಲ್ಲಿ ಕೇರಳವು ಅಂತರಾಷ್ಟ್ರೀಯ ಮಟ್ಟದ ಮಹತ್ವ ಪಡೆಯಿತು. ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ ನಾಯರ್ ಜನಾಂಗದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ ಎರಡು ಜನಾಂಗೀಯ ಅಧ್ಯಯನದ ಕೃತಿಗಳು – 'ನಾಯರ್ ಪ್ರಾಬಲ್ಯದ ಅವನತಿ' (ರಾಬಿನ್ ಜೆಫ್ರಿ) ಮತ್ತು 'ನಾಯರ್‌ಗಳು– ಇಂದು' (ಫುಲ್ಲರ್) ಪ್ರಕಟಗೊಂಡವು. ಈ ನಡುವೆ ನಾಯರ್‌ಗಳ ಸಾಮಾಜಿಕ ಪದ್ಧತಿಗಳು ಸ್ತ್ರೀವಾದಿ ವಿಮರ್ಶಕರನ್ನೂ ಆಕರ್ಷಿಸಿದವು. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಅವರು 'ಸ್ತ್ರೀವಾದಿಗಳ ಸ್ವರ್ಗ' ಎಂದು ಕರೆಯುವ ಪ್ರಯತ್ನಗಳೂ ನಡೆದವು. ಇಲ್ಲಿ ಕೆಲವು ಸಮಸ್ಯೆಗಳೂ ಹುಟ್ಟಿಕೊಂಡವು. ಕೆಲವು ಸ್ತ್ರೀವಾದಿ ಸಂಶೋಧಕರು ನಾಯರ್ ಕೂಡುಕುಟುಂಬದ ಯಜಮಾನಿಕೆಯು ಪುರುಷನ ಕೈಯಲ್ಲಿದ್ದುದರಿಂದ ನಾಯರ್‌ಗಳ 'ಸಂಬಂಧಂ'ಗಳು ಸಾಮಾಜಿಕ ಅನುಮತಿ ಪಡೆದ ವೇಶ್ಯಾಪದ್ಧತಿಯೆಂದು ಕರೆದರು. ಯಾಕೆಂದರೆ ಅಲ್ಲಿ ಕುಟುಂಬದ ಯಜಮಾನನು ತನ್ನ ಕುಟುಂಬದ ಸ್ತ್ರೀಯರನ್ನು ಶ್ರೀಮಂತ ಗಂಡಸರೊಂದಿಗೆ ಸಂಬಂಧ ಬೆಳೆಸಿಕೊಳ್ಳುವಂತೆ ಅವರ ಇಚ್ಛೆಯ ವಿರುದ್ಧ, ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಎತ್ತರಿಸಿಕೊಳ್ಳುವುದಕ್ಕೋಸ್ಕರ ಮತ್ತು ಆಸ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಬಲಾತ್ಕರಿಸಿರಲೂ ಬಹುದು. ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲಿ ನಾಯರ್ ಸಮಾಜದ ಮಾತೃಪ್ರಧಾನ ವ್ಯವಸ್ಥೆಯ ಕುರಿತಾಗಿ ಬರೆಯಲ್ಪಟ್ಟ ಕೆಲವು ಲೇಖನಗಳೂ ಇದನ್ನೇ ಹೇಳುತ್ತವೆ.

ನಾಯರ್ ಜನಾಂಗದ ಮಾತೃಪ್ರಧಾನ ವ್ಯವಸ್ಥೆಯ ಅಭ್ಯಾಸದಲ್ಲಿ ಮುಖ್ಯವಾದ ತೊಡಕೆಂದರೆ ತೀರಾ ಇತ್ತೀಚಿನ ಸಾಹಿತ್ಯಕೃತಿಗಳನ್ನು ಬಿಟ್ಟರೆ ಇನ್ನಾವ ದಾಖಲೆಗಳೂ ಇಲ್ಲದಿರುವುದು. ಮೌಖಿಕ ಸಾಕ್ಷಿಗಳ ಮೂಲಕವೂ ಬೇಕಾದ ಮಾಹಿತಿಗಳು ಸಿಗುವುದಿಲ್ಲ. ಏಕೆಂದರೆ ಆ ಕುರಿತು ಮಾತನಾಡಬಲ್ಲ ಅತಿ ಹೆಚ್ಚು ವಯಸ್ಸಾದ ವ್ಯಕ್ತಿಗಳು ಹುಟ್ಟಿದ್ದು ೧೯ ನೇ ಶತಮಾನದ

ಕೊಟ್ಟುಕೊಂಡರು ಘಟ್ಟದಲ್ಲಿ ಈಗ ಮಾತೃಪ್ರಧಾನ ವ್ಯವಸ್ಥೆಯನ್ನು ತೊರೆದುಹಾಕಿ ಸಮಾಜ ಸುಧಾರಣೆಯನ್ನು ಮಾಡುವ ಪ್ರಯತ್ನ ನಡೆಯುತ್ತಾ ಇತ್ತು. ಪ್ರಾಕ್ತನ ಪುರಾವೆಗಳು ಮತ್ತು ತಮಿಳು ಸಾಹಿತ್ಯಕೃತಿಗಳು ಹೇಳುವ ಪ್ರಕಾರ ಈ ಜನಾಂಗವು ಇಲ್ಲಿ ಹತ್ತನೇ ಶತಮಾನದಿಂದಲೂ ವಾಸಿಸುತ್ತಿತ್ತು. ಮಾತ್ರವಲ್ಲದೆ ಹತ್ತೊಂಬತ್ತನೇ ಶತಮಾನದಲ್ಲಿ ಕಂಡಂತೆ ಮಾತೃಪ್ರಧಾನ ಕೂಡುಕುಟುಂಬ ವ್ಯವಸ್ಥೆ ಮತ್ತು ಆರ್ಥಿಕ ಸಾಮಾಜಿಕ ಸಂಬಂಧಗಳು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಆರ್ಥಿಕ ವ್ಯವಸ್ಥೆ ಮತ್ತು ಕುಟುಂಬದ ಸೊತ್ತುಗಳ ಹಂಚಿಕೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿತ್ತು. ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಬರುತ್ತ ಶತಮಾನಗಳಷ್ಟು ಕಾಲ ಒಂದೇ ರೀತಿ ಇದ್ದವೆಂದು ಹೇಳಲಾಗುವುದಿಲ್ಲ.

ರಾಬಿನ್ ಜೆಫ್ರಿಯ ಸಂಶೋಧನಾ ಬರಹಗಳು ಇಪ್ಪತ್ತನೇ ಶತಮಾನದಲ್ಲಿ ನಾಯರ್ ಪ್ರಾಬಲ್ಯದ ಅವನತಿಯ ಬಗೆಗಿನ ಸಶಕ್ತ ವಾದವನ್ನು ಮುಂದಿರಿಸುತ್ತವೆ. ಜೆಫ್ರಿ ಮಾತ್ರವಲ್ಲದೆ ಇತರ ಅನೇಕ ಸಂಶೋಧಕರ ಪ್ರಕಾರ ನಾಯರ್ ಸಮುದಾಯದಲ್ಲಿ ಬಹಳ ಹಿಂದೆ ಪಿತೃಪ್ರಧಾನ ವ್ಯವಸ್ಥೆಯೇ ಇತ್ತು. ಆ ನಂತರ ನಾಯರ್ ಪುರುಷರನ್ನು ಸಾಮಂತ ರಾಜರು ಸೇನಾದಳಕ್ಕೆ ಸೇರಿಸಿಕೊಳ್ಳಲಾರಂಭಿಸಿದಾಗ ಸ್ವಾರ್ಥಿಗಳೂ ಲೈಂಗಿಕ ಸುಖಲೋಲುಪರೂ ಆದ ನಂಬೂದಿರಿ ಪುರುಷ ವರ್ಗವು ಮಾತೃಪ್ರಧಾನ ವ್ಯವಸ್ಥೆಗೆ ಬೆಂಬಲವಿತ್ತು ಅದನ್ನು ಬಳಕೆ ತಂದಿದ್ದಾಗಿರಬಹುದು ಎಂಬುದು ಸಂಶೋಧಕರ ಬಲವಾದ ಊಹೆ.

ನಾಯರ್ ಸಮಾಜದ ಮಾತೃಪ್ರಧಾನ ವ್ಯವಸ್ಥೆಯ ಬಗೆಗೆ ಸ್ತ್ರೀವಾದಿಗಳ ಕುತೂಹಲಕ್ಕೆ ಕಾರಣ ಅಲ್ಲಿ ಸ್ತ್ರೀಯರಿಗಿದ್ದ ಲೈಂಗಿಕ ಆಯ್ಕೆಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯ. ಆದರೆ ಮೂಲ ಕುಟುಂಬದ ಹಿರಿಯ ಗಂಡಸಿನ ಕೈಯಲ್ಲಿ ಎಲ್ಲಾ ವ್ಯವಹಾರಗಳ ಪೂರ್ತಿ ಯಜಮಾನಿಕೆಯಿದ್ದುದೆಂದು ತಿಳಿದಾಗ ಅವರ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಅಲ್ಲದೆ ಈ ಯಜಮಾನನು ತನ್ನ ಮನೆಯ ಸ್ತ್ರೀಯರನ್ನು ಅವರ ಇಚ್ಛೆಯ ವಿರುದ್ಧ ಕೆಲವು ಮಂದಿ ಪುರುಷರಿಗೆ ಬಲಾತ್ಕಾರವಾಗಿ ಕೊಟ್ಟ ಉದಾಹರಣೆಗಳೂ ಇದ್ದುವು. ಅಲ್ಲದೆ ಈ ನಾಯರ್ ಸ್ತ್ರೀಯರಿಗೆ ತಮ್ಮ ಕೂಡುಕುಟುಂಬದ ಆಸ್ತಿಯ ಮೇಲೆ ಯಾವ ಅಧಿಕಾರವೂ ಇರಲಿಲ್ಲ. ಜಿ. ಅರುಣಿಮಾ ಎಂಬ ಸ್ತ್ರೀವಾದಿ ಬರಹಗಾರ್ತಿಯೊಬ್ಬರು ಮದರಾಸು ಪ್ರೆಸಿಡೆನ್ಸಿಯ ಕೋರ್ಟ್ ದಾಖಲೆಗಳನ್ನು ಪರಿಶೀಲಿಸಿ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಕುಟುಂಬದ ಹಿರಿಯ ಗಂಡಸೇ ಯಜಮಾನ ಎಂಬ ಪರಿಕಲ್ಪನೆ ಪ್ರಾರಂಭವಾಗಿದ್ದು ೧೯ ನೇ ಶತಮಾನದ ಮಧ್ಯಭಾಗದಿಂದ ಎಂದು ಹೇಳುತ್ತಾರೆ. ಇದರ ವಿರುದ್ಧ ಸ್ತ್ರೀಯರು ಫಿರ್ಯಾದು ಮಾಡಿ ತಮ್ಮ ಹಕ್ಕುಗಳನ್ನು ಕೇಳಹೋದಾಗ ಕೋರ್ಟ್ ಕುಟುಂಬದ ವ್ಯವಹಾರಗಳನ್ನು ನಿಭಾಯಿಸಲು ಅವರು ಅನರ್ಹರೆಂದು ತೀರ್ಪು ನೀಡಿತು. ಇದರ ಪರಿಣಾಮವಾಗಿ ಗಂಡಸರ ಕೈಗೆ ಅಧಿಕಾರ ಸಿಕ್ಕಿತು ಮಾತ್ರವಲ್ಲದೆ ಲಿಂಗಾಧಾರಿತ ಅಸಮಾನತೆಯೂ ಪ್ರಾರಂಭಗೊಂಡಿತು ಎಂದು ಅರುಣಿಮಾ ಹೇಳುತ್ತಾರೆ. ಎಷ್ಟೋ ಮಂದಿ ಸೊಸೆಯಂದಿರು ತಮ್ಮ ಮಾವಂದಿರ ವಿರುದ್ಧ ಆಸ್ತಿಯ ಹಕ್ಕಿಗಾಗಿ ಹೋರಾಡಿದ ಉದಾಹರಣೆಗಳನ್ನೂ, ಎಷ್ಟೋ ಬಾರಿ ಸ್ತ್ರೀಯರು ತಮ್ಮ ಇಚ್ಛೆಯ ವಿರುದ್ಧ ಪುರುಷರೊಂದಿಗೆ ಸಂಬಂಧವಿಟ್ಟುಕೊಳ್ಳುವಂತೆ ಬಲಾತ್ಕಾರಕ್ಕೊಳಗಾದ ಘಟನೆಗಳನ್ನೂ ಅರುಣಿಮಾ ಉಲ್ಲೇಖಿಸುತ್ತಾರೆ. ಹೀಗೆ ೧೯ ನೇ ಶತಮಾನದಲ್ಲಿ ನಿಧಾನವಾಗಿ ಪಿತೃಪ್ರಧಾನ ವ್ಯವಸ್ಥೆಯ ಪುನರಾರಂಭವೂ ಆಯಿತೆಂಬುದು ಅರುಣಿಮಾರ ಹೇಳಿಕೆ.

ಈ ಹೊಸ ಪಿತೃಪ್ರಧಾನ ಪದ್ಧತಿಯೊಂದಿಗೆ ನಾಯರ್ ಜನಾಂಗವು ರಾಷ್ಟ್ರೀಯ ಆಧುನಿಕ ವಲಯದೊಳಗೆ ಕಾಲಿಟ್ಟಿತು. ಈ ಬದಲಾವಣೆಯ ಸ್ಪಷ್ಟ ಚಿತ್ರಣವು ಆ ಕಾಲದ

ಕೇರಳದ ಪತ್ರಿಕೆ-ನಿಯತಕಾಲಿಕಗಳಲ್ಲಿ ಸಿಗುತ್ತವೆ. ಅನೇಕ ಸ್ಥಾನೀಯ ಸಂಘಟನೆಗಳು ಮಾತೃಪ್ರಧಾನ ವ್ಯವಸ್ಥೆಯ ಬಗ್ಗೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದ ಕಾಲವದು. ನಂಬೂದಿರಿ ಯುವಕರ ಸಂಘವಾಗಿದ್ದ 'ನಂಬೂದಿರಿ ಯಕ್ಷಗಾನ ಸಭಾ'ವು ತಮ್ಮ ಸಮುದಾಯದ ಎಲ್ಲಾ ಯುವಕರಿಗೆ ತಮ್ಮದೇ ಜನಾಂಗದ ಒಳಗೆ ಮದುವೆಯಾಗುವ ಹಕ್ಕಿಗಾಗಿ ಹೋರಾಡಿತು. ನಂಬೂದಿರಿ ಸ್ತ್ರೀಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸಿ ವಿಧವಾವಿವಾಹವನ್ನು ಪ್ರೋತ್ಸಾಹಿಸಿ, ವಿಶಿಷ್ಟ ರೀತಿಯಲ್ಲಿ ಮುಖವನ್ನು ಮರೆಮಾಡಿಕೊಳ್ಳುವ ಪದ್ಧತಿಯನ್ನು (ದೊಡ್ಡಗಾತ್ರದ ತಾಳೆಯೋಲೆಗಳಿಂದ ಮಾಡಿದ ಕೊಡೆಗಳಿಂದ ಮುಖವನ್ನು ಮರೆಮಾಡಿಕೊಂಡು ಸಾರ್ವಜನಿಕರೆದುರು ಕಾಣಿಸಿಕೊಳ್ಳುವ ಸಂಪ್ರದಾಯ), ಬಹುಪತ್ನಿತ್ವ ಮತ್ತು ಬಾಲ್ಯವಿವಾಹಗಳನ್ನು ವಿರೋಧಿಸುವ ಕೆಲಸವನ್ನು ಮಾಡಿದರು. ಕೇರಳೀಯ ನಾಯರ್ ಸಮಾಜ (ನಂತರ 'ನಾಯರ್ ಸರ್ವಿಸ್ ಸೊಸೈಟಿ') ಎಂಬುದು ಇನ್ನೊಂದು ಸಂಘಟನೆಯಾಗಿತ್ತು. ನಾಯರ್ ಸಮಾಜವನ್ನು ಅವನತಿಯಿಂದ ರಕ್ಷಿಸುವುದು ಇದರ ಉದ್ದೇಶವಾಗಿತ್ತು. ೧೯೫೦ ರ ಸುಮಾರಿಗೆ ಅಂತಹ ಸಂಘಟನೆಗಳು ಸಾಮಾನ್ಯವಾದವು.

ಕೇರಳದ ಸುಧಾರಣಾ ಯೋಜನೆಗಳು ಮುಖ್ಯವಾಗಿ ಮಾತೃಪ್ರಧಾನ ವ್ಯವಸ್ಥೆಗೆ ಸಂಬಂಧಿಸಿದವುಗಳಾಗಿದ್ದವೇ ಹೊರತು ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿದ್ದ ಸತಿ, ಪರ್ದಾ ಮತ್ತು ಬಾಲ್ಯವಿವಾಹಗಳಾಗಿರಲಿಲ್ಲ. ನಾಯರ್ ಸ್ತ್ರೀಯರಿಗೆ ಸಂಬಂಧಪಟ್ಟಂತೆ ಅವರನ್ನು ಸುಶಿಕ್ಷಿತರನ್ನಾಗಿ ಮಾಡಿ ಸ್ವತಂತ್ರರನ್ನಾಗಿಸುವುದರ ಮೂಲಕ ಅವರನ್ನು ರಾಷ್ಟ್ರಕ್ಕಾಗಿ ಹೋರಾಡುವ ಪುರುಷರ ಆದರ್ಶ ಪತ್ನಿಯರು ಮತ್ತು ತಾಯಂದಿರನ್ನಾಗಿಸುವ ಉದ್ದೇಶ ಇವರದಾಗಿತ್ತು. ನಿಧಾನವಾಗಿ ವಸಾಹತುಶಾಹಿಯು ತಂದ ಆಧುನಿಕತೆಯ ಮೂಲಕ ಪುರುಷಪ್ರಾಧಾನ್ಯ ಪರಿಕಲ್ಪನೆಯು ನಾಯರ್ ಸಮುದಾಯವನ್ನು ಆವರಿಸಿದ್ದಕ್ಕೆ ಕಾರಣ ಸಮಾಜದ ಇತರ ಸಮುದಾಯಗಳ ಮುಂದೆ ತನ್ನ ಸಾಮಾಜಿಕ-ಆರ್ಥಿಕ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದೂ ಆಗಿತ್ತು.

'ಲಕ್ಷ್ಮೀಬಾಯಿ' ಎನ್ನುವ ನಿಯತಕಾಲಿಕವೊಂದರಲ್ಲಿ ಪ್ರಕಟವಾಗುತ್ತಿದ್ದ ಕೆಲವು ಲೇಖನಗಳು ನಾಯರ್ ಸಮುದಾಯದ ಸ್ತ್ರೀಯರ ಸ್ಥಿತಿಗತಿಗಳ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ :

"ಪ್ರಸಕ್ತ ಶತಮಾನದಲ್ಲಿ ಜಗತ್ತಿನ ಇತರ ಎಲ್ಲಾ ಜನಾಂಗಗಳೂ ಎಚ್ಚೆತ್ತಿವೆ ಶ್ರಮವಹಿಸಿ ದುಡಿದು ಆರ್ಥಿಕವಾಗಿಯೂ ಸಾಂಸ್ಕೃತಿಕವಾಗಿಯೂ ಶೈಕ್ಷಣಿಕವಾಗಿಯೂ ಅಭಿವೃದ್ಧಿ ಹೊಂದುತ್ತಿವೆ ನಮ್ಮ ಜನಾಂಗ ಮಾತ್ರ ಪ್ರಬಲವಾದ ಪ್ರವಾಹದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ಮರದ ದಿಮ್ಮಿಯಂತೆ ನಿಂತಲ್ಲೇ ಸುತ್ತುತ್ತಿದೆ"

"ಇತ್ತೀಚಿಗೆ ಕೆಲವು ಮಂದಿ ಗೌರವಾನ್ವಿತ ಮಲಯಾಳಿ ಪುರುಷರು ತಮ್ಮ ಸಮಾಜವು ಒಂದು ಸರಿಯಾದ ವಿವಾಹ ಪದ್ಧತಿಯನ್ನು ಅನುಸರಿಸದೇ ಇರುವುದು ತಮ್ಮ ಸ್ಥಾನಮಾನಗಳಿಗೆ ಧಕ್ಕೆ ತರುತ್ತಿದೆ ಎನ್ನುತ್ತಿದ್ದಾರೆ."

"ನಮ್ಮಲ್ಲಿರುವ ಸಂಬಂಧಮ್‌ಗಳ ಬಗ್ಗೆ ವಿದೇಶಿಯರಿಗೆ ತುಚ್ಛ ಭಾವನೆಯಿದೆ ಕೆಲವರ ಪ್ರಕಾರ ನಾಯರ್ ಸ್ತ್ರೀಯರು ವೇಶ್ಯೆಯರಾಗಿದ್ದಾರೆ".

"ಸರಕಾರಿ ಉದ್ಯೋಗ ಮತ್ತು ವ್ಯಾಪಾರಗಳು ಪುರುಷರಿಗೆ ಸೇರಿದ್ದು ಮತ್ತು ಕುಟುಂಬ ನಿರ್ವಹಣೆಯು ಸ್ತ್ರೀಯರ ಕೆಲಸ ಹೌದು. ಆ ಬಗ್ಗೆ ನಮಗೆ ಆಕ್ಷೇಪವಿಲ್ಲ. ಆದರೆ ಆ ಕಾರಣದಿಂದಾಗಿ ಸ್ತ್ರೀಯರಿಗೆ ವಿದ್ಯಾಭ್ಯಾಸ ಬೇಡವೆನ್ನುವುದು ಸರಿಯಲ್ಲ."

"ಸ್ತ್ರೀಯರ ಕರ್ತವ್ಯ ಪುರುಷರೊಂದಿಗೆ ಸ್ಪರ್ಧಿಸುವುದಲ್ಲ. ಬದಲಾಗಿ ಅವರಿಗೆ ಸಹಕಾರ ನೀಡುವುದು. ಹೆಚ್ಚಿನ ಮಂದಿ ಪುರುಷರು ತಮ್ಮ ಅರ್ಧಾಂಗಿಯರಿಂದ ಪ್ರಭಾವಿತರಾಗುವುದರಿಂದ ಸ್ತ್ರೀ-ಪುರುಷರ ನಡುವೆ ಪೈಪೋಟಿಯ ಪ್ರಶ್ನೆ ಏಳುವುದಿಲ್ಲ..."

"ನಾಯರ್ ಸಮುದಾಯದಲ್ಲಿ ಪತ್ನಿಯರು ಪತಿಯಂದಿರ ಮನೆಯನ್ನು ಸೇರುತ್ತಿಲ್ಲ. ಆದ್ದರಿಂದ ಅವರ ಮದುವೆಯೆನ್ನುವುದು ತಮ್ಮ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ನಡೆಸುವ ಒಂದು ಒಪ್ಪಂದ ಮಾತ್ರವಾಗುತ್ತದೆ. ಇದರಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಪತ್ನಿಯ ರಕ್ಷಣೆ ಪತಿಯ ಕರ್ತವ್ಯವಾಗದೇ ಇರುವುದರಿಂದ ಅವರು ಬೇಜವಾಬ್ದಾರರಾಗುವ ಸಂಭವ ಹೆಚ್ಚು."

"ಅನಾದಿ ಕಾಲದಿಂದಲೇ ಮಲಯಾಳಿಗಳು ತಮ್ಮ ಸಂಬಂಧಗಳನ್ನು ಬೇಕೆಂದಾಗ ಮಾಡಿಕೊಳ್ಳುವ, ಬೇಡವೆಂದಾಗ ಬಿಡುವ ಸ್ವಾತಂತ್ರ್ಯ ಹೊಂದಿದವರಾದ್ದರಿಂದ ಪ್ರಾಯಶಃ ಬಿಡಿಸಿಕೊಳ್ಳಲಾರದ ಒಂದು ಗಟ್ಟಿಯಾದ ಬಂಧಕ್ಕೆ ಅಂಟಿಕೊಳ್ಳಲು ಅವರು ಸಿದ್ಧರಾಗುವುದು ಕಷ್ಟ."

"ಇತರ ಪ್ರದೇಶಗಳ ಜನರು ನಮ್ಮನ್ನು ಬೇವಾರ್ಸಿಗಳೆಂದೂ ಕುಲಗೋತ್ರಗಳಿಲ್ಲದವರೆಂದೂ ಟೀಕೆ ಮಾಡುತ್ತಾರೆ."

"ತಮ್ಮ ಅನೈತಿಕತೆಯಿಂದ ದೇವರು ಸಿಟ್ಟಿಗೇಳುತ್ತಾನೆಂಬುದನ್ನು ಮಲಯಾಳಿಗಳು ಅರ್ಥ ಮಾಡಿಕೊಂಡಿಲ್ಲ . ಈಗ ಹೈಕೋರ್ಟ್ 'ನಾಯರ್‌ಗಳಲ್ಲಿ ಸಾಮಾನ್ಯರೀತ್ಯಾ ವಿವಾಹಗಳಿಲ್ಲ. ಆದ್ದರಿಂದ ಅವರನ್ನು ಅನೈತಿಕತೆಗಾಗಿ ಶಿಕ್ಷಿಸುವ ಹಾಗಿಲ್ಲ' ಎಂದು ತೀರ್ಮಾನಿಸಿದ್ದರಿಂದ ಅವರನ್ನು ದೇವರೇ ಕಾಪಾಡಬೇಕು"

"ಶಿಕ್ಷಣ ಪಡೆಯುವುದರ ಮೂಲಕ ತಮ್ಮ ಪಾವಿತ್ರ್ಯವನ್ನು ಕಾಪಾಡಿಕೊಂಡ ಸ್ತ್ರೀಯರಿಗೆ ಅದರ ಬೆಲೆ ಗೊತ್ತಾಗುತ್ತದೆ. ಆ ನಂತರ ಅವರು ತಮ್ಮ ನೈತಿಕತೆಯನ್ನು ಎಂದಿಗೂ ಹಾಳು ಮಾಡಿಕೊಳ್ಳಲಾರರು"

"ಸ್ತ್ರೀಯರು ಪಾವಿತ್ರ್ಯ ಉಳಿಸಿಕೊಳ್ಳಬೇಕು. ಆದರೆ ಪುರುಷರು ಸಹ ಏಕಪತ್ನಿತ್ವವನ್ನು ಅನುಸರಿಸಬೇಕು"

ರಾಷ್ಟ್ರೀಯ ಸುಧಾರಣಾವಾದಿ ಯೋಜನೆಗಳು ನಾಯರ್ ಸ್ತ್ರೀಯರ ಸಾಮಾಜಿಕ ಅಸ್ಮಿತೆ ಮತ್ತು ಲೈಂಗಿಕತೆಗಳ ಪುನರ್‌ರೂಪಣೆಯಿಂದ ತೃಪ್ತಿಗೊಳ್ಳಲಿಲ್ಲ. ಹೊಸ ನೈತಿಕ ಚೌಕಟ್ಟಿನಲ್ಲಿ ಅವಕ್ಕೊಂದು ಬೇರೆಯೇ ಆದ ಆಕಾರ ಕೊಡುವುದು ಆ ಯೋಜನೆಗಳ ಉದ್ದೇಶವಾಯಿತು. ಹತ್ತೊಂಬತ್ತನೇ ಶತಮಾನದ ತನಕ ಕೇರಳದ ಸ್ತ್ರೀಯರಿಗೆ ತಮ್ಮ ಎದೆಯ ಮೇಲೆ ಸೆರಗು ಹಾಕಿಕೊಳ್ಳುವುದು ಅಗತ್ಯವೆಂದು ಕಂಡಿರಲಿಲ್ಲ. ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಆದಿಯಲ್ಲಿ ತೆಗೆದ ಚಿತ್ರಗಳನ್ನು ನೋಡಿದರೆ ಸ್ತ್ರೀಪುರುಷರ ಉಡುಪುಗಳಲ್ಲಿ ಹೆಚ್ಚೇನೂ ವ್ಯತ್ಯಾಸಗಳಿದ್ದಂತೆ ಕಾಣುವುದಿಲ್ಲ. ಅದರ ಅರ್ಥ ಶಾರೀರಿಕ ಸೌಂದರ್ಯವನ್ನು ಆ ನೋಟದ ಮೂಲಕ ಆಸ್ವಾದಿಸುವ ಮನೋಭಾವ ಅವರಲ್ಲಿ ಇದ್ದಿರಲಿಲ್ಲವೆಂದಲ್ಲ. ಹಾಗೆ ಹೇಳುವುದಾದರೆ ಜಾನಪದ ಗೀತೆಗಳಲ್ಲಿ, ಲಾವಣಿಗಳಲ್ಲಿ ಶಾರೀರಿಕವಾದ ಲೈಂಗಿಕ ಆಕರ್ಷಣೆಯ ಉಲ್ಲೇಖ ಸಾಕಷ್ಟು ಬರುತ್ತದೆ. ಅಲ್ಲದೆ ಅಲ್ಲೆಲ್ಲೂ ಅಪರಾಧಿ ಭಾವ ಕಾಣಸುವುದಿಲ್ಲ. 'ವಡಕ್ಕನ್ ಪಾಟ್ಟು'ಗಳಂಥ ಲಾವಣಿಗಳಲ್ಲಿ ಬಹಳಷ್ಟು ಲೈಂಗಿಕ ಅಂಗಾಂಗಗಳ ವರ್ಣನೆಗಳಿವೆ ಮಾತ್ರವಲ್ಲದೆ ನಾಯಕನ ನಗ್ನ ಶರೀರದ ಚಿತ್ರಣವೂ ಇದೆ. ಆದರೆ ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಹೆಣ್ಣಿನ ಅಂಗಾಂಗಗಳ ಚಿತ್ರಣ ಬದಲಾಗತೊಡಗಿತು. ಲೈಂಗಿಕ ಆಕರ್ಷಣೆ ಹಾಗೆಯೇ ಉಳಿದರೂ ಆ ಅಂಗಾಂಗಗಳು ಮುಚ್ಚಿಟ್ಟುಕೊಳ್ಳಬೇಕಾದ ಭಾಗಗಳು ಎಂಬ ಧೋರಣೆ ವ್ಯಕ್ತವಾಗತೊಡಗಿತು. ಈ ಬದಲಾವಣೆಯು ಸ್ತ್ರೀಯ ದೇಹದ ಅಂಗಾಂಗಗಳು ಪುರುಷನ ಲೈಂಗಿಕ ಬಯಕೆಯ ತೃಪ್ತಿಗೋಸ್ಕರ ಇರುವಂಥವು ಎಂಬುದನ್ನು ಸೂಚಿಸುತ್ತದೆ. ನಾಯರ್‌ಗಳ ಮನಸ್ಸಿನಲ್ಲಿ ಹೊಕ್ಕು ಕುಳಿತುಕೊಂಡ

ವಿಕ್ಟೋರಿಯನ್ ಸಂಸ್ಕೃತಿಯು ನೋಟಕ್ಕೆ ಗುರಿಯಾಗುವಂತಹ ಹೆಣ್ಣಿನ ಶರೀರದಿಂದ ಲೈಂಗಿಕ ಸುಖವನ್ನು ಬಯಸುವುದು ಅಪರಾಧವಾದ್ದರಿಂದ ಸ್ತ್ರೀಯರು ತಮ್ಮ ಮೈ ಮುಚ್ಚಿಕೊಳ್ಳುವುದು ಅವರ ಕರ್ತವ್ಯವೆಂದು ಎಚ್ಚರಿಕೆ ಹೇಳಿತು. 'ಲಕ್ಷ್ಮಿಬಾಯಿ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಸ್ತ್ರೀ ಶಿಕ್ಷಣದ ಅಗತ್ಯದ ಬಗ್ಗೆ ಹೀಗೆ ಹೇಳಲಾಗಿದೆ :

"ನಾಯರ್ ಸ್ತ್ರೀಯರಿಗೆ ತಮ್ಮ ದೇಹವನ್ನು ಮುಚ್ಚಿಕೊಳ್ಳಬೇಕೆಂಬುದೂ ತಿಳಿದ ಹಾಗಿಲ್ಲ. ಇತ್ತೀಚೆಗೆ ಮೀನಚ್ಚಿಲ್ ತಾಲೂಕಿಗೆ ನಾನು ಹೋಗಿದ್ದಾಗ ಸಾರ್ವಜನಿಕ ರಸ್ತೆಯಲ್ಲಿ ನನ್ನ ನಾಯರ್ ಸಹೋದರಿಯರು ಅರೆನಗ್ನ ಉಡುಪಿನಲ್ಲಿ ನಡೆದು ಹೋಗುತ್ತಿದ್ದುದನ್ನು ನಾನು ಕಂಡೆ ನನಗೆ ತುಂಬ ನಾಚಿಕೆಯೆನಿಸಿತು. ಎಲ್ಲ ರೀತಿಯ ಎಲ್ಲ ವರ್ಗದ ಜನರು ಹಾದುಹೋಗುವ ರಾಜಬೀದಿಯದು. ಇವರು ನಿಸ್ಸಂಕೋಚವಾಗಿ ನಡೆದು ಹೋಗುತ್ತಿದ್ದರು. ಈಗೀಗ ಅತ್ಯಂತ ನಿಮ್ನವರ್ಗಕ್ಕೆ ಸೇರಿದ ಹುಲ್ಲು ಕೊಯ್ಯಲು ಬರುವ ಹೊಲೆಯರ ಹೆಂಗಸರೂ ಮೈ ಮುಚ್ಚಿಕೊಳ್ಳುತ್ತಾರೆ. ನಾಯರ್ ಸ್ತ್ರೀಯರ ಈ ಲಜ್ಜೆಗೇಡಿತನಕ್ಕೆ ಅವರ ಅಜ್ಞಾನವೇ ಕಾರಣ."

ಈ ಶೋಚನೀಯ ಸ್ಥಿತಿಗೆ ಸ್ತ್ರೀಯರಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಡಿಸದೇ ಇರುವ ಪುರುಷರೇ ಕಾರಣವೆಂದು ಲೇಖಕಿ ಹೇಳುತ್ತಾರೆ.

"ಈ ಸ್ತ್ರೀಯರನ್ನೇಕೆ ದೂಷಿಸಬೇಕು ? ಇದಕ್ಕೆ ಪುರುಷರೇ ಹೊಣೆಗಾರರೆಂದು ನನಗೆ ಗೊತ್ತಿದೆ. ಸ್ತ್ರೀಯರು ಕೇವಲ ನಿಮ್ಮ ಲೈಂಗಿಕ ಬಯಕೆಗಳನ್ನು ತೀರಿಸಲೆಂದು ಹುಟ್ಟಿರುವ ಗುಲಾಮರಲ್ಲ ಎಂಬುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಪ್ರಕೃತಿ ಅವರನ್ನು ಸೃಷ್ಟಿಸಿದ್ದು ನಿಮ್ಮ ಸಹಭಾಗಿಗಳಾಗಲು. ಸ್ತ್ರೀ ಪುರುಷರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ಬಿಟ್ಟರೆ ಇನ್ನೊಂದು ಅಪೂರ್ಣ." –ಕೆ. ಚಿನ್ನಮ್ಮ

ಇಲ್ಲಿ ಕುತೂಹಲ ಕೆರಳಿಸುವ ವಿಚಾರವೆಂದರೆ ಇಂಗ್ಲಿಷ್ ಶಿಕ್ಷಣಕ್ಕೆ ಕೊಡಲಾಗಿರುವ ಮಹತ್ವ –ಮುಖ್ಯವಾಗಿ ಈಗ ನಾಚಿಕೆಯಿಲ್ಲದೆ ಮೈ ಬಿಟ್ಟು ತಿರುಗುವ ನಾಯರ್ ಸ್ತ್ರೀಯರಿಗೆ ತಮ್ಮತನದ ಬಗೆಗಿನ ಪ್ರಜ್ಞೆ ಬರುವುದು ಶಿಕ್ಷಣದ ಮೂಲಕ ಎನ್ನುವುದು. ಆದರೆ ಪುರುಷರಿಗೆ ಈ ರೀತಿ ಮೈ ಮುಚ್ಚಿಕೊಳ್ಳಲು ಯಾರೂ ಎಲ್ಲೂ ಕರೆ ನೀಡಿದಂತಿಲ್ಲ.

ಮೇಲೆ ಹೇಳಿದ ವಿಚಾರಗಳು ಯಾವುದೇ ರೀತಿಯ ಸುಧಾರಣೆಗಳು ಪರಿಣಾಮ ಬೀರುವ ಮುನ್ನ ನಾಯರ್ ಸ್ತ್ರೀಯರು ಹೇಗಿದ್ದರು ಎಂಬುದರ ಬಗ್ಗೆ ಸಾಕಷ್ಟು ವಿವರಗಳನ್ನು ಒದಗಿಸುತ್ತವೆ. ತಳ ಸೇರಿ ಮರೆಯಾಗಿ ಬಿಟ್ಟ ಮಾತೃಪ್ರಧಾನ ಸಂಸ್ಕೃತಿಗೆ ಸೇರಿದ್ದ ಸ್ತ್ರೀಯರ ಚರಿತ್ರೆಯನ್ನು ಶೋಧಿಸಿ ನೋಡಿದರೆ ಭಾರತೀಯ ಸ್ತ್ರೀಯರ ಚರಿತ್ರೆಯ ಒಂದು ಮಹತ್ವದ ಅಧ್ಯಾಯವನ್ನು ರೂಪಿಸಬಹುದು ಮತ್ತು ಲಿಂಗತಾರತಮ್ಯ ತುಂಬಿದ ಈ ಜಗತ್ತಿನಲ್ಲಿ ಈಗಿನ ತಲೆಮಾರಿನವರಿಗೆ ಬೇರೆಡೆ ದುರ್ಲಭವಾದ ಮಾಹಿತಿಗಳನ್ನು ಒದಗಿಸಿಕೊಡಬಹುದು.

ಡಾ. ಮುರಲೀಧರನ್. ಟಿ., ಡಿಪಾರ್ಟ್‌ಮೆಂಟ್ ಆಫ್ ಇಂಗ್ಲಿಷ್, ಸೇಂಟ್ ಅಲೋಶಿಯಸ್ ಕಾಲೇಜ್, ಎಲ್‌ತುರುಥ್, ತ್ರಿಚೂರು - ೬೮೦ ೬೧೧

ಪಾರ್ವತಿ ಜಿ. ಐತಾಳ್, ಸುರಗಂಗಾ, ಬಸ್ರೂರು ಕ್ರಾಸ್ ರಸ್ತೆ, ಕುಂದಾಪುರ - ೫೭೬ ೨೦೧, ಜಿ. : ಉಡುಪಿ

ಅಕ್ಷರದ ಮೂಲಕ ಬಿಡುಗಡೆ : ಪಾಲೊ ಫ್ರೇರೆಯ ಕೆಲವು ವಿಚಾರಗಳು

ಪುನರ್ವಾಚನ

ಸಿ. ನಾಗಣ್ಣ

೧

ಪ್ರಖ್ಯಾತ ಶಿಕ್ಷಣತಜ್ಞ ಪಾಲೊ ಫ್ರೇರೆ ತೀರಿಕೊಂಡದ್ದು ೧೯೯೭ ರ ಜನವರಿ ಮಾಹೆಯಲ್ಲಿ. ೧೯೨೧ ರಲ್ಲಿ ಬ್ರೆಜಿಲ್‌ನ ರೆಸಿಫೆ ನಲ್ಲಿ ಜನಿಸಿದ ಫ್ರೇರೆ ಕೆಳಮಧ್ಯಮ ವರ್ಗದ ಸಾಧಾರಣ ಕುಟುಂಬದ ಕಷ್ಟಕೋಟಲೆಗಳನ್ನು ಕಂಡವರು. ಹಾಗಾಗಿ ನೊಂದವರ ನೋವು ಅವರಿಗೆ ಅರ್ಥವಾದದ್ದು ಅತ್ಯಂತ ಸಹಜ. ವಿಶೇಷವಾಗಿ ವಯಸ್ಕರ ಶಿಕ್ಷಣಕ್ಕಾಗಿ ಜೀವನವನ್ನೇ ಮುಡಿಪಿಟ್ಟ ಫ್ರೇರೆಯನ್ನು ಅಂತಾರಾಷ್ಟ್ರೀಯ ಸಾಕ್ಷರತಾ ವರ್ಷವಾದ ೧೯೯೦ ರಲ್ಲಿ ಸಂದರ್ಶಕನೊಬ್ಬ ಕೇಳಿದ ಪ್ರಶ್ನೆಗೆ ಫ್ರೇರೆ ನೀಡಿದ ಉತ್ತರ ಬಹಳ ಮಾರ್ಮಿಕವಾಗಿದೆ. "ಫ್ರೇರೆಯವರೆ, ಜೀವನದುದ್ದಕ್ಕೂ ನೀವು ವಯಸ್ಕರ ಸಾಕ್ಷರತೆಗಾಗಿ ಹೋರಾಟ ಮಾಡುತ್ತಾ ಬಂದಿದ್ದೀರಿ. ಈ ವಿಶ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಾಕ್ಷರನಾದರೆ ಆ ನಂತರ ಏನು?" ಎಂಬುದು ಪ್ರಶ್ನೆ. ಅದಕ್ಕೆ ಫ್ರೇರೆ ನೀಡಿದ ಉತ್ತರ : "ಹಾಗೇನಾದರೂ ಆದರೂ ಸಹ ನಾನು ಯಾವ ದೊಡ್ಡ ಬದಲಾವಣೆಯನ್ನು ನಿರೀಕ್ಷಿಸಲಾರೆ. ಆದರೆ ಒಂದಂತೂ ನಿಜ; ಇಥಿಯೋಪಿಯಾದ ಹೆಣ್ಣುಮಗಳೊಬ್ಬಳು ವೈದ್ಯ ನೀಡುವ ಚೀಟಿಯನ್ನು ಓದಿಕೊಂಡು ತನ್ನ ಮಗುವಿಗೆ ಮಾತ್ರೆ ವಗೈರೆ ಕೊಡುವುದಾದರೆ ಅದಕ್ಕಿಂತ ದೊಡ್ಡ ಕ್ರಾಂತಿ ಬೇಕಾಗಿಲ್ಲ."

ಇಂಥ ಅಂತಃಕರಣದ ಮಾತನಾಡಿದ ಪಾಲೊ ಫ್ರೇರೆಯವರ ಪ್ರಭಾವ ತೃತೀಯ ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆ ಆದದ್ದು ಆಶ್ಚರ್ಯವಲ್ಲ. ಫ್ರೇರೆಯ ಚಿಂತನೆ ಕೇವಲ ಶಿಕ್ಷಣರಂಗಕ್ಕೆ ಮೀಸಲಾಗಲಿಲ್ಲ. ಬದಲಾಗಿ ರಾಷ್ಟ್ರೀಯ ಅಭಿವೃದ್ಧಿಯ ಒಟ್ಟು ಹೋರಾಟಕ್ಕೆ ಕೊಡುಗೆಯಾಯಿತು. ತಮ್ಮ ಪಾರಂಪರಿಕವಾದ ಆಲಸ್ಯವನ್ನು ಬಿಟ್ಟು ಲ್ಯಾಟಿನ್ ಅಮೆರಿಕದ ಜನರು ನಿಜವಾದ ಪ್ರಜೆಗಳಂತೆ ತಮ್ಮ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಲು ತೊಡಗಿದ ಸಂದರ್ಭದಲ್ಲಿ ಪಾಲೊ ಫ್ರೇರೆ ಅನಕ್ಷರಸ್ಥರಿಗೆ ವಿದ್ಯೆ ಕಲಿಸುವ ಮಾರ್ಗವು ಈ ಪ್ರಕ್ರಿಯೆಗೆ ಬಹಳ ಪೂರಕವಾಗಿ ಒದಗಿ ಬಂದದ್ದು ಕುತೂಹಲಕರವಾಗಿದೆ. ಓದು, ಬರಹ ಕಲಿಯತೊಡಗುವವರು ತಮ್ಮ ಸ್ವಂತಿಕೆಯ ಹೊಸ ಅರಿವನ್ನು ಪಡೆದುಕೊಂಡವರಾಗಿ ತಮ್ಮ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕವಾಗಿ ವಿವೇಚಿಸಲು ತೊಡಗುತ್ತಾರೆ; ಹಾಗಾಗಿ ಅನೇಕ ವೇಳೆ ಭಾಗವಹಿಸುವ ಅವಕಾಶವನ್ನು ತಮಗೆ ನೀಡದ ಸಮಾಜವನ್ನು ಪರಿವರ್ತಿಸಲೂ ಕೂಡ ಅವರು ಕಾರ್ಯಪ್ರವೃತ್ತರಾಗುತ್ತಾರೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣದ ವಿಚಾರವನ್ನು ಕುರಿತು ಪಾಲೊ ಫ್ರೇರೆ ಪ್ರಧಾನವಾಗಿ ಚಿಂತಿಸಿದರೆಂದು ಹಲವರು ನಂಬಿದ್ದರು. ಆದರೆ ಫ್ರೇರೆಯವರ ಶೈಕ್ಷಣಿಕ ತತ್ತ್ವಜ್ಞಾನ ಮತ್ತು ಚಿಂತನವಿಧಾನ ಕೇವಲ ಬ್ರೆಜಿಲ್‌ನಂಥ ತೃತೀಯ ಜಗತ್ತಿನ ರಾಷ್ಟ್ರಗಳಿಗೇ ಅಲ್ಲದೇ ಅಮೆರಿಕದಂಥ ಮುಂದುವರಿದ ರಾಷ್ಟ್ರಗಳಿಗೂ ಅಗತ್ಯವಾಗಿರುವುದು ವೇದ್ಯವಾಗುತ್ತದೆ. ತಮ್ಮ ಸಮಾಜದ ಪರಿವರ್ತನೆಯಲ್ಲಿ ಬ್ರೆಜಿಲ್‌ನ ಪ್ರಜೆಗಳು ಭಾಗವಹಿಸುವಂತೆ ಫ್ರೇರೆ ಚಿಂತನೆಗಳು ಪ್ರಚೋದಿಸುವಂತೆಯೇ ಇನ್ನಿತರ ರಾಷ್ಟ್ರಗಳ ನೊಂದ ಜನರ ಬಿಡುಗಡೆಗೂ ಕೂಡ ನಾಂದಿ ಹಾಡುವುದನ್ನು ತಜ್ಞರು ಗುರುತಿಸಿದ್ದಾರೆ. ಆ ಕಾರಣದಿಂದ ಫ್ರೇರೆ ಅವರ "ಪೆಡಗಾಜಿ ಆಫ್ ದ ಅಪ್ರೆಸ್ಡ್" ('ತುಳಿತಕ್ಕೊಳಗಾದವರ ಶಿಕ್ಷಣ ವಿಧಾನ') ಒಂದು ಮಹತ್ವದ ಗ್ರಂಥ.

ತಮ್ಮ ಸುತ್ತಲಿ ಜನರ ನೋವನ್ನು ಬಹಳ ಸೃಜನಾತ್ಮಕವಾಗಿ ಅರ್ಥ ಮಾಡಿಕೊಂಡು ಫ್ರೇರೀ ಅನುಕಂಪ ವ್ಯಕ್ತಪಡಿಸಿರುವುದು ಸ್ಪಷ್ಟವಾಗಿದೆ. ೧೯೨೧ ರಲ್ಲಿ ಹುಟ್ಟಿದ ಫ್ರೇರೀ ೧೯೨೯ ರ ವಿಶ್ವ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ೮-೯ ವರ್ಷಗಳ ಕೂಸು. ಆ ವೇಳೆಗಾಗಲೇ ಆರ್ಥಿಕ ಮುಗ್ಗಟ್ಟಿನ ಬಿಸಿ ಕಾವಿನ ಸ್ಪರ್ಶ ಅವರಿಗಾಗಿ. ಜಗತ್ತಿನ ನಿರ್ಗತಿಕರ ಸ್ಥಿತಿಗತಿಯನ್ನು ಅವರು ನೇರವಾಗಿ ಅನುಭವಿಸುವಂತಾಯಿತು. ಹಾಗಾಗಿ ಹಸಿವಿನ ಸಂಕಟವನ್ನು ಅರಿಯುವ ಅವಕಾಶವೇನೋ ಆಯಿತು; ಆದರೆ ಇದರಿಂದ ಬೆಳೆವ ಬಾಲಕ ಶಾಲೆಯಲ್ಲಿ ಉಳಿದವರಿಗಿಂತ ಹಿಂದೆ ಬೀಳಬೇಕಾದ ಪ್ರಮೇಯವುಂಟಾಯಿತು. ಹಸಿವಿನ ಆಘಾತದ ಪರಿಣಾಮವಾಗಿಯೇ ಫ್ರೇರೀ ತಮ್ಮ ಹನ್ನೊಂದನೇ ವಯಸ್ಸಿನಲ್ಲಿಯೇ ಜಗತ್ತಿನ ಹಸಿವಿನ ವಿರುದ್ಧ ಜೀವನ ಪರ್ಯಂತ ಸಮರ ಸಾರುವೆನೆಂದು ಸಂಕಲ್ಪ ಮಾಡಿದರು. ತನ್ನ ವಯಸ್ಸಿನ ಇತರ ಮಕ್ಕಳು ಮುಂದೆ ಹಸಿವಿನ ವಿರುದ್ಧ ಹೋರಾಡದಿರಲೆಂಬ ಬಯಕೆ ಆತನದಾಗಿತ್ತು.

ಬಡಜನರ ಬವಣೆಯನ್ನು ಫ್ರೇರೀ ಬಹಳ ಚಿಕ್ಕ ವಯಸ್ಸಿಗೇ ಯಾಚಿಕೊಂಡದ್ದರಿಂದಲೇ ನಿರ್ಗತಿಕರ 'ಮೌನ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಕಂಡುಹಿಡಿಯಲು ಸಾಧ್ಯವಾದದ್ದು. ಬಡವರ ಅಜ್ಞಾನ ಮತ್ತು ಆಲಸ್ಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದಬ್ಬಾಳಿಕೆಯ ನೇರ ಪರಿಣಾಮವೆಂದು ಫ್ರೇರೀ ಪ್ರತಿಪಾದಿಸಿದರು. ತಮ್ಮ ಜಗತ್ತಿನ ಮೂರ್ತ ವಾಸ್ತವಗಳನ್ನು ಅರ್ಥ ಮಾಡಿಕೊಂಡು ತಕ್ಕ ಉತ್ತರವನ್ನು ಕಂಡುಕೊಳ್ಳಲು ಬಡವರನ್ನು ಪ್ರೇರೇಪಿಸುವುದಕ್ಕೆ ಬದಲಾಗಿ ವಿವೇಚನೆಯಿಂದ ಕೂಡಿದ ಸ್ಪಂದನೆಗೆ ಅಸಾಧ್ಯವಾಗುವಂಥ ಪರಿಸ್ಥಿತಿಯಲ್ಲಿ ಅವರನ್ನು ಅದುಮಿಡುವ ಹುನ್ನಾರವಾಯಿತು. ಪ್ರಚಲಿತ ಶಿಕ್ಷಣ ಕೂಡ ಈ ಮೌನ ಸಂಸ್ಕೃತಿಯನ್ನು ಮುಂದುವರಿಸುವಂಥ ವ್ಯವಸ್ಥೆಯನ್ನು ನಿರಂತರಗೊಳಿಸಿದ್ದು ಫ್ರೇರೀಯ ಗಮನಕ್ಕೆ ಬಂದಿತ್ತು.

ಇಂಥ ಪರಿಸ್ಥಿತಿಯನ್ನು ಬದಲಾಯಿಸುವ ಸಲುವಾಗಿ ಫ್ರೇರೀ ತಮ್ಮ ಗಮನವನ್ನು ಶಿಕ್ಷಣ ಕ್ಷೇತ್ರಕ್ಕೆ ಕೇಂದ್ರೀಕರಿಸಿದರು. ತತ್ಫಲವಾಗಿ ಶೈಕ್ಷಣಿಕ ತತ್ವಜ್ಞಾನದಲ್ಲೇ ಹೊಸ ಬಗೆಯ ಆವಿಷ್ಕಾರ ವೆಂಬಂತೆ ಅವರ ಚಿಂತನೆಗಳು ಹೊಸ ಹೊಳಪಿನಿಂದ ಬೆಳಗುವಂತಾಗಿದೆ. ಹೊಸ ಜಗತ್ತಿನ ನಿರ್ಮಾಣದಲ್ಲಿ ಸ್ತ್ರೀ ಪುರುಷರನ್ನು ಬಿಡುಗಡೆ ಮಾಡುವ ನೇರ ಹೋರಾಟಕ್ಕೆ ಬದಲಾಗಿ ಭಿನ್ನವಾದ ಸ್ವಾವೇಶ ಹಾಗೂ ಚಿಂತನ ಮಾರ್ಗಗಳನ್ನು ಫ್ರೇರೀ ಅನುಸರಿಸಿರುವುದು ವೇದ್ಯವಾಗುತ್ತದೆ. ಹಾಗಾಗಿ ಫ್ರೇರೀ ಪ್ರೇರಣೆ ಪಡೆದ ಮೂಲಗಳನ್ನು ಗಮನಿಸುವಾಗ ಈ ಮಹನೀಯರು ಗೋಚರಿಸುತ್ತಾರೆ. : 'ಸಾರ್ತ್ರೆ ಮತ್ತು ಮೌನಿಯರ್, ಎರಿಕ್ ಫ್ರಾಮ್ ಮತ್ತು ಲೂಯಿಸ್ ಆಲ್ತುಸರ್, ಆರ್ಟೆಗಾ ಗ್ಯಾಸೆ ಮತ್ತು ಮಾವೋ, ಮಾರ್ಟಿನ್ ಲೂಥರ್ ಕಿಂಗ್ ಮತ್ತು ಚೆ ಗೆವಾರ, ಉನಮುಗೊ ಮತ್ತು ಮಾರ್ಕ್ಯೂಸ್.' ಈ ಎಲ್ಲ ಮಹನೀಯರ ಚಿಂತನೆಗಳನ್ನೂ ಅರಗಿಸಿಕೊಂಡು ತನ್ನದೇ ಆದ ಶೈಕ್ಷಣಿಕ ವಿಚಾರಗಳನ್ನು ಫ್ರೇರೀ ಆವಿಷ್ಕರಿಸಿಕೊಂಡಿರುವುದರಿಂದ ಅವು ಕೇವಲ ಲ್ಯಾಟಿನ್ ಅಮೆರಿಕದ ಸಮಸ್ಯೆಗೆ ಮಾತ್ರ ಉತ್ತರವಾಗಿರದೆ ಇಡೀ ತೃತೀಯ ಜಗತ್ತಿನ ಜನರ ಜೀವನಕ್ಕೆ ಹೊಸ ಬೆಳಕು ನೀಡಬಲ್ಲ ಮಾರ್ಗಸೂಚಿಗಳಾಗಿವೆ. ಪ್ರಪ್ರಥಮ ಬಾರಿಗೆ ಅವರ ಚಿಂತನೆಗಳು ರೆಸೀಫೆ ವಿಶ್ವವಿದ್ಯಾನಿಲಯಕ್ಕೆ ೧೯೫೯ ರಲ್ಲಿ ಅವರು ಸಲ್ಲಿಸಿದ ಡಾಕ್ಟರೇಟ್ ಪ್ರಬಂಧದಲ್ಲಿ ಸ್ಪಷ್ಟವಾದವು; ಅನಂತರ ಅದೇ ವಿಶ್ವವಿದ್ಯಾನಿಲಯದಲ್ಲಿ ಅವರು ಇತಿಹಾಸ ವಿಭಾಗ ಮತ್ತು ಶೈಕ್ಷಣಿಕ ತತ್ವಜ್ಞಾನ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ಮಾಡಿದ ಆಲೋಚನೆಗಳಲ್ಲಿ ಮೈದೋರಿದವು; ಎಲ್ಲಕ್ಕಿಂತ ಮುಖ್ಯವಾಗಿ ಆ ನಗರದಲ್ಲೇ ಅವರು ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಕೈಗೊಂಡ ಪ್ರಯೋಗಗಳಲ್ಲಿ ಇವು ಇನ್ನಷ್ಟು ಘನವಾಗಿ ಕಾಣತೊಡಗಿದವು. ಈಶಾನ್ಯ ಬ್ರೆಸಿಲ್‌ನಲ್ಲಿ

ಫ್ರೇರೀ ಅವರ ಪ್ರಯೋಗವನ್ನು ಕ್ಯಾಥೋಲಿಕ್ಕರು ಮತ್ತು ಇತರರು ಅನುಷ್ಠಾನಗೊಳಿಸಿದಾಗ ತಮ್ಮ ಹಿಂದಿನ ದರ್ಬಾರಿಗೆ ಎರವಾಗುವುದೆಂದು ದಿಗಿಲುಗೊಂಡ ಆಳರಸರು ೧೯೬೪ ರ ಕ್ಷಿಪ್ರಕ್ರಾಂತಿಯ ಕಾರಣದಲ್ಲಿ ಅವರನ್ನು ಸೆರೆಯಲ್ಲಿಟ್ಟರು. ತರುವಾಯ ಫ್ರೇರೀ ಚಿಲೀ ದೇಶಕ್ಕೆ ಹೋದರು. ಅಲ್ಲಿ ಐದು ವರ್ಷ ಕಾಲ ಯುನೆಸ್ಕೊ ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿದರು. ಅಲ್ಲಿಂದ ಮುಂದೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ 'ಸ್ಕೂಲ್ ಆಫ್ ಎಜುಕೇಶನ್'ನಲ್ಲಿ ಕೆಲಸ ಮಾಡುತ್ತಾ, ಗ್ರಾಮಾಂತರ ಮತ್ತು ನಗರ ಪ್ರದೇಶದ ಶೈಕ್ಷಣಿಕ ಪ್ರಯೋಗಗಳಲ್ಲಿ ತೊಡಗಿರುವ ಹಲವು ತಂಡಗಳ ಜೊತೆ ತಮ್ಮ ಚಿಂತನೆಗಳನ್ನು ಹಂಚಿಕೊಂಡರು.

ಮೂಲತಃ ಫ್ರೇರೀ ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಹಲವು ಮಹತ್ವದ ಲೇಖನಗಳನ್ನು ಬರೆದರು. ಫ್ರೇರೀಗೆ ಜಗತ್ಪ್ರಸಿದ್ಧಿಯನ್ನು ತಂದುಕೊಟ್ಟ ಪುಸ್ತಕ 'ಪೆಡಗಾಜಿ ಆಫ್ ದ ಅಪ್ರೆಸ್ಡ್' (ಇಂಗ್ಲಿಷ್ ಅನುವಾದ : ಮೀರಾ ಬರ್ಗ್‌ಮನ್ ರ್‍ಯಾಮೋಸ್). ಇದು ಪ್ರಕಟವಾದದ್ದು ೧೯೭೦ ರಲ್ಲಿ. ಅದೇ ವರ್ಷ 'ಕಲ್ಚರಲ್ ಆಕ್ಷನ್ ಫಾರ್ ಫ್ರೀಡಮ್' ಎಂಬ ಮತ್ತೊಂದು ಮಹತ್ವದ ಗ್ರಂಥವನ್ನು ಅವರು ಹೊರತಂದರು :

ಪಾಲೊ ಫ್ರೇರೀಯವರ ಚಿಂತನ ಸಾಮಗ್ರಿ ನಮಗೆ ಇಡಿಯಾಗಿ ಈ ಪುಸ್ತಕಗಳಲ್ಲಿ ದಕ್ಕಿಬಿಡುತ್ತದೆ. ಒಂದು ಪುಟ್ಟ ಲೇಖನಕ್ಕೆ ಸಿಕ್ಕದ ಸಮೃದ್ಧ ಚಿಂತನ ಮಂಥನ ಅದು ಎನ್ನುವುದನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ. ಕೇವಲ ಬೌದ್ಧಿಕ ಕಸರತ್ತಿನ ಫಲಗಳನ್ನು ಗ್ರಂಥರೂಪದಲ್ಲಿ ಬುದ್ಧಿಜೀವಿಗಳು ಜಗತ್ತಿಗೆ ಪುಂಖಾನುಪುಂಖವಾಗಿ ಕೊಡುತ್ತಿರುವ ಸಂದರ್ಭದಲ್ಲಿ ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ವಾಸ್ತವವಾಗಿ ಮಾಡಿದ ಪ್ರಯೋಗಗಳ ಫಲಿತಾಂಶವನ್ನು ಫ್ರೇರೀ ನಮ್ಮೊಂದಿಗೆ ಸಂವಾದದ ಮೂಲಕ ಹಂಚಿಕೊಳ್ಳುವುದು ಬಹಳ ವಿನೂತನವಾಗಿಯೂ ಆಕರ್ಷಣೀಯವಾಗಿಯೂ ತೋರುತ್ತದೆ. ಹಾಗಾಗಿ ಆ ಚಿಂತನೆಗಳು ಬರೀ ಸಿದ್ಧಾಂತವಾಗಿ ಉಳಿಯದೆ, ಕ್ರಿಯೆಗೆ ಪ್ರಚೋದಿಸುವುದರಿಂದ ಅವುಗಳ ಮಹತ್ವ ಹೆಚ್ಚಾಗುತ್ತದೆ.

ಪಾಲೊ ಫ್ರೇರೀ ಮಟ್ಟದ ಚಿಂತಕರು ಬುದ್ಧಿಜೀವಿಯ ಮಾನವೀಕರಣಗೊಳಿಸುವ ರೀತಿಯನ್ನು ಪುನಃ ನಮ್ಮ ಕಣ್ಮುಂದೆ ತೆರೆದು ತೋರುವುದರಿಂದ ಹೊಸ ಭವಿಷ್ಯತ್ತಿಗೆ ಅವರು ದಾರಿ ಮಾಡಿಕೊಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಫ್ರೇರೀ ಅವರಿಗೆ ಇದು ಸಾಧ್ಯವಾಗಲು ಕಾರಣ ಅವರು ದೃಢವಾಗಿ ನಂಬಿರುವ ಒಂದು ಕಲ್ಪನೆಯಿಂದ : ಮನುಷ್ಯ ತನ್ನ ಪ್ರಪಂಚವನ್ನು ಬದಲಿಸಲು ಸಮರ್ಥನಾಗಿದ್ದರೆ, ಹಾಗೆ ಬದಲಿಸುತ್ತಾ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಹೆಚ್ಚು ಪೂರ್ಣವಾದ, ಸಮೃದ್ಧವಾದ ಸಾಧ್ಯತೆಗಳೆಡೆಗೆ ಸಾಗುತ್ತಾನೆ. ತಾನು ಸಂಬಂಧ ಹೊಂದಿರುವ ಈ 'ಪ್ರಪಂಚ' ಇದೆಯಲ್ಲ, ಅದು ಸ್ಥಗಿತವಾದ, ಮುಚ್ಚಿಕೊಂಡ ವಲಯವಲ್ಲ, ಮನುಷ್ಯ ಅದರ ನಡೆವಳಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಪ್ರಮೇಯವಿಲ್ಲ; ಬದಲಾಗಿ ಅರಿತುಕೊಂಡು, ಪರಿಹರಿಸಿಕೊಳ್ಳಬೇಕಾದ ಸಮಸ್ಯೆ ಅದು. ಮನುಷ್ಯ ಚರಿತ್ರೆಯನ್ನು ನಿರ್ಮಿಸಲು ಉಪಯೋಗಿಸುವಂಥ ಸಾಮಗ್ರಿ ಇದು. ಈ ಪ್ರಕ್ರಿಯೆಯಲ್ಲಿ ಅವನು ಅಮಾನವೀಯಗೊಳಿಸುವ ಎಲ್ಲ ತಂತ್ರವನ್ನೂ ಮೆಟ್ಟಿ ನಿಲ್ಲುತ್ತಾನೆ, ಅಷ್ಟೇ ಅಲ್ಲ ಗುಣಾತ್ಮಕವಾಗಿ ಹೊಸದಾಗಿರುವುದರ ಸೃಷ್ಟಿಗೂ ಕೂಡ ಮುಂದಾಗುತ್ತಾನೆ. ವರ್ತಮಾನದಲ್ಲಿ ಈ ಸವಾಲನ್ನು ಎದುರಿಸಲು ತಂತ್ರಜ್ಞಾನದಲ್ಲಿ ಮುಂದುವರಿದಿರುವ ಪಾಶ್ಚಾತ್ಯ ಪ್ರಪಂಚದಿಂದ ಸಂಪನ್ಮೂಲ ಬರುವುದಾದರೂ ಪ್ರಸ್ತುತ ವ್ಯವಸ್ಥೆಯನ್ನು ನಿರಾಕರಿಸಿ ಇತಿಹಾಸ ಮುಗಿದಿಲ್ಲವೆಂದು ಸಾರುವ ಚೈತನ್ಯವು ತೃತೀಯ ಜಗತ್ತಿನ ನೊಂದ ಜನ ಸಮುದಾಯದ ಹೋರಾಟದಿಂದಲೇ ಬರಬೇಕೆಂದು ಫ್ರೇರೀ ನಂಬುತ್ತಾರೆ.

ಫ್ರೇರಿಯ ಚಿಂತನೆಯ ಪ್ರಕಾರ 'ತಟಸ್ಥ'ವಾದ ಶೈಕ್ಷಣಿಕ ಪ್ರಕ್ರಿಯೆ ಎಂಬುದಿಲ್ಲ. ಒಂದೋ, ಅದು ಪ್ರಚಲಿತ ವ್ಯವಸ್ಥೆಯ ತರ್ಕಕ್ಕೆ ಹೊಸ ಜನಾಂಗದವರನ್ನು ಹೊಂದಿಸಲು ಹವಣಿಸುತ್ತದೆ, ಇಲ್ಲವೆ 'ಬಿಡುಗಡೆಯ ಮಾರ್ಗ'ವಾಗಿ ಅದು ಪರಿಣಮಿಸುತ್ತದೆ; ಬಿಡುಗಡೆಯ ಮಾರ್ಗವೆಂದರೆ ಸ್ತ್ರೀ-ಪುರುಷರು ವಿಮರ್ಶಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ವಾಸ್ತವದೊಡನೆ ಸಂವಾದ ನಡೆಸಿ ತಮ್ಮ ಪ್ರಪಂಚವನ್ನು ಪರಿವರ್ತಿಸುವ ಕ್ರಮವನ್ನು ಕಂಡುಹಿಡಿಯುವುದು ಎಂದರ್ಥ. ಹಾಗಾಗಿ ಈ ಪ್ರಕ್ರಿಯೆಯನ್ನು ಉತ್ತೇಜಿಸುವ ಶೈಕ್ಷಣಿಕ ವಿಧಾನದ ಆವಿಷ್ಕಾರದಿಂದ ನಮ್ಮ ಸಮಾಜದ ಒಳಗಡೆಯೇ ಒಂದು ಬಗೆಯ ಕರ್ಷಣ ಮತ್ತು ಸಂಘರ್ಷ ಉಂಟಾಗುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಆದರೆ ಇದೇ ಸಂಘರ್ಷದಿಂದ ಹೊಸ ಮನುಷ್ಯನ ಉದಯವಾಗುವುದನ್ನೂ ಹೊಸ ಚರಿತ್ರೆಯ ಉದ್ಘಾಟನೆಯನ್ನೂ ನಾವು ಕಾಣಬಹುದಾಗಿದೆ. ಆ ಮಾರ್ಗದಲ್ಲಿ ಅನ್ವೇಷಣೆ ನಡೆಸಿರುವವರು ಮತ್ತು ಹೊಸ ಪರಿಕಲ್ಪನೆಗಳಿಗಾಗಿ ಪ್ರಯೋಗದಲ್ಲಿ ತಲ್ಲೀನರಾಗಿರುವವರಿಗೆ ಪಾಲೋ ಫ್ರೇರೀಯ ಚಿಂತನೆಗಳು ಮುಂಬರುವ ಸಂವತ್ಸರಗಳಲ್ಲಿ ಮಹತ್ವದ ಪಾತ್ರ ವಹಿಸುವುದರಲ್ಲಿ ಅನುಮಾನವಿಲ್ಲ.

೨

ಪಾಲೊ ಫ್ರೇರೀ ತನ್ನ ಆಲೋಚನೆಯಿಂದ ಜಗತ್ತಿಗೆ ಕೊಟ್ಟ ಅನೇಕ ಪರಿಕಲ್ಪನೆಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಬಹುದು. ಫ್ರೇರೀ ಪರಿಕಲ್ಪನೆಗಳಲ್ಲಿ 'ಪ್ರಜ್ಞೀಕರಣ' ('ಕನ್ಸಂಟೈಜೇಷನ್') ಮುಖ್ಯವಾದುದು. ಇದರ ಪರಿಣಾಮವಾಗಿ ವ್ಯಕ್ತಿ ಒಬ್ಬ ಜವಾಬ್ದಾರಿ ಪ್ರಜೆಯಾಗಿ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆಯೇ ಹೊರತು ಮೂಕ ಪ್ರೇಕ್ಷಕನಾಗಿ ನಿಲ್ಲುವುದಿಲ್ಲ. ಸಾಮಾಜಿಕ ಅತೃಪ್ತಿಯ ಸಕಾರಾತ್ಮಕ ಮುಖವನ್ನು ಫ್ರೇರೀ ದಾಖಲಿಸುವುದು ಹೀಗೆ : 'ತನ್ನೊಳಗೆ ಉದ್ಭವವಾದ ಪ್ರಜ್ಞೆಯಿಂದ ವ್ಯಕ್ತಿ ಸಾಮಾಜಿಕ ಅತೃಪ್ತಿಯನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು; ಏಕೆಂದರೆ ಒಂದು ಶೋಷಕ ಸನ್ನಿವೇಶದಲ್ಲೇ ಇಂಥ ಸಾಮಾಜಿಕ ಅತೃಪ್ತಿ ಸ್ಪಷ್ಟವಾಗಿ ಗೋಚರವಾಗುವುದು.'

ಮಾನವೀಕರಣ ಮತ್ತು ಅಮಾನವೀಕರಣ ಪರಸ್ಪರ ವ್ಯತಿರಿಕ್ತವಾದ ಪರಿಕಲ್ಪನೆಗಳು. ಆದರೆ ಇವೆರಡರಲ್ಲಿ ಯಾವುದು ಮನುಷ್ಯನ ನಿಜವಾದ ನೆಲೆ ಎಂದರೆ ಮೊದಲನೆಯದು ಎಂದು ನಿಸ್ಸಂದಿಗ್ಧವಾಗಿ ಹೇಳಬೇಕು. ಮಾನವೀಕರಣವು ಮಾತ್ರ ಹೆಜ್ಜೆ ಹೆಜ್ಜೆಗೆ ಅನ್ಯಾಯ, ಶೋಷಣೆ, ದಮನ ಮತ್ತು ಶೋಷಕರ ಹಿಂಸೆ –ಇತ್ಯಾದಿಗಳಿಂದ ಮಸುಕಾಗುತ್ತಿರುತ್ತದೆ, ಶೋಷಿತರು ಬಿಡುಗಡೆ ಮತ್ತು ನ್ಯಾಯಕ್ಕೆ ತುಡಿಯುವಾಗ ಮತ್ತು ಕಳೆದುಹೋದ ಮಾನವೀಯತೆಯನ್ನು ಮರಳಿ ಪಡೆಯಲು ಹೋರಾಡುವಾಗ ಮತ್ತೆ ಅದು ಮೇಲ್ಪದರಕ್ಕೆ ಬರುತ್ತದೆ. ಅಂದರೆ ಅಮಾನವೀಕರಣ ಎನ್ನುವುದು ಮನುಷ್ಯನ ನಿಜ ಸ್ವಭಾವವಲ್ಲ; ಇದು ಕೇವಲ ಶೋಷಕನ ಹಿಂಸೆಯ ಪರಿಣಾಮವಾಗಿ ಉದ್ಭವವಾಗುವ ಒಂದು ಅವಸ್ಥೆ. ಆದ್ದರಿಂದಲೇ, ತುಳಿತಕ್ಕೊಳಗಾದ ವ್ಯಕ್ತಿ ತನ್ನ ಸ್ಥಿತಿಯಿಂದ ಬಿಡುಗಡೆ ಪಡೆಯಲು ಮತ್ತು ಹೆಚ್ಚು ಪೂರ್ಣ ಪ್ರಮಾಣದಲ್ಲಿ ಮನುಷ್ಯನಾಗಲು ತುಡಿಯುತ್ತಾನೆ. ಈ ಹೋರಾಟಕ್ಕೆ ಒಂದು ಅರ್ಥ ಬರಬೇಕಾದರೆ ಕಳೆದುಹೋದ ತಮ್ಮ ಮಾನವೀಯತೆಯನ್ನು ಮರಳಿ ಪಡೆಯುವ ಪ್ರಕ್ರಿಯೆಯಲ್ಲಿ ಶೋಷಿತರು ಶೋಷಕರ ಶೋಷಕರಾಗಿ ಮಾರ್ಪಡಬಾರದು; ಇದಕ್ಕೆ ಬದಲಾಗಿ ಎರಡೂ ಕಡೆಯವರು ಮಾನವೀಯತೆಯನ್ನು ಪುನಃ ಪಡೆಯಲು ಪ್ರಯತ್ನಿಸಬೇಕು.

ತುಳಿತಕ್ಕೆ ಒಳಗಾದವರ ಮುಂಬರುವ ದೊಡ್ಡ ಚಾರಿತ್ರಿಕ ಸವಾಲೆಂದರೆ ತಮ್ಮನ್ನೂ ಮತ್ತು ಶೋಷಕರನ್ನೂ ಬಿಡುಗಡೆ ಮಾಡುವುದು. ಶೋಷಣೆ, ದಬ್ಬಾಳಿಕೆ ಇತ್ಯಾದಿಗಳಲ್ಲಿ

ಮಾನವೀಯ ಲಕ್ಷಣ. ಶೋಷಕರನ್ನು ಬಿಡುಗಡೆ ಮಾಡುವ ಸಾಮರ್ಥ್ಯವನ್ನು ಪಡೆದಿರುವುದೇ ಇಲ್ಲ, ಶೋಷಿತರ ಬಳಿಗಿರುವ ದೌರ್ಬಲ್ಯದ ಶಕ್ತಿಗೆ ಮಾತ್ರ ಇವರನ್ನು ಬಿಡುಗಡೆ ಮಾಡುವ ಸಾಮರ್ಥ್ಯವಿರುತ್ತದೆ. ಅದಕ್ಕಾಗಿ ತಮ್ಮನ್ನು ತಾವು ಬಿಡುಗಡೆ ಮಾಡಿಕೊಳ್ಳಲು ಅವರು ಸತತ ಪ್ರಯತ್ನ ನಡೆಸಬೇಕು. ಅವರು ಕೇವಲ ಪಶ್ಚಾತ್ತಪ್ತರಂತೆ ಮರುಗುವ ಹುಸಿ ಕನಿಕರದಿಂದ ಏನೂ ಆಗುವುದಿಲ್ಲ, ಬದಲಾಗಿ ನೊಂದವರೇ ತಮ್ಮ ಬಿಡುಗಡೆಗೆ ಹೋರಾಟವನ್ನು ಆರಂಭಿಸಬೇಕು. ಈ ಸಂಘರ್ಷದಲ್ಲಿ ಎರಡು ಹಂತಗಳಿವೆ : ಮೊದಲನೆಯದು ತುಳಿತಕ್ಕೊಳಗಾದವರು ತಮ್ಮ ಹೀನಾಯ ಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಳ್ಳುವುದು ಮತ್ತು ಬದ್ಧತೆಯ ಮೂಲಕ ಪರಿವರ್ತನೆಗೆ ಬದ್ಧರಾಗುವುದು; ಎರಡನೇ ಹಂತದಲ್ಲಿ, ತುಳಿತಕ್ಕೊಳಗಾದ ಸ್ಥಿತಿ ಬದಲಾಗಿರುವ ಸ್ಥಿತಿಯಲ್ಲಿ ಕೇವಲ ತುಳಿತಕ್ಕೊಳಗಾಗಿರುವವರ ಶಿಕ್ಷಣವಾಗಿ ಉಳಿಯದೆ ಎಲ್ಲರ ಬಿಡುಗಡೆಯ ಪ್ರಕ್ರಿಯೆಯಾಗಿ ಮಾರ್ಪಾಟಾಗುತ್ತದೆ.

ಜನರ ಪರವಾಗಿ ನಿಲ್ಲುವವರು ಅರೆಮನಸ್ಸಿನಲ್ಲಿ ಆ ಕಡೆ ಹಾರಿದರೆ ಪ್ರಯೋಜನವಿಲ್ಲ; ಏಕೆಂದರೆ ಜನರ ಪರವಾದ ಧೋರಣೆಯನ್ನು ಧರಿಸುವುದೆಂದರೆ ಸಂಪೂರ್ಣವಾದ ಬದ್ಧತೆ ಎಂದೇ ಅರ್ಥ. ಇಲ್ಲಿ ಅರ್ಧಮರ್ಧ ನಡವಳಿಕೆಗೆ, ವರ್ತನೆಗೆ ಅವಕಾಶವಿರುವುದಿಲ್ಲ. ಜನರ ಪರವಾಗಿ ಪರಿವರ್ತನೆಯಾಗುವುದು ಎಂದರೆ ಮತ್ತೆ ಹೊಸ ಜನ್ಮವನ್ನು ತಾಳಿದಷ್ಟು ಘನವಾದದ್ದೆಂದು ತಿಳಿಯಬೇಕು. ಜನಪರವಾಗಿ ನಿಂತು ಅವರನ್ನು ಬಿಡುಗಡೆಗೊಳಿಸುವಾಗ ಅವರ ಪ್ರಪಂಚವನ್ನು ಪರಿವರ್ತಿಸಲು ಚಿಂತಿಸಿ, ಕ್ರಿಯೆಗಿಳಿಯುವುದೇ ಆಗಿದೆ. 'ಒಂದು ಶಬ್ದ ಉಚ್ಚರಿಸಿದರೆ ಪ್ರಪಂಚವನ್ನು ಪರಿವರ್ತಿಸಿದಂತೆ' ಎಂದು ಹೇಳಿದೆ. ಒಂದು ಶಬ್ದದಲ್ಲಿಯೇ ಎರಡು ಆಯಾಮಗಳಿವೆ. ಮನನ ಮತ್ತು ಕ್ರಿಯೆ. ಮನನ ಮತ್ತು ಕ್ರಿಯೆಯ ಕಾರಣದಿಂದಾಗಿ ಯಾವ ವ್ಯಕ್ತಿಯನ್ನೂ ಸುಮ್ಮನಿರಿಸಲು ಆಗುವುದಿಲ್ಲ. ಹಾಗೆಯೇ ಸುಳ್ಳು ಶಬ್ದಗಳಿಂದ ಮನುಷ್ಯನ ಇರುವನ್ನು ಪೋಷಿಸಲಾಗುವುದಿಲ್ಲ. ಆದರೆ ನಿಜವಾದ ಶಬ್ದಗಳಿಂದ ಮಾತ್ರ ಜಗತ್ತನ್ನು ಪರಿವರ್ತಿಸಲು ಸಾಧ್ಯ. ಮಾನವೀಯವಾಗಿ ಬದುಕುವುದೆಂದರೆ, ಜಗತ್ತನ್ನು ನಾಮಕರಣ ಮಾಡಿದಂತೆ, ಅದನ್ನು ಬದಲಾಯಿಸಿದಂತೆ... ಜನರನ್ನು ಮೌನದಲ್ಲಿ ನಿರ್ಮಿಸಲಾಗುವುದಿಲ್ಲ, ಅವರು ಹುಟ್ಟುವುದೇ ಶಬ್ದದಲ್ಲಿ, ಉಚ್ಚರಿತವಾಗುವುದೂ ಕೂಡ ಶಬ್ದದಲ್ಲಿ, ನುಡಿಯುವುದು ಶಬ್ದದಲ್ಲಿ, ಮನನ-ಕ್ರಿಯೆಗಳಾಗುವುದೂ ಶಬ್ದದಲ್ಲಿ. ಹಾಗೆಯೇ ಯಾವ ಒಬ್ಬ ವ್ಯಕ್ತಿಗೇ ನಿಜದ 'ನುಡಿ' (ಶಬ್ದ/ಪದ) ದಕ್ಕುವುದಿಲ್ಲ; ಇನ್ನೊಬ್ಬನ ಪರವಾಗಿಯೂ ಅವನಿಗೆ ಆಡಲು ಬರುವುದಿಲ್ಲ.

ಅದಕ್ಕಾಗಿ ನುಡಿಯುವುದರ ಬಗ್ಗೆ ಯಾರು ತಮ್ಮ ಆಜನ್ಮ ಹಕ್ಕನ್ನು ಕಳೆದುಕೊಂಡಿದ್ದಾರೋ ಅವರು ಮೊದಲು ತಮ್ಮ ನುಡಿಯುವ ಹಕ್ಕನ್ನು ಮರಳಿ ಪಡೆಯಲಿ, ಮತ್ತು ಅಮಾನವೀಕರಣಗೊಳಿಸುವ ಆಕ್ರಮಣದ ಮುಂದುವರಿಕೆಗೆ ಇತಿಶ್ರೀ ಹಾಡಲಿ.

ಸಂವಾದ ಮಾನವ ಬದುಕಿಗೆ ಅತ್ಯಂತ ಅವಶ್ಯಕವಾದುದು. ಈ ಜಗತ್ತಿನ ಬಗ್ಗೆ ಮತ್ತು ಇಲ್ಲಿನ ಮಾನವರ ಬಗ್ಗೆ ಘನವಾದ ಪ್ರೀತಿಯನ್ನು ಇಟ್ಟುಕೊಂಡಾಗಲೇ ಸಂವಾದ ಸಾಧ್ಯವಾಗುವುದು. ಪ್ರೀತಿಯಿಲ್ಲದ ಪರಿಸ್ಥಿತಿಯಲ್ಲಿ ನಾವು ದಬ್ಬಾಳಿಕೆಯನ್ನು ನೋಡುತ್ತೇವೆ. ದಬ್ಬಾಳಿಕೆ ಮಾಡುವವನ ಹಿಂಸಾನಂದದ ಮನೋಭಾವವೇನು ? ದಬ್ಬಾಳಿಕೆಗೆ ಒಳಗಾದವನ ಮಾನಸದ್ವೇಷವೇನು ? ವಿನಯವಿಲ್ಲದೆ ಸಂವಾದವಿಲ್ಲ ಎನ್ನುವುದನ್ನೂ ನಾವು ನೆನಪಿಡಬೇಕು. ಸಂವಾದಕ್ಕೆ ಬೇಕಾದ ಇನ್ನೊಂದು ಅತ್ಯಮೂಲ್ಯ ಸಾಮಗ್ರಿ ಎಂದರೆ ಮಾನವನ ಬಗ್ಗೆ ಉತ್ಕಟವಾದ ನಂಬಿಕೆ; ಸೃಷ್ಟಿಸುವ ಮತ್ತು ಪುನರ್‌ಸೃಷ್ಟಿಸುವ ಅವನ ಸಾಮರ್ಥ್ಯದಲ್ಲಿ ನಂಬಿಕೆ; ಅವನು ಹೆಚ್ಚು ಪರಿಪೂರ್ಣವಾದ

ಮಾನವನಾಗುವುದರಲ್ಲಿ ನಂಬಿಕೆ. ಹೆಚ್ಚು ಪೂರ್ಣ ಮಾನವರಾಗುವುದು ಕೇವಲ ಒಂದು ವರ್ಗದ ಏಕಸ್ವಾಮ್ಯವಲ್ಲ, ಬದಲಾಗಿ ಇದು ಎಲ್ಲರ ಆಜನ್ಮಸಿದ್ಧ ಹಕ್ಕು.

ಭರವಸೆ ಇಲ್ಲದೆ ಸಂವಾದವಿಲ್ಲ. ಅನ್ಯಾಯದ ವ್ಯವಸ್ಥೆಯಲ್ಲಿ ಉಂಟಾಗುವ ಅಮಾನವೀಯತೆಯು ನಿರಾಶೆಗೆ ಎಡೆ ಮಾಡಿಕೊಡಬೇಕಾಗಿಲ್ಲ. ಬದಲಾಗಿ ಭರವಸೆಗೆ ಅದು ನಾಂದಿ ಹಾಡಬೇಕು. ಅನ್ಯಾಯದಿಂದ ದುರ್ಲಭವಾಗಿರುವ ಮಾನವೀಯತೆಯ ನಿಲ್ಲದ ಹುಡುಕಾಟ ಇದರಿಂದ ಸಾಧ್ಯವಾಗಬೇಕು. ಆದರೆ ಕೈಕಟ್ಟಿ ಅಲಾಯಿದವಾಗಿ ನಿಲ್ಲುವುದರಿಂದ ಭರವಸೆ ಬರುವುದಿಲ್ಲ. 'ನಾನು ಹೋರಾಡುವ ತನಕ, ಭರವಸೆ ನನ್ನ ಜಂಗಾವಲಿಗಿದೆ; ಭರವಸೆಯನ್ನು ಹೊತ್ತು ನಾನು ಹೋರಾಡಿದರೆ ನಾನು ನಿರಾತಂಕವಾಗಿ ಕಾಯಬಹುದು.'

ಪರಿವರ್ತಿಸಬಲ್ಲ, ಸೃಷ್ಟಿಶೀಲ ಚೈತನ್ಯರಾಗಿ ವ್ಯಕ್ತಿಗಳು ಭೌತಿಕ ವಸ್ತುಗಳನ್ನಷ್ಟೇ ಅಲ್ಲದೆ ಸಾಮಾಜಿಕ ಸಂಸ್ಥೆಗಳನ್ನು, ಐಡಿಯಾಗಳನ್ನು ಮತ್ತು ಪರಿಕಲ್ಪನೆಗಳನ್ನು ನಿರ್ಮಾಣ ಮಾಡಬಲ್ಲರು. ತಮ್ಮ ನಿರಂತರ ಚಿಂತನೆ ಮತ್ತು ಪ್ರಕ್ರಿಯೆಯಿಂದಾಗಿ ವ್ಯಕ್ತಿಗಳು ಏಕಕಾಲದಲ್ಲಿ ಚರಿತ್ರೆಯನ್ನು ನಿರ್ಮಿಸಲೂ ಬಲ್ಲರು ಹಾಗೆಯೇ ಚಾರಿತ್ರಿಕ-ಸಾಮಾಜಿಕ ಮಂದಿಯಾಗಿಯೂ ರೂಪುಗೊಳ್ಳಬಲ್ಲರು. ಏಕೆಂದರೆ ಮನುಷ್ಯನ ವೈಶಿಷ್ಟ್ಯವಿರುವುದು ಆತ ಕಾಲವನ್ನು ಭೂತ, ವರ್ತಮಾನ ಮತ್ತು ಭವಿಷ್ಯತ್ತೆಂದು ತ್ರಿ-ಆಯಾಮಗೊಳಿಸುವ ತನ್ನ ಶಕ್ತಿಯಲ್ಲಿ.

ಪಾಲೊ ಫ್ರೇರೀ ಅವರ ಚಿಂತನೆಗಳ ಸ್ಥೂಲ ಪರಿಚಯ ಮಾಡಿಕೊಳ್ಳುವಾಗ ವಿದ್ಯೆಯಿಲ್ಲದ ಜನಸ್ತೋಮದ ಮೌನದ ಬಗ್ಗೆ ಅವರಾಡಿದ ಮಾತುಗಳನ್ನು ಮನನ ಮಾಡಬೇಕಾದದ್ದು ಅತಿ ಆವಶ್ಯಕವಾಗಿದೆ. ಅಗಾಧವಾದ ಜನಸ್ತೋಮ ಮೌನದಿಂದಿರುವುದೇಕೆಂದರೆ ಶಕ್ತಿವಂತ ಅಲ್ಪಸಂಖ್ಯಾತರು ಅವರನ್ನು ಬಾಯಿ ಮುಚ್ಚಿಸಿರುವುದರಿಂದ. ಆದರೆ ಶಕ್ತಿವಂತ ಈ ಅಲ್ಪಸಂಖ್ಯಾತರು ಉದ್ಭವವಾಗಿರುವುದು ಮೌನವ್ರತಿಗಳಾದ ಜನಸ್ತೋಮದಿಂದಲೇ. ತಾವು ಮೊದಲು ಕಾಣದಿದ್ದ ನಿಜವನ್ನು ಒಂದೇ ಏಟಿಗೆ ಜನಸ್ತೋಮ ಕಂಡುಕೊಳ್ಳುವಾಗ ಅವರಿಗೆ ಆಶ್ಚರ್ಯವಾಗುತ್ತದೆ; ಅದೇ ಪ್ರಕಾರ ಶಕ್ತಿವಂತ ಅಲ್ಪಸಂಖ್ಯಾತರೂ ಕೂಡ ಜನಸ್ತೋಮ ತಮ್ಮ ಮುಖವಾಡವನ್ನು ತೆಗೆದಾಗ ಆಶ್ಚರ್ಯಗೊಳ್ಳುತ್ತಾರೆ. ಈ ಇಬ್ಬಗೆಯ ಅನಾವರಣದಿಂದ ಜನಸ್ತೋಮ ಮತ್ತು ಶಕ್ತಿವಂತ ಶ್ರೀಮಂತರು ಆತಂಕಕ್ಕೊಳಗಾಗುತ್ತಾರೆ. ಜನಸ್ತೋಮಕ್ಕೆ ಬಿಡುಗಡೆ ಪಡೆಯಲು ಮತ್ತು ಯಾವತ್ತೂ ಅಂಟಿಕೊಂಡ ಮೌನವನ್ನು ಮುರಿದು ಮೇಲೇಳಲು ಆತಂಕವಾದರೆ ಅಲ್ಪಸಂಖ್ಯಾತ ಪ್ರತಿಷ್ಠಿತರಿಗೆ ಯಥಾಸ್ಥಿತಿಯನ್ನು ಮುಂದುವರಿಸುವಲ್ಲಿ ಆತಂಕ; ನಿಜವಾದ, ಆಮೂಲಾಗ್ರವಾದ ಬದಲಾವಣೆಯನ್ನು ಅವರು ಎಂದೂ ಬಯಸುವುದಿಲ್ಲ; ಮೇಲು ಮೇಲಿನ ಪರಿವರ್ತನೆಯಷ್ಟೇ ಅವರ ಪರಿಪ್ರೇಕ್ಷ್ಯದಲ್ಲಿ. ಕ್ರಾಂತಿಕಾರಕವಾದ ಆದರ್ಶ ರಾಜ್ಯವು ಚಲನಶೀಲವಾಗಿರುತ್ತದೆಯೇ ಹೊರತು ನಿಂತ ನೀರಾಗಿರುವುದಿಲ್ಲ; ಜೀವಪರವಾಗಿರುತ್ತದೆ; ಮರಣೋನ್ಮುಖವಾಗಿರುವುದಿಲ್ಲ, ವರ್ತಮಾನದ ಪುನರಾವರ್ತನೆಯಾಗಿರುವುದಿಲ್ಲ; ಮನುಷ್ಯನ ಸೃಷ್ಟಿಶೀಲತೆಗೆ ಸವಾಲಾಗಿ ಭವಿಷ್ಯಮುಖಿಯಾಗಿರುತ್ತದೆ; ಜೀವನದ ಭಾವನೆಯಾಗಿರುತ್ತದೆ, ತಣ್ಣನೆಯ ಅಮೂರ್ತತೆಯಾಗಿರುವುದಿಲ್ಲ; ಸೌಹಾರ್ದವಾಗಿ ಬಾಳುವುದಾಗಿರುತ್ತದೆ, ಕೇವಲ ಗುಂಪಿಗೆ ಹಾತೊರೆಯುವುದಿಲ್ಲ; ಸಂವಾದಕ್ಕೆಳೆಸುತ್ತದೆ, ಬಾಯಿಪಟ್ಟಿದ ರೀತಿಯನ್ನಲ್ಲ; ಆಲೋಚನೆ ಮತ್ತು ಕ್ರಿಯೆಗೆ ಬದ್ಧವಾಗಿರುತ್ತದೆ; 'ಕಾನೂನು ಮತ್ತು ಶಿಸ್ತು' ಎಂಬ ಗೂತ್ತಿಗೆ ಕಟ್ಟಿ ಹಾಕಲ್ಪಡುವುದಿಲ್ಲ, ಸೃಜನಶೀಲವಾದ ಸಂವಹನ ಶಕ್ತಿಯುಳ್ಳ ಭಾಷೆಗೆ ತುಡಿಯುತ್ತದೆ. ಸೂಕ್ಷ್ಮವಾದ ಸಂಕ್ಷಿಪ್ತ ಸಂಕೇತಗಳಿಗಲ್ಲ; ಬಾಳಿಗೆ ಅಳವಡುವ ಮೌಲ್ಯಗಳ ಸ್ವೀಕರಣೆಯೇ ಹೊರತು ಮೇಲಿಂದ ಹೇರಲ್ಪಟ್ಟ ಮಿಥಕಗಳ ಮೈತ್ರಿಯಲ್ಲ.

ನಮ್ಮನ್ನು ಅಮಾನವೀಯಗೊಳಿಸುವ ರಚನೆಗಳನ್ನು ಧ್ವಂಸ ಮಾಡದೇ ಪ್ರಜ್ಞೀಕರಣವನ್ನು ನಾವು ಸಾಧಿಸಲಾರೆವು. ಪ್ರಜ್ಞೀಕರಣವನ್ನು ಸಾಧಿಸುವುದೆಂದರೆ 'ಸುಳ್ಳು ಪ್ರಜ್ಞೆ'ಯನ್ನು ಮೆಟ್ಟಿ ನಿಲ್ಲುವ ವಿಧಾನ ಎಂದರ್ಥ. ಆದ್ದರಿಂದಲೇ ಬಲಪಂಥೀಯರಿಗೆ ಈ ಸುಳ್ಳು ಪ್ರಜ್ಞೆಯನ್ನು ಮೀರಲು ಆಗುವುದಿಲ್ಲ. ಹಾಗಾಗಿಯೇ ಬಲಪಂಥೀಯರು ಒಂದು ಆದರ್ಶ ರಾಜ್ಯದ ಕನಸು ಕಾಣಲು ಅಸಮರ್ಥರಾಗಿರುವುದು. ಈ ಪ್ರಜ್ಞೀಕರಣವನ್ನು ಸಾಂಸ್ಕೃತಿಕ ಕ್ರಿಯೆಯಿಂದ ಉಂಟುಮಾಡಲು ಅವರಿಗೆ ಆಗುವುದಿಲ್ಲ. ಹೊಸ ವಾಸ್ತವವನ್ನು ನಿರ್ಮಿಸುವ ಸಾಮರ್ಥ್ಯವನ್ನು ಪ್ರಕಟಿಸುತ್ತಾ ಅಮಾನವೀಕರಣ ಎಲ್ಲ ರಚನೆಗಳನ್ನು ಇಲ್ಲವಾಗಿಸಬೇಕು. ಅನ್ಯಾಯದ ಶಿಲ್ಪಿಗಳನ್ನು ಕೆಡವದೆ ಪ್ರಜ್ಞೀಕರಣವಿಲ್ಲ; ಇದು ಬಲಪಂಥೀಯರಿಗೆ ಖಂಡಿತವಾಗಿ ಸಾಧ್ಯವಾಗದ ಮಾತು. ಕೇವಲ ದಬ್ಬಾಳಿಕೆಗೆ ಮಾತ್ರ ಬಲಪಂಥ ಸಾಂಸ್ಕೃತಿಕ ಕ್ರಿಯೆಯು ಹೊಸ ರೂಪಗಳನ್ನು ಸೃಷ್ಟಿಸಿಕೊಳ್ಳಬಲ್ಲದು.

ಬಿಡುಗಡೆಗಾಗಿ ಸಾಂಸ್ಕೃತಿಕ ಕ್ರಿಯೆ ಎನ್ನುವಾಗ ಸಂವಾದವೇ ಪ್ರಧಾನವಾಗುತ್ತದೆ; ಮತ್ತು ಸಂವಾದದಲ್ಲಿ ದಬ್ಬಾಳಿಕೆಯು ಲವಲೇಶವೂ ಇರುವುದಿಲ್ಲ. ದಬ್ಬಾಳಿಕೆಗೆ ಸಾಂಸ್ಕೃತಿಕ ಕ್ರಿಯೆ ಎಂದರೆ ಅಲ್ಲಿ ಸಂವಾದ ಪಲಾಯನವಾಗಿಬಿಟ್ಟು ಜನರನ್ನು ನಿಷ್ಕ್ರಿಯರನ್ನಾಗಿಸುವ ಹುನ್ನಾರ ಎದ್ದು ಕಾಣುತ್ತದೆ. ಪ್ರಜ್ಞೀಕರಣವನ್ನು ಹುಟ್ಟುಹಾಕುವುದಕ್ಕೆ ಒಪ್ಪಿರುವವರು ಬಿಡುಗಡೆಯ ಚಿಂತನೆಯನ್ನು ಚಮತ್ಕಾರದಲ್ಲಿ ಮುಳುಗಿಸುವುದಲ್ಲ. ಬದಲಾಗಿ ತಮ್ಮ ಸಂಪೂರ್ಣ ಮನಸ್ಸಿನ ಗ್ರಹಣಶಕ್ತಿಯ ಸಹಾಯದಿಂದ ಅವರು ವಾಸ್ತವದ ಸತ್ಯವನ್ನು ಅರಿಯುವಂತೆ ಮಾಡುವುದು.

ಕ್ರಾಂತಿಕಾರಕವಾದ ವಾಸ್ತವದ ಉದ್ಘಾಟನೆಯಾದ ಬಳಿಕ 'ಪ್ರಜ್ಞೀಕರಣ' ಅನಿವಾರ್ಯವೆಂಬಂತಾಗುತ್ತದೆ. ಹೊಸ ವಾಸ್ತವದ ಅರಿವಿನಲ್ಲೂ ಕೂಡ ಜನರು ತಮ್ಮ ಹಿಂದಿನ ಮಿಥ್‌ಗಳಿಗೆ ಅಂಟಿಕೊಳ್ಳುವ ಸಾಧ್ಯತೆಯಿರುವುದರಿಂದ ಅದನ್ನು ನಿವಾರಿಸಲು 'ಪ್ರಜ್ಞೀಕರಣ'ದ ಅವಶ್ಯಕತೆಯಿರುತ್ತದೆ. ಈ 'ಪ್ರಜ್ಞೀಕರಣ' ಎಂಬುದು ಇನ್ನೊಂದು ದಿಗಿಲಿನ ವಿರುದ್ಧವೂ ನಮಗೆ ಅಗತ್ಯವಾಗಿ ಬೇಕಾದ ಗುರಾಣಿಯಾಗಿದೆ; ಆ ದಿಗಿಲಾವುದೆಂದರೆ ತನ್ನ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಿಕೊಳ್ಳಲು ಸಮಾಜ ಅವಲಂಬಿಸುವ ತಂತ್ರಜ್ಞಾನ ಮಿಥಕೀಕರಣದ ದಿಗಿಲು.

ಈ 'ಪ್ರಜ್ಞೀಕರಣ' ಎಂಬುದು ಕ್ರಾಂತಿಕಾರಿಗಳು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸುವ ಮಂತ್ರಶಕ್ತಿಯಲ್ಲ. ಬದಲಾಗಿ ಅವರ ಧ್ಯಾನಸ್ಥ ಕ್ರಿಯೆಗೆ ಒದಗಿ ಬರುವ ಒಂದು ಮೂಲಭೂತ ಆಯಾಮ. ವ್ಯಕ್ತಿಗಳು 'ಪ್ರಜ್ಞೆಯಿಂದ ಕೂಡಿದವರಾಗಿ' ಇಲ್ಲದಿದ್ದ ಪಕ್ಷದಲ್ಲಿ 'ಪ್ರಜ್ಞೀಕರಣ'ಕ್ಕೆ ಅರ್ಥವೇ ಇರುತ್ತಿರಲಿಲ್ಲ. ವ್ಯಕ್ತಿಗಳು ನೋಡುವ, ಕ್ರಿಯೆಗಿಳಿಯುವ ಸಾಮರ್ಥ್ಯ ಹೊಂದಿದ್ದಾರೆ; ತಿಳಿಯುವ ಪ್ರತಿಕ್ರಿಯಿಸುವ ಶಕ್ತಿ ಇರುವಂತೆಯೇ ತಮ್ಮ ಮತ್ತು ಜಗತ್ತಿನ ಬಗ್ಗೆ ಕೂಡ ಅವರಿಗೆ ಅರಿವಿದೆ. ಅಪ್ಪಟವಾದ ಕ್ರಾಂತಿಗಳಾಗುವುದು ಜನರನ್ನು ಬಿಡುಗಡೆಗೊಳಿಸಲಿಕ್ಕಾಗಿ; ತುಳಿಯಲ್ಪಟ್ಟ ಸ್ಥಿತಿಯಲ್ಲಿ ಕಾದಿರುವ ನಿಜ ಅವರಿಗೆ ತಿಳಿಯುವ ಕಾರಣದಿಂದಲೇ ತಾವು ಜೀವಿಸುವ ದಬ್ಬಾಳಿಕೆಯ ವಾಸ್ತವದ ಬಗ್ಗೆ ಗಮನ ಇರುವುದರಿಂದಲೇ ಅವರನ್ನು ಬಿಡುಗಡೆಗೊಳಿಸಲು ಸಾಧ್ಯವಾಗುವುದು.

ಆದರೆ ಒಂದು ಮಾತನ್ನು ನಾವು ನೆನಪಿಡಬೇಕು : ವಾಸ್ತವದ ಕಾರಣ ವ್ಯಕ್ತಿಗಳ ಪ್ರಜ್ಞೆ ಮಿತಿಗೊಳ್ಳುವುದರಿಂದ 'ಪ್ರಜ್ಞೀಕರಣ'ವು ಮೊದಲು ಅವರನ್ನು ವಾಸ್ತವವನ್ನು ಸ್ಪಷ್ಟವಾಗಿ ಕಾಣಲಾಗದ ಅವರ ದೃಷ್ಟಿಯನ್ನು ತಿಳಿಗೊಳಿಸುವ ಕಡೆ ದುಡಿಯಬೇಕಾಗುತ್ತದೆ. ಅಪ್ಪಟತನವನ್ನು ಮೆರೆಯಬೇಕಾದರೆ, ಕ್ರಾಂತಿ ಎಂಬುದು ನಿರಂತರವಾಗಬೇಕು. ಹಾಗಿಲ್ಲದಿದ್ದರೆ ಅದು ಕ್ರಾಂತಿಯಾಗದೆ ಕೇವಲ ಅಧಿಕಾರಶಾಹಿಯಾಗಿಬಿಡುತ್ತದೆ.

'ಪ್ರಜ್ಞೀಕರಣ'ದಿಂದಲೇ ಬಿಡುಗಡೆ ಸಾಧ್ಯ; ಮತ್ತು ಆ ಮಾರ್ಗವಾಗಿಯೇ ಮುಳುಗದ ಸ್ಥಿತಿಯಿಂದ ಮೇಲೆ ಮೂಡಿ ಘಾಳಾಗಿ ಕಾಣಿಸಿಕೊಳ್ಳಲು ಸಾಧ್ಯ. ಮನುಷ್ಯರಲ್ಲಿ ನಮಗೆ ನಂಬಿಕೆ ಇದ್ದ ಪಕ್ಷದಲ್ಲಿ ಅವರು ಮನುಷ್ಯರೆಂದು ಕರೆದು ಸುಮ್ಮನಾಗುವುದರಲ್ಲಿ ಅರ್ಥವಿಲ್ಲ; ಅವರು ಮಾನವರಾಗಿ ಬದುಕುವತ್ತ ಏನಾದರೂ ಮೂರ್ತವಾದದ್ದನ್ನು ಕೈಕೊಂಡಾಗ ಮಾತ್ರ ನಮ್ಮ ಬದುಕು ಹೊಸ ಅರ್ಥದಲ್ಲಿ ಹೊಳೆಯುತ್ತದೆ.

೩.

ಅಕ್ಷರ ಕಲಿಯಬೇಕಾದ ಮಹತ್ವವನ್ನು ಪಾಲೊ ಫ್ರೇರೀ ಪರೋಕ್ಷವಾಗಿ ತಮ್ಮ 'ಪ್ರಜ್ಞೀಕರಣ'ವೆಂಬ ಕ್ರಾಂತಿಕಾರಿ ಪರಿಕಲ್ಪನೆಯ ಮೂಲಕ ಹೀಗೆ ತಿಳಿಯಹೇಳಿದ್ದಾರೆ. ಅವರ ಚಿಂತನೆಯ ಕೇಂದ್ರದಲ್ಲಿರುವುದು ಮಾನವೀಕರಣದ ಜರೂರು. ಅಮಾನವೀಯಗೊಳಿಸುವ ದಬ್ಬಾಳಿಕೆಯಿಂದ ಮನುಷ್ಯ ಮನುಷ್ಯನಾಗದೆ ಮೃಗವಾಗಿಬಿಡುತ್ತಾನೆ. ಮೃಗೀಯಾವಸ್ಥೆಯಾದರೂ 'ಪರಿಮಿತ-ಸನ್ನಿವೇಶ'ವನ್ನು ಮೀರಲಾರದೆ ಬಡಪಾಯಿ ಹಂತದಲ್ಲಿ ಬಿದ್ದ ಅವಸ್ಥೆಯನ್ನು ಸೂಚಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮನುಷ್ಯ ಕೇವಲ ವಸ್ತುವಾಗಿಬಿಡುತ್ತಾನೆ. ಇವನನ್ನು ಈ ಸ್ಥಿತಿಯಿಂದ ಮೇಲೆತ್ತಬೇಕಾದದ್ದೇ ಸವಾಲು; ಪರಿವರ್ತನೆಯ ಪರಿಕರಗಳನ್ನು ಇವನು ಹೊಂದಿರುವುದೂ ಕೂಡ ಇವನ ಉದ್ಧಾರಕ್ಕೆ ತುಡಿಯಲು ಕಾರಣವಾಗಿದೆ. ಫ್ರೇರೀ ಈ ಮಹತ್ವದ ಪರಿಕಲ್ಪನೆಗಳನ್ನು ನೀಡಿ ಹಲವು ದಶಕಗಳೇ ಕಳೆದಿದ್ದರೂ ತೃತೀಯ ಜಗತ್ತಿನಲ್ಲಿ ನಿರಕ್ಷರಿಗಳ ಪಡೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಆ ಚಿಂತನೆಗಳು ಹೊಸ ಕ್ರಾಂತಿಯಿಂದ ಮಿನುಗುತ್ತಿವೆ ಮತ್ತು ಅವುಗಳ ಬೆಳಕಿನಲ್ಲಿ ಮಲೆತಿರುವ ಅಜ್ಞಾನ, ಅಂಧಕಾರವನ್ನು ತಗ್ಗಿಸುವ ಸಾಧ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ.

● ▼

ಸಿ. ನಾಗಣ್ಣ, ೩೧೯೫, ೨೧/೩ ಮುಖ್ಯರಸ್ತೆ, ವಿಜಯನಗರ ೨ನೇ ಹಂತ, ಮೈಸೂರು - ೫೭೦ ೦೧೭

ಪ್ರೀತಿ

ಹಾ. ವೆಂ. ನಾಗೇಶ್

ಪ್ರೀತಿಯೆನ್ನುವುದು ಕುಣಿಯುವ ಕುಲಿಯುವ ಜಪ್ಪನಿಗಳಲ್ಲ,
ಸಿಂಗರಿಸಿಕೊಂಡು ನಿಂತ ವಾರಾಂಗನೆಯಲ್ಲ,
ಮತ್ತು ಬರಿಸುವ ಮದ್ಯವಲ್ಲ;
ಪ್ರಖರವಾಗಿ ಸುಡುವ ಮಧ್ಯಾಹ್ನದ ಬಿಸಿಲಲ್ಲ,
ಉರಿವ ಕೊಳ್ಳಿಯೂ ಅಲ್ಲ.

ಪ್ರೀತಿಯೆನ್ನುವುದು ನುಗ್ಗಿಬರುವ ನೆರೆಯಲ್ಲ;
ಛತ್ರಿ ಚಾಮರ ದಿಂಡು ಓಲಗ ಆನೆ ಕುದುರೆಗಳ
ಮೆರವಣಿಗೆಯಲ್ಲಿ ಬರುವ ವೈಭವವಲ್ಲ;
ತೋಳ್ಬಲದಿಂದ ಮಣಿಸುವ, ಅಬ್ಬರದಿಂದ ಎದೆಗೆಡಿಸುವ,
ಸಾಹಸದಿಂದ ಸೋಲಿಸುವ
ಸಂಭ್ರಮವಲ್ಲ.

ಪ್ರೀತಿಯೆನ್ನುವುದು ಹಸುಳೆಯ ಮುಗ್ಧ ನಗೆ,
ಕಿರು ಬಾಲೆಯ ಮುಗುಳು ನಗೆ, ಮಡದಿಯ ಮಂದಸ್ಮಿತ;

ಕೈತುತ್ತು ಉಣಿಸುವ ತಾಯಿಯ ಮಮತೆ,
ನಮ್ಮಜ್ಜಿಯ ಬೊಚ್ಚುಬಾಯಿಯ ನಗು.

ಪ್ರೀತಿಯೆನ್ನುವುದು ಮುಂಜಾವಿನಲ್ಲಿ ಕಿಟಕಿಯಿಂದ
ಇಣುಕಿ ಬರುವ ತಂಗಾಳಿ,
ಕಣ್ಣವೆಗಳನ್ನು ತುಸುತುಸುವಾಗಿ ತುಂಬಿಕೊಳ್ಳುವ ನಸುಬೆಳಕು.
ನೆಲದಾಳದಿಂದ ಅಂಗುಲಂಗುಲ ಬೆಳೆವ ಹೂಗಿಡ;
ತನಗರಿಯದಂತೆಯೇ ನಸುಬಿರಿವ ಹೂಮೊಗ್ಗೆ.
ಮರಿಬೆಕ್ಕಿನ ಮೃದುವಾದ ಮೈಯನ್ನು
ಸವರುವ ಎಳೆಮಗುವಿನ ಕೈ;
ಮಿದು ಸ್ಪರ್ಶದಿಂದ ಪುಳಕಗೊಂಡು ಮೈನಿಮಿರುವ
ಮಿದು ಮೈಯ ಬಿಳಿ ಉಣ್ಣೆಯ ಮುದ್ದು ಮೊಲ.

ಪ್ರೀತಿಯೆನ್ನುವುದು ನಗಾರಿ ಬಾರಿಸಿ
ಡಂಗುರ ಬಡಿದು ಮೂಡುವ ಉದ್ಘೋಷವಲ್ಲ,
ಅದು ಅಂತರಂಗದ ಮೆಲುದನಿ.
ಪ್ರೀತಿಯೆನ್ನುವುದು ಧುತ್ತೆಂದು ಮುಂದೆ
ಬಂದು ನಿಲ್ಲುವ ಬೇತಾಳವಲ್ಲ,
ಅದು ನಿಮಗರಿಯದಂತೆಯೇ ಬೆಂಬಿಡಿದು
ಬಂದು ನಿಮ್ಮನ್ನಾವರಿಸುವ ಮಾಯಾಶಕ್ತಿ !

●

ಎಚ್. ವಿ. ನಾಗೇಶ್, ಟಿ-೪, ಕವಿವಿ ವಸತಿಗೃಹಗಳು, ಧಾರವಾಡ - ೩ ☎: ೦೮೩೬ - ೨೭೭ ೫೬೬೮

ಗೀತಾ ನಾಗಭೂಷಣ ಅವರ ಕಾದಂಬರಿ 'ಬದುಕು'

ಲಲಿತಾ ಸಿದ್ದಬಸವಯ್ಯ — ವಿಶ್ಲೇಷಣೆ

ಹುಟ್ಟಿದ ಪ್ರತಿ ಜೀವಿಯ ಬೆನ್ನಿಗೂ ಅದರ ದೈವವಿದ್ದು, ಬೆನ್ನಹಿಂದೆ ನಿಂತು ಜೀವಿಯ ಬದುಕನ್ನು ನಿರ್ದೇಶಿಸುತ್ತದೆಂದು ಹಿರಿಯರು ಹೇಳುತ್ತಾರೆ. ಈ ದೈವವೆಂಬುದು ಕರಾರುವಾಕ್ಕಾದ ಲೆಕ್ಕಾಚಾರಸ್ಥ. ಬಲಗೈಯಿಂದ ಒಂದು ಪ್ರಸಾದ ಕೊಟ್ಟರೆ ಎಡಗೈಯಿಂದ ಮೂರನ್ನು ಕಸಿದುಕೊಂಡಿರುತ್ತದೆ. ಇದಕ್ಕೆ ಹೊರತಾದವರು ನಮ್ಮ ಕಣ್ಣಿಗೆ ಬಿದ್ದರೆ ಅದಕ್ಕೆ ಕಾರಣ, ಆ ಜೀವಿಯ ದೈವಕ್ಕೆ ಕೊಡಕೊಳ್ಳುವುದರಲ್ಲಿ ತುಸು ಸಡಿಲ ಕೈ, ಎಂದು ಭಾವಿಸಿ ಅದಕ್ಕೆ 'ಅದೃಷ್ಟ' ಎಂಬ ಅಮೂರ್ತ ಹೆಸರು ಇಟ್ಟಿದ್ದೇವೆ. ಇದು ವಾಸ್ತವ, ಇದು ಬದುಕು.

ಗೀತಾ ನಾಗಭೂಷಣರ 'ಬದುಕು' (೪೮೯ ಪುಟ) ಕಾದಂಬರಿಯುದ್ದಕ್ಕೂ ವಿಜೃಂಭಿಸುವುದು ಇಂತಹ ದೈವನಿರ್ದೇಶಿತ ಬದುಕೇ. ಕಾದಂಬರಿಯ ಹೊರಸಿನ ಮೇಲೆ ಓಡಾಡುವ ಎಲ್ಲಾ ಮುಖ್ಯ ಮತ್ತು ಅಮುಖ್ಯ ಪಾತ್ರಗಳು ಮೇಲೆ ಹೇಳಿದ ರೀತಿಯಲ್ಲಿ ತುಸು ಪಡೆದು ಹೆಚ್ಚು ಕಳೆದುಕೊಳ್ಳುವ ಗಣಿತದಲ್ಲಿ ಹಣ್ಣಾದವರೇ. ಇವರೊಬ್ಬೊಬ್ಬರ ಬದುಕೂ ಪ್ರತ್ಯೇಕ ಕಥೆಗೋ ಕಾದಂಬರಿಗೋ

ವಸ್ತು ಒದಗಿಸುಲ್ಲದಾದರೂ ಒಬ್ಬರ ಕಥೆ ಇನ್ನೊಬ್ಬರ ಬದುಕಿನೊಂದಿಗೆ ಶಾಮೀಲಾಗಿಯೇ ತನ್ನ ಹರಹನ್ನು ಬಿಚ್ಚಿಕೊಳ್ಳಬೇಕಾದುದರಿಂದ ಕೇಂದ್ರ ಪಾತ್ರದ ಬದುಕಿಗೆ ಒಂದಕ್ಕೊಂದು ತಕ್ಕೈಸಿಕೊಂಡು ವಿಸ್ತಾರವಾದ ಹಂದರವೊಂದನ್ನು ನೇಯ್ದು ಓದುಗರಿಗೆ (ಈಗಾಗಲೇ ಕನ್ನಡದ ಸಂದರ್ಭದಲ್ಲಿ ಬೇರೆ ಬೇರೆ ಪ್ರದೇಶಗಳ ಲೇಖಕರಿಂದ ಸುಪರಿಚಿತವಾದ ಪ್ರಾದೇಶಿಕ ವಲಯವನ್ನು ಬಿಟ್ಟು) ಹೊಸದೊಂದು ಪ್ರಾದೇಶಿಕ ಸಮುದಾಯದ ಭಿತ್ತಿಯಲ್ಲಿ ಅಡಗಿಸಿ ಕೈಗಿಡುತ್ತಾರೆ ಲೇಖಕಿ.

ಇಲ್ಲಿಯ ಕೇಂದ್ರ ಪಾತ್ರವಾದ ಮಲ್ಲಪ್ಪ ಜಮೇದಾರ ಕಲಬುರ್ಗಿ ಜಿಲ್ಲೆಯ ಶಿವಳ್ಳಿ ಗ್ರಾಮದ ಕೆಳಗೇರಿಯ ಸಂಪನ್ನ ಗೃಹಸ್ಥ. ಸರಕಾರಿ ಜಮೇದಾರಿಕೆಯಿಂದಾಗಿ ಬಂದ ಇನಾಮತಿ ಜಮೀನು ಮತ್ತು ಸರಕಾರಿ ಹುದ್ದೆಯ ಚೌಕಿದಾರಿಕೆ. ಹಿರಿಯರಿಂದ ಬಂದ ಹೊಲ, ಮನೆ, ಬೆಳ್ಳಿ-ಬಂಗಾರ, ದನ-ಕರು ಇರುವ ಗಟ್ಟಿ ಕುಳ. ಅದಕ್ಕೆ ಪೂರಕವಾದದ್ದು ಅವನ ಹೃದಯ ಸಿರಿವಂತಿಕೆ. ಈ ಜಮೇದಾರ ನೋಟಕ್ಕೆ ಎಷ್ಟು ಚೆಲುವನೋ ಅಷ್ಟೇ ಚೆಲುವಾದದ್ದು ಅವನ ನಡಾವಳಿ. ಅವನಿಗೆ ಕೆಳಗೇರಿಯ ಎಲ್ಲಾ ಜನವೂ ಬೇಕಾದವರೆ. ಕುರುಬ, ಕುಂಬಾರ, ನಾಬರು, ಹೊಲೆ, ಮಾದಿಗ. ಎಲ್ಲರೂ ಅವನ ಮನೆಯ ಔತಣವುಂಡು, ಸೇಂದಿ ಕುಡಿದು ತೃಪ್ತರಾದವರೆ. ತಾನೂ ತೃಪ್ತಿಯಾಗಿ ತಿಂದುಂಡು ಕುಡಿದು ತನ್ನ ಸುತ್ತಲಿನ ಮಂದಿಯನ್ನೂ ತೃಪ್ತಿಯಾಗಿಟ್ಟು ನಾಲ್ಕು ಜನಕ್ಕೆ ಬೇಕಾದಂತೆ ಘನತೆಯ ಬಾಳು ಬಾಳುತ್ತಿರುವ ಈ ಜಮೇದಾರನಿಗೆ ಅಪ್ಪಂತ ಗರತಿ ಮಲ್ಲವ್ವ. ಮರ್ಯಾದೆಗೆ ಪ್ರಾಣಕೊಡುವಂಥ ಮಾನಿಷ್ಠ ಹೆಂಗಸು. ಇಬ್ಬರು ಹೆಣ್ಣುಮಕ್ಕಳು ಶರಣಮ್ಮ - ಕಾಶಮ್ಮ. ಕಲ್ಯಾಣಿಯೆಂಬ ಕಿರಿಯ ಗಂಡುಮಗ. ಶರಣಮ್ಮನಿಗೆ ಮದುವೆಯಾಗಿದೆ. ಸೋದರಳಿಯ ಹಾಲಪ್ಪನನ್ನು ತಾನೇ ಸಾಕಿ ಓದಿಸಿ ಗುಲಬರ್ಗಾ ಶಹರದ ಗಿರಣಿಯಲ್ಲಿ ನೌಕರಿಗೆ ಹಚ್ಚಿ, ಮಗಳನ್ನೂ ಕೊಟ್ಟು ನೆಟ್ಟಗೆ ನಿಲ್ಲಿಸಿಯಾಗಿದೆ. ಈ ಮಗಳಿಗೆ ಮಕ್ಕಳಾಗಿ ಜಮೇದಾರ-ಜಮೇದಾರ್ತಿಯರು ಆಯಿ -ಮುತ್ತ್ಯಾ ಆಗಿದ್ದೂ ಆಗಿ ಹೋಗಿದೆ. ಎರಡನೆಯ ಮಗಳು ಕಾಶಮ್ಮನಿಗೆ ಜಮೇದಾರನ ಅಂತಸ್ತಿಗೆ ತಕ್ಕುದಾದ ಸಂಬಂಧ ಹುಡುಕುತ್ತಿದ್ದಾರೆ. ಮಗ ಕಲ್ಯಾಣಿ ಓದುತ್ತಿದ್ದಾನೆ. ಇದು ಕಾದಂಬರಿಯ ಆರಂಭದಲ್ಲಿ ನಮಗೊದಗುವ ಚಿತ್ರ. ಇಲ್ಲಿಯ ವರೆಗೆ ಜಮೇದಾರನ ದೈವ ಅವನನ್ನು ಚೆನ್ನಾಗಿಯೇ ನಡೆಯಿಸಿದೆ. ಯಾರಿಗೂ ತಲೆಬಾಗದೆ, ಯಾತಕ್ಕೂ ಪರದಾಡದೆ ಏರುಮುಖದಲ್ಲಿಯೇ ಅವನ ಬದುಕು ಸಾಗುತ್ತಿದೆ. ಇಷ್ಟೊತ್ತಿಗಾಗಲೇ ದೈವದ ಚಿಕ್ಕಾಚಾರದ ಇನ್ನೊಂದು ಕೈ ಚಾಚಿತು ಎಂಬಂತೆ ಜಮೇದಾರನ ಎಲ್ಲ ಸುಖ ಸಂತೋಷಕ್ಕೂ ಗೂಟವಾಗುವ ಪ್ರಕರಣವೊಂದನ್ನು ಅವನ ಮುದ್ದಿನ ಮಗಳು ಕಾಶಮ್ಮ ಸೃಷ್ಟಿಸಿ ಬಿಟ್ಟಿದ್ದಾಳೆ.

ಜಾತಿಯಿಂದ ಅಂತಸ್ತಿನಿಂದ ತನಗಿಂತ ಭಿನ್ನವಾದ ಊರ ಸಾವ್ಕಾರನ ಮಗ ಲಿಂಗರಾಜನನ್ನು ಅವಳು ಒಲಿದು, ಈ ಪ್ರಣಯಿಗಳು ಊರಿನ ಮರೆಮುಚ್ಚಿನ ಜಾಗಗಳಲ್ಲೆಲ್ಲಾ ಭೇಟಿಯಾಗತೊಡಗಿ, ಅದು ಗುಲ್ಲಾಗಿ, ಜಮೇದಾರ ಸಾಕುಮಗನಂತೆ ಪೋಷಿಸಿದ್ದ ನಾಬರ ಹುಡುಗ ಫತರೂನಿಂದ ಮೊದಲು ಮಲ್ಲಪ್ಪನಿಗೆ ತಿಳಿಯುತ್ತದೆ. ಜಮೇದಾರನಿಗೆ ಸಾವುಕಾರರಿಂದ ಬುಲಾವ್ ಬಂದು ಅಲ್ಲಿ ಗೌಡ, ಕುಲಕರ್ಣಿಯ ಮುಂದೆ ಅವನ ಮತ್ತು ಮಗಳ ನಡೆವಳಿಕೆಯ ಬಗ್ಗೆ ಹೀನ ಅಪಾದನೆ ಎದುರಾಗುತ್ತದೆ. ಮೊದಲಿನಿಂದಲೂ ಗತ್ತು ಗೈರತ್ತುಗಳನ್ನೇ ಉಳಿಸಿಕೊಂಡು ಬಂದಿದ್ದ ಮಲ್ಲಪ್ಪ ಜಮೇದಾರ ರೊಚ್ಚಿಗೆದ್ದು ತಾನೂ ಸಾವುಕಾರನನ್ನು ಮತ್ತವನ ಮಗನ ನಡೆವಳಿಕೆಯನ್ನು ಪ್ರಶ್ನಿಸಿ, ಕೈ ಮಿಲಾಯಿಸುವ ಹಂತದಲ್ಲಿ, ಮಧ್ಯಸ್ತಿಕೆದಾರರಿಂದ ಇಬ್ಬರೂ ತಂತಮ್ಮ ಮಕ್ಕಳನ್ನು ಹದ್ದುಬಸ್ತಿನಲ್ಲಿಡಬೇಕೆಂದು ತೀರ್ಮಾನವಾಗುತ್ತದೆ. ಕೂಡಲೇ ಕಾಶಮ್ಮನನ್ನು ಅವಳ ಅಕ್ಕ -

ಭಾವನಲ್ಲಿ ಬಿಟ್ಟು, ಅಲ್ಲಿಂದಲೇ ಅವಳಿಗೆ ಸಂಬಂಧ ಹುಡುಕಿ. ಜಮೀದಾರನ ವ್ಯಕ್ತಿತ್ವಕ್ಕೆ ಹೊಂದುವ ರೀತಿಯಲ್ಲಿ, ಬಂಧು ಬಾಂಧವರಿಲ್ಲದೆ ಅದ್ದೂರಿ ಆಡಂಬರವಿಲ್ಲದೆ ಗುಲಬರ್ಗಾದ ಅಳಿಯನ ಬಾಡಿಗೆ ಮನೆಯಲ್ಲಿಯೇ ಜೋಪಡಪಟ್ಟಿಯ ಜನದ ನಡುವೆ ಕಾಶಮ್ಮನ ಮದುವೆಯೂ ನಡೆದು ಹೋಗುತ್ತದೆ. ಅಲ್ಲಿಗೆ ಕಟ್ಟಿಯ ಕಲ್ಲನ್ನು ಕಟ್ಟೆಗೆ ಸೇರಿಸಿದೆ ಎಂದು ನಿರಾಳವಾಗುತ್ತಾನೆ ಮಲ್ಲಪ್ಪ.

ಮೊಮ್ಮಗಳು ಬೆಳ್ಳಿ ಮೈನೆರೆಯುತ್ತಾಳೆ. ಈ ಚೆಲುವಿನ ಪುತ್ಥಳಿಯನ್ನು ಮಗ ಕಲ್ಯಾಣಿಗೆ ತಂದುಕೊಂಡು ವೈಭವದಿಂದ ಎರಡೂ ಬೀಗಿಟ್ಟು ಲಗ್ನ ನೆರವೇರಿಸುತ್ತಾನೆ. ಈ ಲಗ್ನಕ್ಕೆ ಮೊಟ್ಟ ಮೊದಲ ಸಾರಿ ಊರಿಗೆ ಬಂದ ಕಾಶಪ್ಪನಿಗೆ ಅವಳ ಹಳೆಯ ಗೆಳತಿಯಿಂದ ಲಿಂಗರಾಜನ ಬಲವಂತದ ಸಂಸಾರದ ಬಗೆಗಿನ ಮಾಹಿತಿ ಸಿಕ್ಕಿ ಅವಳ ಮನಸ್ಸು ಮತ್ತೆ ಹಳೆಯ ಪ್ರೇಮಿಗೆ ತುಯ್ದು ಕೊನೆಗೆ ಅವಳು ಗಂಡನನ್ನು ತೊರೆದು ಸಾಹುಕಾರ ಲಿಂಗರಾಜಪ್ಪನ ಹಿಂದೆ ಓಡಿಬಂದವಳಾಗಿ ಅವನ ತೋಟದ ಮನೆ ಸೇರುತ್ತಾಳೆ. ಮಗಳ ಈ ಕೃತ್ಯದ ಫಲವಾದ ಅವಮಾನವನ್ನು ತಾಳಿಕೊಳ್ಳಲಾರದೆ ಮಲ್ಲಪ್ಪ ಜಮೀದಾರ ಹೊಳೆಗೆ ಹಾರುತ್ತಾನೆ. ಆಗಿನ್ನೂ ಹೊಸ ಸಂಸಾರ ಹೂಡುತ್ತಿದ್ದ ಎಳೆ ದಂಪತಿಗಳಾದ ಬೆಳ್ಳಿ - ಕಲ್ಯಾಣಿಯರ ಬಾಳು ಇದೇ ಘಟನೆಯಿಂದಾಗಿ ಮೂರಾಬಟ್ಟೆಯಾಗಿ, ಕಲ್ಯಾಣಿ ಜೇಲು ಸೇರಿ, ಬೆಳ್ಳಿ ತನ್ನದೇ ತೋಟದಲ್ಲಿ ಕೂಲಿಯಾಳಾಗಿ ದುಡಿಯಬೇಕಾದ ದುರವಸ್ಥೆಗೀಡಾಗುತ್ತಾಳೆ.

ಕಲ್ಯಾಣಿ ಜೇಲಿನಿಂದ ಹೊರ ಬಂದ ಮೇಲೂ ಮಗನ ತಿರಸ್ಕಾರದಿಂದಾಗಿ ಖಿನ್ನತೆಯಲ್ಲೇ ನರಳಿ ಕೊನೆಗೊಮ್ಮೆ ತನ್ನ ಹೆಂಡತಿ ಬೆಳ್ಳಿಯೊಡಗೂಡಿ ಶ್ರೀಶೈಲ ಯಾತ್ರೆ ಕೈಗೊಂಡು ಗಂಡ ಹೆಂಡಿರು ಅಲ್ಲೇ ಅಪಘಾತಕ್ಕೀಡಾಗಿ ಸಾಯುತ್ತಾರೆ. ಮಗನಂತೂ ಜೇಲು ಶಿಕ್ಷೆಯ ಅಪ್ಪನನ್ನು ತಿರಸ್ಕರಿಸಿ ಮನೆಯ ಬಗೆತನವನ್ನೇ ಬಿಟ್ಟು ದೂರ ಸರಿದರೂ ಕೂಡಾ ಮಗಳು ಸುಕದೇವಿ ಮತ್ತವಳ ಗಂಡ ದೇವೀಂದ್ರನಾಗಿ ಜಮೀದಾರನ ಮನೆಯ ಮೊದಲಿನ ವೈಭವ ನಿಧಾನವಾಗಿ ಮರುಕಳಿಸಲು ತೊಡಗುತ್ತದೆ. ಇದು ಕಾದಂಬರಿಯ ಕಥಾವಸ್ತುವಿನ ಸ್ಥೂಲ ಪಂಜರ.

'ಬದುಕೆ'ಂಬುದು ಹರಿವ್ಹಳ್ಳ ತೊರೆ. ಅದು ತಾನೆ ಹೇಗೆ ಹೇಗೆ ಸದುವು ದೊರೆಯುತ್ತದೋ ಹಾಗೆ ಹಾಗೇ ತನ್ನ ಪಾತ್ರವನ್ನು ಹಿಗ್ಗಿಸಿಕೊಳ್ಳುತ್ತ, ಕುಗ್ಗಿಸಿಕೊಳ್ಳುತ್ತ, ದಿಸೆಗಳನ್ನು ಬದಲಾಯಿಸಿಕೊಳ್ಳುತ್ತ ತನ್ನ ಹರಿಯುವ ಧರ್ಮವನ್ನು ಪಾಲಿಸುತ್ತದೆ. ಈ ತೊರೆಯನ್ನು ನೀರು ಕುಡಿದಷ್ಟು ಸಲೀಸಾಗಿ ಹಾದು ಬಂದವರು ಯಾರೂ ಇಲ್ಲ. ತಕ್ಕ ಮಟ್ಟಿಗೆ ಜಮೀದಾರನೇ ಪುಣ್ಯವಂತ. ತನ್ನ ಯೌವನದ ದಿನಗಳಲ್ಲಿ ನಲಿವನ್ನೇ ಉಂಡ. ಆದರೆ ಅವನ ಮಗ ಸೊಸೆಯರು ದುರ್ದೈವಿಗಳಲ್ಲಿ ದುರ್ದೈವಿಗಳು. ಯಾರದ್ದೋ ತಪ್ಪಿಗೆ ಇಪ್ಪತ್ತರ ಪ್ರಾಯದಲ್ಲೇ ಎಪ್ಪತ್ತರ ಬವಣೆ ಉಂಡು ಸೊರಗಿಬಿಡುತ್ತಾರೆ. ಕಾಶಮ್ಮ - ಹಾಲಪ್ಪರಾದರೂ ಅಷ್ಟೆ. ಮಗಳ ಮದುವೆಯ ವರೆಗೆ ಖುಷಿಯಿಂದಿದ್ದ ಇವರ ಬದುಕು. ತದನಂತರ ಕುಸಿದು ಬಿಡುತ್ತದೆ. ಮಲ್ಲಪ್ಪ ಜಮೀದಾರನ ಕುಟುಂಬದ ಕರಿ ನೆರಳು ಸಂಪೂರ್ಣವಾಗಿ ಕಾಶಮ್ಮ - ಹಾಲಪ್ಪರನ್ನು ನುಂಗಿ ನೊಣೆಯುತ್ತದೆ. ಇದ್ದೊಬ್ಬ ಮಗಳ ಬಾಳು ಕಣ್ಣೆದುರಿಗೇ ನಲುಗಿ ಹೋದರೆ, ಒಬ್ಬನೇ ಮಗ ಆಶ್ರಮ ಸೇರುತ್ತಾನೆ.

ಹೆಂಡತಿಯ ಕಾಲು ಹಿಡಿದು ಆಳುವ 'ಹುಚ್ಚ ಬೋಡಿ' ಮಾರ್ತಾಂಡನ ತಪ್ಪಾದರೂ ಏನು ? ಕಾಶಪ್ಪನನ್ನು ಅಗಾಧವಾಗಿ ಪ್ರೀತಿಸುವ, ಹೆಂಡತಿ ಹೇಳಿದ್ದಕ್ಕೆಲ್ಲಾ ತಲೆಯಾಡಿಸುವ ಈ ಮಾರ್ತಾಂಡ ಉಂಡದ್ದು ಎರಡೂ ಕೈ ತುಂಬಾ ನೋವು.

ಹಾಗೆಯೇ ಸಾಹುಕಾರ ಲಿಂಗರಾಜಪ್ಪನ ಹೆಂಡತಿ ನೀಲವ್ವ. ಅವಳ ಯಾವ ತಪ್ಪೂ ಇಲ್ಲದೆ ಅವಳು ಗಂಡನಿಂದ ಪರಿತ್ಯಕ್ತೆಯಾಗುತ್ತಾಳೆ. ಅತ್ತ ತವರಿಗೂ ಹೋಗಲಾರದ, ಇತ್ತ ಸ್ವಾಭಿಮಾನ ನೀಗಿಕೊಂಡು ಗಂಡನೊಟ್ಟಿಗೂ ಇರಲಾರದ ಅಸಹಾಯಕತೆ ಆ ಜೀವದ್ದು. ಶ್ರೀಮಂತನ ಮಗಳಾಗಿ,

ಶ್ರೀಮಂತನ ಪತ್ನಿಯಾದರೂ ಅವಳ ದೈವ ಹೊಟ್ಟೆಯೇ ಆಗಿ ಉಳಿಯುತ್ತದೆ. ಇವೆಲ್ಲರ ದುರಂತ ಬರೆಯಲು ದೈವ ಆರಿಸಿಕೊಂಡ ಕಾಶವ್ವ - ಲಿಂಗರಾಜರ ಬದುಕಾದರೂ ಸಫಲವೇ ? ತಮ್ಮ ವಿವಾಹೇತರ ಸಂಬಂಧವು ತಂತಮ್ಮ ಕುಟುಂಬಗಳಿಗೆ ತಂದೊಡ್ಡುವ ದುರಂತ ಪರಂಪರೆಯ ಅರಿವಿರದೆ, ಒಂದುಗೂಡಿದ ಈ ಪ್ರೇಮಿಗಳು ಅದಕ್ಕಾಗಿ ವಿಹ್ವಲಗೊಂಡರೆ, ಎಂಬುದರ ಬಗ್ಗೆ ಕಾದಂಬರಿ ಹೆಚ್ಚಾಗಿ ಹೇಳುವುದಿಲ್ಲ. ಗಂಡನಿಗೆ 'ನೀನು ಬೇರೆ ಮದುವೆ ಮಾಡಿಕೋ' ಎಂದು ಕಾಶವ್ವ ಹೇಳಿದರೆ, ಹೆಂಡತಿಗೆ 'ನಿನಗೆ ಬೇಕಾದುದೆಲ್ಲ ಕೊಡುತ್ತೇನೆ. ಇದ್ದರೆ ಇಲ್ಲಿರು. ಬೇಕಾದರೆ ನಿನ್ನ ತೌರಿಗೇ ಹೋಗು' ಎನ್ನುವ ಲಿಂಗರಾಜ ಮುಂದೆ ಹೇಗೆ ಬಾಳುವೆ ಮಾಡಿದರೆಂಬುದನ್ನು ಕಾದಂಬರಿ ವಿವರಿಸುವುದಿಲ್ಲ. ಆದರೆ ತನ್ನ ಹೊಟ್ಟೆಯಲ್ಲಿ ಮಕ್ಕಳಾಗದೆ, ತಮ್ಮ ಮತ್ತು ತಮ್ಮನ ಹೆಂಡತಿಗೆ ಪರೋಕ್ಷವಾಗಿ ನೆರವಾಗುತ್ತ ಬದುಕುವ ಕಾಶಮ್ಮ, ಇತರೆ ಹೆಣ್ಣುಮಕ್ಕಳಂತೆ ದೈಹಿಕವಾಗಿಯಂತೂ ಕೊರಗುವ ಕಾಯಕಷ್ಟ ಪಡುವ ಬವಣೆಗೀಡಾಗುವುದಿಲ್ಲ. ಮಾನಸಿಕವಾಗಿ ಈ ಎರಡೂ ಪಾತ್ರಗಳನ್ನು ಪರಿಪೂರ್ಣವಾಗಿ ಬೆಳೆಯಗೊಡದೆ ಲೇಖಕಿ ಏಕೆ ಸುಮ್ಮನಾದರೆಂಬುದು ನನಗೆ ವಿಸ್ಮಯ ಹುಟ್ಟಿಸಿದೆ. ಗಂಡು -ಹೆಣ್ಣಿನ ನಡುವೆ ಹುಟ್ಟುವ ಈ ಆಕರ್ಷಣೆಯ ಆಳ - ಅಗಲ ಎಷ್ಟೊಂದು ಗೂಢವೆನ್ನುವ ವಿಸ್ಮಯವಂತೂ ಓದುಗರಲ್ಲಿ ಉಳಿಯುತ್ತದೆ.

ಹಲವರ ಯಾತನೆಯ ಚಪ್ಪಡಿಗಲ್ಲುಗಳ ಮೇಲೆ ಒಬ್ಬಿಬ್ಬರ ಸುಖಸೌಧ ನಿರ್ಮಾಣವಾಗುವುದೇ ಬದುಕು. ಅದು ಇದ್ದದ್ದು, ಇರುವುದು, ಮತ್ತು ಮುಂದುವರಿಯುವುದು ಹಾಗೆಯೇ. ಅದನ್ನು ಹೇಗಿದೆಯೋ ಹಾಗೆಯೇ ಒಪ್ಪಿಕೊಳ್ಳಬೇಕು. ಬದಲಾಯಿಸಬೇಕೆಂಬ ಆಗ್ರಹ ಆಸೆ ಎಲ್ಲರಿಗೂ ಇದ್ದರೂ ಯಾರೂ ಅದರಲ್ಲಿ ಸಫಲರಾಗರು. ಇದನ್ನು, ಯಾವ ಪಾತ್ರದ, ಸಂದರ್ಭದ ಹಿಂದೆಯೂ ತಾವು ನಿಲ್ಲದೆ, ಅವು ನಡೆದಂತೆ ನಡೆಸಿ ನಮ್ಮ ಮುಂದಿಡುತ್ತಾರೆ ಕಾದಂಬರಿಗಾರ್ತಿ. ಕೆಲವೊಂದು ನಾಟಕೀಯ ಘಟನೆ ಹೊರತಾಗಿಸಿದರೆ, ಮತ್ತೆಲ್ಲಿಯೂ ಲೇಖಕಿ ಸೂತ್ರಧಾರಿಯಾಗುವುದಿಲ್ಲ. 'ಬದುಕಿ'ನ ಎಲ್ಲ ತಿರುವುಗಳೂ ತಮ್ಮಷ್ಟಕ್ಕೆ ಘಟಿಸುತ್ತವೆ ಮತ್ತು ಪಾತ್ರಗಳು ತಮ್ಮ ಸ್ವಭಾವಕ್ಕನುಸಾರವಾಗಿ ಆ ಘಟನೆಗಳಿಗೆ ಪ್ರತಿಕ್ರಿಯಿಸುತ್ತಾರೆ. ಇಲ್ಲಿ ರೂಢ ಪಾತ್ರನಾದ ನಾಯಕನಿಲ್ಲ - ಖಳನಾಯಕನಿಲ್ಲ. ಆಯಾ ಪಾತ್ರದ ಒಳಿತು ಕೆಡುಕಿಗೆ ಅವರ ದೈವವೇ ಎಲ್ಲವೂ. ಖಂಡ ತಿಂದು, ಸಿಂದಿ ಕುಡಿದು, ಸುಖಕ್ಕೆ ಮಿಡಿದು, ದುಃಖಕ್ಕೆ ತುಡಿಯುವ ಎಲ್ಲ ಕೆಳಗೇರಿಯ ಜನಸಮುದಾಯ ತಮಗೆ ಏನು ಲಭ್ಯವಾಗುತ್ತದೋ ಅದನ್ನು ಒಪ್ಪಿಕೊಂಡು ಬದುಕುತ್ತಾರೆ. ಅನೇಕ ಮೂಢನಂಬಿಕೆಗಳನ್ನು ಒಪ್ಪದ ಲೇಖಕಿಯು, ತನ್ನ ಆಶಯವನ್ನು ಆರೋಗ್ಯಪೂರ್ಣ ನಿಯಂತ್ರಣದಲ್ಲಿರಿಸಿ ಪಾತ್ರ, ಸಂದರ್ಭದ ಮೇಲೆ ಹೇರದೆ ಸಹಜ ಗತಿಯನ್ನು ಸಾಧಿಸಿರುವುದು ಕಾದಂಬರಿಯ ಹೆಗ್ಗಳಿಕೆ. ಇದು ಕಾದಂಬರಿಯ ಮೌಲ್ಯವನ್ನು ಹಿರಿದಾಗಿಸುತ್ತದೆ. ಹಾಗೆ ನೋಡಿದರೆ ಈ ಕಾದಂಬರಿಗೆ ಒಂದು ಸಿದ್ಧ 'ಆಶಯ' ವಿಲ್ಲ. ಹೆಸರೇ ಹೇಳುವಂತೆ ಇದು ವಿಚಿತ್ರವೂ ವಿಸ್ತೃತವೂ ಚಲನಶೀಲವೂ ಸ್ಥಿತಿಸ್ಥಾಪಕವೂ ವಿಸ್ಮಯಕಾರಿಯೂ ಆದ ಬದುಕನ್ನು ಪ್ರಸ್ತುತಪಡಿಸುವ ರೀತಿ, ಅಷ್ಟೆ. ಆದುದರಿಂದಲೇ ಇದು ಯಾರೊಬ್ಬರ ಕಥೆಯೂ ಅಲ್ಲ, ಮತ್ತು ಅದೇ ಕಾಲಕ್ಕೆ ಎಲ್ಲರ ಕಥೆಯೂ ಹೌದು. ಕೆಳಗೇರಿಯ ಮಲ್ಲಪ್ಪ ಜಮೇದಾರನ ಕುಟುಂಬದ ಏರಿಳಿತದ ಗಾಥೆ, ಜಗತ್ತಿನ ಯಾವುದೇ ದೇಶ, ಭಾಷೆ, ಜಾತಿ, ಧರ್ಮಕ್ಕೆ ಸೇರಿದ ಕುಟುಂಬದ ಗಾಥೆಯೂ ಆಗಬಹುದು. ಏಕೆಂದರೆ ಎಲ್ಲ ಮನುಷ್ಯರ ಹಿಂದೆ ನಿಲ್ಲುವ ದೈವವೆಂಬುದು ಯಾವಾಗಲೂ ತನ್ನ ಹೊಟ್ಟೆಯಲ್ಲಿ ಕಿಡಿಗೇಡಿತನವನ್ನು ಅಡಗಿಸಿಕೊಂಡೇ ಇರುತ್ತದೆ. ಸಮಯ ನೋಡಿ ಬತ್ತಿ ಇಡಲು ಅದಕ್ಕೆ ಜಗತ್ತಿನ ಯಾವ ಮೂಲೆಯಾದರೂ ಅದೇ ಆನಂದ ! ಇಂತಹುದೊಂದು

ಸಾರ್ವಕಾಲಿಕ ಸತ್ಯವನ್ನು. ಯಾವ ತಂತ್ರದ ನಿರ್ಬಂಧಕ್ಕೂ ಒಳಗಾಗದೆ ನೇರವಾಗಿ ಸರಳವಾಗಿ ನಮ್ಮ ಮುಂದಿಟ್ಟಿದ್ದಾರೆ ಕಾದಂಬರಿಗಾರ್ತಿ.

ಕಾದಂಬರಿಯ ದೊಡ್ಡ 'ಆಸ್ತಿ' ಯೆಂದರೆ ಅದರ ಭಾಷೆ. ಹೈದರಾಬಾದ್ ಪ್ರದೇಶದ ಹಿಂದಿ, ಉರ್ದು, ಮರಾಠೀ ಮಿಲಾವತಿನ ಕನ್ನಡ– ಇದನ್ನು ಹದಗೊಂಡ ಕಣಕ. ಒಳ್ಳೆಯ ನಾದಿರುವ ಕಣಕವೊಂದು ಒದಗಿದೆ. ಹೋಳಿಗೆ ಮಾಡುವವರ ಅರ್ಧ ಪರಿಶ್ರಮ ಕಡಿಮೆಯಾಗಿ ಬಿಡುತ್ತದೆ. ಕಣಕ ಹದವಿರದೆ ಹಿಂಜಿಟ್ಟಾದರೆ ಹೂರಣ ಎಷ್ಟೇ ರುಚಿಯಿದ್ದರೂ ಇಡಿಯಾಗಿ ನಿಲ್ಲದೆ ತಡಿಪುಡಿಯಾಗುತ್ತದೆ. ಗೀತಾರವರು ತಮ್ಮ ಹದವಾದ ಹೂರಣಕ್ಕೆ ತಕ್ಕುದಾದ ಕಣಕವನ್ನು ನಾದಿ ಸಿದ್ಧಪಡಿಸಿಕೊಂಡಿದ್ದಾರೆ. ಕನ್ನಡದ ಎಲ್ಲ ಜಿಲ್ಲೆಗಳ ಜನ ಈ ಭಾಷಾ ಸೊಗಡು, ಅದರ ಒಡನಾಟದಿಂದುಂಟಾಗುವ ಬೆಡಗಿನ ಖುಷಿಗಾಗಿ 'ಬದುಕು' ಓದಲೇಬೇಕು. ನಮ್ಮದೇ ಮಾತಿನ ಇನ್ನೊಂದು ರೂಪದ ಸಹೋದರತೆಯನ್ನು ನಾವು ಕಂಡುಂಡು ನಲಿಯದ ಮೇಲೆ ಬೇರೆ ಬೇರೆ ಭಾಷಾವಿಭೇದಗಳ ಬಗ್ಗೆ ಚರ್ಚಿಸಿ ಏನು ಫಲ ?

ಹೈದರಾಬಾದ್ ಕರ್ನಾಟಕದ ಗ್ರಾಮೀಣ ಪ್ರದೇಶದ ಕೆಳಗೇರಿಯ ಬದುಕನ್ನು ಅತಿ ಹತ್ತಿರದಿಂದ ನೋಡಿರುವ ಅವರ ಅನುಭವ ಕಾದಂಬರಿಯನ್ನು 'ಹದಿ'ಯೊಂದಿಗೆ ಜೀವಂತಿಕೆಯಲ್ಲೂ ಅದ್ದಿ ತೆಗೆದಿದೆ. ಕಾದಂಬರಿಯುದ್ದಕ್ಕೂ ಏಳೆಂಟು ಸರ್ತಿ ಅವರು ವರ್ಣಿಸುವ ಸೂರ್ಯೋದಯ ಮತ್ತು ಅಸ್ತಮಾನಗಳು, ಅದೇ ದೃಶ್ಯವನ್ನು ತನ್ನ ಜೀವಿತದಲ್ಲಿ ಲೆಕ್ಕವಿರದಷ್ಟು ಸಾರ್ತಿ ನೋಡಿರಬಹುದಾದ ಓದುಗನಲ್ಲಿ ಹೊಸ ಕಲ್ಪನೆಯನ್ನು ಮೂಡಿಸುತ್ತವೆ. ಇದು ಅವರ ಅಭಿವ್ಯಕ್ತಿಯ ಶಕ್ತಿ.

ಕಾದಂಬರಿಯ ಕತೆ ಜರಗುವ ಕಾಲಮಾನದ ಬಗ್ಗೆ ಎಲ್ಲಿಯೂ ನಿರ್ದಿಷ್ಟ, ನಿಖರ ಸುಳಿವುಗಳಿಲ್ಲವಾದರೂ ಸಂದರ್ಭಾನುಸಾರ ಇದು ಸ್ವಾತಂತ್ರ್ಯಪೂರ್ವದ ಅವಧಿ ಎಂದು ಊಹಿಸಬಹುದು. ಇತ್ತೀಚೆಗೆ ಈ ಕಾಲಘಟ್ಟದ ಕ್ಯಾನ್‌ವಾಸಿನಲ್ಲಿ ಕಥೆ ಹೇಳುವ ಎಲ್ಲ ಬರಹಗಾರರು ಒಂದಲ್ಲ ಒಂದು ರೀತಿಯಲ್ಲಿ ಸ್ವಾತಂತ್ರ್ಯ ಆಂದೋಲನದ ರಾಜಕೀಯ ಸ್ಥಿತ್ಯಂತರಗಳನ್ನು ಕಥೆಗೆ ಎಳೆದು ತಂದು ಹೆಣೆಯುತ್ತಾರೆ. 'ಬದುಕು' ಆ ವಿಶೇಷ ಪ್ರಯತ್ನದಿಂದ ಲಕ್ಷಣವಾಗಿ ದೂರ ನಿಂತಿದೆ. ಅದರಿಂದಲೇ ಅದು ಕುಂಟದೆ, ಎಡವದೆ, ಸಲೀಸಾಗಿ ದಿಟ್ಟ ಹೆಜ್ಜೆಗಳ ಮೇಲೆ ನಡೆದು ಹೋಗುತ್ತದೆ.

ಸಾಮಾನ್ಯವಾಗಿ ಸಾಮಾನ್ಯರನ್ನು ಯಾವ ಚಳುವಳಿಗಳೂ ನೇರವಾಗಿ ತಟ್ಟುವುದಿಲ್ಲ. ಒಂದು ಕಡೆ ಚಳುವಳಿಗಳಾಗುತ್ತಿದ್ದರೆ, ಇನ್ನೊಂದು ಮೂಲೆ ಅದರ ಕಿಂಚಿತ್ತೂ ಅರಿವಿಲ್ಲದೆ ತನ್ನ ಪಾಡಿಗೆ ತಾನು 'ಸ್ವಸ್ಥ'ವಾಗಿರುತ್ತದೆ. ಚಳುವಳಿಯ ಪರಿಣಾಮ ಈ ಸಾಮಾನ್ಯರ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತದೆಯೇ ಹೊರತು, ಇದರಿಂದಲೇ ಹೀಗಾದದ್ದು ಎಂಬ ಸ್ಪಷ್ಟ ಅರಿಕೆ ಅವರಿಗೆ ಬರುವುದೇ ಇಲ್ಲ. ಗೀತಾ ಅವರು ಇದನ್ನು ಲಕ್ಷ್ಯಕ್ಕೆ ತಂದುಕೊಂಡಿದ್ದಾರೆಂದು ಅನ್ನಿಸುತ್ತದೆ.

ಒಂದು ಕುಟುಂಬದ ಕಥೆ ಹೇಳುತ್ತಲೇ, ಅದು ಜೀವಿಸುವ ಒಂದು ನಿರ್ದಿಷ್ಟ ಜನಸಮುದಾಯದ ಆಚಾರ-ವಿಚಾರ, ಉಣಿಸು-ತಿನಿಸು, ಕಾಮ-ಪ್ರೇಮ, ನಂಬಿಕೆ-ಒಳತೋಟಿ, ಕಟ್ಟು-ಕಡವುಗಳನ್ನು ಹಾಗೂ ಆ ಸಮುದಾಯದ್ದೇ ಆದ ಸಾಂಸ್ಕೃತಿಕ ಉತ್ಸವ, ಜಾತ್ರೆ-ತೇರು, ಹಬ್ಬ-ಹರಿದಿನಗಳನ್ನು ಬಿಚ್ಚಿಡುತ್ತ ಹೋಗುವುದು ಜಾಗತಿಕ ಕಾದಂಬರಿಕಾರರೆಲ್ಲರೂ ಅನುಸರಿಸಿರುವ ವಿಧಾನ. ಈ ಕಾದಂಬರಿಯಲ್ಲಿಯೂ ಇಂಥ ಅನೇಕ ದಟ್ಟ ವಿವರಗಳಿವೆ. ಈ ವಿವರಗಳನ್ನು ಮಂಡಿಸುವಾಗ ಲೇಖಕಿಯು ನೇರವಾಗಿ ಅವುಗಳೊಳಗೆ ಸೇರಿ ಹೋಗುವ ತನ್ಮಯತೆಯೂ ಇದೆ.

ತನ್ನಷ್ಟಕ್ಕೆ ತಾನೇ, ತನ್ನ ಹರಿಯುವ ಸೊಬಗಿನಿಂದಲೇ ಮನ ಸೆಳೆಯುತ್ತ ಹೊಳೆಗೆ ಅಲ್ಲಲ್ಲಿ ಮಾನವನಿರ್ಮಿತ ಸ್ನಾನಘಟ್ಟಗಳಿಂದ ಯಾವ ನೆರವೂ ಇಲ್ಲ. ಹಂಗೂ ಇಲ್ಲ. ಹೊಳೆಯ ಹೊಟ್ಟೆಯಿಂದಲೇ ಎದ್ದು ನಿಲ್ಲುವ ಕರಿಬಂಡೆಗಳಿಂದ ಅದರ ರೂಪ, ರಮಣೀಯತೆ ಇನ್ನಷ್ಟು ಕಂಗೊಳಿಸುತ್ತದೆ. ಇಷ್ಟಾದರೂ ಹೊಳೆ ಈ ಬಂಡೆಗಳನ್ನೇನೂ ತನ್ನೊಂದಿಗೆ ಒಯ್ಯುವ ಮರ್ಜಿ ಹಿಡಿಯುವುದಿಲ್ಲ. ಅದರ ಪಾಡು ಅದರದ್ದು. ತನ್ನೊಳಗೆ ಎದ್ದು ನಿಲ್ಲುವ ಬಂಡೆಗಳನ್ನೇ ಅದು ನಿರ್ಲಕ್ಷಿಸಿ ಹರಿಯುತ್ತದೆಂದ ಮೇಲೆ ಕೃತಕ ಸ್ನಾನಘಟ್ಟಗಳ ಕೊಡುಗೆ ಏನು ? ಮನುಷ್ಯನಿಗೆ ಹೊಳೆ ಹತ್ತಿರವಾಗಲು ಅದರ ಸೋಪಾನಗಳು ನೆರವು ನೀಡಬಹುದು ಅಷ್ಟೆ. ಅವು ಇದ್ದರೂ ಇರದಿದ್ದರೂ ಹೊಳೆಗೆ ಭಾದಕವೇನಿಲ್ಲ.

ಒಟ್ಟಾರೆಯಾಗಿ ತಮ್ಮ ಮಾಗಿದ ಜೀವನಾನುಭವ, ಹೃದಯವಂತಿಕೆ, ವ್ಯಕ್ತಿಹೃದಯಗಳೊಳಗೆ ಇಳಿದು ನೋಡುವ ಲವಲವಿಕೆ, ಕೊಂಕಿಲ್ಲದ ದೃಷ್ಟಿಕೋನ, ಅಭಿವ್ಯಕ್ತಿ ಪ್ರೌಢಿಮೆಗಳಿಂದ ಗೀತಾ ನಾಗಭೂಷಣರು ಕನ್ನಡಕ್ಕೆ ‘ಬದುಕು’ ಎಂಥ ಒಳ್ಳೆಯ ಕಾದಂಬರಿ ನೀಡಿದ್ದಾರೆ.

ಮುಖ್ಯ ಪಾತ್ರಗಳ ಸಮಸಮಕ್ಕೂ ನಿಂತು ಕಾದಂಬರಿಯ ನಾಲ್ಕು ತಲೆಮಾರಿಗೂ ಕೊಂಡಿಯಾಗುಳಿಯುವ ನಾಗವ್ವಾಯಿ, ಈರವ್ವ, ಪತರೂ, ಹಾಲಪ್ಪ, ಸಾಬಣ್ಣ ಮುಂತಾದ ಜೀವಸೆಲೆ ಉಕ್ಕುವ ಪಾತ್ರಗಳನ್ನು ಸೃಷ್ಟಿಸಿ ಅವುಗಳನ್ನು ಗಟ್ಟಿ ಎಳೆಯೊಂದರಲ್ಲಿ ಬಂಧಿಸಿ ಪ್ರಸ್ತುತಪಡಿಸುವ ಅವರ ಕುಶಲ ಕಲೆಗಾರಿಕೆ ಮೆಚ್ಚುವಂಥದ್ದು.

● ▼

ಲಲಿತಾ ಸಿದ್ದಬಸವಯ್ಯ, ಗುರುಸನ್ನಿಧಿ, ನಂ. ೫೨೧೭, ೨ ನೆಯ ತಿರುವು, ಅಶೋಕನಗರ, ತುಮಕೂರು - ೫೭೨ ೧೦೩, ✆ : ೦೮೧೬ - ೨೭೫೨೫

ಮಾತಾಡುವ ಮರ

ಹರಿಯಪ್ಪ ಪೇಜಾವರ

ವಿಶೇಷ ಚಿಂತನೆ

ರಾಮಚಂದ್ರದೇವ ಬರೆದದ್ದು ಕಮ್ಮಿ, ಸಾಧಿಸಿದ್ದು ಹೆಚ್ಚು. ಗದ್ಯಪದ್ಯಗಳೆರಡರಲ್ಲೂ ಅವರ ಈ ನಾಲ್ಕು ದಶಕಗಳಲ್ಲಿ ಸಾಧನೆ ಮೇಲ್ಮಟ್ಟದ್ದು. ೨೦೦೩ ನೇ ಇಸವಿಯಲ್ಲಿ ಪ್ರಕಟವಾದ **ಮಾತಾಡುವ ಮರ** ಸಂಕಲನದಲ್ಲಿ ದೇವ ಇಲ್ಲಿಯ ವರೆಗೆ ಬರೆದ ಒಟ್ಟು ಮೂವತ್ತೆರಡು ಕವಿತೆಗಳಿವೆ. ‘ಮಾತಾಡುವ ಮರ’ ಶೀರ್ಷಿಕೆಯ ಕವಿತೆಯೇ ಸಂಕಲನದ ಅತಿ ದೀರ್ಘ ಕವಿತೆಯಾಗಿದ್ದು ಇದು ದೇವ ಅವರ ಒಂದು ಮಹತ್ವಾಕಾಂಕ್ಷೀ ಪ್ರಯತ್ನವಾಗಿದೆ. ಒಟ್ಟು ನಲವತ್ತೊಂದು ಪುಟಗಳ ಈ ಕವಿತೆ ಎಪಿಕ್ ಮಾದರಿಯದಾಗಿದ್ದು ಅದು ಜಾಗತೀಕರಣ/ಉದಾರೀಕರಣ ಹಾಗೂ ಅದರ ಫಲವಾದ ನವವಸಾಹತೀಕರಣದ ಹಿನ್ನೆಲೆಯಲ್ಲಿ ಭಾರತದ ರಾಜಕೀಯ/ ಸಾಮಾಜಿಕ/ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳ– ಮೌಲ್ಯಗಳು ತಲೆ ಕೆಳಗಾದ ಪರಿಸ್ಥಿತಿಯನ್ನು ಒಂದೇ ಬೀಸಿನಲ್ಲಿ ಹಿಡಿಯಲು ಪ್ರಯತ್ನಿಸುತ್ತದೆ.

ಒಟ್ಟು ಎಂಟು ಭಾಗಗಳಲ್ಲಿ ಹರಿಯುವ ಈ ನೀಳ್ಗವಿತೆಯಲ್ಲಿ ಒಂದು ಸುಸಂಬದ್ಧ ಕಥನ ಕ್ರಿಯೆಯಿದೆ. ಇದು ಅಡಿಗ ಎಲಿಯಟ್ ಮಾದರಿಯದಲ್ಲ. ಪ್ರತಿಮೆ ಸಂಕೇತಗಳೇ ಮುಖ್ಯವಾಗುವ ಅಡಿಗ ಎಲಿಯಟ್ ಮಾದರಿಗಿಂತ ಕಥೆಯೇ ಮುಖ್ಯವಾಗುವ ದೇವ ಅವರ ಮಾದರಿ ಬೇರೆ. ಇಡೀ ಕವಿತೆಯೇ ಒಂದು ಮೆಟಫರ್ ಆಗುವ ಬಗೆಯಲ್ಲಿ ಇದು ಹಾಪ್‌ಕಿನ್ಸ್‌ನ ಬರವಣಿಗೆಯ ಮಾದರಿಯನ್ನು ನೆನಪಿಸುತ್ತದೆ. ಕವಿತೆಯ ಶಿಲ್ಪ ನವ್ಯದ ಮಾದರಿಯನ್ನು ಹೋಲುತ್ತದೆಯಾದರೂ

ಬೇರೆ ಆಗಿಗ ವಿಡಂಬಿಸುತ್ತಿರುವ ರೀತಿ ಹೊಸ ಆಕೃತಿಗೆ ಪ್ರಯತ್ನಿಸುತ್ತಿರುವುದು ಇಲ್ಲಿ ಸ್ಪಷ್ಟವಾಗುತ್ತದೆ.

ಅರಸೊತ್ತಿಗೆಯಿಂದ ಬಿಡುಗಡೆ ಪಡೆದ್ದಿನ ಆಧುನಿಕ ಪ್ರಭುತ್ವದ ವರೆಗಿನ ಭಾರತದ (ಹಾಗೇ ಮೂರನೇ ಜಗತ್ತಿನ) ಬದುಕಿನಲ್ಲಾಗುವ ಮೌಲ್ಯ ಪಲ್ಲಟವನ್ನು ಈ ಕವಿತೆ ವಸ್ತುವಿಗೆ ತಕ್ಕ ಶೈಲಿ, ಭಾಷೆಯಲ್ಲಿ ಯಶಸ್ವಿಯಾಗಿ ಹಿಡಿದಿಡುತ್ತದೆ. ರಾಜಪ್ರಭುತ್ವದಲ್ಲಾಗಲಿ ಆಧುನಿಕ ಪ್ರಜಾಪ್ರಭುತ್ವದ ಯುಗದಲ್ಲಾಗಲೀ ವ್ಯಕ್ತಿಗೆ ಯಾವತ್ತೂ ಸ್ವಾತಂತ್ರ್ಯ ಇರಲಿಲ್ಲ ಮತ್ತು ಇಲ್ಲ. ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ದೈವಗಳ ಬಂಧಿ ಆತ. (ಮೊದಲಿಗೆ ತನ್ನದೇ ದೈವ. ನಂತರದ ಬ್ರಿಟಿಷ್, ಈಗಿನ ಅಮೆರಿಕನ್ ದೈವ– ಹೀಗೆ) ಬ್ರಿಟಿಷರ ಯುಗದಲ್ಲಿ ಅವರ ಕೈ ಕೆಳಗೆ ಆತ ಮಾಂಡಲಿಕನಾಗಬೇಕಾಗಿ ಬಂದರೆ ಆಧುನಿಕ ಕಾಲದಲ್ಲಿ ಆತ ನವವಸಾಹತೀಕರಣದ ಫಲವಾಗಿ ಅಮೆರಿಕನ್ ಸಂಸ್ಕೃತಿಯ ಕೈಗೊಂಬೆಯಾಗುತ್ತಾನೆ. ನಿಯೋ ಕಲೋನೈಸೇಷನ್ ಭಾರತೀಯವಾದದ್ದನ್ನೆಲ್ಲ ಮುಕ್ಕ ತಿನ್ನುತ್ತದೆ. ಅರಮನೆ ರೆಸಾರ್ಟ್ ಆಗುತ್ತದೆ. 'ಸ್ವಾಮಿಭೋಗದ ಪಕ್ಷಿ' ರೆಸಾರ್ಟ್‌ನಲ್ಲಿ ರಿಸೆಪ್ಷನಿಸ್ಟ್ ಆಗುತ್ತಾಳೆ. ಊರ ಹುಡುಗ ಹುಡುಗಿಯರು ಬಾರ್ ಮೇಡ್/ವೇಟರ್ಸ್ ಆಗುತ್ತಾರೆ. "ಅಮೇರಿಕ ಬುದ್ಧಿ. ಕೆಲಸಕ್ಕೇಂತ ತಗೊಂಡ ಮೇಲೆ/ಏನಕ್ಕೆ ಬಳಸ್ತಾರೆ ಯಾರಿಗ್ಗೊತ್ತು/ಮರ್‍ಯಾದೆ ಇಲ್ಲ, ಮಾನ ಇಲ್ಲ, ಮದುವೆ ಆಗಲ್ಲ ಯಾರೂ/ಗಂಡು ಬರಲ್ಲ" (ಪು. ೧೦೯) ಎಂದು ಗೊತ್ತಿದ್ದೂ "ರಿಸಾರ್ಟಲ್ಲಿ ಕೆಲಸ ಪಡೆದ್ರೆ /ದುಡ್ಡು ಆದ್ರೂ ಜಾಸ್ತಿ ಬಂದು/ಆಸೆ ಆದ್ರೂ ಚೂರು ತೀರಿ" –(ಪು. ೧೦೯) ಎಂದೆಲ್ಲ ನಿರೀಕ್ಷೆ ಅವರದು. ಕವಿಗಳು ಆರ್ಕೆಸ್ಟ್ರಾದಲ್ಲಿ ಹಾಡಿ ಬದುಕುವ ದೀನ ಸ್ಥಿತಿಗಿಳಿಯುತ್ತಾರೆ. ನೇಟಿವ್ ಡಾಕ್ಟರ್ಸ್ ಅಮೇರಿಕನ್ ಡಾಕ್ಟರರ ಪ್ರಿಸ್ಕ್ರಿಪ್ಷನ್ ಟ್ರಾನ್ಸ್‌ಕ್ರೈಬ್ ಮಾಡುವ ಸ್ಥಿತಿಗಿಳಿಯುತ್ತಾರೆ. ವಿಶ್ವವಿದ್ಯಾನಿಲಯದ ವೀಸಿ ಟ್ಯುಟೋರಿಯಲ್ ಕಾಲೇಜಿನ ಪ್ರಾಂಶುಪಾಲರಾಗುವ ಮಟ್ಟಕ್ಕೆ ಇಳಿಯುತ್ತಾರೆ. ಪ್ರೊಫೆಸರ್‌ಗಳು– "ವೈಟ್‌ಮೇನ್ಸ್ ಬರ್ಡನ್ನು ಮುಗಿದಿಲ್ಲ ಇನ್ನೂನು/ಅದ್ದರಿಂದಲೇ ಇಂಥ ರಿಸಾರ್ಟ್ ಇರಬೇಕು/ಅಮೆರಿಕನ್ನೂ ಬೇಕು/" (ಪು. ೧೩೦) ಎಂಬ ಸೈದ್ಧಾನುಸಂಧಾನಕ್ಕೆ ಇಳಿಯುತ್ತಾರೆ. ಕಲೆ, ಸಾಹಿತ್ಯ, ಪ್ರೀತಿ, ಪ್ರೇಮ, ಧಾರ್ಮಿಕ ಕ್ರಿಯೆಗಳು ವಾಣಿಜ್ಯೀಕರಣಗೊಳ್ಳುತ್ತವೆ. ಕಲೆ ಅಪಮೌಲ್ಯಗೊಳ್ಳುತ್ತದೆ. (ವಿದ್ಯುಚ್ಚೋರ ಕಾರ್ತೀಕರಲಿಂದ ಸಿನಿಮಾ ತೆಗೆದ ನಿರ್ದೇಶಕನನ್ನು ಕೇಳುವವರಿಲ್ಲದೆ ಆತ ಎಕ್ಸ್‌ಟ್ರಾ ನಟನಾಗಬೇಕಾಗುತ್ತದೆ.) ಗಂಡನ ಬಲವನ್ನು ಹಣ ಮಾಡುವುದಕ್ಕೆ ದುರುಪಯೋಗಪಡಿಸುವ ಹೆಂಡತಿಯರು, ಅನ್ಯರ ಐಡಿಯಾವನ್ನು ಕ್ಯಾಪಿಟಲೈಸ್ ಮಾಡಿ ಯಶಸ್ಸು ಗಳಿಸಲೆತ್ನಿಸುವ ಗವರ್ನರ್‌ನಂಥವರು ಹುಟ್ಟಿಕೊಳ್ಳುತ್ತಾರೆ : "ಇಂಥಾ ಜಾಗದಲ್ಲಿ ಇಷ್ಟು ಚೆನ್ನಾಗಿ ಮಾತಾಡೋರು/ಸಿಗ್ತಾರೆ ಅನ್ನೋದು ಗೊತ್ತೇ ಇರಲಿಲ್ಲ/ನೀ ಹೇಳಿದ ಆ ಪಕ್ಷಿ ವಿಷಯ/ಪಬ್ಲಿಕ್ ಸ್ಪೀಚಲ್ಲಿ ಹೇಳಿದೆ ಅಂದರೆ ಚಪ್ಪಾಳೆ ಎಲ್ಲಾ ನನಗೇ ಸಿಗುತ್ತೆ/ತಗೋ– ಇಂಥಾ ಮಾತಿಗೆ/ಹಚ್ಚೇ ಇರಲಿ ಹತ್ರುಪಾಯಿ ನಿನಗೆ" (ಪು. ೧೨೭) ಎಂದು ಗವರ್ನರ್ ವೇಶ್ಯಾವಾಟಿಕೆಯಲ್ಲಿ ಬಲಿಯಾಗುವ ನಿಸ್ಸಹಾಯಕ ಹುಡುಗಿಗೆ ಹೇಳುತ್ತಾನೆ. ನೇಟಿವ್ ಧರ್ಮದ ರಿಚುಯಲ್‌ಗಳು ಕೂಡಾ ಜನರ ಮನಸ್ಸನ್ನು ಗೆಲ್ಲುವ ಮೂಲಕ ಹಣ ಗಳಿಕೆಯ ಉಪಾಯವಾಗಿ ಬಳಸುತ್ತವೆ : "ಅದನ್ನೂ ಮಾಡಿದರೆ ಹೌಸ್ ವಾರ್ಮಿಂಗ್ ಸೆರಮನಿಯ/ಜನಕ್ಕೆ ಇವ ಆದರೂ ಹೊರಗಿನವ ಪರಂಪರೆಯ/ಮರೆತಿಲ್ಲ ಎನಿಸುವುದು ಹೆಚ್ಚುವುದು ಬಿಜಿನೆಸ್ಸು" (ಪು. ೧೩೪). ಒಂದೇ ಸಂಸ್ಕೃತಿ, ಒಂದೇ ಭಾಷೆಯನ್ನು ಹೇರುವ ಮೂಲಕ ವೈವಿಧ್ಯತೆಯನ್ನು ನಾಶಮಾಡುವ ಪ್ರಯತ್ನ ನಡೆಯುತ್ತದೆ : "ಯುವರ್ ಎಟೆನ್ಷನ್ ಪ್ಲೀಸ್-/ಅಮೆರಿಕಾ ಪ್ರಜೆ ಮೇರಿ ಕೆರಡನ್ ಈಗ/ಜಗತ್ತಿನಾದ್ಯಂತ ಒಂದೇ ಭಾಷೆ ಒಂದೇ ಕಲ್ಚರ್ ಒಂದೇ ಸರಕಾರ/ಇರೋ ಅಗತ್ಯದ ಬಗ್ಗೆ ಭಾಷಣ ಮಾಡ್ತಾರೇ-" (ಪು. ೧೩೬-೧೩೭). ಅಹಿಂಸೆ, ಸರಳತೆಯ

ಎದುರು ಅಧಿಕಾರ, ವೈಭವದ ಮೆರವಣಿಗೆ ನಡೆಯುತ್ತದೆ : "ಯುವರ್ ಎಟೆನ್ಶನ್ ಪ್ಲೀಸ್-/ನೌ ಯು ಸೀ ಮಹಾತ್ಮಾ ಗಾಂಧಿ ಸ್ಟೇಂಡಿಂಗ್ STILL ಲೈಕ್ ಎ ಸ್ಟ್ಯಾಚ್ಯೂ/ವೈಲ್ ಬ್ಲಿಸ್ ಕ್ಲಿಂಟನ್ ಪಾಸಸ್ ಬೈ-" (ಪ್ರ. ೧೨೭). ರಾಜಕಾರಣ ಭ್ರಷ್ಟವಾಗಿದೆ. ಅದರ ಜತೆ ಅಧಿಕಾರಶಾಹಿಯ ಅಪವಿತ್ರ ಮೈತ್ರಿಯಿದೆ. ರಾಜಕಾರಣದ ಜತೆ ಶಾಮೀಲಾಗುವವರಾದರೂ ಎಂಥವರು ? ದಂತಚೋರ, ಸುಪಾರಿಕೊಲೆ ಕನ್ಸಲ್ಟೆನ್ಸಿ ಎಕ್ಸ್‌ಪರ್ಟ್, ಕ್ರೈಂ ಪತ್ರಿಕೆಯ ಎಡಿಟರ್ ಮತ್ತು ಡಾನ್, ಅಂಡರ್‌ಗ್ರೌಂಡ್ ಡಾನು ಮತ್ತು ಸೂಳೆಯರ ಸಪ್ಲೈ ಮಾಡುವ ಕಂಟ್ರಾಕ್ಟರ್‌ಗಳು. ಇಂಥ ಪರಿಸ್ಥಿತಿಯಲ್ಲಿ "ಜಡ್ಜು ಯಾರು ಕಳ್ಳ ಯಾರು/ಮುಗ್ಧ ಯಾರು ಪಾಪಿ ಯಾರು/ಮುಖ ಎಲ್ಲಿ ಮುಖವಾಡ ಎಲ್ಲಿ" (ಪ್ರ. ೧೨೫) – ಒಂದೂ ತಿಳಿಯುವುದಿಲ್ಲ. ನಿರುದ್ಯೋಗ ಹೆಚ್ಚುತ್ತದೆ. ಆರ್ಥಿಕ ದುಃಸ್ಥಿತಿಯಿಂದ ಮದುವೆಯಾಗಲಾರದ, ಮಕ್ಕಳನ್ನು ಹೆರಲಾಗದ ಸ್ಥಿತಿ ಬಂದು ಮದುವೆ ಎಂಬ ಸಂಸ್ಥೆಯೇ ಮುರಿದುಬೀಳುತ್ತದೆ. ವಿಷಮ ದಾಂಪತ್ಯ ಕಾಲಿಡುತ್ತದೆ. ಸಾಂಸಾರಿಕವಾದ ಸಹಜ ಸಂಬಂಧಗಳೂ ತೊಂದರೆಗೆ ಒಳಗಾಗುತ್ತವೆ. ಮಗಳನ್ನೇ ಮದುವೆಯಾಗುವ ತಂದೆ (ಪರಿಕಲ), ಅಧಿಕಾರ ಹಾಗೂ ಸಂಪತ್ತಿನ ಆಸೆಗೆ ಹಾಗೆ ಮದುವೆಯಾಗಲು ಹಿಂಜರಿಯದ ಮಗಳು (ಕೃತ್ತಿಕೆ)– ಹೀಗೆ ಎಲ್ಲೆಲ್ಲೂ ಬದುಕು ಲಯ ತಪ್ಪತೊಡಗುತ್ತದೆ. (ಈ ರೀತಿಯ ಸಂಬಂಧದಿಂದ ನಾಡಿಗೇ ಬರ ಬರುವ ದೃಶ್ಯ ಈಡಿಪಸ್ ನಾಟಕದಲ್ಲಿದೆ). ಇಲ್ಲೂ ಅಷ್ಟೇ : "ಬತ್ತಿದೆ/ಬುಡದಲ್ಲೇ ನದಿ" (ಪ್ರ. ೧೩೭). ಹೀಗಾಗಿ "ಉರಿಯುತ್ತುಂಟು ದೇಹ ಮನಸ್ಸು ನೀರು ನೀರು ನೀರು ಬರಲಿ.../...ಇಳಿದು ಬರಲಿ ಇಳಿದು ಬರಲಿ ಗಂಗೆ ಸುರಿದು ಸುರಿದು ಬರಲಿ" (ಪ್ರ. ೧೧೮) ಎಂದು ಜೀವ ಉತ್ಕಟವಾಗಿ ಜೀವಜಲಕ್ಕಾಗಿ ಕಾತರಿಸುತ್ತದೆ. ಆದರೆ ಲಯ ತಪ್ಪಿದ ಬದುಕನ್ನು ಲಯಪೂರ್ಣವಾಗಿಸುವುದು ಹೇಗೆ ?" ಬರಡು ಬದುಕಿಗೆ ಜೀವಜಲ ಹರಿಸುವ ಉಪಾಯ ಯಾವುದು ? ಆಧುನಿಕ ಕಾರ್ತಿಕನಿಗೆ ತಿಳಿಯುವುದಿಲ್ಲ. ಯಾಕೆಂದರೆ "ನಾಡಲ್ಲಿ ಹುಲಿ ಕರಡಿ ತುಂಬಿವೆ ಎಂದು/ಉತ್ತಮರು ಭೂಗತ"ರಾಗಿದ್ದಾರೆ. (ಪ್ರ. ೧೪೪). (ಈ ಹುಲಿ ಕರಡಿಗಳಾದರೂ ಯಾರು ? ಮಾತಾಡುವ ಮರವನ್ನು ಮಾತಾಡಿಸಲೆಂದು ರಾಜ ಕಾಡು ಕಡಿದಾಗ ಹೊರಬಂದು ನಾಡು ಸೇರಿದವುಗಳು ಅವುಗಳು. ಕೃಷ್ಣ ಹಾಗೂ ಅರ್ಜುನ ಇಂದ್ರಪ್ರಸ್ಥದ ನಿರ್ಮಾಣಕ್ಕೆ ಕಾಡು ಕಡಿದಾಗ ನಾಡು ಸೇರಿದ ಮೃಗಗಳು ಇವು. ಆಧುನಿಕ ಯುಗದಲ್ಲಿ ಮನುಷ್ಯ ರೂಪದಲ್ಲಿ ಹುಲಿಕರಡಿಗಳಿವೆ ಅಷ್ಟೆ.) ಮರೆತುಹೋದ ಪರಂಪರೆಗಳನ್ನು ಪ್ರಾರಂಭಿಸಿ ಹೊಸ ನಾಗರಿಕತೆ ಚಿಗುರಿಸಬೇಕು ಎಂದು (ಪ್ರ. ೧೪೩) ಹೇಗೆ ಮುಂದುವರಿಯಬೇಕೆಂದು ಕೇಳಲು ಈ ಉತ್ತಮರನ್ನು ಹುಡುಕಿಹೊರಟರೆ ಅವರಲ್ಲಿ "ಇಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು;/ಮೂವರು ಪೊಲೀಸ್ ವಿಚಾರಣೆ ಸಮಯ ಸತ್ತಿದ್ದರು;" ಇನ್ನೊಬ್ಬನಿಗೆ ಹುಚ್ಚು ಹಿಡಿದಿತ್ತು. (ಪ್ರ. ೧೪೩). (ಇಲ್ಲಿ ಆಧುನಿಕ ಭಾರತದ ರಾಜಕೀಯ ಹಾಗೂ ನ್ಯಾಯವ್ಯವಸ್ಥೆಯ ನೆನಪಾಗುತ್ತದೆಯಷ್ಟೆ ?) ಋಷಿಧರ್ಮವೂ ಅವನಿಗೆ ಮಾರ್ಗದರ್ಶನ ಮಾಡುವುದಕ್ಕೆ ವಿಫಲವಾಗುತ್ತದೆ. ಯಾಕೆಂದರೆ ಅದರ ಪ್ರತಿನಿಧಿಗಳೆಲ್ಲ ಶಬ್ದ ಸೂತಕದಿಂದ ಬಳಲುತ್ತಿರುವವರು. ಮಾತು-ಯೋಚನೆ ನಡುವೆ ಅಂತರ ಉಳಿಸಿದವರು "ಉತ್ತಮ"ರಲ್ಲಿ ಒಬ್ಬನಾದ ಭಟಾರ "ನೀವು ನನ್ನನ್ನು ಬೇರೆ ಯಾರೋ ಎಂದು ತಿಳಿದಿದ್ದೀರಿ;/ನಾನು ಬರೀ ಓದುತ್ತ ಬರೆಯುತ್ತ ಇರುವವನು;/ತಾವು ಗೌರವಾನ್ವಿತರು; ದೇವಾಂಶಸಂಭೂತರು;/ ನನ್ನ ಆತಿಥ್ಯ ಸ್ವೀಕರಿಸಬೇಕು;/ಇತ್ತ ಪಾದ ಬೆಳೆಸಿ, ದಯವಿಟ್ಟು/ಎಂದು ವಿನಯ ತೋರಿಸಿದ" (ಪ್ರ. ೧೪೪). "..ಮತ್ತೊಬ್ಬ/ಯುವರಾಜರು ಮುಂದೆ ರಾಜರಾದಾಗ/ಅಧಿಕಾರ ತತ್ತ್ವಜ್ಞಾನ ಸಂಗಮಿಸಿ ಧರ್ಮಸ್ಥಾಪನೆ ಆಗುತ್ತದೆ ಎಂದ" (ಪ್ರ. ೧೪೩). ಆಗ ಆಧುನಿಕ ಮನುಷ್ಯ ಉತ್ತರಕ್ಕಾಗಿ ತನ್ನೊಳಗೆ ತಾನೇ ತಿರುಗಬೇಕಾಗುತ್ತದೆ. ಉತ್ತರ ಹೊಳೆಯುತ್ತದೆ : "ಒಂದು ಗಿಡ ನೆಟ್ಟು/ಅಥವಾ ಅನಾಥಾಶ್ರಮದ ಮಕ್ಕಳನ್ನು ಬೆಳೆಸಿ/ಅಥವಾ

ಪ್ರೇಮಿಗಳಿಗೆ ಸಂಸಾರ ನಡೆಸಲು ನೆರವು ನೀಡಿ/ಮೃತ್ಯುವನ್ನು ಹುಟ್ಟುವನ್ನು ಅಟ್ಟಿ ತಳ್ಳಬಹುದು" (ಪು. ೧೪೨). ನಾಗರಿಕತೆಯ ನಿಸ್ವಾರ್ಥ ಪ್ರೀತಿಯಿಂದ ಮಾತ್ರ ಸಾಧ್ಯ ಎಂದು ಕಾರ್ತಿಕನಿಗೆ ಅರಿವಾಗುತ್ತದೆ. ಇದು ಕಾರ್ತಿಕ ನರಬಲಿ ಕೊಡಲು ತಂದ ಮಗುವನ್ನು ಬೇಟಾರಿಯಿಂದ ತಪ್ಪಿಸಿ ಅದರ ಜೀವ ಉಳಿಸಲು ಪ್ರಯತ್ನಿಸುವಲ್ಲಿ ಸ್ಪಷ್ಟವಾಗುತ್ತದೆ. "ಜಗತ್ತಿನಾದ್ಯಂತ ವ್ಯಾಪಿಸಿದೆ ಎಂದ ಅವನ ಬಲೆಯೊಳಗೇ ತಾನಿನ್ನೂ ಇದ್ದೇನೆಯೇ ? ಅವನು ಬೇರೆ ಬೇರೆ ವೇಷಗಳಲ್ಲಿ ಎಲ್ಲಾ ಕಡೆ ಪಟ್ಟಿದ್ದಾರೆ ಎಂಬುವರ ಕೈಗೇ ತಾನೂ ಮಗುವೂ ಸಿಕ್ಕಿಬೀಳುತ್ತೇವೆಯೇ ?" (ಪು. ೧೪೭) ಎನ್ನುವ ಪ್ರಶ್ನೆಗಳ ಮಧ್ಯೆಯೂ ಕಾರ್ತಿಕನಿಗೆ ಪ್ರಮುಖವಾಗಿ ಕಂಡದ್ದು ಮೊದಲು ಮಗುವನ್ನು ಸುರಕ್ಷಿತ ಜಾಗಕ್ಕೆ ಸೇರಿಸಬೇಕು ಹಾಗೂ ಅದಕ್ಕೆ ತಿನ್ನಲು ಕುಡಿಯಲು ಏನಾದರೂ ಕೊಡಬೇಕು ಎಂಬ ಯೋಚನೆ ಮಾತ್ರ (ಪು. ೧೪೭). "ಓಡುತ್ತಾ ತಿರುಗುತ್ತ ತಿರುಗುತ್ತ ತಿರುಗುತ್ತಲೇ ಇರುವ ರಸ್ತೆಗಳಲ್ಲಿ"– (ಈ ಸಾಲು ಸಮಸ್ಯೆಗೆ ಸುಲಭ ಪರಿಹಾರ ಇಲ್ಲ ಎನ್ನುವುದನ್ನು ಸೂಚಿಸುತ್ತದೆ) ಓಡುತ್ತ ಮಗುವನ್ನು ಉಳಿಸುವ ಪ್ರಯತ್ನ ತೀರಾ ಅಸಂಗತ ಆಗಿದ್ದರೂ ಪ್ರಯತ್ನ ಮುಖ್ಯವಲ್ಲವೆ ? ಕೆಲವೊಮ್ಮೆ ಗುಡುಗಿಯೂ ಮಳೆ ಬಾರದೇ ಇರಬಹುದು. ಹಾಗಂತ ಸುಮ್ಮನಿರಲಾಗುತ್ತದೆಯೇ ? ಅದಕ್ಕೆಂದೇ "ಬಂದೀತು ಮಳೆ ಎಂದೆ/ತಯ್ಯಾರಿ ಮಾಡುವುದು/ಎತ್ತೊ ಬಿತ್ತೊ" (ಪು. ೧೪೭-೧೪೮), "ಪದಗಳು/ಸೋತರು ಬಾತರು.../ಹೀಳುತ್ತ ಮುರಿಯುತ್ತ/ಬಳಸುತ್ತ ಅವನೇ/ಪದಗಳ ಪುನರಪಿ/ಮತ್ತೊಮ್ಮೆ ಮಗುದೊಮ್ಮೆ" (ಪು. ೧೪೮). "ಮುಚ್ಚಿದೆ ಬಾಯಿ/ಮತ್ತೊಂದು ಧರ್ಮವೋ/ಮಗುದೊಂದು ಧರ್ಮವೋ ಹೇಳಿಂದು ಬಿಟ್ಟರೆ/ಏನಿದೆ ಮಾರ್ಗ ?" (ಪು. ೧೪೭). ಬಿಟ್ಟಿನಲ್ಲಿ ಪ್ರಯತ್ನ ಮುಖ್ಯ ಎಂದು ಕಾರ್ತಿಕನಿಗೆ ಅನಿಸುತ್ತದೆ. ಆಗ ಜೀವಜಲ ಸುರಿದು ಬದುಕನ್ನು ಸಂಪನ್ನವಾಗಿಸಬಹುದು. ಅಥವಾ ಅದೇ ಜೀವಜಲ ಎಲ್ಲವನ್ನೂ ಮುಳುಗಿಸುವ ಪ್ರಳಯವೂ ಆಗಬಹುದು : "ಘರ್ಜಿಸಿ ದ ದ ದ ಎಂದು/ಹೊಡೆಯಿತೆ ಯುದ್ಧಕ್ಕೆ ಇಳಿ ಬರಿ ಮೋಡ" (ಪು. ೧೪೮). ಅಂಥ ನಾಶದಲ್ಲೇ ಹೊಸ ಸೃಷ್ಟಿಯ ಬೀಜವೂ ಅಡಗಿರಬಹುದು. ಇಲ್ಲಿ ಎಲಿಯಟ್ ಕಾಣದೆ ಬಿಟ್ಟ ದದದ ಬಗೆಗಿನ ಹೊಸ ವ್ಯಾಖ್ಯಾನ ಕಾಣಿಸುತ್ತದೆ. ದದದ ಎನ್ನುವುದು ಎಲ್ಲವನ್ನೂ ದಮನಿಸುವ ಹಿಡಿತದ ಕೋಪವೂ ಆಗಬಹುದು. ಸೃಷ್ಟಿ-ನಾಗರಿಕತೆ-ಕ್ರೌರ್ಯ-ಹಿಂಸೆ-ಪ್ರಳಯ-ಮತ್ತೆ ಸೃಷ್ಟಿ-ನಾಗರಿಕತೆ-ಕ್ರೌರ್ಯ-ಹಿಂಸೆ-ಪ್ರಳಯ –ಹೀಗೆ ಸೃಷ್ಟಿ ಸ್ಥಿತಿ ಲಯದ ಚಕ್ರದ ಅಸಂಗತ ಪರಿಭ್ರಮಣೆಯನ್ನು ಕವಿ ಅಸ್ತಿತ್ವವಾದಿಯ ತಣ್ಣಗಿನ ನಿರ್ಲಿಪ್ತತೆಯಲ್ಲಿ ನಿಂತು ನೋಡುತ್ತಾರಾದರೂ ಅದು ಕಮೂನ The Outsider ಕಾದಂಬರಿಯ ನಾಯಕ ಮರ್ಸೊವಿನ (Mersault) –ತನ್ನೊಳಗೇ ಮುಳುಗುವ ಅಸ್ತಿತ್ವವಾದದ ರೀತಿಯಲ್ಲ. ಇಲ್ಲಿನ ಅಸ್ತಿತ್ವವಾದಕ್ಕೆ ಅರ್ಥವಿಲ್ಲದ, ಸ್ವಾರ್ಥವಿಲ್ಲದ ನಿರ್ವ್ಯಾಜ ಪ್ರೀತಿಯ ಸಾಮಾಜಿಕ ಆಯಾಮವಿದೆ. ಈ ನಿರ್ವ್ಯಾಜ ಪ್ರೀತಿ ಮಾತ್ರ ಸೃಷ್ಟಿ ಲಯದ ಈ ಬಗೆಯ ಅರ್ಥಹೀನ ಪರಿಭ್ರಮಣೆಗೆ ಅರ್ಥ ತುಂಬಬಹುದು; ಅಂತೆಯೇ ಪ್ರಪಂಚದ ಪ್ರಳಯದ ಒಡಲಲ್ಲಿ ಹೊಸ ನಾಗರಿಕತೆಯ ಬೀಜವೂ ಅಡಗಿರಬಹುದು ಎಂದು ಕವಿ ಹೇಳಬಯಸುವಂತಿದೆ.

೧೮೯೫ ರಲ್ಲಿ ಪ್ರಕಟವಾದ ಎಚ್.ಜಿ.ವೆಲ್ಸ್‌ನ The Time Machine ಕಾದಂಬರಿಯ ಕಾಲಯಾತ್ರಿ, ತನ್ನ ಭವಿಷ್ಯದ ಪ್ರಯಾಣದಲ್ಲಿ ಇದೇ ಬಗೆಯ ಪ್ರಳಯದ ಸ್ಥಿತಿಯನ್ನು ಎದುರಿಸುತ್ತಾನಾದರೂ ಪ್ರಪಂಚ ಇಷ್ಟಕ್ಕೇ ಕೊನೆಯಾಗುತ್ತದೆ ಎಂದು ನಂಬಲು ತಯಾರಿರುವುದಿಲ್ಲ. ಎಪಿಲಾಗ್‌ನಲ್ಲಿ ಅವನು ಆಶಯದಿಂದ ಹೇಳಿಕೊಳ್ಳುತ್ತಾನೆ : But to me the future is still black and blank—is a vast ignorance. . I have by me for my comfort two strange white flowers—shriveled now,/-to witness that even when mind

and strength had gone, gratitude and a mutual tenderness still lived on in the heart of man (**The Time Machine,** H. G. Wells, p.no. 93). ಈ ಪರ್ವದ ಸಂಕಲನದ ಇತರ ಕವಿತೆಗಳಾದ "ನಾಳೆಯ ಗ್ರಂಥ" ಹಾಗೂ "ತೂಂಕು ಪ್ರಗಾಥ"ದಲ್ಲೂ ಕಂಡುಬರುತ್ತವೆ. "ತೂಂಕು ಪ್ರಗಾಥ"ದಲ್ಲಿ ಚರಿತ್ರೆ ಹಿಮ್ಮುಖವಾಗಿ ಚಲಿಸುವಾಗಲೂ ಕವಿ ಲಯಬದ್ಧ ಸಹಜ ಬದುಕಿಗೇ ಮಂಗಲದ ಜಯಕಾರ ಹಾಡುತ್ತಾನೆ. "ನಾಳೆಯ ಗ್ರಂಥ"ದಲ್ಲಿ "ಸರ್ವನಾಶದ ಬಳಿಕ ಸುತ್ತುವರಿಯುವ ಅಪಾರ ಅವಿಕತ್ತಲೆ ಬಗ್ಗೆ" ಹೇಳಿದರೂ ಅಲ್ಲಿರುವ ಬಂಟಮನುಷ್ಯನ ಬಗ್ಗೆ, ಪಕ್ಕೆ ಎಲುಬಿನ ಬಗ್ಗೆ, ಅದರಿಂದ ಸೃಷ್ಟಿಸಬಹುದಾದ ಮೊದಲ ಕಲಾಕೃತಿ ಬಗ್ಗೆ– ಅಂದರೆ ಹೊಸ ಸೃಷ್ಟಿಯ ಬಗ್ಗೆ ಮಾತಾಡುತ್ತಾನೆ. "ಮಾತಾಡುವ ಮರ" ಕವಿತೆಯ ನಾಯಕ ಕಾರ್ತೀಕನಿಗೂ ಇದು ಗೊತ್ತಿದೆ. ಆತ ಹೇಳುತ್ತಾನೆ : **"ನನಗೆ ಹಿಂದಿಂದು ಇಂದಿಂದು ದುಃಸ್ವಪ್ನ ಆಗಿದೆ ಈಗ./ಆದಿಮಾನವನಂತೆ ಮತ್ತೆ ಮೊದಲಿಂದ ತೊಡಗುತ್ತೇನೆ:/ದುಃಸ್ವಪ್ನ ದೊಡಲಲ್ಲಿ ಭವಿಷ್ಯ ಕಾಣುತ್ತೇನೆ/ಹೊಸತೇ ಒಂದು ನಾಗರಿಕತೆಯ ಕಟ್ಟುತ್ತೇನೆ"** (೧೨-೧೩).

ಹೀಗೆ ಲಯ ತಪ್ಪಿದ 'ಆಧುನಿಕ ಬದುಕು' ಸ್ಥೂಲವಾಗಿ ಈ ಕವಿತೆಯ ವಸ್ತು. ಈ ಲಯ ತಪ್ಪಿದ ಬದುಕನ್ನು ಪ್ರತಿನಿಧಿಸಲು ಅದೇ ಬಗೆಯ ಲಯ ತಪ್ಪಿದ ಬರವಣಿಗೆಯ ಶೈಲಿಯನ್ನು ದೇವ ಅವರು ಸೃಷ್ಟಿಸಿದ್ದಾರೆ. ವಾಕ್ಯರಚನೆಯ ಸೂತ್ರವನ್ನೇ ತಲೆಕೆಳಗು ಮಾಡಿ ಆಧುನಿಕ ಬದುಕಿನ ಮೌಲ್ಯಗಳ ತಲೆಕೆಳಗು– ಪರಿಸ್ಥಿತಿಯನ್ನು ದೇವ ಯಾವ ರೀತಿ ಹಿಡಿದಿಡುತ್ತಾರೆ ನೋಡಿ :

೧. **ಯಾರೂ ಇಲ್ಲ ರಸ್ತೆಲಿ ಹೋದರು ಇಲ್ಲಿಗೆ ಇಲ್ಲ ಮೊದ್ಲು ಬಂದು**

....

ಇವನಿಗೆ ಯಾಕೆ ನಾವೀಗ ಬೇಡ ಒಮ್ಮೆ ಆದರೂ ಬರಬಾರದಿತ್ತ
ಇವರು ಅದರೂ ಕಾಗದ ಬರೆದು ಮಗನ್ನ ಇಲ್ಲಿಗೆ ಕರೆಸೋದು ಬೇಡವೇ ? (ಪು. ೧೧೧)

೨. **ಊಟಕ್ಕೇನು ಮಾಡಬೇಕು ನೆಂಟರ ಶುಂಠರ ಆಶ್ರಿತ ಜನಗಳ ?**
ಕೂಗಲಿಕ್ಕೇನು ಮಾಡಬೇಕು ಬಿರುದು ಬಾವಲಿ ಪಟ್ಟದ ಕಾಲದ ?
ಉತ್ಸವಕ್ಕೇನು ಮಾಡಬೇಕು ವರ್ಷಂಪ್ರತಿಯ ದಸರಾ ಪೂಜೆಯ ? (ಪು. ೧೧೮)

–ಹೀಗೆ ಇಂಥ ರಚನೆಗಳನ್ನು ಇಡಿಯ ಕವಿತೆಯಲ್ಲಿ ಎಷ್ಟೂ ಕಾಣಬಹುದು.

ಸೃಷ್ಟಿ–ನಾಗರಿಕತೆ–ಪ್ರಳಯದ ಕತೆ ಕೇವಲ ಪುರಾಣದ್ದು ಮಾತ್ರ ಆಗಬೇಕಿಲ್ಲ. ಅದು ಏಕಕಾಲಕ್ಕೆ ಚರಿತ್ರೆಯದ್ದೂ ವರ್ತಮಾನದ್ದೂ ಆಗಬಲ್ಲದು. ಮನುಷ್ಯಯಾತನೆಯು ಭಾರತದಲ್ಲೂ ಪ್ರಪಂಚದ ಯಾವ ಮೂಲೆಯಲ್ಲೂ ಏಕರೂಪಿಯಾಗಿರಬಲ್ಲುದು. ಆದುದರಿಂದಲೇ ಕವಿ ಪುರಾಣ, ಚರಿತ್ರೆ, ವರ್ತಮಾನವನ್ನು ಏಕತ್ರ ಸಂಧಿಸಲು ಪ್ರಯತ್ನಿಸುತ್ತಾರೆ. ಕಾಲ ದೇಶದ ಏಕತ್ರತೆಯನ್ನು ಮೀರಲೆತ್ನಿಸುತ್ತಾರೆ. ಲ್ಯಾಂಡ್ ರಿಫಾರ್ಮ್‌ನಲ್ಲಿ ಜಮೀನು ಕಳೆದುಕೊಂಡ–ಒಮ್ಮೆ ರಾಜನಾಗಿದ್ದ–ಇಂಡಿಯಾದ ಜಮೀನ್ದಾರನ ಯಾತನೆ ರಾಜತ್ವ ಕಳೆದುಕೊಂಡ ಲಿಯರ್‌ನ ಯಾತನೆಗಿಂತ ಕಮ್ಮಿಯೇನೂ ಅಲ್ಲ. ಕಾರ್ತೀಕನ ತಬ್ಬಲಿತನ ಕೇವಲ ಅವನದ್ದು ಮಾತ್ರ ಅಲ್ಲ. ಅದು ಹ್ಯಾಮ್ಲೆಟ್‌ನದ್ದು ಕೂಡಾ. ಪೆರಿಕ್ಲಿಸ್‌ನ ಕಥೆ ಭಾರತೀಯ ಪುರಾಣದ ಅಗ್ನಿರಾಜನ ಕಥೆಯೂ ಹೌದು. ಹಿಂದಿನವರು ತಿಳಿದಿದ್ದನ್ನೂ ಬರೆದಿಟ್ಟಿದ್ದನ್ನೂ ಯೋಚಿಸಿದ್ದನ್ನೂ ತಿಳಿಸುವ ಮಾತಾಡುವ ಮರ ಏಕಕಾಲಕ್ಕೆ ಹಿಂದು ಇಂದು ಮುಂದನ್ನು ತಿಳಿಯಬಲ್ಲ ಗ್ರೀಕ್ ಪುರಾಣದ ಟೈರೀಸಿಯಸ್ಸನೂ ಹೌದು. ಈಡಿಪಸ್ ನಾಟಕದಲ್ಲಿ ಟೈರೀಸಿಯಸ್‌ನ ಬಾಯಿ ಮುಚ್ಚಿಸುವ ಈಡಿಪಸ್‌ನ ಪ್ರಯತ್ನ ಅಂತಿಮವಾಗಿ ಆತನದೇ ದುರಂತಕ್ಕೆ ಕಾರಣವಾಗುವ ರೀತಿಯಲ್ಲಿಯೇ ಮಾತಾಡುವ ಮರದ ಬಾಯಿ ಮುಚ್ಚಿಸಲು ಮರಗಳನ್ನು ಕಡಿಯುತ್ತಾ ಹೋಗುವ ರಾಜನ

ಪ್ರಯತ್ನವೂ ಅಂತಿಮವಾಗಿ ದುರ್ಗಾಟಿಲ್ಲಾ ನಾಡು ಸೇರುವ ಆಯುಷ್ಯ ದುರಂತಕ್ಕೆ ಕಾರಣವಾಗುತ್ತದೆ. ಏಕಾಕಿಯು ಅರಸು ಕುಮಾರನ ಪ್ರಶ್ನೆಯು ಕಾರ್ತೀಕ ಹಾಗೂ ಹ್ಯಾಮ್ಲೆಟ್‌ನ ಪ್ರಶ್ನೆಯ ಜತೆ ಐಕ್ಯವಾಗುತ್ತದೆ. ಐ. ಎಸ್. ಓ. ಗಳನ್ನು ಓಡಿಸುವ ಇಪ್ಪತ್ತನ ಸ್ವಾತಂತ್ರ್ಯ ಘೋಷಣೆಯು ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಘೋಷಣೆಯೂ ಆಗುತ್ತದೆ. "ದ ದ ದ" ಎಂಬ ಗುಡುಗಿನ ಪ್ರಳಯದ ಘರ್ಜನೆಯು ಏಕಕಾಲಕ್ಕೆ ಕ್ರಿಶ್ಚಿಯನ್ ಪುರಾಣದ ಪ್ರಳಯದ ಕತೆಯೂ ಆಗಬಲ್ಲದು. ಹೀಗೆ ಕಾಲದೇಶಗಳು ಒಂದನ್ನೊಂದು ಸಂಧಿಸುತ್ತವೆ. ಪುರಾಣ, ಚರಿತ್ರೆ, ವರ್ತಮಾನಗಳು, ಒಂದರೊಳಗೊಂದು ಹೊಕ್ಕು ಹೊರಬರುತ್ತವೆ. ಕವಿತೆಗೆ ಸಾರ್ವಕಾಲಿಕ ಸಾರ್ವದೇಶಿಕ ಆಯಾಮವನ್ನು ಒದಗಿಸುತ್ತದೆ. ಆ ಸಾರ್ವಕಾಲಿಕತೆ ಮತ್ತು ಸಾರ್ವದೇಶಿಕತೆಯನ್ನು ಬಿಂಬಿಸುವುದಕ್ಕಾಗಿಯೇ ಕವಿ ಪುರಾಣ, ಚರಿತ್ರೆ, ಯಕ್ಷಗಾನ, ನಾಟಕ, ಸಿನಿಮಾ, ವಾರ್ತಾಪತ್ರ, ನರ್ಸರಿಯ, ಜಾನಪದ, ಶೇಕ್ಸ್‌ಪಿಯರ್ ಹಾಗೂ ಎಲಿಯಟ್ ಸಾಹಿತ್ಯ, ಉಪನಿಷತ್, ಸ್ವಾತಂತ್ರ್ಯ ಘೋಷಣೆ, ದಾಸ ಸಾಹಿತ್ಯ ಹಾಗೂ ಕಂಗ್ಲಿಷ್ (ಕನ್ನಡ ಇಂಗ್ಲಿಷ್) – ಇವುಗಳ ಮೂಡು ಹಾಗೂ ಶೈಲಿಯನ್ನು ಕವಿತೆಯುದ್ದಕ್ಕೂ ಉಪಯೋಗಿಸಿಕೊಂಡಿದ್ದಾರೆ. ನೋಡಿ :

ಯಕ್ಷಗಾನ :

೧. ಚಿನ್ನದ ಬಣ್ಣದ ತಾರೆಯು ಕಣ್ಣಿನ/ಚಿಗರೆಯ ನಡಿಗೆಯ ಕಲಿಸುವ ಜಿಂಕೆಯು/
...ಥರ ಥರ ವೇಷದಿ ಭಂಗಿಲಿ ಕುಣಿಯುವ (ಪು. ೧೦೯)

೨. "ಏಕಿಂತು ಮಾಡುವಿರಿ ಏಕಿಂತು ಏಕೆ ?"
"ನೀ ಯಾರು ಕೇಳೋಕೆ/ನಾ ರಾಜ – ಜೋಕೆ/" "ಇರೋವಿಲ್ಲ ನಾ ಅವರು ಇರದಲ್ಲಿ ಎಂದೂ" "ತೊಲಗು ಈಗಲೇ ಬೇಗ/ಬರಬೇಡ ಎಂದೂ" (ಪು. ೧೩೮)

ಕಂಗ್ಲಿಷ್ :

೧. ಚೈನೀಸ್ ಪಂಜಾಬಿ ಚೆನ್ನೈ ಕಾಶ್ಮೀರಿ/ಯಾವುದೇ ಟೇಸ್ಟಿನ ಊಟಾ ಡ್ರಿಂಕು (ಪು. ೧೦೮)

೨. ಅವರದ್ದೆ ಡ್ರೆಸ್ಸು ಹಾಕ್ಕೊಂಬಿಟ್ರು/ಅವರ ಹಾಗೇ ಹೇರಿನ ಸ್ಟೈಲು (ಪು. ೧೩೧)

೩. ವೇಟರ್ಸ್ ಊರಿನ ಹುಡುಗರು ಎಂಟು :
ಸೂಪರ್‌ವೈಸರ್ ಫಿಲಾಸಫಿ ಎಂ ಎ ಪ್ಲಸ್ ಡಿಪ್ಲಿನ್ ಸ್ಯಾನ್‌ಸ್ಕ್ರಿಟ್;
ಇಂಫಾರ್ಮೇಶನ್ ಸೆಂಟರಿನಲ್ಲಿ ಕ್ಲೇರೀಸ್ ಅಣ್ಣರಿಗೆ ಇದ್ದಾರೆ ನೈನು ಜನ (ಪು. ೧೩೪)

ಶೇಕ್ಸ್‌ಪಿಯರ್ ಸಾಹಿತ್ಯ :

೧. ಈಗಲೋ ಅವನು ಬೈಯುತ್ತ ಅಳಿವ/ಕೋಲನ್ನು ತಿರುಗಿಸಿ ನೆಲಕ್ಕೆ ಬಡಿವ
(ಕಿಂಗ್ ಲಿಯರ್, ಪು. ೧೧೩)

೨. ನೀ ಹೇಳಿದ ಮಾತು ನಿಜ ಮಗೂ..........ಕಟ್ಟಬಹುದಾಗಿತ್ತು. (ಹ್ಯಾಮ್ಲೆಟ್ ಪು. ೧೪೧)

ದಾಸರ ಪದ :

ಸಾವಿರ ರೂಪದ ಸಾವಿಗೆ ಶರಣು
ಕರುಣೆಲಿ ಕರೆದೊಯ್ಯೊ ಪ್ರಭುವೇ ನಿನ್ನ
ಪಾದ ಬೆಳೆಸಿತ್ತ ನಿಧಾನ (ಪು. ೧೧೪)

ಜಾನಪದ :

ಏಳು ಜನ ಮಾತೆಯರು ಆ ಮರದ ಮೇಲೆ ಪವಡಿಸಿದ್ದಾರೆ/ಅವರ ಮೊಲೆಗಳಿಂದ ಹಾಲು ಹರಿಯುತ್ತಿದೆ/ಹಿಂದಿನವರು ತಿಳಿದಿದ್ದನ್ನೂ ಬರೆದಿಟ್ಟಿದ್ದನ್ನೂ ಯೋಜಿಸಿದ್ದನ್ನೂ/ಯೋಚನೆಗೆ ಬಾರದೇ ಮನಸ್ಸೊಳಗೇ ಉಳಿದಿದ್ದನ್ನೂ/ನನಗೆ ತಿಳಿಸುವುದು... (ಪು. ೧೩೨).

ನವೋದಯ ಸಾಹಿತ್ಯ :

ಔನ್ನತ್ಯದಲ್ಲಿ ಶ್ವೇತಚ್ಛಾಯೆಯಲ್ಲಿ ಕೈಲಾಸ ಶೃಂಗ/ಎಂಬ ಭ್ರಮೆ ಮುಗಿಲೊಳಿಗೂ ಹುಟ್ಟುವಂತಿರಲು/ಪ್ರಜ್ವಲಿಸಿ ರತ್ನದ ಕಾಂತಿ/ಕತ್ತಲೆಯ ಬಡತನವ ಅಣಕಿ ನೂಕುತ್ತಿರಲು... (ಪು. ೧೩೫)

ಸ್ವಾತಂತ್ರ್ಯ ಘೋಷಣೆ :

ನಮ್ಮ ಭೂಮಿ ನಮ್ಮ ನೆಲವ ಕಸಿದುಕೊಂಬ ಪರರ ಬಲವ/ಓಡಿಸಿ ಓಡಿಸಿ ಇಲ್ಲಿಂದೀಗ ಓಡಿಸಿ. (ಪು. ೧೩೬)

ನಾಟಕ : ಸಂಭಾಷಣೆ :

೧. ಪ್ರಜೆ-೧ : ಹಲ್ಕಟ್ ಸುವ್ವರ್ –ಮಗಳನ್ನೇ ಮಾಡ್ಕಂಡು/ದೇವಶಾಸ್ತ್ರೀ ಅಂತೆ ದೇವಶಾಸ್ತ್ರೀ/ ನೀಚ, ಪರಮನೀಚ (ಪು. ೧೩೯)

ನಾಟಕ : ವೃಂದ :

೨. ಏನಮ್ಮಣ್ಣ ಇದು ಹೊಲಸು ಎಂದು ಕೇಳಿದ ಬಳಿಕ/ಎತ್ತ ಹೋದ ಅವ ಎತ್ತ ಹೋದ/ ಸಂಬಂಧಿಕರು ಬಂದು ಏನೇನೊ ಮಾತಾಡೆ/ಏನಾಯಿತು ಅವರಿಗೆ ಏನಾಯಿತು ? (ಪು. ೧೪)

ವಾರ್ತಾಪತ್ರದ ಜಾಹೀರಾತು :

ಯಾರಿಗೆ ಬೇಕು ಬಿಸಿ ಬಿಸಿ ಸುದ್ದಿ/ಹತ್ತು ಲಕ್ಷ ನಗದು ಕಳವು/ಒಂದು ಕೋಟಿ ಚಿನ್ನ ಕಳವು/ಹಿಡಕೊಟ್ಟವರಿಗೆ ಕ್ಯಾಶ್ ಪ್ರೈಸು/ಯಾರಿಗೆ ಬೇಕು ಬಿಸಿ ಬಿಸಿ ಸುದ್ದಿ/ಗರಂ ಗರಂ ಹಾಟ್ ಹಾಟ್ ನ್ಯೂಸ್ (ಪು. ೧೨೪)

ಸಿನಿಮಾ :

(ಕಾರ್ತೀಕ ಹೀಗೆ ಹೇಳುತ್ತಿರುವಾಗ ಕ್ಯಾಮರಾ ಅರಮನೆಯ ಒಂದು ಕೋಣೆ ತೋರಿಸುವುದು... ಆಕೆ ಚೀರುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ–) (ಪು. ೧೪೨)

ಬೃಹದಾರಣ್ಯಕೋಪನಿಷತ್ :

ಘರ್ಜಿಸಿ ದದದ ಎಂದು/ಹೊರಟರೆ ಯುದ್ಧಕ್ಕೆ ಇಳಿ ಉರಿ ಮೇಲೆ (ಪು. ೧೪೮)

ಕ್ರಿಶ್ಚಿಯನ್ ಪುರಾಣ :

ತಪ್ಪಾಯ್ತು ಅಂತ ನಮಗಾಗ ಕಂಡರೆ/ಇದ್ದರೆ ನೋಹನ ನೌಕೆಯ ಆಸರೆ (ಪು. ೧೪೮)

ಎಲಿಯಟ್ :

೧. ಮುಚ್ಚದೆ ಬಾಯಿ/ಮತ್ತೊಂದು ಥರಪ್ರೋ/ಮಗದೊಂದು ಥರಪ್ರೋ/ಹೇಳುದು ಬಿಟ್ಟರೆ/ ಏನಿದೆ ಮಾರ್ಗ ? (ಪು. ೧೪೭, ಫ್ಲೋರ್ ಕ್ವಾರ್ಟೆಟ್ಸ್)

೨. ಅಯ್ಯೋ ಏನು ಸುಂನೆ ಕೂತ್ರೀ ಮಾತಾಡಿ–/ಏನಾದ್ರೂ ಮಾತಾಡಿ–/ಮೌನಾಂದ್ರೆ ಬೇಜಾರು–/... ಮಾತಾಡಿ–/ಅಯ್ಯೋ– ಏನಾದ್ರೂ ಹೇಳಿ (ಪು. ೧೨೨, ದ ವೇಸ್ಟ್ ಲ್ಯಾಂಡ್)

ಇನ್ನು ವಿದ್ಯುಚ್ಚೋರ ಕಾರ್ತೀಕರಿಸಿಯ ಕತೆಯಂತೂ ಶಿವಕೋಟ್ಯಾಚಾರ್ಯನ **ವಡ್ಡಾರಾಧನೆಗೆ** ಋಣಿಯಾಗಿದೆ. ಕವಿತೆಯಲ್ಲಿ ಬರುವ ಬೇರೆ ಬೇರೆ ಬಗೆಯ ಅಗ್ನಿಯ ಕಲ್ಪನೆ (ಸ್ಮಶಾನದ ಅಗ್ನಿ, ಹಿಂಸೆಯ ಅಗ್ನಿ) ಬುದ್ಧ ಚರಿತೆಗೆ ಋಣಿಯಾಗಿದೆ.

ಇಷ್ಟಿದ್ದೂ ಅತ್ಯಂತ ಸುಸಂಬದ್ಧ, ತರ್ಕಬದ್ಧವಾಗಿ ಸಾಗುವ ಕಾವ್ಯಕ್ರಿಯೆಗೆ ಇದ್ದಕ್ಕಿದ್ದಂತೆ ಯಾವುದೇ ಪೂರ್ವಾಪರ ಪೀಠಿಕೆಯಿಲ್ಲದೆ ಧುತ್ತೆಂದು ಇದಿರಾಗುವ ಜೆಹಾದಿಯ ಪಾತ್ರ

ಚಿತ್ರಣ ತುಸು ಅತಿಯಾಗಿ ಕೃತಕವಾಗುತ್ತದೆ. ಕವಿತೆಯಲ್ಲಿನ ಉಳಿದ ಪಾತ್ರಗಳ ಅನಾವರಣಕ್ಕೆ ಹೋಲಿಸಿದರೆ ಚೆನ್ನಾದಿಯ ಪಾತ್ರಚಿತ್ರಣ ತುಸು ಪ್ರಾಂಜಲ ಅಭ್ಯಾಸದಂತೆ ಹಾಗೆ ಕಾಣುತ್ತದೆ. ಈ ಪಾತ್ರವನ್ನು ಕವಿಯು ಕಾವ್ಯವನ್ನು ಬಿಗಿಸುವ ಉದ್ದೇಶದಿಂದ ಜಾಗತಿಕ ಟೆರರಿಸಂನ ಹಿನ್ನೆಲೆಯನ್ನು ಪ್ರತಿಧ್ವನಿಸಲು ಬಳಸಿದ ಹಾಗೆ ಕಾಣುತ್ತದೆ. ಮುಂದೆ ನಡೆಯುವ ಸಾವುನೋವು ತಂದಿದೆ. ಕಾರ್ತಿಕ ಮಗುವನ್ನೆತ್ತಿಕೊಂಡು ಓಡುವ ಕ್ರಿಯೆ ಇನ್ನೊಂದು ವೇಗದಿಂದ ನಡೆಯುತ್ತದೆ ಅಂದರೆ ಅದು ತೀರ ಸಿನಿಮಾಟಿಕ್ ಅನ್ನಿಸುತ್ತದೆ. ಸ್ಮಶಾನದ ಚಿತ್ರಣ ಮತ್ತು ಕಾರ್ತಿಕ ಮಗುವನ್ನೆತ್ತಿಕೊಂಡು ಓಡಿ ತಪ್ಪಿಸಿಕೊಳ್ಳುವ ಭಾಗ ಹರಿಶ್ಚಂದ್ರ ಕಾವ್ಯದ ಚಂದ್ರಮತಿ ಸತ್ತ ಮಗುವನ್ನೆತ್ತಿಕೊಂಡು ಓಡುವ ಹಾಗೂ ಸ್ಮಶಾನದ ಚಿತ್ರದ ಭಾಗವನ್ನೇ ಉಜ್ವಲವಾಗಿದ್ದು ಈ ಮಾತನ್ನು ಹೇಳಬೇಕಾಗುತ್ತದೆ. ಹಾಗೆಂದೇ ಎಲಿಯಟ್ ತನ್ನ ಕವಿತೆ ವೇಸ್ಟ್‌ಲ್ಯಾಂಡ್‌ನಲ್ಲಿ ಕಾಣುವುದನ್ನು ಕಾಣಿಸುವ ಪ್ರಯತ್ನದಲ್ಲಿ (ಮುಖ್ಯವಾಗಿ ದಾದಾ ವ್ಯಾಖ್ಯಾನದ ಸಂದರ್ಭದಲ್ಲಿ) ದೇವ ಅವರ ಕವಿತೆ ರಚನೆಯ ದೃಷ್ಟಿಯಲ್ಲಿ ವೇಸ್ಟ್ ಲ್ಯಾಂಡ್‌ನ ಕೊನೆಯ ಭಾಗವನ್ನು (What the Thunder Said) ಹೋಲುವುದು ಕೂಡಾ ಕವಿಯೊಬ್ಬನ ಮೀರುವ ಪ್ರಯತ್ನದ ಮಿತಿಯನ್ನು ಎತ್ತಿತೋರಿಸುತ್ತದೆ. ಬರವು ಬದುಕನ್ನು ತುಂಬುವ ಮಳೆಯ ನಿರೀಕ್ಷೆಯಲ್ಲಿ ವೇಸ್ಟ್ ಲ್ಯಾಂಡ್ ಕವಿತೆ ಕೊನೆಯಾಗುತ್ತದೆ. ಇಲ್ಲೂ ಅಷ್ಟೇ–ಮಳೆಯ ನಿರೀಕ್ಷೆ ಇದೆ. ಅದು ಬರಬಹುದು; ಬಾರದೆ ಇರಬಹುದು; ಅಥವಾ ಹಾಗೆ ಬಂದ ಮಳೆ ಪ್ರಳಯವನ್ನು ಉಂಟುಮಾಡಬಹುದು, ಹೊಸ ಸೃಷ್ಟಿಯನ್ನೂ ಸಹ ಇದು ವ್ಯತ್ಯಾಸ.

ನಲವತ್ತೊಂದು ಪುಟದ ಕವಿತೆಯಲ್ಲಿ ಸುಮಾರು ಒಂದೂವರೆ ಪೇಜು (ಪು. ೧೪೧ರಿಂದ ೧೪೨) ಇಡಿಯಾಗಿ ಕಾರ್ತಿಕ ಹಾಗೂ ಕೃತ್ತಿಕೆಯ ನಡುವಿನ ಸಂಭಾಷಣೆಯ ಮಾತುಗಳಾಗಿದ್ದು ಅವು ಶೇಕ್ಸ್‌ಪಿಯರನ ಹ್ಯಾಮ್ಲೆಟ್ ನಾಟಕದ ಕನ್ನಡ ಅನುವಾದದ ಸಂಭಾಷಣೆಯ ಉದ್ಧರಣೆಗಳಾಗಿವೆ. ಈ ಭಾಗದಲ್ಲಿ ಕವಿ ಇದ್ದಕ್ಕಿದ್ದಂತೆ ಅದೃಶ್ಯರಾಗಿ ತನ್ನ 'ಕೋ'ವನ್ನು ತಾನೇ ಅನುಕರಿಸುವುದಕ್ಕಾಗಿ ಸ್ಟೇಜ್ ವಿಂಗ್‌ನಲ್ಲಿ ನಿಂತಂತೆ ಭಾಸವಾಗುತ್ತಾರೆ. ಕವಿತೆಯ ಉಳಿದ ಕಡೆ ಔಚಿತ್ಯಪೂರ್ಣವಾಗಿ, ಇತಿಮಿತಿಯಲ್ಲಿ ಸಹಜವಾಗಿ ಬಂದಿರುವ ಇಂಥ ಉದ್ಧರಣೆಗಳು ಕವಿತೆಯ ಒಟ್ಟು ಗಾತ್ರದ ದೃಷ್ಟಿಯಿಂದ ಇಲ್ಲಿ ತುಂಬ ಭಾರವಾಗಿ ತೂಗಿಬಿಡುತ್ತವೆ. ಈ ಒಂದೂವರೆ ಪೇಜಿನ ಯಶಸ್ಸು ಕವಿ ದೇವರದ್ದೋ ? ಶೇಕ್ಸ್‌ಪಿಯರ್‌ನದ್ದೋ ?

ಇದೇನಾದರೂ ಇರಲಿ. ಕಾವ್ಯ ಆಧುನಿಕವಾಗಬೇಕು, ಇವತ್ತಿನ ದಿನಮಾನವನ್ನು ಒಳಗೊಂಡಿರಬೇಕು ಎಂಬ ಕೂಗು ಕೇಳಿ ಬರುತ್ತಿರುವ ಇಂದಿನ ಕಾವ್ಯ ಸಂದರ್ಭದಲ್ಲಿ ರಾಮಚಂದ್ರ ದೇವರ ಮಾತಾಡುವ ಮರ ನಿಜವಾದ ಅರ್ಥದಲ್ಲಿ ಒಂದು ಆಧುನಿಕ ಮರವೂ ಆಗಿದೆ. ಪ್ರಾಯಶಃ ಅಡಿಗರ ಚಂಡೆಮದ್ದಳೆ ಆಧುನಿಕ ಕನ್ನಡ ಕಾವ್ಯದಲ್ಲಿ ಮಾಡಿದ ಕೆಲಸವನ್ನೇ ಕವಿ ದೇವರ ಮಾತಾಡುವ ಮರವೂ ಮಾಡುತ್ತದೆ ಎನ್ನುವುದು ಕನ್ನಡ ಕಾವ್ಯಪ್ರಿಯರ ಆಸೆ ಮತ್ತು ನಿರೀಕ್ಷೆ.

[illegible] ಪೇಜಾವರ, ಇಂಗ್ಲಿಷ್ ಅಧ್ಯಾಪಕ, ಶ್ರೀ ಗೋಕರ್ಣನಾಥೇಶ್ವರ ಕಾಲೇಜು, ಕದ್ರಿ, ಮಂಗಳೂರ - ೫೭೫ ೦೦೧

ಮಾಳವಾಡರ ಆತ್ಮಕಥೆ 'ದಾರಿ ಸಾಗಿದೆ'

ಶಶಿಧರ ತೋಡಕರ ಪರಿವೀಕ್ಷಣೆ

ಸ. ಸ. ಮಾಳವಾಡರ ಹೆಸರಿಗೆ ಧಾರವಾಡದ ಶೈಕ್ಷಣಿಕ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಜೀವಿತದ ೫ ದಶಕಕ್ಕೂ ಹೆಚ್ಚು ಕಾಲ ಈ ನಗರದೊಂದಿಗೆ, ಇಲ್ಲಿರುವ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಅವರು ಕಳೆದಿದ್ದಾರೆ. ಸಂಘ-ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಸಂಸ್ಥೆ ಮತ್ತು ಸಂತೆಗಳ ಮಧ್ಯೆ ಅಷ್ಟಾಗಿ ವ್ಯತ್ಯಾಸ ಕಾಣದ 'ಭಾರತೀಯ' ದೃಷ್ಟಿಕೋನಗಳ ಮಧ್ಯೆ ಸಂಸ್ಥೆಗಳನ್ನು ಕಟ್ಟುವುದು ಕಷ್ಟ. ಬೆಳೆಸುವುದು ಇನ್ನೂ ಕಷ್ಟ. ಈ ಕಷ್ಟಗಳನ್ನು ಮೆಟ್ಟುವ ದಾರ್ಷ್ಟ್ಯ ತೋರಿದ ವ್ಯಕ್ತಿ ಅನೇಕ ದಿಕ್ಕುಗಳಿಂದ ಕೃಪಾಣಗಳನ್ನು ಎದುರಿಸಬೇಕು. ಇಷ್ಟಕ್ಕೇ ಮುಗಿಯದ ಈ ಪಯಣ ಸಾಗುತ್ತಿದೆ ಅಥವಾ ಸಾಗಿದೆ ಎಂಬ ಸಮಾಧಾನವನ್ನು ನಮ್ಮಷ್ಟಕ್ಕೆ ನಾವೇ ಕಟ್ಟಿಕೊಂಡು ನೇಪಥ್ಯಕ್ಕೆ ಸರಿಯಬೇಕು. ಹಾಗೆ ಸರಿದರೂ ದಾರಿ ಸಾಗುತ್ತದಲ್ಲ ಎನ್ನುವ ಬೆರಗಿನ ಸತ್ಯ ಅರಿವಾದಾಗ ನಸುನಗೆಯೊಂದೇ ಉಳಿಯಬಹುದು ಅಥವಾ ದಟ್ಟ ವಿಷಾದ ನಮ್ಮನ್ನು ಆವರಿಸಬಹುದು.

ಅತ್ತ ನಸುನಗೆಯೂ ಇಲ್ಲ, ಇತ್ತ ದಟ್ಟ ವಿಷಾದವೂ ಇಲ್ಲದ ಬಯ್ಯಾಲಿಯಲ್ಲಿ ಮಾಳವಾಡರ 'ದಾರಿ ಸಾಗಿದೆ' ಸುಮಾರು ೭೬೦ ಪುಟಗಳನ್ನು ಆವರಿಸಿಕೊಂಡ ಕೃತಿ, ೬ ಭಾಗದಲ್ಲಿ ಹರಡಿದೆ. ಮೊದಲಿನ ೫ ಭಾಗ ಮಾಳವಾಡರು ಜೀವಿಸಿದ್ದಾಗಲೇ ಬಿಡಿ ಬಿಡಿಯಾಗಿ ಪ್ರಕಟವಾಗಿದ್ದವು. ಅವರ ಮರಣಾನಂತರ ೬ ನೆಯ ಭಾಗವನ್ನು ಸಹಧರ್ಮಿಣಿ ಶಾಂತಾದೇವಿಯವರು ಸೇರಿಸಿ ಮಾಳವಾಡರ ಆತ್ಮಚರಿತ್ರೆಯ 'ಪ್ರಶಾಂತ ಪಯಣ' ಪೂರ್ಣಗೊಳಿಸಿದ್ದಾರೆ.

ಆತ್ಮಚರಿತ್ರೆ ಚರಿತ್ರೆಯಾಗಿಯೇ ಉಳಿಯುವುದು ಕಷ್ಟ! ಅದು ಆಗಾಗ ಕಥೆಯೂ ಆಗುತ್ತದೆ. ಕಥೆ ಮತ್ತು ಚರಿತ್ರೆ ಭಿನ್ನವಾದ ನಿಲುವಿನಲ್ಲಿ ರೂಪಗೊಂಡರೂ ಅವು ಒಂದನ್ನೊಂದು ಆಕರ್ಷಿಸಿ ಆವರಿಸಿಕೊಂಡುಬಿಡುವ ಅಪಾಯವನ್ನು ತಡೆಯುವುದು ಹೇಗೆ? ಬಹುಶ ಮನುಕುಲಕ್ಕೆ ಇಂಥ ಎಚ್ಚರಿಕೆ ಈವರೆಗೂ ಸಾಧ್ಯವಾಗಿಲ್ಲ. ಎಚ್ಚರಹೀನ ಸಂದರ್ಭದಲ್ಲಿಯೇ ಅಪಘಾತಗಳು ಸಂಭವಿಸುತ್ತವೆ. ಆದರೆ ಪ್ರತಿ ಅಪಘಾತವೂ ಅನುಭವದ ಸಂಚಿಯನ್ನು ಕಟ್ಟಿಕೊಳ್ಳಲು ಅವಕಾಶ ನೀಡುತ್ತದೆಯಲ್ಲ ಎನ್ನುವ ಆಶಯವನ್ನು ನಿರಾಕರಿಸುವುದು ಹೇಗೆ? ಈ ದ್ವಂದ್ವದಲ್ಲಿಯೇ ಕಟ್ಟಿಕೊಳ್ಳುವ - ಕಟ್ಟಿಕೊಡುವ ಪ್ರಕ್ರಿಯೆ ಸಾಗುತ್ತಿರುತ್ತದೆ. ಈ ಪ್ರತಿಕ್ರಿಯೆಗೆ ಸಾಕ್ಷಿ 'ದಾರಿ ಸಾಗಿದೆ' ಕೃತಿಯ ಮೊದಲ ಭಾಗವಾಗಿರುವ ಹಳ್ಳಿಯ ಹುಡುಗ ಹಾಗೂ ನಂತರದ ಭಾಗಗಳು.

ಪ್ರಾದೇಶಿಕ ಪರಿವೀಕ್ಷಣೆಯೊಂದಿಗೆ ಆರಂಭಗೊಳ್ಳುವ ಸಾಲುಗಳು ನವೋದಯದ ಆಶಯಗಳನ್ನು ದಟ್ಟವಾಗಿ ಮನಸ್ಸಿನಲ್ಲಿ ತುಂಬಿಕೊಂಡಿರುವುದು ಸ್ಪಷ್ಟವಾಗುವಂತೆ ಗ್ರಾಮದ ಸಮೂಹನಿಷ್ಠ ಬದುಕು. ಅದರ ವಿಭಿನ್ನ ಸ್ತರಗಳು. ಅವುಗಳ ತರತಮ ಭಾವ ಮುಂತಾದ ಪರಿವೇಶಗಳನ್ನು ವಿವರಿಸುತ್ತ ಮಲಪ್ರಹಾರಿ ದಂಡೆಯ ಮೇಲಿರುವ ಗೋವನಕೊಪ್ಪದ ಕಟ್ಟರವಾದ ಮಾಳವಾಡ ಕುಟುಂಬದ ಅವಿಭಕ್ತಪ್ರಜ್ಞೆ ರೂಪಗೊಂಡ ನೆಲೆಯ-ಹಿನ್ನೆಲೆಯನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಸ್ಪಷ್ಟಪಡಿಸಲು ಆಯ್ದುಕೊಂಡ ಸಂದರ್ಭ ಅಂದಿನದಾದರೂ. ಸ್ಪಷ್ಟಪಡಿಸುತ್ತಿರುವ ಪ್ರಯತ್ನ ಇಂದಿನದು. ಕಾರಣ ಅಂದು - ಇಂದಿನ ಬಯ್ಯಾಲಿಯಲ್ಲಿ ಸಾಗುವ ಚಿಂತನೆಯ ಧಾಟಿ ಅಂದಿನ ಸಮಾಜ - ಸರಳ ಬದುಕು ಇಂದು ಸಂಕೀರ್ಣಗೊಂಡದ್ದು ಯಾಕೆ? ಅದಕ್ಕೆ ಕಾರಣಗಳೇನು? ಎಂಬ ವಿವರಗಳನ್ನು ವಿಷಾದದೊಂದಿಗೆ ಸೂಚಿಸುತ್ತ ಅಂದಿನ ಅವಿಭಕ್ತಪ್ರಜ್ಞೆ - ವಿಭಕ್ತಗೊಂಡ ಕಾರಣಗಳು ಹಾಗೂ ಅವಿಭಕ್ತಪ್ರಜ್ಞೆ ತಂದುಕೊಡುವ ಅಭಿಮಾನ ಕ್ರಮೇಣ ಅಹಂಕಾರವಾಗುವ ನಿದರ್ಶನಗಳನ್ನು ಮಾಳವಾಡ ಕುಟುಂಬದ ಕೌಟುಂಬಿಕ ಉದಾಹರಣೆಯೊಂದಿಗೆ ಮಾಳವಾಡರು ವಿವರಿಸುತ್ತಾರೆ.

ಹಲವಾರು ವರ್ಷಗಳ ನಂತರ ಮಾಳವಾಡರು ತಮ್ಮ ಜನ್ಮದಿನವನ್ನು ತಾವೇ ನಿರ್ಧರಿಸಿಕೊಳ್ಳಬೇಕಾದ ಸಂದರ್ಭವನ್ನು. ಅದಕ್ಕೆ ಬೇಕಾದ ಅಧಿಕೃತ ದಾಖಲೆಗಳನ್ನು ಶೋಧಿಸುವುದರ ಮೂಲಕ ೧೯ - ೧೧ - ೧೯೧೦ ಎಂದು ಸ್ಪಷ್ಟಪಡಿಸುತ್ತಾರೆ. ಇದು ಆ ತಲೆಮಾರಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ. ಹಳ್ಳಿಯಲ್ಲಿ ಜನಿಸಿದ ಅನೇಕ ಮಕ್ಕಳಿಗೆ ಇಂದಿಗೂ ತಾವು ಹುಟ್ಟಿದ ದಿನದ ಖಚಿತತೆಯ ಸಮಸ್ಯೆಯಿದೆ. ಈ ಸಮಸ್ಯೆ ಹುಟ್ಟಿದ ದಿನಕ್ಕಷ್ಟೆ ಸೀಮಿತವಾಗಿರದೆ ಇನ್ನೂ ಹಲವಾರು ಅಂಶಗಳನ್ನು ಆವರಿಸಿಕೊಂಡುಬಿಡುತ್ತದೆ. ಇದಕ್ಕೆ ಉದಾಹರಣೆಯಾಗಿ ಮಾಳವಾಡರು ಧಾರವಾಡದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವಾಗ ಅವರ ಸಹ-ಶಿಕ್ಷಕ ಬಂಧುಗಳು ಇವರ ಮನೆತನದ ಹೆಸರನ್ನು 'ಮಹಾರ್‌ವಾಡ' ಎಂದು ಬದಲಿಸುತ್ತಾರೆ. ಈ ಸಂದರ್ಭವನ್ನು ವಿವರಿಸುತ್ತ ಆ ಬದಲಾವಣೆಯನ್ನು ಕೇಳಿದಾಗ ನನ್ನ ರಕ್ತವೆಲ್ಲಾ ಕುದಿಯಿತು ಎಂದು ಸ್ವತಃ ಮಾಳವಾಡ ಹೇಳಿಕೊಂಡಿದ್ದಾರೆ. ಈ ಪ್ರಸಂಗ ಇತಿಹಾಸದ ಸ್ತರಗಳಲ್ಲಿ ಅವಿತುಕೊಂಡಿರುವ ಕ್ರೂರ ಸತ್ಯಗಳನ್ನು ಹೊರಹಾಕದೆ ಇರುವುದು ಹೇಗೆ ? ಅನುಕೂಲಸ್ಥ ಕುಟುಂಬದ ಹಿನ್ನೆಲೆಯುಳ್ಳ ಮಾಳವಾಡರ ಅಂತರಂಗವೇ ಕುದಿಯುವ ಕುಂಡವಾಗಿದ್ದರೆ ಸ್ವತಃ ಮಹಾರ್‌ವಾಡಗಳ ಕಥೆ ಏನಾಗಿರಬೇಡ ?

ಬ್ರಿಟಿಷ್ ಭಾರತದಲ್ಲಿ ಅಧಿಕಾರ ಬ್ರಿಟಿಷರದೆ ಆಗಿದ್ದರೂ ಆಡಳಿತ ಮಾತ್ರ ಭಾರತದ 'ಮುಂದುವರಿದ ಸಮುದಾಯದ್ದು'. ಆಡಳಿತದ ಎಲ್ಲ ರಂಗಗಳಲ್ಲಿಯೂ ಮುಂಚೂಣಿಯಲ್ಲಿದ್ದವರು ಈ 'ಮುಂದುವರಿದ ಸಮುದಾಯದವರೇ'. ಈ ಪರಿಭಾಷೆಯನ್ನು ಮಾಳವಾಡರು ನೋವಿನಿಂದ ಕೃತಿಯುದ್ದಕ್ಕೂ ಬಳಸಿದ್ದಾರೆ. ಇಂಥ ಸಾಮಾಜಿಕ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಜನ ಅವರಂತೆ ಇಂಗ್ಲಿಷ್ ಶಿಕ್ಷಣ ಪಡೆಯುವುದು ಅಸಾಧ್ಯವಾಗಿತ್ತು. ಅದರೆ ಗ್ರಾಮೀಣ ರೈತಾಪಿ ಸಮುದಾಯಕ್ಕೆ ಆಧುನಿಕ ಶಿಕ್ಷಣ ಗಗನಕುಸುಮವಾಗಿತ್ತು. ರೈತಾಪಿ ಸಮುದಾಯದಲ್ಲಿಯೇ ಸ್ವಲ್ಪ ಅನುಕೂಲಸ್ಥರಾಗಿದ್ದವರು ಮಾತ್ರ ಇಂಗ್ಲಿಷ್ ಶಿಕ್ಷಣವನ್ನು ಪಡೆಯಬಹುದಾಗಿತ್ತು. ಹೀಗೆ ಶಿಕ್ಷಣ ಪಡೆದುಕೊಂಡ ಯುವಕರು ವೃತ್ತಿಗಾಗಿ ಸ್ಪರ್ಧೆಗಿಳಿದಾಗ ಸಹಜವಾಗಿಯೇ ಮುಂದುವರಿದ ಸಮುದಾಯದ ಕುತಂತ್ರಗಳಿಗೆ ಬಲಿಬೀಳುವುದು ಅನಿವಾರ್ಯವಾಗಿತ್ತು.

ಇಂಥ ಅನಿವಾರ್ಯತೆಗಳು ಮತ್ತು ಆ ಸಂದರ್ಭದಲ್ಲಿ ಎದುರಾಗುವ ಮುಜುಗರಗಳನ್ನು ಮೆಟ್ಟುತ್ತ ಗುಳೇದಗುಡ್ಡ, ಬಾಗಲಕೋಟೆ, ಬಿಜಾಪೂರ, ಧಾರವಾಡ, ಕೊಲ್ಹಾಪುರಗಳಲ್ಲಿ ಶಿಕ್ಷಣವನ್ನು ಪೂರೈಸಿಕೊಂಡು ೧೯೩೭ ರಲ್ಲಿ ಧಾರವಾಡದ ಪ್ರತಿಷ್ಠಿತ ಸರಕಾರಿ ಕಾಲೇಜಾದ ಕರ್ನಾಟಕ ಕಾಲೇಜಿನಲ್ಲಿ ಮಾಳವಾಡರು ಕನ್ನಡ ಅಧ್ಯಾಪಕರೆಂದು ನಿಯುಕ್ತರಾದರು.

ವಿದ್ಯಾರ್ಥಿದೆಸೆಯಲ್ಲಿಯೇ ನಾಡಿನ ಪ್ರಖ್ಯಾತ ಸಾಹಿತಿಗಳ ಸಂಪರ್ಕ ಮಾಳವಾಡರಿಗೆ ಲಭ್ಯವಾಗಿತ್ತು. ಕೈಲಾಸಂ, ಆಲೂರ ವೆಂಕಟರಾಯರು, ಕಾರಂತ, ಬಿಎಂಶ್ರೀ, ಸಿದ್ದವನಹಳ್ಳಿ ಕೃಷ್ಣಶರ್ಮ, ಮಧುರಚೆನ್ನ, ಬೇಂದ್ರೆ, ಗೋಕಾಕ, ಮುಗಳಿ, ಮಾಸ್ತಿ, ಡಿ.ವಿ.ಜಿ., ಕೆ. ವಿ. ಅಯ್ಯರ್, ಬೆಳ್ಳಾವೆ ಹಾಗೂ ಶಿಕ್ಷಕರಾಗಿದ್ದ ಶ್ರೀರಂಗ ಮತ್ತು ಎ. ಟಿ. ಸಾಸನೂರ ಅವರು ಪ್ರಮುಖರಾದವರು. ಇವರೊಡನೆ ಬೆಳೆದ ಸ್ನೇಹ ಮಾಳವಾಡರನ್ನು ಸಹಜವಾಗಿಯೇ ಸಾಹಿತ್ಯದ ಅಧ್ಯಯನ-ಅಧ್ಯಾಪನದತ್ತ ಸೆಳೆದಿರಬೇಕು. ವಿದ್ಯಾರ್ಥಿಯಾಗಿದ್ದಾಗಲೆ ವೆಂಕಟರಾಯರ ಸಲಹೆಯ ಮೇರೆಗೆ ನವಜೀವನ ಗ್ರಂಥಮಾಲೆಯ ಗ್ರಂಥಗಳ ಪ್ರಚಾರಕರಾಗಿ ಮುಂಬಯಿ, ಮೈಸೂರುಗಳ ಓಡಾಟ ಆರಂಭವಾಗಿತ್ತು. ಗ್ರಂಥ ಪ್ರಚಾರದ ಈ ಅಂಟು ಕ್ರಮೇಣ ನಂಟಾಗಿ ಪರಿವರ್ತನೆಗೊಂಡು ಮಾಳವಾಡರು ಸಾಹಿತ್ಯ ಪ್ರಚಾರ ಮತ್ತು ಪ್ರಸಾರದಲ್ಲಿ ಘಟ್ಟಿಯಾಗಿ ನೆಲೆನಿಲ್ಲಲು ಕಾರಣವಾಯಿತು.

೧೯೧೭ ರಲ್ಲಿ ನಾಡಿನ ಅನೇಕ ಹಿರಿಯರ ತ್ಯಾಗ ಮತ್ತು ನಿರಂತರ ಪ್ರಯತ್ನದ ಫಲವಾಗಿ ಮುಂಬಯಿ ಸರಕಾರವನ್ನು ಒಪ್ಪಿಸಿಕೊಂಡು ಈ ಭಾಗದಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಿದ್ದು

ಇಂದು ಇತಿಹಾಸ. ಕಾಲೇಜ್ ಆರಂಭವಾದರೂ ಅಲ್ಲಿ ಕನ್ನಡ ವಿಭಾಗ ಸ್ವಲ್ಪ ತಡವಾಗಿಯೇ ಪ್ರವೇಶ ಪಡೆಯಿತು. ಆ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಧ್ಯಾಪನಕ್ಕೆ ಅವಕಾಶ ದೊರೆಯಿತು. ಪ್ರಾದೇಶಿಕ ಭಾಷೆಯ ಸಾಹಿತ್ಯ ಅಧ್ಯಯನ ಅಂದು ತುಂಬಾ ಅಸಡ್ಡೆಯ ಮಾತಾಗಿತ್ತು. ಅಂಥ ಪರಿಸರದಲ್ಲಿ ಕನ್ನಡ ವಿಭಾಗದ ಘನತೆ-ಗೌರವಗಳನ್ನು ಕಾಪಾಡಿಕೊಂಡು ಬರುವಲ್ಲಿ ಮಾಳವಾಡರು ತುಂಬಾ ಶ್ರಮದಾಯಕವಾದ ಪಾತ್ರವನ್ನು ವಹಿಸಿದ್ದಾರೆ. ಅಧ್ಯಾಪಕನಾಗಿ ದುಡಿಯುತ್ತಿರುವಾಗಲೇ ಅನೇಕ ಸಂಸ್ಥೆಗಳ ಜವಾಬ್ದಾರಿಯನ್ನು ಮಾಳವಾಡರು ನಿಭಾಯಿಸಬೇಕಾಯಿತು. ನಿದರ್ಶನಕ್ಕೆ ಕರ್ನಾಟಕ ಇತಿಹಾಸ ಮಂಡಳಿ, ಕನ್ನಡ ಸಂಶೋಧನ ಸಂಸ್ಥೆ, ಮುಂಬಯಿ ವಿಶ್ವವಿದ್ಯಾಲಯ ಸೆನೆಟ್ ಸದಸ್ಯ, ಕರ್ನಾಟಕ ವಿಶ್ವವಿದ್ಯಾಲಯ ಸೆನೆಟ್-ಸಿಂಡಿಕೇಟ್ ಸದಸ್ಯ, ದೇಶದ ಅನೇಕ ವಿಶ್ವವಿದ್ಯಾಲಯ ಹಾಗೂ ಸ್ವಾಯತ್ತ ಸಂಸ್ಥೆಗಳ ಅಭ್ಯಾಸ ಮಂಡಳಿ ಸಮಿತಿ ಸದಸ್ಯರಾಗಿ ಅವರು ದುಡಿದಿದ್ದಾರೆ. ಈ ಎಲ್ಲ ಜವಾಬ್ದಾರಿಗಳೊಂದಿಗೆ ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ರಚಿಸಿದ್ದಾರೆ.

ಕ್ಲುಪ್ತ ಕಾಲದಲ್ಲಿ ಕಾರ್ಯದಕ್ಷತೆಯಿಂದ ದುಡಿಯುವ ಕೈಗಳಿಗೆ ಹೆಚ್ಚಿನ ಜವಾಬ್ದಾರಿ ಬರುವುದು ಸಹಜ. ಆದರೆ ಇದರೊಂದಿಗೆ ಅನೇಕ ಅಡಚಣೆ-ಅವಮಾನಗಳನ್ನು ಅನುಭವಿಸಬೇಕಾದ ಸಂದರ್ಭಗಳೂ ಅಷ್ಟೇ ಸಹಜವಾಗಿ ಬರುತ್ತವೆ ಎಂಬುದನ್ನು ಮಾಳವಾಡರು ವಹಿಸಿಕೊಂಡ ಪ್ರತಿಯೊಂದು ಜವಾಬ್ದಾರಿಯಲ್ಲೂ ಕಂಡು ವ್ಯಥೆಪಟ್ಟಿದ್ದಾರೆ.

ಆತ್ಮಕಥೆಯ ಮೂರನೆ ಭಾಗವಾದ 'ಮಾಮಾಜಿ' ಮಾಳವಾಡರ ಜೀವಿತದ ಬಹುಮುಖ್ಯ ಜವಾಬ್ದಾರಿಗಳನ್ನು ನಿಭಾಯಿಸಿದ ಹಂತವನ್ನು ಕುರಿತಾಗಿದೆ. ಅದರಲ್ಲಿ ಅತಿ ಮಹತ್ವದ್ದೆಂದರೆ ಕರ್ನಾಟಕ ವಿಶ್ವವಿದ್ಯಾಲಯವನ್ನು ಧಾರವಾಡದಲ್ಲಿ ಆರಂಭಿಸುವಾಗ ಹಾಗೂ ಆ ಮುನ್ನಿನ ಪ್ರಯತ್ನಗಳು, ಆ ನಂತರ ವಿಶ್ವವಿದ್ಯಾಲಯ ವ್ಯಾಪಕವಾಗಿ ಬೆಳೆಯಲಿ ಎಂಬ ಹಂಬಲಕ್ಕಾಗಿ ತಮ್ಮ ಮೇಲಾಧಿಕಾರಿಗಳನ್ನು ಎದುರು ಹಾಕಿಕೊಂಡು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನಡೆಸಿದ ಹೋರಾಟ ಇತಿಹಾಸದಲ್ಲಿ ದಾಖಲಾಗಿದೆ. ಆದರೆ ಇಂದಿನ ತಲೆಮಾರಿನವರಿಗೆ ಅದೆಲ್ಲಾ ಅಷ್ಟಾಗಿ ಮಹತ್ವದ್ದೆನಿಸದೆ ಇರುವುದು ಮಾತ್ರ ಆತಂಕಕಾರಿ ಬೆಳವಣಿಗೆ. ಅದರ ಪ್ರತಿಫಲವನ್ನು ಇಂದಿನ ತಲೆಮಾರು ಚೆನ್ನಾಗಿ ಅನುಭವಿಸುತ್ತಿದೆ. ಈ ಅಪಾಯಗಳನ್ನು ಮಾಳವಾಡರು ಜವಾಬ್ದಾರಿಯುತ ಸ್ಥಾನಗಳಲ್ಲಿದ್ದು ದುಡಿಯುತ್ತಿರುವಾಗಲೇ ಗಮನಿಸಿದ್ದರು. ಅಂತಹ ಸಂದರ್ಭದುದ್ದಕ್ಕೂ ಧ್ವನಿಯೆತ್ತಿ ಪ್ರತಿಭಟಿಸುತ್ತಿದ್ದರು. ಆಗ ಇವರ ಸುತ್ತಲಿನ ಪರಿಸರ ಮಾತ್ರ ಸಂಪೂರ್ಣವಾಗಿ ಇವರಿಗೆ ವಿರುದ್ಧವೇ ಆಗಿದ್ದರೂ ನಿರ್ಣಾಯಕ ಘಳಿಗೆಯಲ್ಲಿ ಒಟ್ಟು ಸನ್ನಿವೇಶದ ಫಲಿತ ಮಾಳವಾಡರ ಪರವಾಗಿರುತ್ತಿತ್ತು. ಕಾರಣ 'ಜನರ ಮನ ನೊಂದೀತೆಂಬ ಹೆದರಿಕೆಯಿಂದ ಸತ್ಯಕ್ಕೆ ಅಪಮಾನ ಮಾಡದ ನಿಲುವು ಹಾಗೂ ಅನುಕೂಲತೆಗಿಂತ ಆತ್ಮಗೌರವ ಹೆಚ್ಚಿನದು. ಅಲ್ಲದೆ ಲಾಭಕ್ಕಿಂತ ತತ್ವನಿಷ್ಠೆ ಹೆಚ್ಚಿನದು' ಎಂಬ ಪ್ರಬಲ ಬಯಕೆ ಇದಕ್ಕೆ ಕಾರಣವಾಗಿರಬೇಕು.

ಪ್ರಾಮಾಣಿಕತೆ ಎನ್ನುವುದು ಮನಸ್ಸಿನ ಸ್ಥಿತಿಗಳಲ್ಲಿ ಒಂದು. ಅದು ಯಾವತ್ತೂ ಬದಲಾಗಬಹುದು. ಬದಲಾಯಿಸುತ್ತಲೇ ಇರುವವರು ಮಾತ್ರ ಲೋಕವ್ಯವಹಾರದಲ್ಲಿ ಯಶಸ್ವಿ ವ್ಯಕ್ತಿಗಳಾಗಿ ಮಿಂಚುತ್ತಿರುತ್ತಾರೆ ಎಂಬುದು ಸರ್ವಸಾಮಾನ್ಯ ಅಭಿಪ್ರಾಯ. ಅಂಥದೊಂದು ಮನಃಸ್ಥಿತಿಗೇ ಅಂಟಿಕೊಂಡಿದ್ದವರು ಲೋಕದ ಮನ್ನಣೆ ಪಡೆಯುವುದು ಕಷ್ಟಸಾಧ್ಯ ! ಸಂಸ್ಥೆಗಳಲ್ಲಿ ದುಡಿಯುವಾಗ ಈ ಮನ್ನಣೆಯನ್ನು ಮಾಳವಾಡರು ಪಡೆಯದೆ ಹೋದರೂ ಸ್ನೇಹ ಮತ್ತು ಶಿಷ್ಯರ ವಲಯದಲ್ಲಿ ಅದನ್ನು ಅಪಾರವಾಗಿ ಪಡೆದ ತೃಪ್ತಿ ಅನುಭವಿಸಿದ್ದಾರೆ. ಅಂಥ ಸಂದರ್ಭಗಳ ದಾಖಲೆಯನ್ನು ಅವುಗಳ ವಿವರಣೆಯನ್ನು ಅವರು ಕೃತಿಯಲ್ಲಿ ಯಥೇಚ್ಛವಾಗಿ ನೀಡಿದ್ದಾರೆ.

ಅವುಗಳಲ್ಲಿ ಗೋಕಾಕ, ಕುವೆಂಪು, ಕಾರಂತ, ಬೇಂದ್ರೆ ಮುಂತಾದವರ ಸಾಹಿತ್ಯ ಕುರಿತಾದ ಸನ್ನಿವೇಶಗಳು - ಸಾಹಿತಿಗಳು ಸ್ಮರಣೀಯವಾಗಿವೆ.

ದಾಂಪತ್ಯದ ಸಫಲತೆ ಸಂತಾನದಲ್ಲಿ ಎಂದು ಹೇಳುತ್ತಾರೆ. ಇದು ಭಾಗಶಃ ಸತ್ಯ. ಅನೇಕ ದಾಂಪತ್ಯಗಳು ಸಂತಾನದ ಕಾರಣವಾಗಿಯೇ ವಿಫಲತೆಯ ಚಿತ್ರಣಗಳನ್ನು ಸೃಷ್ಟಿಸಿದ್ದನ್ನು ನಮ್ಮ ಸಾಮಾಜಿಕ ಪರಿಸರದಲ್ಲಿ ಕಾಣುತ್ತೇವೆ ಸಹ. ಅದಕ್ಕೆ ಅಪವಾದವೆಂಬಂತೆ ಅವರ ದಾಂಪತ್ಯ ಸಂತಾನವನ್ನು ಪಡೆಯದಿದ್ದರೂ ಸಫಲತೆಯ ಫಲಿತಾಂಶಗಳನ್ನು ಅನುಭವಿಸಿದ್ದು ನಿಜ. ಸಹಧರ್ಮಿಣಿಯು ಬಂಜೆಯಾಗಿದ್ದಾಗ್ಯೂ ಮಾಳವಾಡರು ಮತ್ತೊಂದು ಮದುವೆಗೆ ಅಪೇಕ್ಷಿಸದೆ ನಿರ್ಲಿಪ್ತತೆಯನ್ನು ರೂಢಿಸಿಕೊಂಡರು. ಆ ಕಾರಣವಾಗಿ ಅವರು ಹಡೆದಪ್ಪನಾಗದಿದ್ದರೂ ಸಾಕಪ್ಪನಾದರು. ಅವರ ಆತ್ಮಚರಿತ್ರೆಯ ಬಹುತೇಕ ಪುಟಗಳಲ್ಲಿ ಸೋದರ, ಸ್ನೇಹಿತ, ದೊಡ್ಡಪ್ಪ, ಶಿಕ್ಷಕನಾಗಿ ಹಲವಾರು ಜನರ ಪ್ರೀತಿ ವಾತ್ಸಲ್ಯವನ್ನು ಅನುಭವಿಸಿದ ನಿದರ್ಶನಗಳಿವೆ. ಸಾಲದ್ದಕ್ಕೆ ಅದು ವಿನ್ಯಾಸಗೊಂಡಿರುವುದನ್ನು ಕೌಟುಂಬಿಕ ಜೀವನದ ಅತಿ ಮಹತ್ವದ ಅವಸ್ಥೆಗಳಾದ ಅಣ್ಣ, ಮಾಮಾಜಿ, ದೊಡ್ಡಪ್ಪ, ಅಜ್ಜ ಎಂಬ ಸಂಬಂಧಗಳಲ್ಲಿ ಎನ್ನುವುದನ್ನು ಗಮನಿಸಬೇಕು.

ಮಾಳವಾಡರ ಆತ್ಮಚರಿತ್ರೆಯ ಹರಹು ತುಂಬಾ ವಿಸ್ತಾರವಾದದ್ದು. ಅದು ಆರು ಭಾಗಗಳಲ್ಲಿ ಸುಮಾರು ಅರವತ್ತೇಳು ಉಪಶೀರ್ಷಿಕೆಗಳಲ್ಲಿ ವಿನ್ಯಾಸಗೊಂಡಿದೆ. ಇಲ್ಲಿನ ಬಹುತೇಕ ಉಪಶೀರ್ಷಿಕೆಗಳು ಒಂದು ಅರ್ಥದಲ್ಲಿ ನಮ್ಮ ನಾಡಿನ ಚರಿತ್ರೆಯ ಪುಟಗಳೇ ಆಗಿವೆ. ಇತಿಹಾಸದ ವಾಹಿನಿ ಪಡೆದುಕೊಂಡ ಚಮತ್ಕಾರಿಕ ತಿರುವು ಮತ್ತು ಹರಹುಗಳನ್ನು ಈ ಆತ್ಮಕಥೆ-ಚರಿತ್ರೆಯನ್ನೊಳಗೊಂಡೇ ವಿವರಿಸುತ್ತದೆ.

ಈ ವಿವರಣೆಗೆ ಕ್ಷೇತ್ರಬಿಂದು ಗೋವನಕೊಪ್ಪದಿಂದ ಆರಂಭವಾದರೂ ಅದರ ವ್ಯಾಸ ಪ್ರಪಂಚವನ್ನು ಸುತ್ತಿದ್ದು ಆಶ್ಚರ್ಯವಾದರೂ ಅಸತ್ಯವಲ್ಲ! ಕಾರಣ ಈ ಆತ್ಮವನ್ನು ಕ್ರಮೇಣವಾಗಿ ಆವರಿಸಿದ್ದು ಅರವಿಂದ ದರ್ಶನ. ಸಾಂತರ ಸಹವಾಸ ಸಾಕಾದಾಗಲೆಲ್ಲ ಈ ಆತ್ಮ ಸಂಗಾತಿಯೊಂದಿಗೆ ಅನಂತದ ಅರವಿಂದನ ಗೂಡು ಸೇರುತ್ತಿತ್ತು. ಸಮಾಧಾನ ಪಡೆಯುತ್ತಿತ್ತು. ಲೋಕಾಂತದಿಂದ-ಏಕಾಂತಕ್ಕೆ ಏಕಾಂತದಿಂದ-ಲೋಕಾಂತಕ್ಕೆ ಅಲೆಯುವ ಲೋಲಕವಾಗಿ ಮಾಳವಾಡರು ಲೋಕವನ್ನು ಸುತ್ತಿದವರು. ಬದುಕಿನ ಸಮೃದ್ಧ ಅನುಭವ ಸಂಪಾದಿಸಿದ ಅವರು, ಸಂಪಾದಿಸಿದ್ದನ್ನು ನಿಸ್ವಾರ್ಥವಾಗಿ ಕಟ್ಟಿಕೊಟ್ಟು ಹಾಗೆಯೇ ಬಿಟ್ಟು ಹೋದವರು!

ಶಶಿಧರ ಆರ್. ತೋಡಕರ, ೭ ನೇ ಅಡ್ಡರಸ್ತೆ, ಕಲ್ಯಾಣನಗರ, ಧಾರವಾಡ - ೫೮೦ ೦೦೭

ಚೇಂಜ್ ಆಫ್ ಗಾರ್ಡ್ಸ್

ಆಯರ್ನ

ಕತೆ

ಎರಡನೇ ಮಹಾಯುದ್ಧ ಮುಗಿದು ಎರಡು ವರ್ಷ ಕಳೆದಿತ್ತು. ಎಂದಿನಂತೆ ಲಂಡನ್‌ನ ಜಗತ್ಪ್ರಸಿದ್ಧ ಬಕ್ಕಿಂಗ್‌ಹಾಮ್ ಅರಮನೆಯ ದಿವ್ಯಮಹಾದ್ವಾರದಲ್ಲಿ ಬೆಳಿಗ್ಗೆ ೧೧-೩೦ ಗಂಟೆಗೆ ಚೇಂಜ್ ಆಫ್ ಗಾರ್ಡ್ಸ್ ಕಾರ್ಯಕ್ರಮ ಭವ್ಯವಾಗಿ ನಡೆದಿತ್ತು. ಯಥಾವತ್, ವಿಶ್ವದ ಎಲ್ಲೆಡೆಯಿಂದ ಬಂದ ಸಹಸ್ರಾರು ಪ್ರೇಕ್ಷಕರು. ೧೭೦೩ ರಲ್ಲಿ ಬಕ್ಕಿಂಗ್‌ಹಾಮ್ ಡ್ಯೂಕ್ ಕಟ್ಟಿದ್ದ ಅರಮನೆಯಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಞಿ ವಿಕ್ಟೋರಿಯಾ ೧೮೩೭ ರಲ್ಲಿ ವಾಸಿಸತೊಡಗಿ, ಅಂದಿನಿಂದ ಇಂದಿನ ತನಕ ಅವಿರತ ಕರೆಕ್ಟ್ ೧೧-೩೦ ಗೆ ನಡೆಯುವ ಗಾರ್ಡ್ಸ್

ಚೇಂಜುವ ಕಾರ್ಯಕ್ರಮ ಒಂದು ದಿನವೂ ತಪ್ಪಿಲ್ಲ ! ಹಿಟ್ಲರನ ಬಾಂಬರುಗಳು ಲಂಡನ್ನನ್ನು ೪೦ ದಿನ ಕುಟ್ಟಿ ಕುಟ್ಟಿದ್ದಾಗಲೂ ಈ ಗಾರ್ಡ್‌ಗಳ ಮಾರ್ಚ್ ಅನೂಚಾನ ನಡೆದಿತ್ತು. ಆವಾಗ ಅದರ ಮಹತ್ವ ತಿಳಿಯುತ್ತದೆ. ಈ ಗಾರ್ಡುಗಳ ಕಾರ್ಯನಿಷ್ಠೆ, ಅಪಾರ ಧೈರ್ಯ ನೋಡಿ ಆಳಿದಲ್ಲಿ ಇಂಗ್ಲಿಷ್ ಬೆಟಾಲಿಯನ್‌ಗಳೂ ಹೀಗೇ ಇರಬೇಕೆಂದು ಹಿಟ್ಲರ್‌ಗೆ ಸಂದೇಹ ಬಂದುದರಿಂದ ಜರ್ಮನಿ ೨ನೇ ಯುದ್ಧದಲ್ಲಿ ಸೋಲತೊಡಗಿತೆಂದು ಇಂದೂ ಅನ್ನುವ ಕೆಲ ವಯಸ್ಸಾದ ಇಂಗ್ಲಿಷ್ ಜಂಟಲ್‌ಮನ್‌ರು ಇದ್ದಾರಂತೆ. ಈ ಗಾರ್ಡ್ಸ್ ಚೇಂಜಾಗುವ ಈ ರಿಚುವಲ್‌ನ್ನು ಒಂದು ಘನಸಂಕೇತವಾಗಿ ನೂರಾರು ವರುಷ ನಿರಂತರ ನಡೆಸಿ ತಂದ ಇಂಗ್ಲಿಷರ ದಕ್ಷ, ಧೀರ ಪಟ್ಟನೆಯೂ ನಮ್ಮದೇನೂ ನಡೆಯದೆಂದು ಪ್ರಪಂಚದ ಡಜನಾರು ಕಿರೀಟ ತಲೆಗಳು ಬಾಗಿದಾಗ. ವಿಶ್ವಾದ್ಯಂತ ಬ್ರಿಟಿಷ್ ವಸಾಹತುಗಳು ಸೋತಿತವೆಂದು, ಹೈಡ್ ಪಾರ್ಕ್‌ನಲ್ಲಿ, ಥೇಮ್ಸ್ ದಂಡೆಯಲ್ಲಿ ಚಿಲಿ ವಾಕಿಂಗ್‌ನಲ್ಲಿ ನಿಟ್ಟುಸಿರ್ ಬಿಡುತ್ತಾ ಇಂಗ್ಲಿಷ್ ಹಿರೀರು ಇನ್ನೂ ಅನ್ನುತ್ತಾರಂತೆ.

ಈ ಚೇಂಜ್ ಆಫ್ ಗಾರ್ಡ್ಸ್ ನಡೆಯುವುದು ದಿವ್ಯ ಅರಮನೆಯ ಕಾಂಪೌಂಡಿನ ಭವ್ಯ ಅಂಗಳದಲ್ಲಿ. ಸಿಂಹಾಸನ ಕೋಣೆ, ಲೈಬ್ರರೀ, ಶಿಲ್ಪಗ್ಯಾಲರೀ, ನೀಲ ಬಿಳಿ ಡ್ರಾಯಿಂಗ್‌ರೂಂ, ಡಜನ್ ಬಾತ್‌ರೂಂ, ಬೆಡ್‌ರೂಂ ಎಂದು ೬೦೦ ಕೋಣೆಗಳ ೪೦ ಎಕ್ರೆ ಹಬ್ಬಿದ ಲಂಡನ್ನಿನ ಅರಮನೆ. ನೂರಾರು ದೇಶಗಳ ದೊರೆಗಳು ಕಿರೀಟ ಕಳಚಿ ಹ್ಯಾಟ್ ಹಾಕಿ ಇಂಗ್ಲೆಂಡ್ ರಾಣಿಗೆ ಶಿರಬಾಗಿದ ಅರಮನೆ. ಹಿಟ್ಲರನ ಕಿರಿಕಿರಿಯೊಂದು ಇಲ್ಲವಾಗಿದ್ದಲ್ಲಿ ಆ ನೂರಾರು ಅರಸರ ಮರಿಮೊಮ್ಮಕ್ಕಳು ಇಂದು ತಲೆಬಾಗಬಹುದಾಗಿದ್ದ ಅರಮನೆ. ಇದರ ಇದಿರು ಅಂಗಳದಲ್ಲಿ, ಬಿಗಬೆನ್ ಗಡಿಯಾರ ಕರೆಕ್ಟ್ ೧೧-೩೦ ಬಡಿದಾಗ ಗಾರ್ಡ್ಸ್ ಚೇಂಜುವ ವಿಧಿವಿಧಾನ ಚಾಲೂ ಆಗುತ್ತದೆ. ಗೇಟಿನ ಹೊರಗೆ ವಿಕ್ಟೋರಿಯಾ ಮೆಮೋರಿಯಲ್‌ನ ಸಿಂಹ, ಸ್ವಾತಂತ್ರ್ಯದೇವಿಗೆ ದೇವಿ, ಹೂಬಳ್ಳಿ ಶಿಲ್ಪಗಳ ಆಜುಬಾಜೂ ನೆರೆದ ಪ್ರೇಕ್ಷಕ ಮಂಡಳಿಗೆ ದಾರಿತೋರುತ್ತ ನಿಯಂತ್ರಿಸುತ್ತ ಅಶ್ವಾರೋಹೀ ಪೋಲೀಸರ ಭಾರೀ ಕುದುರೆಗಳ ಗೊರಸು ಸುತ್ತಲ ನೆಲ ವಸಾಹತುಗಳೋ ಎಂಬಂತೆ ನೆಲ ಬಡಿಯುವಾಗ ಅಂಗಳದೊಳಗಿನ ಮುಖ್ಯ ಕಾರ್ಯಕ್ರಮದ ಮುನ್ನುಡಿಯಾಗುತ್ತದೆ.

ಆರ್ಕೆಸ್ಟ್ರಾ ವಾದ್ಯಗಾರರ ಸನ್ನೆಕೋಲಿನ ಜೊತೆಗೆ ಟೀಟಿ ಊದುತ್ತ ಡ್ರಂ ಬಡಿಯುತ್ತ ನಾರ್ವೇಜಿಯನ್ ಕಪ್ ಆಳತಿಗೆ ಹೆಜ್ಜೆ ಹೊಡೆಯುತ್ತ ಒಂದು ಪ್ಲಾಟೂನ್ ಪ್ಯಾಲೇಸ್ ಗಾರ್ಡುಗಳು ಬಲಗಡೆಗೆ ಮಾರ್ಚ್ ಮಾಡುತ್ತಾರೆ. ಅಷ್ಟೇ ಇನ್ನೊಂದು ಪ್ಲಾಟೂನ್ ಬಲದಿಂದ ಎಡಕ್ಕೆ. ಈ ಗಾರ್ಡುಗಳು ಅರಮನೆಯ ಕಾವಲಿನ ಏಕಮೇವ ಧ್ಯೇಯದ ವಿಶೇಷ ಸೈನಿಕರು. ಕರಡಿತುಪ್ಪಳದಂಥ ೨ ಫೀಟು ಉದ್ದ ಟೋಪಿ. ವರಕರಾಜಿತ ಕೆಂಪು ಕೋಟು ಕರಿ ಜೊಲ್ಲು ಬೂಟುಗಳಲ್ಲಿ ಶತಮಾನಗಳಿಂದ ಎತ್ತರ ಕಾಲೆತ್ತಿ ನೆಲ ಬಡಿದು ನಡೆಯುವ ಗಾರ್ಡುಗಳು. ಎಡದಿಂದ ಥಪ್ ಥಪ್ ಎಂದು ಆನ್‌ವರ್ಡ್ ಮಾರ್ಚ್‌ನಲ್ಲಿ ಬಲಪ್ಲಾಟೂನನ್ನು ಸಂಧಿಸಿ, ನಡುನಡುವೆ ಕೆಲಗಾರ್ಡುಗಳು ಪ್ರೇಕ್ಷಕರ ಕಡೆ ಥಪ್ ಥಪ್ ನಡೆದು ತಲವಾರು ಮೇಲೆತ್ತಿ ಕೆಳಬೀಸಿ, ಕಪ್ಪಗಿನ ಸರಳು ನಡುವೆ ಕಾಣಿಸ ಕಣ್ಣಿಂದ ಹೊಂಚೆಯಂತೆ ಪ್ರೇಕ್ಷಕರನ್ನು ದಿಟ್ಟಿಸಿದಾಗ, ಐಸ್‌ಕ್ರೀಂ ಚೀಪುವ, ಟಾಫೀ ಕಡಿಯುವ. ಚುಯಿಂಗ್ ಗಂ ಮೆಲುಕಾಡುವ ವಿಶ್ವಪ್ರೇಕ್ಷಕರು ಮೆಲ್ಲುವುದು ನಿಲ್ಲಿಸಿ ಬೆರಗಾಗಿ ನಿಲ್ಲುವರು. ಕಟ್ಟಕಡೆಗೆ ಎರಡೂ ಪ್ಲಾಟೂನ್‌ಗಳು ಮುಖಾಮುಖಿಯಾಗಿ. ಮುಂದಿನ ದಿನ ಅರಮನೆಯನ್ನು ಕಾಯುವ ಮಹಾಜವಾಬ್ದಾರಿಯನ್ನು ಪಾಳಿಯ ಇನ್ನೊಬ್ಬರಿಗೆ ಒಪ್ಪಿಸಿ ಅಬೌಟ್ ಟರ್ನ್ ಆದಾಗ ಟೀಟಿ ಡ್ರಂ ಗಳ ಸಂಗೀತ ಚರಮಕ್ಕೆ ಮುಟ್ಟಿದಾಗ ಪ್ರೇಕ್ಷಕರ ಅಪಾರ ಹೃದಯೋದ್ಗಾರದೊಡನೆ ಕಾರ್ಯಕ್ರಮ ಮಂಗಲಗೊಳ್ಳುತ್ತದೆ.

* * * * *

ಎರಡನೇ ಯುದ್ಧ ಮುಗಿದ ಎರಡು ವರ್ಷದ ನಂತರ. ಕಾಲುಬಿಸಿಲಿನ ಸಮ್ಮರ್‌ನ ಒಂದು ಮುಂಜಾನೆ ಎಂದಿನಂತೆ ಗಾರ್ಡ್ ಚೇಂಜಿನ ಕಾರ್ಯಕ್ರಮ ಸುರಳೀತ ನಡೆದಿತ್ತು. ಎಂಥಾ ಮಹಾ ಉತ್ಸವದಲ್ಲೂ ಅಲ್ಲೊಂದು ಇಲ್ಲೊಂದು ಮೂಲೆಯಲ್ಲಿ ಚಿಲ್ಲರೆ ಘಟನೆಗಳು ನಡೆಯುವಂತೆ ಪ್ಯಾಲೇಸ್‌ನ ಬಾಜೂ ಇರುವ ಗ್ರೀನ್ ಪಾರ್ಕಿನಲ್ಲೂ ಒಂದು ಚಿಕ್ಕ ಪ್ರಸಂಗ ನಡೆದಿತ್ತು. ಗ್ರೀನ್ ಪಾರ್ಕ್ ನೂರಾರು ಎಕರೆಯ ಪೈನ್, ಬರ್ಚ್, ಮೇ ಫ್ಲವರ್, ಮೇಪಲ್ಸ್ ಮುಂತಾದ ಶತಮಾನ ಬೆಳೆದ ನೆರಳು ಬೀರುವ ಮರಗಳಿಂದ ತುಂಬಿದ ಪ್ರೇಕ್ಷಣೀಯ ಉದ್ಯಾನ, ಥೇಮ್ಸ್ ನದಿ, ಲಂಡನ್ ಬ್ರಿಜ್, ಶೇಕ್ಸ್‌ಪಿಯರ್ ಥೇಟರು, ೧೨೧೫ ನೇ ಇಸವಿಯ ಮಾಗ್ನಾಕಾರ್ಟಾ, ೧೬೪೯ ರಲ್ಲಿ ದಬ್ಬಾಳಿಕೆಯ ಚಾರ್ಲ್ಸ್ ದೊರೆಯನ್ನು ಹತ್ಯೆಮಾಡಿ ಕ್ರಾಮ್‌ವೆಲ್ಲರ ನಾಯಕತ್ವದಲ್ಲಿ ಅರಮನೆಗಿಂತಲೂ ಪಾರ್ಲಿಮೆಂಟೇ ಮೇಲೆಂದು ಪ್ರಪಂಚಕ್ಕೇ ಪ್ರಜಾಸತ್ತೆಯನ್ನು ಘೋಷಿಸಿದ ಗುಡಿಯಾದ ವೆಸ್ಟ್‌ಮಿನಿಸ್ಟರ್ ಅಬ್ಬೀ ಮಹಾಮನೆ, ವಿಷಯ. ಮುಂದಿ ಇದ್ದರೂ ಇಲ್ಲದಿದ್ದರೂ ಮುಕ್ತವಾಗಿ ಏನೂ ಭಾಷಣ ಮಾಡಬಹುದಾದ ವಿಚಾರ ಸ್ವಾತಂತ್ರ್ಯದ ಕಡುಸಂಕೇತವಾದ ಹೈಡ್‌ಪಾರ್ಕ್, ಮುಂತಾದುವನ್ನು ಟೂರಿಸ್ಟರು ತಪ್ಪದೇ ಸಂದರ್ಶಿಸುವಂತೆ, ಯಾತ್ರಿಯಾಗಿ ವಿಸಿಟ್ಟು ಮಾಡುವ ಇನ್ನೊಂದು ಸ್ಥಳ ಈ ಗ್ರೀನ್ ಪಾರ್ಕ್. ಅಂತೆಯೇ, ಮುಂಜಾನೆ ಬಿಸಿಲು ಸ್ನಾನ, ಸಂಜೆ ವಾಕಿಂಗು, ಮುದುಕ ಮುದುಕಿಯರ ಮೀಟಿಂಗು ಮುಂತಾದ್ದಕ್ಕೆ ತಾಣವಾದ ಈ ಪಾರ್ಕು ಎಂದೂ ಜನರಿಂದ ತುಂಬಿರುತ್ತಿತ್ತು. ಟೂರಿಸ್ಟರು ಅಂದಮೇಲೆ ವಸಾಹತುಗಳಿಂದ ಬಂದ ಕರಿ, ಕರಿಬಿಳಿ, ಕಂದು ಜನರೂ ತುಂಬಿರುತ್ತಿದ್ದರು. ಅಲ್ಲದೆ. ವೆಸ್ಟ್ ಇಂಡೀಸ್‌ದಿಂದ ಕೂಲಿಗಳು ದುಡ್ಡುಮಾಡಿ ಲಂಡನ್ನಿಗೆ ಜಿಗಿದ ಇಂಡಿಯಾದ ವೈಸ್‌ರಾಯ್ ಕಲೆಕ್ಟರು ಮುಂತಾದವರು ಮರಳುವಾಗ ಜತೆ ತಂದ ಅಡುಗೆ ಪಡುಗೆಯವರು, ಇಂಡಿಯಾದಿಂದ ಬಾರ್ ಎಟ್ ಲಾ, ಆಕ್ಸ್‌ಫರ್ಡ್ ಅಧ್ಯಯನ ಮುಂತಾಗಿ ವಲಸೆ ಬಂದ, ಸೌತ್‌ಹಾಲ್ ನೆಲೆಯಲ್ಲಿ ಜಮಾಯಿಸಿದ್ದ ಲಕ್ಷಗಟ್ಟಲೆ ಜನರಲ್ಲಿ ಅನೇಕರು ಈ ಪಾರ್ಕಿಗೆ ಆಸ್ವಾದಿಸಲು ಬರುವುದು, ಅದೊಂದು ಇಂಗ್ಲೆಂಡಿನ ಮಲ್ಟಿಕಲ್ಚರಲ್ ಉದಾತ್ತ ಮನೋಭಾವವನ್ನು ಪ್ರತಿನಿಧಿಸುತ್ತಿತ್ತು.

ಆ ಉದಾತ್ತ ಭಾವಕ್ಕೆ ಅಲ್ಲಿ ಗುಜರಾತದಿಂದ ಬಂದು ಹೊಟ್ಟೆ ಬೆಲ್ಟಿನ ಮೇಲೆ ತೆಗಲಿಂದ ಜೋತುಬಿದ್ದ ಕಲಾಪತ್ತಿನ ರಾಜಸ್ಥಾನೀ ಬುಟ್ಟಿಯಲ್ಲಿ ಇಂಡಿಯಾದ ಹುರಿದ ಶೇಂಗಾ, ಪುಟಾಣಿಗಡಲೆ, ಗುಜರಾತೀ ಮಿಠಾಯಿಗಳೊಡನೆ ಇಂಗ್ಲೆಂಡಿನ ಫಿಶ್ ಎಂಡ್ ಚಿಪ್ಸ್, ಮಿಂಟ್, ಬಿಸ್ಕತ್ತು ಇತ್ಯಾದಿ ನಡೆಯುತ್ತಾ ಪಾರ್ಕಿನಲ್ಲಿ ಮಾರುವ, ಇಂಗ್ಲೀಷರಂತೆಯೇ ದೊಗಳೆ ಪ್ಯಾಂಟು ಕೋಟು ಹ್ಯಾಟು ಧರಿಸಿದ ಯುವಕ ಲಖಮೀಶ್ ಭಾಯ್‌ಯೇ ಸಾಕ್ಷಿ. ಓರಿಯಂಟಲ್, ಎಕ್ಸಾಟಿಕ್, ಕುತೂಹಲ, ತಮ್ಮ ವರ್ಣೀಯನೆಂದು, ರೇಸಿಸಂ ಇರಬಾರದೆಂದು, ಎಲ್ಲಾ ಜನ ಧಾರಾಳವಾಗಿ ಖರೀದಿಸುತ್ತಿದ್ದುದರಿಂದ ಲಖಮೀಶ್ ಭಾಯ್‌ಯ ವ್ಯಾಪಾರ ಬಹಳ ಲಾಭದಾಯಕವಾಗಿ ನಡೆದಿತ್ತು. ಆದರೆ, ಇಡೀ ಗಾರ್ಡನ್ನಿಗೇ ಮೊನೋಪೊಲಿಯಾಗಿದ್ದ ಲಖಮೀಶ್‌ನ ಧಂಧೆಗೆ ಆ ಒಂದು ದಿನ ಕುತ್ತು ಬಂದಿತ್ತು! ಅವನಂತೆಯೇ ಉಡುಗೆ ಧರಿಸಿ, ಅಂತೇ ಇರುವ ಬುಟ್ಟಿಯಲ್ಲಿ, ಅವೇ ತಿಂಡಿತಿನಿಸುಗಳನ್ನು ಮಾರುವ, ಅವನದೇ ಮೈಬಣ್ಣದ ಇನ್ನೊಬ್ಬ ಯುವಕ ಹಾಜರಾಗಿದ್ದ!

ಕೇಳಬೇಕೇ! ಎರಡು ಟಗರುಗಳಂತೆ ಹಣಾಹಣಿ ಶುರುವಾಯ್ತು. ಲಖಮೀಶ್‌ಗೆ ಹೊಟ್ಟೆಪಾಡಿಗೇ ಕುತ್ತು ಬಂದಿರುವಾಗ ಸಹಜವಾಗೇ ಸಿಟ್ಟು ಉಕ್ಕಿ, ಜಂಟಲ್‌ಮನ್ ಲಂಡನ್‌ನಲ್ಲಿ ಮೈಕೈ ಮಾಡಿ ಜಗಳಾಡುವುದು ಉಚಿತವಲ್ಲವೆಂಬುದು ಮರೆತು ಹೊಸಬನ ಬುಟ್ಟಿ ಕುಟ್ಟಿ ಶೇಂಗಾ ಚೆಲ್ಲಿ ಕಾಲರ್ ಹಿಡಿದಾಗ. ಸಂಜೆ ವಾಕಿಂಗಿಗೆ ಬಂದಿದ್ದ ಹೌಸ್ ಆಫ್ ಲಾರ್ಡ್ಸ್‌ನ

ಎಂ.ಪಿ. ಲಾರ್ಡ್ ಎಡ್ವರ್ಡರು ಬಂದು. "ನೋ ನೋ. ಡೀಸೆಂಟಾಗಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕು ಬಾಯ್ಸ್" ಎಂದಾಗ, ಇಬ್ಬರೂ ಶಾಂತರಾದರು. ಹತ್ತು ನಿಮಿಷ ಮಾತಿಲ್ಲದೆ ಅಜೂಬಾಜೂ ಕುಂತು. ಅವರಿಬ್ಬರೂ "ನೀ ಕಹ್ಞಾ ಸೇ ಆಯೀ ?", "ತುಂ ಕಹ್ಞಾ ಸೇ ಬಂದೀ ?", ಎಂದು ವಿಚಾರವಿನಿಮಯಿಸಿದಾಗ, ಲಚಮನ್ ಸೂರತ್‌ನಿಂದ ಬಂದವನೆಂದೂ, ಮೊಸಬು ಲತೀಫ ಲಾಹೋರಿಂದ ಬಂದವನೆಂದೂ ಅವರಿಬ್ಬರನ್ನೂ ಸೇಲ್ಸ್‌ಮನ್ ಮಾಡಿದ ಕಾಮನ್ ಮಾಲಕನು ಚಂಡೀಗಡದ ಗುರುಮಿತ್‌ಸಿಂಗ್ ಭಲ್ಲಾ ಎಂದೂ ತಿಳಿದಾಗ, ಇಬ್ಬರೂ ಪರಮಾಶ್ಚರ್ಯಗೊಂಡು ಸಂತಸದಿಂದ ಇಂಗ್ಲಿಷ್ ಪದ್ಧತಿಯಲ್ಲಿ ಶೇಕ್‌ಹ್ಯಾಂಡ್ ಮಾಡಿದಾಗ, ದೂರದಿಂದ ಲಾರ್ಡ್ ಎಡ್ವರ್ಡರು ಮುಗುಳ್ನಕ್ಕರು. ಅವರ ಮುದಹಾಸಕ್ಕೆ ಡಬ್ಬಲ್ ಅರ್ಥವೂ ಇತ್ತು. ಯಾಕೆಂದರೆ, ಅದೇ ಹೊತ್ತಿಗೆ ಪಾರ್ಕಿನ ಗೇಟಿನಿಂದ ಅವರ ಗೆಳತಿ ಸಿಂಥಿಯಾ ಲಾರೆನ್ಸ್ ಕೈ ಬೀಸುತ್ತ ಒಳಬರುತ್ತಿದ್ದಳು.

ಮತ್ತೆ ಈ ಇಂಡಿಯಾದ ಹುಡುಗರ ಕಡೆ ಬರೋಣ. ಇವರ ಮಾತಿನಂತೆ ಮರುದಿನ ಕಾಮನ್ ಮಾಲಕ ಗುರುಮಿತ್ ಭಲ್ಲಾರು ತಮ್ಮ ಹೊಸದಾಗಿ ಖರೀದಿಸಿದ ರಾಲ್ಸ್‌ರಾಯ್ಸ್ ಕಾರಲ್ಲಿ ಪಾರ್ಕಿಗೆ ಬಂದು ಇಬ್ಬರು ಹುಡುಗರನ್ನೂ ಸಮಜಾಯಿಸಿ, ಅವರಿಬ್ಬರೂ ದಿನಬಿಟ್ಟು ದಿನದ ಪಾಳಿಯಲ್ಲಿ ವ್ಯಾಪಾರ ಮಾಡಬೇಕೆಂದು ಆಣತಿ ಮಾಡಿದರು. ಬಿಗ್‌ಬೆನ್ನಲ್ಲಿ ಸಂಜೆ ೬ ಹೊಡೆದಾಗ ಲಚಮನ್ ಲತೀಫ್‌ಗೆ ಮರುದಿನ ಲತೀಫ್ ಲಚಮನ್‌ಗೆ ಬುಟ್ಟಿ ಒಪ್ಪಿಸಬೇಕು. "ಬೇವಕೂಫ್, ಲಂಡನ್ ಮರ್ಯಾದಸ್ಥರ ಊರು. ನಿಮ್ಮ ಕಣ್ಣಿದುರೇ ಅಲ್ಲಿ ಅರಮನೆಯಲ್ಲಿ ಗಾರ್ಡುಗಳನ್ನು ನೋಡುತ್ತೀರಲ್ಲ. ಎಷ್ಟು ಚಂದಾಗಿ ಟೈಂಶೀರು ಡ್ಯೂಟಿ ಇನ್ನೊಬ್ಬರಿಗೆ ಒಪ್ಪಿಸುತ್ತಾರೆ ! ನೋಡಿಯಾದ್ರೂ ಕಲೀರಿ" ಎಂದು ಮಾಲಕ ಆಣತಿ ಮಾಡಿದಾಗ, ಇಬ್ಬರೂ ಹುಡುಗರು ಗಾರ್ಡ್ ಗೊಂಬೆಗಳಂತೆ ಒಂದೇ ರೀತಿ ತಲೆ ಅಲ್ಲಾಡಿಸಿದರು. ಅದನ್ನು ಕಾರ್ಯರೂಪಕ್ಕೆ ತಂದರು ಕೂಡಾ. ಸಂಜೆ ಕರೆಕ್ಟ್ ೬ ಗಂಟೆಗೆ ಲಚಮನ್, ಲತೀಫರು ಹತ್ತು ಹೆಜ್ಜೆ ನಿಧಾನವಾಗಿ ಪರಸ್ಪರರ ಕಡೆ ನಡೆದು, ಸೆಲ್ಯೂಟ್ ಹೊಡೆದು, ಬುಟ್ಟಿ ಒಪ್ಪಿಸಿ, ಎಬೌಟ್ ಟರ್ನ್ ಆಗಿ ಬೇರೆ ಬೇರೆ ಹೋಗಿಬಿಡುತ್ತಿದ್ದರು. ದಿನವೂ ಆ ಹೊತ್ತು ಪಾರ್ಕಿನಲ್ಲಿರುವ, ಅಪರೂಪವಲ್ಲಿ ನಗುವ ಲಾರ್ಡ್ ಎಡ್ವರ್ಡರೂ ಅವರ ಗೆಳತಿ ಸಿಂಥಿಯಾಳೂ ಅದನ್ನು ನೋಡಿ ನಕ್ಕು ಚಪ್ಪಾಳೆ ತಟ್ಟಿ ನಕ್ಕರು. ಅಂತೆಯೇ ನೆರೆದಿದ್ದ ಪ್ರೇಕ್ಷಕರು ಕೂಡಾ. ಈ ವಿನೋದದಿಂದ ವ್ಯಾಪಾರವೂ ಕುದುರಿತ್ತು.

ಭಲ್ಲಾ, ಬರೇ ಇಂತಹ ಚಿಲ್ಲರೆ ವ್ಯಾಪಾರ ಮಾತ್ರದ ಕುಳವಲ್ಲ. ಅವನೀಗ ದೊಡ್ಡ ಕುಳ. ತಲೆಮಾರುಗಳ ಹಿಂದೆ ವೆಸ್ಟ್‌ಇಂಡೀಸ್‌ನ ಎಸ್ಟೇಟುಗಳ ಲೆಕ್ಕಪತ್ರ ಬರೆಯಲು ಹೋದ ಭಲ್ಲಾಕುಟುಂಬ ಮುಂದೆ ರೊಕ್ಕ ಮಾಡಿ, ಇಂಗ್ಲಿಷ್ ಬಾರಿ ದೋಣಿಸಿ ಲಂಡನ್‌ನಲ್ಲಿ ಬೇರುಬಿಟ್ಟು, ಅಲ್ಲಿನ ಮೋಡ ಧಂಡಿಗಳಲ್ಲಿ ಹೆಚ್ಚು ಬೆಳೆಯಲ್ಲಗೊಂಡು, ಈಗ ಆಕ್ಸ್‌ಫರ್ಡ್ ಸರ್ಕ್ಯೂಟ್‌ನಲ್ಲಿ ಪಕ್ಕಾ ಇಂಗ್ಲಿಷ್ ಜಾಲಾಡಬಲ್ಲವನಾಗಿದ್ದ ಗುರುಮಿತ್ ಭಲ್ಲಾ. ಸೌತ್‌ಹಾಲಿನಲ್ಲಿ ಬಂಗ್ಲೆ ಖರೀದಿಸಿ, ಸಣ್ಣಾಗಿ ಆರಂಭಿಸಿದ ಜನರಲ್ ಸ್ಟೋರ್ ಬೆಳೆದು. ಥೇಮ್ಸ್ ನದಿ ದಡದಲ್ಲಿ ಅಲ್ಲಲ್ಲಿ ಚುಟ್ಟಾ ಕಿರಾಣಿ ಅಂಗಡಿಗಳು, ಬೇಸ್ ವಾಟರ್, ಟಿಕ್ಕಾಡಲಿಗಳಲ್ಲಿ ಪಬ್ಬುಗಳು, ಗ್ರೀನ್, ಹೈಡ್, ರೀಜೆಂಟ್ ಪಾರ್ಕುಗಳಲ್ಲಿ ಶೇಂಗಾ ಬಿಸ್ಕತ್ತು ಮಾರಾಟ ಮುಂತಾಗಿ ಅಂಗಡಿ ಚೈನುಗಳು ಉದ್ದವಾಗುತ್ತ ಹೋದವು. ಅವುಗಳ ಮುನಾಫೆ ಜಮಾಯಿಸಿ ಮೊಂಚೆಸ್ಟರ್‌ನಲ್ಲಿ ಸಣ್ಣ ಕಾಟನ್ ಮಿಲ್ಲಿಗೂ ಫೌಂಡೇಶನ್ ಹಾಕಿದ್ದ. ಇವನ್ನು ಅವನ ಕೆಲ ನೆರೆಯ ಇಂಗ್ಲಿಷರೂ ಮೆಚ್ಚಿ 'ಇಂಡಿಯಾ ಮಾಫಿಯಾ' ಎಂದು ನಗುತ್ತಿದ್ದರು. 'ಲಿರಿಕ್ಸ್ ಫೇರ್', 'ದುಬ್ತ ವಾರಾಹಕ್ಕೆ'

ಸಿನ್ಹಾರಂತ ಸುಬ್ಬು ಆ ಜನರು. ಅವರ ಫಸ್ಟ್‌ನ್ಯಾಸ್ಕ ರೇಷ್ಮದ ಕೈ ಬಾಕ್ ಏನೇನೂ ಅನ್ನುವುದಿಲ್ಲ. ಬದಲಿಗೆ, ಅವ ಉದಾರಿ. ಬಡವರ ಬಗ್ಗೆ ಕನಿಕರ. ಏನೇನೋ ರೀತಿ ಪಾಠ ಬಂದ ಬಡ ಬಿಳಿಯರಿಗೆ ತನ್ನಂಗಡಿ ಸಮವಾಲಿಂದಲ್ಲಿ ನೌಕರಿ ಕೊಟ್ಟ. ಸ್ವಾರ್ಥಪರಾರ್ಥ ಎರಡೂ ಇದ್ದ ಬಿಟ್ಟ. ಅವನ ಮುಖಿ ಹೇರ್ ಕಟಿಂಗ್ ಸಲೂನ್ ಕನ್ನಡಿಗಳ ಮುಂಗಸಂತೆ ಬಯಯುಯು. ಗಾಂಧೀಜಿಯವರು ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಬಂದಾಗ ಹುಡುಕಾಡಿ ಆಡಿನ ಹಾಲು ಕೊಟ್ಟಿದ್ದ. ಆ ಪಟೇಲರಿಗೆ ಕೋಟು ಹೊಲಿಸಲು ವಿಸ್ಕಾನ್ಸಿನ್ ಪಾರ್ಕ್‌ನ ರೆಡಿಮೇಡ್ ಅಂಗಡಿಗೆ ಬಿಟ್ಟಿದ್ದ. ಅಷ್ಟೇ ಇಂಗ್ಲಿಷರ ಬಗ್ಗೆ ಕ್ರಿಪ್ಸ್ ಕೂಡಾ. ಮಹಾರಾಯನ್ನು ವಿರೋಧಿಸಿ ತತ್ವಜ್ಞಾನಿ ರಸ್ಸೆಲ್ಲರು ಜೈಲುಗೊಂಡಾಗ, ಅವರ ಮನೆಯ ಮುಟ್ಟಿ ಟ್ಯೂಲಿಪ್ ಹೂಗಿಡ್ಡ ಜೈಲಿಗಿಟ್ಟ ಅರ್ಪಿಸಿದ್ದ. ಕೇಂಬ್ರಿಡ್ಜ್‌ನಲ್ಲಿ ಇಂಗ್ಲಿಷ್ ಪೋಸ್ಟ್ ಗ್ರಾಜುಯೇಟ್ ಫಸ್ಟ್ ಬಂದವರಿಗೆ ಮೆಡಲ್ ಇರಿಸಿದ್ದ. ಜತೆಗೇ ರಸಿಕ ಕೂಡಾ. ಚಂದ ಹೆಣ್ಣುಮಕ್ಕಳೆಂದರೆ ಬಾಯಿಗೊಂಡು. ಪ್ರಪ್ರಲ್ಲವಾಗಿ ಒಮ್ಮೊಮ್ಮೆ ಸರಸವೂ ಆಡುತ್ತಿದ್ದ. ಪಾಡಿ ಪಗಡಿ ಬಿಟ್ಟ ವಿಸ್ತಾರ ಸುಂದರ ಹಾಸ್ಯಭರಿ ಯುವತಿ ಗುರುಮಿತ್ ಸಿಂಗ್ ಫಲ್ಗಾನ ನವ್ವರು. ಬಿಟ್ಟಿಗಿನ ಹೃದಯಕ್ಕೆ ಇಂಗ್ಲಿಷ್ ಹುಡುಗಿಯರೂ ಮೋಹಗೊಳ್ಳುತ್ತಿದ್ದರು.

* * * * *

ಇನ್ನು ಲಾರ್ಡ್ ಎಡ್ವರ್ಡ್‌ರ ಬಗ್ಗೆ ಹೇಳೋಣವೆಂದರೆ : ಅವರದ್ದು ಹೆಸರಾಂತ ಮನೆತನ. ೧೭೬೪ರಲ್ಲಿ ಮೊಗಲ್ ಅಲಿ ಗೌಹರ್, ಶಿಥ್ ಸುಜಾದ್ ಮತ್ತು ಮೀರ್ ಕಾಸಿಮರು ಬಕ್ಸಾರ್‌ನಲ್ಲಿ ಈಸ್ಟ್ ಇಂಡಿಯಾ ಕಂಪನಿ ಜತೆ ಇದಿರು ಯುದ್ಧದಲ್ಲಿ ಸೋತರು. ಕಂಪನಿಯ ಸೈನ್ಯದಲ್ಲಿ ಒಬ್ಬ ಕ್ಯಾಪ್ಟನ್ ಆಗಿ ಒಂದೇ ಬಂದೂಕಿನಿಂದ ಧೈರ್ಯ ೧೦೦ ಕುದುರೆ ಹೊಡೆದಿದ್ದ ಸೀನಿಯರ್ ಎಡ್ವರ್ಡ್‌ನರು ರಾಣಿಯಿಂದ ವೀರಪದಕ ಪಡೆದು ನೈಟ್ ಪದವಿಯ ಸಿಟ್ಟಿಗೆ ಏರಿದ್ದರು. ಅಂತಹ ಶೂರ ವಂಶದ ಆರನೇ ಕುಡಿ ಈ ಲಾರ್ಡ್ ಎಡ್ವರ್ಡರು. ಅವರಿಂದು ಗ್ರೀನ್ ಪಾರ್ಕಿಗೆ ಇತ್ತೀಚೆಗೆ ಅಪ್ಪರ್ ಹೌಸ್‌ನಲ್ಲಿ ಮಿರ್ಥ ಚರ್ಚೆಗಳಿದ್ದಾಗೂ ಬರೂದು ತಪ್ಪಿಸುತ್ತಿಲ್ಲ. ಕನ್ಸರ್ವೇಟಿವ್ ಪಾರ್ಟಿಯ ಅವರ ಕಟ್ಟೆ ಮಾತ್ರ ಸ್ವಲ್ಪ ಲಿಬರಲ್. ಅವರು ಚರ್ಚ್ ಆಫ್ ಇಂಗ್ಲೆಂಡಿನ ಕಟ್ಟಾ ಪ್ರೊಟೆಸ್ಟಂಟರಿದ್ದರೂ ಅವರ ಹೆಂಡತಿ ಮೇರಿ ಸ್ಟುವಾರ್ಟ್ ಐರ್ಲೆಂಡಿನ ಕ್ಯಾಥೋಲಿಕಳು. ಪಾರ್ಕಿನಲ್ಲಿ ಆಗೀಗ ಒಬ್ಬ ಬಂಗಾರ ಕೂದಲಿನ ಅವರಿಗಿಂತ ಎಳೆವಯಸ್ಸಿನ ಸುಂದರ ಹುಡುಗಿಯೊಬ್ಬಳು ಅವರ ವಾಕಿಂಗ್‌ಗೆ ಕಂಪನಿ ಕೊಡುತ್ತಿದ್ದಾಳೆ ಎಂಬಿತ್ಯಾದಿ ವಿಷಯಗಳು ಏನೋ ಒಂದು ನಿಗೂಢತೆ ಕತೆ ಹುಟ್ಟು ಮಾಡಿ ತೋರಿಸುತ್ತವೆ. ಈ ನಿಗೂಢತೆಯ ಗುಣಾಕಾರ ಭಾಗಾಕಾರ ಮಾಡಿದರೆ ಸಿಗುವುದು, ಅವರ ಜತೆ ವಾಕಿಂಗ್ ಪಾಲ್ಗೊಳ್ಳುವ ಹುಡುಗಿ ಸಿಂಥಿಯಾ ಲಾರೆನ್ ಎಂಬುದೇ ಒಂದು ಉತ್ತರ.

ಲಾರ್ಡ್ ಎಡ್ವರ್ಡ್‌ನರು ಕನ್ಸರ್ವೇಟಿವ್ ಪಾರ್ಟಿಯ ನಿಷ್ಠ ನಾಯಕರು. ಯುದ್ಧಕಾಲದಲ್ಲಿ ಪ್ರಧಾನಿ ಚರ್ಚಿಲ್‌ರಿಗೆ ಗಟ್ಟಿ ಜತೆಗೊಟ್ಟು ಇಂಗ್ಲೆಂಡ್ ಅದ್ಭುತ ರೀತಿಯಲ್ಲಿ ಜಯಗೊಂಡಿತ್ತು. ಹಾಗಿದ್ದರೂ ಮುಂದೆ ಇಲೆಕ್ಷನ್‌ನಲ್ಲಿ ಕನ್ಸರ್ವೇಟಿವ್ ಚರ್ಚಿಲ್ಲರ ಬದಲು ಲಿಬರಲ್ ಅಟ್ಲೀ ಸರಕಾರವನ್ನು ತಂದು, ಎಡ್ವರ್ಡರು ವಿರೋಧಿ ಪಕ್ಷದಲ್ಲಿ ಕೂರುವಂತೆ ಮಾಡಿದ್ದು ಸಂಬಂಧಿಸಿದ ಆಘಾತವೆಂದು ಚಿಂತಿತರಾಗಿದ್ದರು ಲಾರ್ಡರು. ಅದರೊಡನೆ ಅವರ ಹೆಂಡತಿ ಒಂದೆರಡು ಬಾರಿ ವ್ಯಾಟಿಕನ್‌ಗೆ ಯಾತ್ರೆ ಮಾಡಿದ್ದು, ತಮ್ಮ ಕೆಲ ಪ್ರೊಟೆಸ್ಟಂಟ್ ಮಿತ್ರರ ಮನಸ್ಸಿಗೆ ಬಂದಿಲ್ಲವೆನ್ನುವುದೂ. ಆಕೆ ಐರಿಷ್ ಡಬ್ಲಿನ್ ಊರಿಗೆ ಆಗೀಗ ಹೋಗುವುದು ಆಕೆಗೆ ಐರಿಷ್ ಪ್ರತ್ಯೇಕತಾವಾದಿಗಳ ಜತೆ ಗುಪ್ತ ಸಂಬಂಧವಿರಬಹುದೇನೋ ಅಥವಾ ಬೇರೊಬ್ಬ ಪ್ರಿಯಕರ

ಇರಬಹುದೋ ಎಂಬಿತ್ಯಾದಿ ಸಂದೇಹಗಳು ಕಾಡತೊಡಗಿದಾಗ ಅವರ ಸಂಸಾರದ ಬಿರುಕು ಅಗಲವಾಗತೊಡಗಿತು. ಇಂಥ ಆತ್ಮಸಂಘರ್ಷದಲ್ಲಿ ಆಗಸ್ಟ್ ಸಮ್ಮರ್ ಸೂರ್ಯನಂತೆ ಹ್ಯಾಂಡೆಲ್ ಒಪೇರಾ ಹಾಡುಗಾರ್ತಿ ಸಿಂಥಿಯಾ ಲಾರೆನ್ಸ್‌ಳ ಸ್ನೇಹ ಲಘುಪ್ರಣಯದ ಆಸರೆ ಸಿಕ್ಕಿತ್ತು. ಬಹಳ ವರುಷಗಳಿಂದ ದಣಿದ ಮೈಯಲ್ಲಿ ಲಾರ್ಡರು ಕನಸು ಕಾಣತೊಡಗಿದರು.

ಸಿಂಥಿಯಾ ಲಾರೆನ್ಸ್ ನೀಲಗಣ್ಣಿನ ಬಂಗಾರಗೂದಲಿನ ಹಾಡುಹಕ್ಕಿಯಂಥ ಪಕ್ಕಾ ಸುಂದರ ಇಂಗ್ಲಿಷ್ ಹುಡುಗಿ. ಪಿಕ್ಕಾಡೆಲ್ಲೀ ಒಪೇರಾದಲ್ಲಿ ಆಗೊಮ್ಮೆ ಈಗೊಮ್ಮೆ ಇಂಗ್ಲಿಷರಿಗೆ ಪ್ರಿಯವಾದ ಹ್ಯಾಂಡೆಲ್, ಮೊಜಾರ್ಟ್ ಮುಂತಾಗಿ ಶಾಸ್ತ್ರೀಯ ಸಂಗೀತ ಹಾಡುವಳು. ಒಮ್ಮೊಮ್ಮೆ ಒಪೇರಾ ನಾಟಕದಲ್ಲಿ ಪಾತ್ರವಹಿಸುವಳು ಕೂಡಾ. ಹಾಗೆಂದು ತಾನು ಶಾಸ್ತ್ರೀಯ ಹಾಡುಗಾರಳೆಂದು ಒಣಮಡಿವಂತಿಕೆಯಿಲ್ಲ. ಬಾತ್‌ರೂಮ್‌ನಲ್ಲಿ ಪಾಪ್ಯುಲರ್ 'ಆನೀ ಗೆಟ್ ಯುವರ್ ಗನ್' ಸಿನೇಮಾ ಹಾಡನ್ನು ಯಾವಾಗಲೂ ಗುಣುಗುಣಿಸುವಳು. ಮುಕ್ತ ಮನಸ್ಸು, ಉಡುಗೆ ತೊಡುಗೆಯಲ್ಲೂ ಕೂಡಾ. ಕೆಲವೊಮ್ಮೆ ಹಳೇ ಇಂಗ್ಲಿಷ್ ಮರ್ಯಾದೆಯ ಉದ್ದ ಸ್ಕರ್ಟ್ ಕತ್ತು ಮುಚ್ಚುವ ಮೇಲಂಗಿ ತೊಟ್ಟರೆ, ಮತ್ತೊಮ್ಮೆ ಕ್ರಿಶ್ಚಿಯನ್ ಡಿಯೋರ್ ನ್ಯೂ ಫ್ಯಾಶನ್'ನಲ್ಲಿ ಕತ್ತು ಕೆಳಗಿಳಿದ ಟಾಪ್ ಮೊಣಕಾಲು ಮೇಲೇರುವ ಸ್ಕರ್ಟ್ ತೊಡುವಳು. ಮಜಾವೆಂದು ಕೆಲವೊಮ್ಮೆ ಇಂಡಿಯನ್ ಜಾಕೆಟೂ ತೊಡುವಳು. ಅವಳ ಏಷಿಯಾ ಬಗ್ಗೆ ಆಸಕ್ತಿಗೆ, ೧೯೪೬ ರಲ್ಲಿ ಮುಂಬೈಯಲ್ಲಿ ನೌಕಾ ಬಂಡಾಯವಾಗುತ್ತಿದ್ದಾಗ ಆಕೆಯ ಮುತ್ತಜ್ಜ ಮದ್ರಾಸ್ ರೆಜಿಮೆಂಟ್‌ನಲ್ಲಿ ಅಡುಗೆ ಚೀಫ್ ಆಗಿದ್ದ ಎನ್ನೋದೂ ಕಾರಣವಿರಬಹುದು.

ಸಿಂಥಿಯಾ ಆಗೀಗ ಗ್ರೀನ್ ಪಾರ್ಕ್‌ಗೆ ಬರುತ್ತಿದ್ದಳು. ಒಮ್ಮೊಮ್ಮೆ ಲಚಮನ್, ಲತೀಫರೊಡನೆ ನಗುತ್ತ ಶೇಂಗಾ ಕಡಲೆ ಮೆಲ್ಲುತ್ತ ಪಾರ್ಕ್ ತುಂಬಾ ಅಡ್ಡಾಡಿ, ಕೆಲವೊಮ್ಮೆ ಜಾಗಿಂಗ್ ಮಾಡುತ್ತಿದ್ದಳು. ಅಲ್ಲಿನ ಸರ್ವವರ್ಣೀಯರ ಹಗುರ ವಾತಾವರಣ ಆಕೆಗೆ ಪಸಂದಾಗಿತ್ತು. ಹಾಗಾಗಿ, ಒಪೇರಾದಲ್ಲಿ ತನ್ನ ಹಾಡಿಗೆ ಲಾರ್ಡ್ ಎಡ್ವರ್ಡರು ಗಂಭೀರವಾಗಿ ತಲೆದೂಗಿ, ಆಚೀಚೆ ನೋಡಿ ಮಿದುವಾಗಿ "ನನ್ನ ಜತೆ ಡಿನ್ನರಿಗೆ ಬರುವಿಯಾ ಮಿಸ್ ಲಾರೆನ್ಸ್ ?" ಎಂದು ಆಮಂತ್ರಿಸಿದಾಗ, ಆಕೆ ನಕ್ಕು, "ಥೇಂಕ್ಯೂ ಲಾರ್ಡ್. ಡಿನ್ನರಿಗೆ ಇನ್ನೊಮ್ಮೆ ಹೋಗೋಣ. ಈಗ ಬೇಕಿದ್ದರೆ ಪಾರ್ಕಿಗೆ ಬನ್ನಿ. ಅಡ್ಡಾಡಲು ಅಲ್ಲಿ ಚೆನ್ನಾಗಿದೆ ಸರ್" ಅಂದಿದ್ದಳು. ಅಂದು ಲಾರ್ಡರ ಹೊಸ ಪ್ರಣಯದ ಶ್ರೀಗಣೇಶ.

ಇಬ್ಬರ ವಯಸ್ಸಿನಲ್ಲಿ ಅಂತರವಿದ್ದುದರಿಂದ ಸರಸದಲ್ಲಿ ಲಾರ್ಡರು ಉದಾರರಾದರು. ಬೆಲ್ಜಿಯಂ ವಜ್ರಹಾರ, ಜರ್ಮನಿಯ ಕೋಳಿಕೂಗುವ ಗಡಿಯಾರ, ಕೆನಡಾದ ಫರ್ ಕೋಟು ಮುಂತಾಗಿ ಆಕೆಗೆ ಅರ್ಪಿಸಿ ಗಂಭೀರವಾಗಿ ಆಕೆ ಕೆನ್ನೆಗೆ ಮುತ್ತಿಡುವಾಗ ಅವರೊಳಗೊಂದು ಹೊಸ ಕನಸು ಜೀವನದ ಸಿನೇಮಾ ತೆರೆ ಅರಳುತ್ತಿತ್ತು. ಲಾರ್ಡರು ಹೆಂಡತಿ ಮೇರಿ ಸ್ಟುವರ್ಟ್ ತವರುಮನೆಗೆ ಹೋಗಿದ್ದಾಗ ನಾಟಿಂಗ್‌ಹಿಲ್‌ನ ತನ್ನ ಕ್ಯಾಸಲ್ ಬಂಗ್ಲೆಗೆ ಸಿಂಥಿಯಾಳನ್ನು ಹೊಸ ರಾಲ್ಸ್‌ರಾಯ್ಸ್ ಕಾರಲ್ಲಿ ಒಯ್ದು, ಫಾಕ್ಸ್ ಟ್ರಾಟ್ ಹೆಜ್ಜೆಮೇಳದಲ್ಲಿ ಅವಳೊಡನೆ ಡಾನ್ಸ್ ಮಾಡಿದಾಗ, ಮುದಿ ಹಳೆ ಹೆಂಡತಿಗೆ ಸೋಡಾಚೀಟಿ, ಹೊಸ ಮಡದಿಯ ಬ್ಯಾಪ್ಟಿಸಂ ಮುಂತಾಗಿ ಗುಟ್ಟಾಗಿ ವಿಚಾರಗಳು ಕುಣಿಯತೊಡಗಿದುವು. ಸಿಂಥಿಯಾಳೂ ಅವರನ್ನು ಆಗೀಗ ತಬ್ಬಿಕೊಳ್ಳೋದು, ಮುತ್ತಿಡೋದು, ಆಕೆಯ ಮೆಚ್ಚಿನ ಪಬ್ಬುಗಳಲ್ಲಿ ಡಚ್ ಬಿಯರ್ ಫ್ರೆಂಚ್ ವೈನ್ ಪಾನಕ್ಕೆ ಕರೆದೊಯ್ಯೋದು ಮುಂತಾದ್ದು ಮಾಡೋದರಿಂದ, ಎಡ್ವರ್ಡರ ಗುಟ್ಟಿನ ಅಸ್ಪಷ್ಟ ಕನಸು ಲಾರ್ಡರ ತಲೆಯಲ್ಲಿ ಘನವಾಗತೊಡಗಿತು.

ಗುಟ್ಟಾಗಿದ್ದ ಈ ವಿಚಾರಕ್ಕೆ ಗಟ್ಟಿ ಸಾಕ್ಷಿಯಾಗಿದ್ದವರು ಕೆಂಗಾ ಪ್ರಾಸಾದಗಾರ್ಡುಗಳು. ಲಿಟಿಮರ್ ಲಿಕ್ಕರು. ಅವರ ಗಾರ್ಡನ್‌ನ ಸೆಂಟ್ರಿಗಾಗಿ ಲಾರ್ಡರು ಲಾರೆನ್‌ಳಿಗೆ ಮುತ್ತಿಟ್ಟು ಮರುದಿನದ ವರೆಗೆ ಗುಸಗುಸ್ಟೆ ಸಣ್ಣದು ದಟ್ಟವಾಗಿತ್ತು. ಹುಡುಗರು "ಕ್ಯಾಪ್ಟ. ಮುದಿಮುತ್ತು! ಆ ಬಲೆಗೆ ಬಿಕ್ಕೆ ಫೋಟೋಕ್ಕೆ ಗಂಟು ಬಿದ್ದಾನಲ್ಲ!" ಎಂದು ಗುಟ್ಟಾಗಿ ನಗುತ್ತಿದ್ದರು.

* * * * *

ಲಾರ್ಡರು ಒಂದು ಆ ಸಂತಸದ ಸಾಗರದಲ್ಲಿ ತೇಲಾಡುತ್ತಿದ್ದರು. ಎರಡನೇ ಮಹಾಯುದ್ಧ ಮುಗಿದು ಎರಡು ವರ್ಷ ಆಗಿ, ಬಾಂಬುಗಳು ಕಟ್ಟಿದ್ದ ಕಟ್ಟಡಗಳು ಮತ್ತೆ ತಲೆಯೆತ್ತಿ, ಲಂಡನ್ ಜೀವನ ಸುಂದರವಾಗಿ ಅರಳಿತ್ತು. ಅಲ್ಲದೆ, ಆ ವರ್ಷದ ಜುಲೈ ಆಗಸ್ಟ್ ತಿಂಗಳ ಬೇಸಗೆಯೂ ಹಿತವಾಗಿ ಚೆಕ್ಕಾಗಿತ್ತು. ಬಣ್ಣಬಣ್ಣದ ಟ್ಯೂಲಿಪ್, ಲಿಲ್ಲಿ, ಗುಲಾಬಿ, ಆರ್ಕಿಡ್ ಹೂಗಳು ಮದುವಣಗಿತ್ತಿಯಂತೆ ಬಿಚ್ಚಿ ಬಿಚ್ಚಿಗೊಂಡಿದ್ದುವು. ಮೇ ಫ್ಲವರ್‌ಗಳು ನೆಲತುಂಬ ಕೆಂಪು ಹಳದಿ ಹಸಿರು ಕಾರ್ಪೆಟ್ ಹಾಸಿದ್ದುವು. ಹತ್ತಿರದ ಲಾಂಗ್ ವಾಟರ್, ರೌಂಡ್ ಪೌಂಡ್ ಕೆರೆಗಳಲ್ಲಿ, ಚಳಿಗೆ ವಲಸೆ ಹೋಗಿದ್ದ ಹಂಸಬಾತುಗಳು ಮರಳಿ, ಆಟವಾಡುತ್ತ ಮತ್ತೆ ಸಂಸಾರ ನಡೆಸತೊಡಗಿದ್ದುವು.

ಆಗಸ್ಟಿನ ಮೊದಲ ದಿನಗಳು. ಸಂಜೆ ಸೂರ್ಯನ ಕೆಂಪು ಬಿಸಿಲು ಸಿಂಥಿಯಾಳ ಬಂಗಾರಗೂದಲನ್ನು ಚುಂಬಿಸಿ ಹೊಳೆಯಿಸುತ್ತಿದ್ದಾಗ ಲಾರ್ಡರು ಅವಳ ಕೈಯನ್ನು ತಮ್ಮ ಬೊಗಸೆಯಲ್ಲಿ ಬಿಗಿ ಹಿಡಿದು, ತೇವಗೊಂಡ ಪ್ರೀತಿಗಣ್ಣಲ್ಲಿ ಆಕೆಯ ನೀಲಿಗಣ್ಣನ್ನೇ ದಿಟ್ಟಿಸುತ್ತ, ಹೌಸ್ ಆಫ್ ಲಾರ್ಡ್ಸ್ ಭಾಷಣಕ್ಕಿಂತಲೂ ಹೆಚ್ಚು ಭಾವನಾತ್ಮಕವಾಗಿ ನಿವೇದಿಸಿದರು. "ಮಿಸ್ ಸಿಂಥಿಯಾ, ನಿನಗೆ ಖಾತ್ರಿ ತಿಳಿದಿದೆ. ನಾನು... ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ಮೈ ಗಾಡ್! ಅಂತೆಯೇ ನೀನು ಕೂಡಾ... ಹಾಗಾಗಿ... ಅಂತಾಗಿ... ನನಗೆ ನಿನ್ನನ್ನು ಮದುವೆಯಾಗುವ ಗೌರವವನ್ನು ದಯಪಾಲಿಸು. ಐ ಸ್ವೇರ್, ನೀನಿಲ್ಲದೆ ನನ್ನ ಜೀವನ ಥೇಮ್ಸ್ ನದಿಯಿಲ್ಲದ ಲಂಡನ್‌ನಂತೆ ಅರ್ಥಹೀನ... ನಿನ್ನ ಬಿಟ್ಟಿರಲಾರೆ ಮಿಸ್ ಸಿಂಥಿಯಾ..." ಎಂದರು. ಕೆಲ ನಿಮಿಷ ಮೌನಿಯಾಗಿ ಸಿಂಥಿಯಾ ಮತ್ತೆ ನಸುನಕ್ಕು "ಹೌದು, ಹೌದು, ಮೈ ಲಾರ್ಡ್!" ಎಂದು ಅವರ ಬೆನ್ನು ಪೂಸಿದಳು. ಲಾರ್ಡರು ಪ್ರಸನ್ನರಾಗಿ, "ನಾನು ಪುಣ್ಯವಂತನು. ಆದರೂ ನೀನೂ ಕೆಲದಿನ ವಿಚಾರಮಾಡು. ನಮ್ಮದು ವಿಚಾರಸ್ವಾತಂತ್ರ್ಯ ನಾಡಿನ ಇಂಗ್ಲಿಷ್ ದೇಶ... ಮುಂದಿನ ವಾರ ಇದೇ ದಿನ ಇಲ್ಲೇ ನಿನ್ನ ಒಪ್ಪಿಗೆಯ ನಿರ್ಧಾರವನ್ನು ಕೊಡು. ಡಾರ್ಲಿಂಗ್ ಸಿಂಥಿಯಾ" ಎಂದು ಆಕೆಯನ್ನು ಮುತ್ತಿಟ್ಟು ಮರಳಲು ಹೆಜ್ಜೆ ಹಾಕಿದರು. ಆಗ ಇದನ್ನೇ ಓರೆಕಣ್ಣಿಂದ ನೋಡುತ್ತ, ಕೆಂಗಾ ಹುಡುಗರ ಚೇಂಜ್ ಆಫ್ ಗಾರ್ಡ್ ನಡೆದಿತ್ತು.

ಮುಂದಿನ ವಾರದ ಸಂಜೆಯೂ ಬಂದೇ ಬಂತು. ಸಾಮಾನ್ಯವಾಗಿರುವ ಮಳೆ ಮೋಡಗಳ ಕಿರಿಕಿರಿಯಿಲ್ಲದೆ ಎಂಥ ಈ ಸುಂದರ ಸಮ್ಮರ್ ಬಂತೆಂದು ಲಂಡನ್ ಮಂದಿ ಹೇಳುತ್ತಿದ್ದರು. ತಂಪು ಸೂರ್ಯನ ಸಂಜೆಕಿರಣ ಪಾರ್ಕನ್ನು ನೆಯ್ದಿತ್ತು. ಆ ದಿನ ನೀಟಾಗಿ ಶೇವ್ ಮಾಡಿ ಟ್ವೀಡ್ ಸೂಟು ಧರಿಸಿ ಫ್ರಾಕ್‌ಕೋಟು, ಟಾಪ್ ಹ್ಯಾಟ್, ಅಗಲ ಟ್ರೌಸರು, ವಾಕಿಂಗ್ ಸ್ಟಿಕ್‌ಗಳೊಡನೆ ಲಾರ್ಡ್ ಬಿಸ್ಟ್ರೊಫರು ಎಂದಿಗಿಂತ ತಾಸು ಮೊದಲೇ ಬಂದು ತಮಗೊಡನೆ ಬೆಂಚಿನ ಮೇಲೆ ಆಸೀನರಾಗಿದ್ದರು. ಕಾಕತಾಳೀಯವೆಂಬಂತೆ ಆ ದಿನ ಕೆಂಗಾ ಹುಡುಗರ ಮಾಲಿಕ ಗುರುಮಿತ್ ಛಲ್ಲಾನೂ ಹುಡುಗರನ್ನು ಮಾತನಾಡಿಸಿ ಹೋಗೋಣವೆಂದು ಪಾರ್ಕಿಗೆ ಬಂದಿದ್ದ. ಹರಾಯ ನೆಪವೂ ಟಾಕೀಟು ಹಾಕಿಕೊಂಡು ಚೆಂದವಾಗಿ ಕಾಣುತ್ತಿದ್ದ. ಹುಡುಗರೊಡನೆ ವ್ಯಾಪಾರ ಬಗ್ಗೆ ಮಾತನಾಡುತ್ತ, ಅವರ ಪಗಾರ

ಒಂದಿಷ್ಟು ಪಕ್ಕ ಸರಿದು ವಿಸಂಗತಿಗೆ ನಕ್ಕು ಸಾಂತ್ವನ ಕೊಟ್ಟು. ಸಂಜೆ ಬಿಸಿಲಲ್ಲಿ ಮುಚ್ಚಿಗೊಂಡು ಅಲ್ಲಲ್ಲಿ ಅಡ್ಡಾಡಿದ.

ಪಕ್ಕಾ ಇಂಗ್ಲಿಷ್ ಸ್ತ್ರೀಯಂತೆ ಲಾರೆನ್‌ಳು ಬಂದು ಲಾರ್ಡರಿಗೆ ಮುತ್ತಿಟ್ಟು ಬಾಜೂ ಕುಳಿತುಕೊಂಡಳು. ಇಬ್ಬರೂ ಮುಚ್ಚಿದ ಮಂದಹಾಸ ಬೀರಿ, ಕೆಲಕಾಲ ಮೌನವಾಗಿ, ಸಂಜೆ ಬಿಸಿಲ ಸೂರ್ಯ, ಟ್ಯುಲಿಪ್ ಹೂವು, ಬಿಸ್ಕ ಶೇಂಗಾ ಕಟುಕುವ ಗುಂಪು ಪಾರಿವಾಳ ಇತ್ಯಾದಿ ವೀಕ್ಷಿಸಿದರು. ಶೇಂಗಾ ಹುಡುಗರು ಗಾರ್ಡ್ ಚೇಂಜ್ ಮಾಡಲು ಕಾಯುವುದನ್ನು ಕಂಡರು... ಲಾರ್ಡ್ ಎಡ್ವರ್ಡರು ಕೊನೆಗೆ ಕೆಮ್ಮಿ. "ಡಾರ್ಲಿಂಗ್ ವಿಚಾರ ಮಾಡಿದಿಯಾ ?... ಮದುವೆ ದಿನವನ್ನು ಆಮೇಲೆ ನಮ್ಮಿಬ್ಬರ ಅನುಕೂಲ ನೋಡಿ ಫಿಕ್ಸ್ ಮಾಡೋಣ... ಮೊದಲು ನಮ್ಮಿಬ್ಬರಿಗೇ ತಿಳಿಯುವಂತೆ ಎಂಗೇಜ್‌ಮೆಂಟ್ ಮಾಡಿಕೊಳ್ಳೋಣ ಡಿಯರ್" ಎಂದರು. ಲಾರೆನ್ ಕೆಲಹೊತ್ತು ಮೌನವಾಗಿ ಉಳಿದಳು. ಮತ್ತೆ ನಿಧಾನವಾಗಿ. "ಡಿಯರ್ ಲಾರ್ಡ್, ನನ್ನ ಮೇಲೆ ಪ್ರೀತಿಯಿದ್ದರೆ, ಅತಿಭಾವುಕರಾಗದೆ ನನ್ನ ಮಾತು ಕೇಳುವಿರಾ ?... ನಿಮ್ಮ ಬಗ್ಗೆ ನನಗೆ ಸ್ನೇಹ ಇದೆ. ಆದರೆ ಅದು ಮದುವೆಯಾಗುವ ಪ್ರೀತಿಯಲ್ಲ..." ಲಾರ್ಡರು ಎದೆಯೊಳಗೆ ಏನೋ ಕುಸಿಗೊಂಡಂತೆ ತಲ್ಲಣಗೊಂಡರು. ಎಲ್ಲೆಡೆ ಧೂಳಿ ಮುಚ್ಚಿ ಪಸರಿಸಿದಂತೆ ಕಾಣತೊಡಗಿತು. ಸಿಂಥಿಯಾ ಲಾರೆನ್ ಮತ್ತೆ ಮುಂದುವರಿಸಿ. "ಕ್ಷಮಿಸಿ ಮೈ ಲಾರ್ಡ್, ನಿಮಗೆ ಸುಳ್ಳು ಹೇಳಲಾರೆ. ನನಗೆ ಈಗಾಗಲೇ ಒಬ್ಬ ಬಾಯ್ ಫ್ರೆಂಡ್ ಇದ್ದಾನೆ. ಮದುವೆಯಾಗುವುದೆಂದೂ ನಾವು ನಿಶ್ಚಯ ಮಾಡಿದ್ದೇವೆ... ದಯವಿಟ್ಟು ಕ್ಷಮಿಸಿ..." ಲಾರ್ಡ್ ಕಂಗಾಲಾಗಿ. ಹೃದಯದಲ್ಲಿ ಕಂಪಿಸಿ, ಮನದೊಳಗೇ 'ಶಿಟ್' ಅಂದರು. ಸಿಂಥಿಯಾ "ನನ್ನ ಬಾಯ್ ಫ್ರೆಂಡ್ ಇಲ್ಲೇ ಇದ್ದಾನೆ, ಪರಿಚಯಿಸುತ್ತೇನೆ" ಎಂದು ಶೇಂಗಾ ಹುಡುಗರ ಕಡೆ ನಡೆದಳು. ಅಲ್ಲಿ ಗುರುಮಿತ್‌ಸಿಂಗ್ ಭಲ್ಲಾ ನಿಂತಿದ್ದ. ಸಿಂಥಿಯಾ ಅವನಿಗೆ ಮುತ್ತಿಟ್ಟು ತೋಳುತೋಳು ಹಿಡಿದುಕೊಂಡು ಅವರಿಬ್ಬರೂ ಲಾರ್ಡ್ ಎಡ್ವರ್ಡರ ಕಡೆ ಬಂದರು. ಮುಗುಳ್ನಗುವ ಭಲ್ಲಾನನ್ನು ಎಡ್ವರ್ಡರಿಗೆ ಪರಿಚಯಿಸುತ್ತ "ಮೈ ಲಾರ್ಡ್, ಇವ ಮಿಸ್ಟರ್ ಗುರುಮಿತ್ ಭಲ್ಲಾ. ನನ್ನ ಬಾಯ್ ಫ್ರೆಂಡ್. ನನಗೆ ತುಂಬಾ ಮೆಚ್ಚುಗೆಯಾದ ಹುಡುಗ... ಹೇ ಭಲ್ಲಾ, ಇವರು ನನ್ನ ಹಿರೀ ಗೆಳೆಯರು, ಲಾರ್ಡ್ ಎಡ್ವರ್ಡರು...." ಎಂದಾಗ, ಸಜ್ಜನಿಕೆಯ ಇಂಗ್ಲಿಷ್ ಲಾರ್ಡರು, ತಮ್ಮ ಎದೆಯೊಳಗಿನ ಬಿರುಗಾಳಿಯನ್ನು ಗಟ್ಟಿಯಾಗಿ ಒತ್ತಿಟ್ಟು, ಏನೂ ತೋರಗೊಡದೆ, "ಹಲೋ ಮೈ ಬಾಯ್, ಮಿಸ್ಟರ್ ಭಲ್ಲಾ, ಹೌ ಡು ಯು ಡೂ..." ಎನ್ನುವಾಗ, ಹಿನ್ನೆಲೆಯಲ್ಲಿ ಶೇಂಗಾ ಹುಡುಗರ 'ಚೇಂಜ್ ಆಫ್ ಗಾರ್ಡ್' ನಡೆದಿತ್ತು. ▼

● ಆರ್ಯನ್, ೯ ನೇ ಅಡ್ಡರಸ್ತೆ, ಕಲ್ಯಾಣನಗರ, ಧಾರವಾಡ - ೭ ✆ : ೦೮೩೬-೨೪೪ ೧೧೧೩.

ನಾಟಕ

ಗಟ್ಟಿಗಿತ್ತಿ

ಮೂಲ : ಆಗಸ್ಟ್ ಸ್ಟ್ರಿಂಡ್‌ಬರ್ಗ್ ಅನುವಾದ : ಎಚ್. ಎಸ್. ಉಮೇಶ

ಪಾತ್ರಗಳು : ಶ್ರೀಮತಿ ಕ ವಿವಾಹಿತ ನಟಿ./ ಕುಮಾರಿ ಗ ಅವಿವಾಹಿತ ನಟಿ./ ಕೆಲಸದಾಕೆ

ರಂಗಸಜ್ಜಿಕೆ : ಹೋಟಲ್ಲಿನಲ್ಲಿ ಮಹಿಳೆಯರಿಗಾಗಿರುವ ಪ್ರತ್ಯೇಕವಾದ ಸ್ಥಳ. ಕಿಲುಬುಗಟ್ಟಿದ ಎರಡು ಕಬ್ಬಿಣದ ಟೇಬಲ್ಲು; ಕೆಂಪು ಹೊದಿಕೆಯಿರುವ ಸೋಫಾ; ಅನೇಕ ಕುರ್ಚಿಗಳು. ಕುಮಾರಿ ಗ ಒಂದು ಟೇಬಲ್ಲಿನ ಬಳಿ ಕುಳಿತಿದ್ದಾಳೆ. ಅವಳ ಮುಂದೆ ಖಾಲಿಯಾದ ಹೆಂಡದ ಬಾಟಲಿದೆ. ಆಕೆ ಸಚಿತ್ರ ಪತ್ರಿಕೆಯನ್ನು ಓದುತ್ತಿದ್ದು, ಅದನ್ನು ಆಕೆ ಆಮೇಲೆ ಟೇಬಲ್ಲಿನ

ಬಳಿಯಿರುವ ಇತರರೊಡನೆ ಹಂಚಿಕೊಳ್ಳುತ್ತಾಳೆ. ಶ್ರೀಮತಿ ಕ ಪ್ರವೇಶಿಸುತ್ತಾಳೆ. ಆಕೆ ಚಳಿಗಾಲದ ಬಟ್ಟೆ ತೊಟ್ಟಿದ್ದು ಹ್ಯಾಟನ್ನು ಮೇಲುದುಗೆಯನ್ನು ಹಾಕಿಕೊಂಡಿದ್ದಾಳೆ. ಆಕೆ ತುಂಬಾ ಸುಂದರವಾದ ವಿನ್ಯಾಸಗಳನ್ನುಳ್ಳ ಜಪಾನಿ ಬುಟ್ಟಿಯನ್ನು ಅಥವಾ ಕೈಚೀಲವನ್ನು ಹಿಡಿದಿದ್ದಾಳೆ.

ಶ್ರೀಮತಿ ಕ : ಹೇಗಿದ್ದೀಯ ಅಮೇಲಿ! ಕ್ರಿಸ್‌ಮಸ್ ದಿನ ನೀನೊಬ್ಬಳೇ ಕುಳಿತುಕೊಂಡಿದ್ದೀಯ —ಮದುವೆಯಾಗದ ಬಡ ಕನ್ಯೆಯ ಹಾಗೆ...

ಕುಮಾರಿ ಗ ಪತ್ರಿಕೆಯಿಂದ ತಲೆಯೆತ್ತಿ ಶ್ರೀಮತಿ ಕ ಕಡೆ ನೋಡಿ ತಲೆಯಾಡಿಸಿ ಮತ್ತೆ ಓದಲು ತೊಡಗುತ್ತಾಳೆ.

ಶ್ರೀಮತಿ ಕ : ನೀನೊಬ್ಬಳೇ ಇಲ್ಲಿ ಕುಳಿತಿರುವುದನ್ನು ನೋಡಿ —ಅದರಲ್ಲೂ ಕ್ರಿಸ್‌ಮಸ್ ದಿನ ಒಬ್ಬಳೇ ಕೆಫೆಯಲ್ಲಿ ಕುಳಿತಿರುವುದನ್ನು ನೋಡಿ ನನಗೆ ಸಂಕಟವಾಗುತ್ತಿದೆ. ಒಂದು ಸಲ ಪ್ಯಾರಿಸ್ಸಿನ ರೆಸ್ಟೋರೆಂಟಿನಲ್ಲಿ ಮದುವೆಯ ಪಾರ್ಟಿಯನ್ನ ನೋಡಿ ಎಷ್ಟು ಕೆಟ್ಟದ್ದು ಅನ್ನಿಸಿತ್ತೋ, ಹಾಗೆ ಅನಿಸುತ್ತಿದೆ. ಮದುಮಗಿ ಒಂದು ಮೂಲೆಯಲ್ಲಿ ಹಾಸ್ಯಪತ್ರಿಕೆಯನ್ನು ಓದುತ್ತಾ ಕುಳಿತಿದ್ದಳು. ಮದುಮಗ ಇತರರ ಜೊತೆ ಬಿಲ್ಲಿಯರ್ಡ್ಸ್ ಆಡುತ್ತಾ ಇದ್ದ. ಆಗ ನಾನು ಅಂದುಕೊಂಡೆ— ಪ್ರಾರಂಭದಲ್ಲೇ ಹೀಗೆ ಆದ ಮೇಲೆ, ಸಂಸಾರ ಇನ್ನು ಹೇಗಿರುತ್ತೆ— ಹೇಗೆ ಮುಗಿಯುತ್ತೆ ? ಅವನು, ತನ್ನ ಮದುವೆಯ ರಾತ್ರಿ ಬಿಲಿಯರ್ಡ್ಸ್ ಆಡೋದು ! —ಅವಳು ಹಾಸ್ಯಪತ್ರಿಕೆ ಓದೋದು ? ಓಹ್. ಎಷ್ಟು ವಿಚಿತ್ರವಾಗಿದೆ ಅಂತ ನಿನಗೆ ಅನ್ನಿಸಲ್ಲವಾ ?

ಕೆಲಸದಾಕೆ ಚಾಕಲೇಟ್ ಕಪ್ಪನ್ನು ಶ್ರೀಮತಿ ಕ ಳ ಮುಂದೆ ಇಟ್ಟು ಹೋಗುತ್ತಾಳೆ.

ಶ್ರೀಮತಿ ಕ : ನಿನಗೆ ಗೊತ್ತಾ ಅಮೇಲಿ ! ನೀನು ಅವನನ್ನು ಮದುವೆಯಾಗಿದ್ದಿದ್ದರೆ ನೀನು ಚೆನ್ನಾಗಿರುತ್ತಿದ್ದೆ ಅಂತ ನನ್ನ ನಂಬಿಕೆ... ನಿನಗೆ ನೆನಪಿದೆಯಾ, ಅವನನ್ನ ಕ್ಷಮಿಸಿಬಿಡು ಅಂತ ನಾನು ನಿನಗೆ ಮೊದಲಿನಿಂದಲೂ ಒತ್ತಾಯಿಸುತ್ತಿದ್ದೆ, ನೆನಪಿಗೆ ಬಂದಿತಾ ? ಈಗ ನೀನು ಅವನ ಹೆಂಡತಿಯಾಗಿರಬಹುದಿತ್ತು, ನಿನ್ನದೆ ಮನೆ ಇರುತ್ತಿತ್ತು... ಹಳ್ಳಿಯಲ್ಲಿ ನಿನ್ನ ಪ್ರೇಮಿಯ ತಂದೆತಾಯಿ ಜೊತೆ ಹಿಂದಿನ ಕ್ರಿಸ್‌ಮಸ್ ರಜೆಯನ್ನು ಕಳೆದಾಗ ನೀನು ಎಷ್ಟು ಸಂತೋಷವಾಗಿದ್ದೆ ಅನ್ನೋದು ನೆನಪಿಗೆ ಬರುತ್ತಾ ? ಹಳ್ಳಿಬದುಕನ್ನು ಹೊಗಳಿ, ರಂಗಭೂಮಿಯಿಂದ ದೂರಹೋಗಬೇಕು ಅನ್ನುವ ನಿನ್ನ ತೀವ್ರ ಬಯಕೆಯನ್ನು ನೀನು ಎಷ್ಟು ಚೆನ್ನಾಗಿ ಹಾಡಿದ್ದೆ ? —ಹೌದು ಅಮೇಲಿ ಡಿಯರ್. ರಂಗಮಂದಿರಕ್ಕಿಂತ ಮನೆ ತುಂಬಾ ಆಪ್ತವಾದದ್ದು. ಮತ್ತೆ ಮಕ್ಕಳು... ನಿನಗೆ ಗೊತ್ತಿಲ್ಲ... ಆಯಿತು. ಅದು ನಿನಗೆ ಅರ್ಥವಾಗಲ್ಲ !

ಶ್ರೀಮತಿ ಗ ತನ್ನ ತಿರಸ್ಕಾರವನ್ನು ತೋರಿಸುತ್ತಾಳೆ.

ಶ್ರೀಮತಿ ಕ : (ತನ್ನ ಚಾಕಲೇಟನ್ನು ಒಂದೆರಡು ಸ್ಪೂನ್ ತಿನ್ನುತ್ತಾಳೆ. ನಂತರ ತನ್ನ ಚೀಲವನ್ನು ತೆರೆದು ಕ್ರಿಸ್‌ಮಸ್ ಕೊಡುಗೆಗಳನ್ನು ತೆಗೆಯುತ್ತಾಳೆ) ಇಲ್ಲಿ ನೋಡು —ನನ್ನ ಮಕ್ಕಳಿಗೆ ನಾನು ಏನು ತಂದಿದ್ದೀನಿ ಅಂತ. (ಒಂದು ಬೊಂಬೆಯನ್ನು ಅವಳಿಗೆ ತೋರಿಸಿ) ಇದನ್ನ ನೋಡು ! ಇದು ಲೀಸಾಗೆ... ಇದು ತನ್ನ ಕಣ್ಣನ್ನ ತಲೆಯನ್ನ ಹೇಗೆ ತಿರುಗಿಸುತ್ತೆ ನೋಡು ! ...ನೋಡು ! ನೋಡು !— ಮಾಯಾಗೆ ಒಂದು ಪಾಪ್‌ಗನ್... (ಆಕೆ ಗನ್ನನ್ನು ತುಂಬಿಗಳ ಕಡೆಗೆ ಹೊಡೆಯುತ್ತಾಳೆ.)

ಕುಮಾರಿ ಕ ಹೆದರಿಕೆಯನ್ನು ಅಭಿನಯಿಸುತ್ತಾಳೆ.

ಶ್ರೀಮತಿ ಗ : ನಾನು ನಿನ್ನನ್ನ ಹೆದರಿಸಿಬಿಟ್ಟೆನಾ ? ನಾನು ನಿನ್ನ ಶೂಟ್ ಮಾಡ್ತೀನಿ ಅಂದುಕೊಂಡೆಯಾ ? ಹಾಗೆ ಅಂದುಕೊಂಡೆಯಾ ? ಆಣೆಯಿಟ್ಟು ಹೇಳ್ತೀನಿ ನೀನು

ನಿಜವಾಗಿಯೂ ಹಾಗೆ ಅಂದುಕೊಂಡೆ ! ನೀನು ನನ್ನನ್ನ ಶೂಟ್ ಮಾಡಬೇಕು ಅಂದುಕೊಂಡಿದ್ದರೆ, ಅದರಿಂದ ನನಗೇನು ಆಶ್ಚರ್ಯವಾಗುತ್ತಿರಲಿಲ್ಲ. ಯಾಕೆಂದರೆ ನಾನು ನಿನ್ನ ದಾರಿಗೆ ಅಡ್ಡವಾಗಿ ನಿಂತಿದ್ದೆ – ನನ್ನದೇನೇನೂ ತಪ್ಪಿಲ್ಲದಿದ್ದರೂ ನೀನು ಅದನ್ನು ಕ್ಷಮಿಸುವುದಕ್ಕೆ ಸಾಧ್ಯವೇ ಇಲ್ಲ ಅಂತ ನನಗೆ ಗೊತ್ತು. ಗ್ರ್ಯಾಂಡ್ ಥಿಯೇಟರಿನಿಂದ ನಿನ್ನನ್ನ ಓಡಿಸುವ ಹಾಗೆ ನಾನು ಕುತಂತ್ರ ಮಾಡಿದೆ ಅಂತ ನೀನು ಇನ್ನೂ ನಂಬಿಕೊಂಡಿದ್ದೀಯಾ – ಅಲ್ಲವೇನು ? ಆದರೆ ನಾನು ಮಾಡಿಲ್ಲ ! ನೀನು ಏನು ಬೇಕಾದರೂ ತಿಳಿದುಕೊಂಡಿರಬಹುದು, ಆದರೆ ನನಗೆ ಅದರ ಜೊತೆ ಯಾವ ಸಂಬಂಧವೂ ಇಲ್ಲ ! ನಾನು ಏನು ಹೇಳಿದರೂ, ನೀನು ಮಾತ್ರ, ನಾನೇ ಅದಕ್ಕೆ ಜವಾಬ್ದಾರಳು ಅಂತ ಈಗಲೂ ನಂಬಿಕೊಂಡಿದ್ದೀಯಾಂತ ನನಗೆ ಗೊತ್ತು ! **(ಕೈಚೀಲದಿಂದ ಕಸೂತಿ ಹಾಕಿದ ಒಂದು ಜೊತೆ ಬೆಡ್ ರೂಂ ಸ್ಲಿಪರ್ಸ್‌ಗಳನ್ನು ಹೊರತೆಗೆಯುತ್ತಾಳೆ)** ಇವು ನನ್ನ ಅರ್ಧಾಂಗನಿಗೆ. ನಾನೆ ಕಸೂತಿ ಹಾಕಿದೆ – ಟ್ಯುಲಿಪ್‌ಗಳಿಂದ, ನನಗೆ ಟ್ಯುಲಿಪ್‌ಗಳನ್ನು ಕಂಡರೆ ಆಗಲ್ಲ. ಆದರೆ ನನ್ನ ಗಂಡನಿಗೆ ಎಲ್ಲದರ ಮೇಲೂ ಟ್ಯುಲಿಪ್‌ಗಳಿರಬೇಕು...

ಕುಮಾರಿ ಗ ಪತ್ರಿಕೆಯ ಓದನ್ನು ನಿಲ್ಲಿಸಿ ಕುತೂಹಲದೊಂದಿಗೆ ಸೇರಿದ ವ್ಯಂಗ್ಯ ನೋಟದಿಂದ ನೋಡುತ್ತಾಳೆ.

ಶ್ರೀಮತಿ ಕ : **(ಪ್ರತಿ ಸ್ಲಿಪರ್‌ನ ಒಳಗೆ ಕೈ ಇಡುತ್ತಾಳೆ)** ನೋಡು ಬಾಬ್‌ಗೆ ಎಷ್ಟು ಚಿಕ್ಕ ಪಾದಗಳಿವೆ ! ನೋಡಿದೆಯಾ ? ಅವನು ಎಷ್ಟು ಸೊಗಸಾಗಿ ನಡೆಯುತ್ತಾನೆ ಅಂತ ನೀನು ನೋಡಬೇಕು ! ಅವನು ಸ್ಲಿಪರ್ಸ್ ಹಾಕಿಕೊಂಡಿರೋದನ್ನ ನೀನು ನೋಡೇ ಇಲ್ಲ ಅಲ್ಲವಾ ?

ಕುಮಾರಿ ಗ ಜೋರಾಗಿ ನಗುತ್ತಾಳೆ.

ಶ್ರೀಮತಿ ಕ : ತಾಳು, ನಿನಗೆ ತೋರಿಸುತ್ತೇನೆ !

ಆಕೆ ಸ್ಲಿಪರ್‌ಗಳನ್ನು ಟೇಬಲ್ಲಿನ ಮೇಲೆ ನಡೆಸುತ್ತಾಳೆ.

ಕುಮಾರಿ ಗ ಮತ್ತೆ ಜೋರಾಗಿ ನಗುತ್ತಾಳೆ.

ಶ್ರೀಮತಿ ಕ : ಅವನಿಗೆ ಕೋಪ ಬಂದಾಗ ಹೀಗೆ ಕಾಲನ್ನು ಅಪ್ಪಳಿಸುತ್ತಾನೆ : "ಹಾಳಾಗಲಿ ! ಈ ಮೂರ್ಖ ಅಡುಗೆಯವರು ಕಾಫಿ ಮಾಡುವುದನ್ನು ಎಂದಿಗೂ ಕಲಿಯುವುದೇ ಇಲ್ಲ ! ಮತ್ತೆ ಇದನ್ನು ನೋಡು ! ಆ ಮೂರ್ಖರಿಗೆ ದೀಪದ ಬತ್ತಿಯನ್ನು ಸರಿಯಾಗಿ ಹೊಸೆಯುವುದಕ್ಕೆ ಬರೋದಿಲ್ಲ !" ಕೆಲಸಕ್ಕೆ ಕರೆ ಬಂದಿದ್ದಾಗ, ಕಾಲು ಮರಗಟ್ಟಿದ್ದಾಗ : "ಓಹ್ ದೇವರೇ ! ಮರಗಟ್ಟಿಸುವ ಚಳಿ. ಆದರೆ ತಿದ್ದುವುದಕ್ಕೆ ಸಾಧ್ಯವೇ ಇಲ್ಲದ ಈ ಮೂರ್ಖರು ಬೆಂಕಿಗೂಡನ್ನು ಆರಿಸಿಬಿಟ್ಟಿದ್ದಾರೆ !"

ಆಕೆ ಒಂದು ಸ್ಲಿಪರ್‌ನ ಪಾದದಿಂದ ಮತ್ತೊಂದರ ಮೇಲ್ಭಾಗವನ್ನು ಉಜ್ಜುತ್ತಾಳೆ.

ಕುಮಾರಿ ಗ ಮತ್ತೂ ಜೋರಾಗಿ ನಗುತ್ತಾಳೆ.

ಶ್ರೀಮತಿ ಕ : ಅವನು ಮನೆಗೆ ಬಂದ ಮೇಲೆ, ಮೇರಿ ಸೋಫಾದ ಕೆಳಗಿಟ್ಟಿರುವ ಸ್ಲಿಪರ್‌ಗಳನ್ನು ಹುಡುಕುವುದಕ್ಕೆ ಪ್ರಾರಂಭಿಸುತ್ತಾನೆ... ಓಹ್, ಕುಳಿತುಕೊಂಡು, ಹೀಗೆ ನನ್ನ ಗಂಡನ ಬಗ್ಗೆಯೇ ಅಪಹಾಸ್ಯ ಮಾಡೋದು ನನಗೆ ನಾಚಿಕೆಗೇಡು. ಏನೇ ಆಗಲಿ ಅವನು ಬಹಳ ಒಳ್ಳೆಯವನು. ಅಲ್ಲದೆ ಬಹಳ ಒಳ್ಳೆ ಗಂಡ... ನಿನಗೂ ಅವನಂತಹ ಗಂಡ ಇರಬೇಕಿತ್ತು ಅಮೇಲಿ ! – ಹಾಗೆ ಯಾಕೆ ನಗುತ್ತಾ ಇದೀಯಾ ? ಯಾವುದರ ಬಗ್ಗೆ ನಗುತ್ತಿದ್ದೀಯಾ ? ಏನಾಯಿತು ? – ಬಹಳ ಮುದ್ದಾದದ್ದು

ಅಂದರೆ ಅವನು ನನಗೆ ಬಹಳ ವಿಧೇಯನಾಗಿದ್ದಾನೆ –ಹೌದು. ಅದು ನನಗೆ ಗೊತ್ತು. ಹಾಗಂತ ಅವನೇ ನನಗೆ ಹೇಳಿದ್ದಾನೆ!.. ಅದು ಯಾಕೆ ಕೊಂಕು ನಗು? ನಾನು ನಾರ್ವೆಯಲ್ಲಿ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಫ್ರೆಡ್ರಿಕ್ ಒಲಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದಳು ಅಂತ ಅವನೇ ಹೇಳಿದ್ದಾನೆ. ಇಂತಹ ನಾಚಿಕೆಗೆಟ್ಟ ನಡತೆ ನೀನು ಅನುಭವಿಸುತ್ತಿದ್ದೆಯಾ! (ಸ್ವಲ್ಪ ಹೊತ್ತು ಮೌನ) ಅವಳ ಕಣ್ಣುಗಳನ್ನು ಕಿತ್ತು ಬಿಡುತ್ತಿದ್ದೆ! ನಾನು ಮನೇಲಿದ್ದಾಗ ಅವಳೇನಾದರೂ ಅವನ ಹತ್ತಿರ ಬಂದಿದ್ದರೆ ಹಾಗೇ ಮಾಡಿಬಿಡುತ್ತಿದ್ದೆ! (ಮತ್ತೆ ಮೌನ) ಯಾರೋ ಕಿವಿ ಕಚ್ಚುವವರಿಂದ ಕೇಳುವುದಕ್ಕೆ ಮೊದಲೇ ಬಾಯಿಂದ ತಿಳಿದದ್ದು ನನ್ನ ಅದೃಷ್ಟ... (ಮೌನ) ಆದರೆ ಫ್ರೆಡ್ರಿಕ್ ಒಬ್ಬಳೇ ಅಲ್ಲ, ನನಗೆ ಗೊತ್ತು. ಕೇಳು! ನನ್ನ ಗಂಡನ ಬಗ್ಗೆ ಹೆಂಗಸರಿಗೆಲ್ಲ ಹುಚ್ಚು ಹಿಡಿದಿರೋದು ಯಾಕೆ ಅಂತ ನನಗೆ ಅರ್ಥವೇ ಆಗಲ್ಲ. ಅವನು ಆಡಳಿತ ಮಂಡಳಿಯ ಸದಸ್ಯನಾಗಿರುವುದರಿಂದ, ಕಲಾವಿದರನ್ನು ನೇಮಿಸಿಕೊಳ್ಳಲು ಶಿಫಾರಸ್ಸು ಮಾಡಬಹುದು ಅಂತ ಅವರು ಯೋಚಿಸಿರಬೇಕು... ನೀನೂ ಅವನನ್ನು ಪ್ರಲೋಭಿಸಿದ್ದರೆ ಅದರಿಂದ ನನಗೇನೂ ಆಶ್ಚರ್ಯವಾಗೋಲ್ಲ! ನಾನು ನಿನ್ನನ್ನು ಬಹಳವೇನು ನಂಬಿರಲಿಲ್ಲ... ಆದರೆ ನನಗೀಗ ಗೊತ್ತು, ಅವನಿಗೆ ನಿನ್ನಲ್ಲಿ ಯಾವ ಆಸಕ್ತಿಯೂ ಇರಲಿಲ್ಲ –ಅಲ್ಲದೆ ಅವನ ಬಗ್ಗೆ ನೀನು ಯಾವಾಗಲೂ ಏನೋ ಒಂದು ರೀತಿಯ ಅಸೂಯೆಯಿಂದಲೇ ನಡೆದುಕೊಳ್ಳುತ್ತಿದ್ದೆ... (ಮೌನ. ಅವರಿಬ್ಬರೂ ಒಂದು ರೀತಿಯ ಮುಜುಗರದಲ್ಲಿ ಒಬ್ಬರನ್ನೊಬ್ಬರು ದೃಷ್ಟಿಸುತ್ತಾರೆ. ಶ್ರೀಮತಿ ಕ ಮುಂದುವರಿಸುತ್ತಾಳೆ.) ನಿನಗೇನೂ ಬೇಸರವಿಲ್ಲ ಅಂತ ತೋರಿಸೋಕೆ– ಹಾಗಿದ್ದರೂ ನನ್ನ ಮೇಲೆ ಬೇಸರವಿಲ್ಲ ಅಂತ ತೋರಿಸೋಕೆ– ಇವತ್ತು ಸಂಜೆ ನಮ್ಮ ಮನೆಗೆ ನೀನು ಯಾಕೆ ಬರಬಾರದು ಆಮೇಲೆ... ಯಾಕೆ ಅಂತ ನನಗೆ ಸರಿಯಾಗಿ ವಿವರಿಸುವುದಕ್ಕೆ ಆಗ್ತಾ ಇಲ್ಲ– ಕೆಟ್ಟ ಸ್ನೇಹಿತರಾಗಿರುವುದು– ಅದರಲ್ಲೂ ವಿಶೇಷವಾಗಿ ನಿನ್ನ ಜೊತೆ– ನನಗೆ ಖುಷಿ ಕೊಡಲ್ಲ. ಬಹುಶಃ ಆಗ ನಿನ್ನ ದಾರಿಗೆ ನಾನು ಅಡ್ಡ ಬಂದೆ ಅಂತ ಇರಬಹುದು. (ನಿಧಾನ ಗತಿಯಲ್ಲಿ) ... ಅಥವಾ... ನನಗೆ ಯೋಚಿಸುವುದಕ್ಕೆ ಆಗ್ತಾ ಇಲ್ಲ... ನಿಜಕ್ಕೂ– ಕಾರಣ ಏನಿರಬಹುದು ಅಂತಾ... (ಮೌನ)

ಶ್ರೀಮತಿ ಕ ಳನ್ನೇ ಕುಮಾರಿ ಗ ದಿಟ್ಟಿಸಿ ನೋಡುತ್ತಾಳೆ.

ಶ್ರೀಮತಿ ಕ : (ಚಿಂತೆಯಿಂದ) ನಮ್ಮ ಸಂಬಂಧ ಬಹಳ ವಿಚಿತ್ರವಾಗಿತ್ತು... ನಾನು ಮೊದಲ ಸಲ ನಿನ್ನನ್ನು ನೋಡಿದಾಗ, ನನಗೆ ನಿನ್ನ ಬಗ್ಗೆ ಭಯವಾಗಿತ್ತು. ನನಗೆ ಎಷ್ಟು ಭಯವಾಗಿತ್ತು ಅಂದರೆ, ನಿನ್ನ ಮೇಲಿಟ್ಟ ಕಣ್ಣನ್ನು ಆಚೀಚೆ ಸರಿಸುವ ಧೈರ್ಯ ಕೂಡ ನನಗೆ ಇರಲಿಲ್ಲ. ನಾನು ಯಾವಾಗ ಎಲ್ಲಿಗೆ ಹೋದರೂ– ನಿನ್ನ ಪಕ್ಕದಲ್ಲಿಯೇ ಇರುತ್ತಿದ್ದೆ... ನಿನ್ನ ಶತ್ರುವಾಗಿರುವ ಧೈರ್ಯ ನನಗಿರಲಿಲ್ಲ. ಅದಕ್ಕೆ ನಾನು ನಿನ್ನ ಸ್ನೇಹಿತಳಾದೆ. ಆದರೆ ನೀನು ನಮ್ಮ ಮನೆಗೆ ಯಾವಾಗ ಬಂದರೂ ವೈಮನಸ್ಯ ಇರುತ್ತಿತ್ತು. ನನ್ನ ಗಂಡನಿಗೆ ನಿನ್ನನ್ನು ಕಂಡರೆ ಆಗುತ್ತಿರಲಿಲ್ಲ. ಹಾಗಾಗಿ ಅದರಿಂದ ಉಟ್ಟ ಬಟ್ಟೆ ಸರಿಯಿಲ್ಲದಿದ್ದಾಗ ಆಗುವಂತಹ ಮುಜುಗರ ನನಗಾಗುತ್ತಿತ್ತು. ನಿನ್ನ ಬಗ್ಗೆ ಒಂದಿಷ್ಟು ಸ್ನೇಹ ತೋರಿಸುವ ಹಾಗೆ ನಾನು ನನ್ನ ಕೈಲಾದಷ್ಟನ್ನೆಲ್ಲ ಮಾಡಿದೆ. ಆದರೆ ನೀನು ನಿನ್ನ ಮದುವೆಯ ನಿಶ್ಚಿತಾರ್ಥ

ತಿಳಿಸುವವರೆಗೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ ! ಆಮೇಲೆ ಇದ್ದಕ್ಕಿದ್ದ ಹಾಗೆ ನಿಮ್ಮಿಬ್ಬರ ನಡುವೆ ತೀವ್ರವಾದ ಗೆಳೆತನ ಅರಳಿಕೊಂಡಿತು ! ಆಗ ಮಾತ್ರ ನೀನು ನಿನ್ನ ನಿಜವಾದ ಭಾವನೆಗಳನ್ನು ತೋರಿಸುವ ಧೈರ್ಯ ತೋರಿಸಿದ ಹಾಗೆ ಕಾಣಿಸಿತು. ಹಾಗೆ ಮಾಡುವುದಕ್ಕೆ ಬೇಕಾದ ರಕ್ಷಣೆ ಇದೇ ಅನ್ನೋದು ಖಾತರಿಯಾದ ಮೇಲೆ ನೀನು ಆ ಧೈರ್ಯ ತೋರಿಸಿದ್ದು ! ಆಮೇಲೇನಾಯಿತು ?... ನನಗೆ ಹೊಟ್ಟೆಕಿಚ್ಚು ಆಗಲೇ ಇಲ್ಲ – ಅದು ನನಗೀಗ ವಿಚಿತ್ರ ಅನ್ನಿಸುತ್ತಿದೆ ! ನೀನು ಗಾಡ್‌ಮದರ್ ಆಗಿದ್ದ ನಾಮಕರಣ ದಿನದ ದೃಶ್ಯ ನನಗೀಗಲೂ ನೆನಪಿದೆ– ನಿನ್ನನ್ನು ಚುಂಬಿಸುವುದಕ್ಕೆ ನಾನು ಅವನನ್ನು ಪುಸಲಾಯಿಸಬೇಕಾಗಿ ಬಂತು. ಅವನು ಚುಂಬಿಸಿದಾಗ ನೀನು ತುಂಬಾ ನಾಚಿಕೊಂಡೆ, ಗೊಂದಲಗೊಂಡೆ. ಆಗ ನಾನು ನಿಜಕ್ಕೂ ಅದನ್ನು ಗಮನಿಸಿಯೇ ಇರಲಿಲ್ಲ. ಅದರ ಬಗ್ಗೆ ತಲೆಯನ್ನೂ ಕೆಡಿಸಿಕೊಂಡಿರಲಿಲ್ಲ. ಇದುವರೆವಿಗೂ... ಈ ಕ್ಷಣದ ವರೆಗೂ ನಾನು ಅದನ್ನು ಯೋಚಿಸಿಯೇ ಇರಲಿಲ್ಲ... **(ಆಕೆ ಉದ್ರೇಕದಿಂದ ರಭಸದಿಂದ ಮೇಲೇಳುತ್ತಾಳೆ)** ನೀನು ಯಾಕೆ ಏನಾದರೂ ಹೇಳುವುದಿಲ್ಲ ? ಇಷ್ಟು ಹೊತ್ತಾದರೂ ನೀನು ಒಂದು ಮಾತನ್ನೂ ಆಡಿಲ್ಲ ! ನಾನು ಇಲ್ಲಿ ಕುಳಿತುಕೊಂಡು ಮಾತನಾಡುತ್ತಲೇ ಹೋಗುವುದಕ್ಕೆ ಬಿಟ್ಟಿದ್ದೀಯ ! ನೀನು ಮಾತ್ರ ಅಲ್ಲಿ ಕುಳಿತುಕೊಂಡು, ರೇಷ್ಮೆಗೂಡಿನಲ್ಲಿ ಅಡಗಿಕೊಂಡಿರುವ ಕಚ್ಚಾರೇಷ್ಮೆಯಂತಹ ನನ್ನ ಎಲ್ಲಾ ಆಲೋಚನೆಗಳನ್ನು... ಹೌದು, ನನ್ನ ಸಂಶಯಗಳನ್ನು ಕೂಡ ನನ್ನಿಂದ ಹೊರಗೆಳೆಯುತ್ತಿದ್ದೀಯ... ಆಯಿತು, ಈಗ ಹೇಳು– ನಿನ್ನ ಮದುವೆ ನಿಶ್ಚಿತಾರ್ಥವನ್ನು ಯಾಕೆ ಮುರಿದೆ ? ಅದಾದ ಮೇಲೆ ನೀನು ನಮ್ಮ ಮನೆಗೆ ಬರುವುದನ್ನು ಯಾಕೆ ನಿಲ್ಲಿಸಿದೆ ? ಇವತ್ತು ರಾತ್ರಿ ನೀನು ನಮ್ಮ ಮನೆಗೆ ಯಾಕೆ ಬರಬಾರದು ?

ಕುಮಾರಿ ಗ ತನ್ನ ಮೌನವನ್ನು ಇನ್ನೇನು ಮುರಿಯುವುದರಲಿದ್ದಳು.

ಶ್ರೀಮತಿ ಕ : ಮಾತಾಡಬೇಡ ! ನೀನು ಒಂದು ಮಾತನ್ನೂ ಆಡಬೇಕಾದ್ದಿಲ್ಲ ! ನನಗೀಗ ಎಲ್ಲ ಅರ್ಥವಾಗುತ್ತೆ ! ಯಾಕೆಂದರೆ ಅದು ಇದಕ್ಕೆ, ಅದಕ್ಕೆ– ಮತ್ತು ಅದಕ್ಕೆ ! ಅದೇ ಸರಿ. ಈಗ ಲೆಕ್ಕಾಚಾರ ಚುಕ್ತವಾಗಿದೆ ! ನನಗೀಗ ಉತ್ತರ ಗೊತ್ತಿದೆ ! –ನಾಚಿಕೆಗೇಡು ! ನಾನು ನಿನ್ನ ಜೊತೆಯಲ್ಲಿ ಒಂದೇ ಟೇಬಲ್ಲಿನಲ್ಲಿ ಕುಳಿತುಕೊಳ್ಳುವುದಿಲ್ಲ ! **(ಆಕೆ ತನ್ನ ಸಾಮಾನುಗಳನ್ನು ಮತ್ತೊಂದು ಟೇಬಲ್ಲಿಗೆ ವರ್ಗಾಯಿಸುತ್ತಾಳೆ)** ಅದಕ್ಕೋಸ್ಕರ ನಾನು ಅವನ ಸ್ಲಿಪರ್ ಮೇಲೆ ಟ್ಯುಲಿಪ್ ಕಸೂತಿ ಮಾಡಬೇಕಾಯಿತು– ಯಾಕೆಂದರೆ ನಿನಗೆ ಟ್ಯುಲಿಪ್ ಕಂಡರೆ ಇಷ್ಟ... ಅದಕ್ಕೆ ನಾವು– **(ಸ್ಲಿಪರ್‌ಅನ್ನು ನೆಲಕ್ಕೆ ಬಿಸಾಡುತ್ತಾಳೆ)** ಅದಕ್ಕೆ ನಾವು ಬೇಸಿಗೆಯನ್ನು ಮಲಾರ್ ಸರೋವರದಲ್ಲಿ ಕಳೆಯಬೇಕಾಯಿತು– ಯಾಕೆಂದರೆ ನಿನಗೆ ಸಮುದ್ರ ಕಂಡರೆ ಆಗಲ್ಲ; ಅದಕ್ಕೆ ನನ್ನ ಮಗನಿಗೆ ಎಸ್ಕಿಲ್ ಅಂತ ಹೆಸರಿಡಲಾಯಿತು– ಯಾಕೆಂದರೆ ಅದು ನಿನ್ನ ತಂದೆಯ ಹೆಸರು; ಅದಕ್ಕೋಸ್ಕರವೇ ನಾನು ನಿನ್ನ ಬಣ್ಣದ ಬಟ್ಟೆ ತೊಡಬೇಕಾಯಿತು, ನಿನ್ನ ಲೇಖಕರನ್ನು ಓದಬೇಕಾಯಿತು, ನಿನಗೆ ಇಷ್ಟವಾದ ತಿಂಡಿಗಳನ್ನು ತಿನ್ನಬೇಕಾಯಿತು, ನಿನಗೆ ಇಷ್ಟವಾದದ್ದನ್ನು ಕುಡಿಯಬೇಕಾಯಿತು– ಉದಾಹರಣೆಗೆ, ಈ ಚಾಕಲೇಟ್... ಅದಕ್ಕೋಸ್ಕರವೇ– ಛೆ, ದೇವರೇ– ಅದನ್ನು ಯೋಚಿಸುವುದಕ್ಕೂ ಭಯವಾಗುತ್ತೆ– ಭಯಂಕರ ! ಪ್ರತಿಯೊಂದೂ,

ಪ್ರತಿಯೊಂದೂ ನಿನ್ನಿಂದಲೇ ನನಗೆ ಬಂದದ್ದು. ನಿನ್ನ ಭಾವೋದ್ರೇಕ ಕೂಡ! ನಿನ್ನನ್ನು ಹುಚ್ಚ ಕೊರೆದೂ ಕೊರೆದೂ. ಕೊನೆಗೆ ಒಳಗೆ ಕಪ್ಪು ಘೋಳಿನ ಒಂದು ಕಣ ಮತ್ತು ಸಿಪ್ಪೆ ಉಳಿಯುವ ಹಾಗೆ ಕೊರೆದು ಒಳ ಸೇರುವಂತೆ ನಿನ್ನ ಆತ್ಮ ನನ್ನೊಳಗೆ ಸೇರಿಕೊಂಡುಬಿಟ್ಟಿದೆ. ನಾನು ನಿನ್ನಿಂದ ದೂರವಾಗುವುದಕ್ಕೆ ಪ್ರಯತ್ನಿಸಿದೆ. ಆದರೆ ಆಗಲಿಲ್ಲ! ನಿನ್ನ ಕಪ್ಪು ಕಣ್ಣುಗಳಿಂದ ಹಾವಿನ ಹಾಗೆ ನೀನು ನನ್ನನ್ನು ವಶೀಕರಿಸಿಕೊಂಡೆ, ಪಾಪ ಪಾರಿವಾಳ.. ತಪ್ಪಿಸಿಕೊಳ್ಳಲು ನನ್ನ ರೆಕ್ಕೆಗಳನ್ನು ಬಡಿಯುತ್ತಿದ್ದಂತೆಯೇ ಮತ್ತೆ ಕೆಳಕ್ಕೆ ಜಗ್ಗಿದಂತೆ ನನಗೇ ಅನುಭವವಾಗುತ್ತಿತ್ತು; ಕಟ್ಟಿದ ಕಾಲಿನೊಂದಿಗೆ ನೀರಲ್ಲಿ ಮುಳುಗಿದ್ದೇನೆ– ತೇಲಲು ಕೊಸರಿಕೊಂಡಷ್ಟೂ ಕೆಳಕ್ಕೆ ಮುಳುಗುತ್ತಿದ್ದೇನೆ– ಕೆಳಕ್ಕೆ, ಕೆಳಕ್ಕೆ, ಕಟ್ಟಕಡೆಯ ತಳಕ್ಕೆ.

ಅಲ್ಲಿ ನೀನು ರಾಕ್ಷಸ ಏಡಿಯ ಹಾಗೆ ನಿನ್ನ ಕೊಂಡಿಗಳಿಂದ ನನ್ನನ್ನು ಹಿಡಿಯಲು ಕಾಯುತ್ತಾ ಕುಳಿತಿರುತ್ತೀಯ– ಈಗ ನಾನು ಅಲ್ಲಿದ್ದೀನಿ. ಓಹ್, ನಿನ್ನನ್ನು ಕಂಡರೆ ನನಗೆ ಅದೆಷ್ಟು ಹೇಸಿಗೆ. ಅದೆಷ್ಟು ದ್ವೇಷ. ನಾನು ನಿನ್ನನ್ನು ದ್ವೇಷಿಸುತ್ತೇನೆ! ಆದರೆ ನೀನು –ಅಲ್ಲಿ ತಣ್ಣಗೆ, ನಿರ್ಭಾವುಕನಾಗಿ ಮೌನವಾಗಿ ಕುಳಿತಿದ್ದೀಯ! ಹುಣ್ಣಿಮೆಯೋ ಅಮಾವಾಸ್ಯೆಯೋ, ಕ್ರಿಸ್‌ಮಸ್ಸೋ ಹೊಸ ವರ್ಷವೋ– ನಿನ್ನ ಸುತ್ತ ಇರುವ ಜನರು ಸಂತೋಷವಾಗಿದ್ದಾರೋ ಇಲ್ಲವೋ ಒಂದೂ ನಿನಗೆ ಬೇಕಿಲ್ಲ! ನಿನಗೆ ಪ್ರೀತಿಸುವ ಅಥವಾ ದ್ವೇಷಿಸುವ ಸಾಮರ್ಥ್ಯವೂ ಇಲ್ಲ; ಇಲಿಬಿಲವನ್ನು ಕಾಯುತ್ತಿರುವ ಬಕದಂತೆ ತಣ್ಣಗಿದ್ದೀಯ. ನಿನ್ನ ಬಲಿಯ ವಾಸನೆಯನ್ನು ಹಿಡಿದು ಅಟ್ಟಿಸಿಕೊಂಡು ಹೋಗುವ ಸಾಮರ್ಥ್ಯ ನಿನಗಿಲ್ಲ– ಆದರೆ ಬಿಲಗಳಲ್ಲಿ ಮೂಲೆಗಳಲ್ಲಿ ಅಡಗಿಕೊಂಡು ನಿನ್ನ ಬಲಿಯನ್ನು ಸುಸ್ತಾಗಿಸುವುದು ಹೇಗೆಂದು ನಿನಗೆ ಗೊತ್ತು. ನೀನು ಇಲ್ಲಿ ಕುಳಿತುಕೊಂಡು ಕೆಟ್ಟ ಅದೃಷ್ಟ ಪಡೆದುಕೊಂಡವನ್ನ, ದುರಾದೃಷ್ಟ ಕಾಡಿಸುತ್ತಿರುವವನ್ನ ಅಥವಾ ರಂಗಮಂದಿರದಿಂದ ದೂಡಲ್ಪಟ್ಟವನ್ನ ಕುರಿತು ಸುದ್ದಿ ಓದುವ ಆಸೆಯಿಂದ ಪತ್ರಿಕೆ ತಿರುಗಿಸುತ್ತಾ ಇರುತ್ತೀಯ. –ಅದಕ್ಕೇ ನಿನ್ನ ಗೌರವಕ್ಕೋಸ್ಕರವಾಗಿಯೆ ಈ ಜಾಗವನ್ನು ಜನ ಇಲಿಯೋನು ಅಂತ ಕರೆಯುತ್ತಾರೆ ಅನ್ನೋದು ಬಹುಶಃ ನಿನಗೆ ಗೊತ್ತಿರಬೇಕು... ಒಡೆದುಹೋದ ಹಡಗಿನ ನಾಯಕ ತನ್ನ ಅವಕಾಶಕ್ಕಾಗಿ ಕಾಯುತ್ತಿರುವಂತೆ ನೀನು ಇಲ್ಲಿ ಕುಳಿತುಕೊಂಡು ಬಲಿಪಶುಗಳಿಗಾಗಿ ಹೊಂಚುಹಾಕುತ್ತಿರುತ್ತೀಯ. ಇಲ್ಲಿ ನೀನು ನಿನ್ನ ಕಾಣಿಕೆಗಳನ್ನು ಸ್ವೀಕರಿಸುತ್ತೀಯ! ಅಯ್ಯೋ ಅಮೋಲಿ! ಇದೆಲ್ಲಾ ಆಗಿದ್ದರೂ, ನಾನು ನಿನ್ನ ಬಗ್ಗೆ ಮರುಕ ಪಡುತ್ತೇನೆ. ಯಾಕೆಂದರೆ ನೀನು ಗಾಯಗೊಂಡ ಮೃಗದ ಹಾಗೆ ಸಂಕಟದಲ್ಲಿದ್ದೀಯ ಅಂತ ನನಗೆ ಗೊತ್ತು! ಗಾಯಗೊಂಡಿರುವುದರಿಂದ ದ್ವೇಷ ಮತ್ತು ಕ್ರೂರತೆ ತುಂಬಿಕೊಂಡಿದೆ ಅಂತಲೂ ಗೊತ್ತು! ನನಗೆ ಕೋಪ ಬರಬೇಕಾಗಿದ್ದರೂ ನಿನ್ನ ವಿರುದ್ಧ ಕೋಪಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ –ಯಾಕೆಂದರೆ ನೀನು ದುರ್ಬಲಳು... ಇನ್ನು ಬಾಬ್ ಜೊತೆಗಿನ ಪ್ರಸಂಗದಲ್ಲಿ– ಅದು ನನ್ನ ತಲೆ ಕೆಡಿಸುವುದಕ್ಕೆ ಬಿಡುವುದಿಲ್ಲ... ಅದು ನಿಜವಾಗಿಯೂ ನನಗೇನೂ ಅಪಾಯ ಮಾಡಿಲ್ಲ! ಚಾಕಲೇಟ್ ಕುಡಿಯುವ ಅಭ್ಯಾಸಕ್ಕೆ ನೀನು ನನ್ನನ್ನು ತಳ್ಳಿದ್ದರೂ ಅಥವಾ ಬೇರೆಯವರು ಯಾರಾದರೂ ತಳ್ಳಿದ್ದರೂ ಅದೇನು ಅಷ್ಟು ಮುಖ್ಯವಲ್ಲ...

(ಒಂದೆರಡು ಚಮಚ ಚಾಕಲೇಟ್ ತೆಗೆದುಕೊಂಡು; ನಂತರ ಸಾಮಾನ್ಯ ರೀತಿಯಲ್ಲಿ) ಅದೂ ಅಲ್ಲದೆ ಚಾಕಲೇಟ್ ಆರೋಗ್ಯಕರವಾದ ಪಾನೀಯ. ನೀನು ಬಟ್ಟೆ ತೊಡುವುದನ್ನು ನನಗೆ ಹೇಳಿಕೊಟ್ಟಿದ್ದಿದ್ದರೆ– ಓಹ್, ನನ್ನ ಗಂಡ ಅದರಿಂದಾಗಿ ನನ್ನನ್ನು ಇಷ್ಟಪಡುತ್ತಾನೆ! ಅದರೊಂದರಲ್ಲಿ ನನಗೆ ಲಾಭವಾಗಿದೆ, ನಿನಗೆ ನಷ್ಟವಾಗಿದೆ, ನಾನು ನೋಡಿರುವುದರ ಆಧಾರದ ಮೇಲೆ ತೀರ್ಮಾನ ಮಾಡುವುದಾದರೆ ನೀನು ಈಗಾಗಲೆ ಅವನನ್ನು ಕಳೆದುಕೊಂಡಿದ್ದೀಯ! ನೀನು ಮಾಡಿದ ಹಾಗೆ– ಅದರ ಬಗ್ಗೆ ನೀನು ಈಗ ಪಶ್ಚಾತ್ತಾಪ ಪಡುತ್ತಿದ್ದೀಯ– ನಾನು ಅವನನ್ನು ಬಿಟ್ಟುಬಿಡಬೇಕೆಂಬುದು ನಿನ್ನ ಆಸೆಯಾಗಿತ್ತು ಅನ್ನೋದರಲ್ಲಿ ಯಾವ ಸಂಶಯವೂ ಇಲ್ಲ. ಅದೆ ಅದೇ ನಾನು ಮಾಡದೇ ಇರೋದು! ನಾವು ಸ್ವಾರ್ಥಿಗಳಾಗಬಾರದು, ಗೊತ್ತಾ. ಆದರೆ ಬೇರೆಯವರಿಗೆ ಬೇಡದೇ ಇರೋದನ್ನ ನಾನು ಯಾಕೆ ತೆಗೆದುಕೊಳ್ಳಬೇಕು? ಏನೇ ಮಾತನಾಡಿದರೂ, ಬಹುಶಃ ಈ ಕ್ಷಣದಲ್ಲಿ ನಾನೇ ಗಟ್ಟಿಗಿತ್ತಿ... ನೀನು ನನ್ನಿಂದ ಏನೂ ಪಡೆದುಕೊಂಡಿಲ್ಲ... ಆದರೆ ನೀನು ನನಗೆ ಏನೋ ಕೊಟ್ಟಿದ್ದೀಯ! ದಂತಕತೆಯ ಕಳ್ಳನಿಗಿರುವಂಥದೆ ಅನುಭವ ನನಗಿದೆ; ನೀನು ಎದ್ದಾಗ, ನೀನು ಕಳೆದುಕೊಂಡದ್ದು ನನ್ನ ಹತ್ತಿರ ಇತ್ತು! ಮತ್ತು ನೀನು ಮುಟ್ಟಿದ್ದೆಲ್ಲ ಯಾಕೆ ಗೊಡ್ಡಾಗುತ್ತೆ, ಖಾಲಿಯಾಗುತ್ತೆ? ನಿನ್ನ ಟ್ಯುಲಿಪ್‌ಗಳು, ನಿನ್ನ ಭಾವೋದ್ರೇಕಗಳು ಒಬ್ಬ ಮನುಷ್ಯನ ಪ್ರೀತಿಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಕಾಗಲಿಲ್ಲ – ಆದರೆ ನನಗೆ ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಬದುಕುವ ಕಲೆಯನ್ನು ನಾನು ಕಲಿತಿರುವಂತೆ, ನೀನು ಕಲಿಯುವ ಹಾಗೆ ನಿನ್ನ ಲೇಖಕರು ನಿನಗೆ ಹೇಳಿಕೊಡಲಿಲ್ಲ. ಅಲ್ಲದೆ ನೀನು ಪುಟ್ಟ ಎಸ್ಕಿಲ್‌ನನ್ನು ಹೆರಲಿಲ್ಲ –ಅದು ನಿನ್ನ ತಂದೆಯವರ ಹೆಸರಾಗಿದ್ದರೂ... ಯಾಕೆ ಸದಾ ಮೌನದಲ್ಲಿದ್ದೀಯ, ಯಾಕೆ ನಿನ್ನ ತುಟಿಗಳು ಸದಾ ಬೆಸೆದುಕೊಂಡುಬಿಟ್ಟಿದೆ? ಅದು ಗಟ್ಟಿತನದ ಸಂಕೇತ ಅಂದುಕೊಂಡಿದ್ದೆ – ಆದರೆ ಬಹುಶಃ ಅದು, ನಿನಗೆ ಹೇಳಿಕೊಳ್ಳುವುದಕ್ಕೆ ಏನೂ ಇಲ್ಲದೆ ಇರುವುದರಿಂದ ಅಂತ ಕಾಣಿಸುತ್ತೆ! ಬಹುಶಃ ಆಲೋಚನೆಯ ಕೊರತೆಯಿಂದಿರಬಹುದು! **(ಆಕೆ ಎದ್ದು ನೆಲದ ಮೇಲೆ ಬಿದ್ದಿದ್ದ ಸ್ಲಿಪರ್‌ಗಳನ್ನು ತೆಗೆದುಕೊಳ್ಳುತ್ತಾಳೆ.)** ನಾನೀಗ ಮನೆಗೆ ಹೋಗುತ್ತೇನೆ –ಜೊತೆಗೆ ಟ್ಯುಲಿಪ್‌ಗಳನ್ನು ತೆಗೆದುಕೊಂಡು ಹೋಗುತ್ತೇನೆ. ನಿನ್ನ ಟ್ಯುಲಿಪ್‌ಗಳು! ಬೇರೆಯವರಿಂದ ಕಲಿಯುವುದು ನಿನಗೆ ಇಷ್ಟವಿಲ್ಲ– ಬಾಗುವುದಕ್ಕೆ, ವಿನೀತಳಾಗುವುದಕ್ಕೆ ನಿನಗೆ ಇಷ್ಟವಿಲ್ಲ. ಅದಕ್ಕೆ ನೀನು ಒಣಗಿದ ಬಿದಿರಿನ ಹಾಗೆ ಮುರಿದು ಹೋದೆ. ನಾನು ಉಳಿದೆ! ನೀನು ನನಗೆ ಹೇಳಿಕೊಟ್ಟಿರುವ ಎಲ್ಲದಕ್ಕೂ, ಅಮೇಲಿ ನಿನಗೆ ಧನ್ಯವಾದಗಳು! ಮತ್ತು ಪ್ರೀತಿಸುವುದು ಹೇಗೆಂತ ನನ್ನ ಗಂಡನಿಗೆ ಹೇಳಿಕೊಟ್ಟಿದ್ದಕ್ಕೆ ಧನ್ಯವಾದಗಳು! ಈಗ ನಾನು ಮನೆಗೆ ಹೋಗುತ್ತೇನೆ –ಅವನನ್ನು ಪ್ರೀತಿಸುವುದಕ್ಕೆ!

ಅವಳು ಹೋಗುತ್ತಾಳೆ.

▼

●

ಎಚ್. ಎಸ್. ಉಮೇಶ, ಸಂಪಿತ. ಎಂ ಐ ಜಿ-೪೭. ವಿವೇಕಾನಂದ ಸರ್ಕಲ್, ಕುವೆಂಪುನಗರ.
ಮೈಸೂರು-೫೭೦ ೦೨೩

ನಿನ್ನ ಘನರೂಪದೊಳೆಂತು ಮೋಹಮಡಂಗಿರ್ದುದೋ !

ವಸಂತಕುಮಾರ ಪೆರ್ಲ

ಲಲಿತ ಪ್ರಬಂಧ

ಹೆಬ್ಬಂಡೆಗಳ ಬಗ್ಗೆ ನನಗೆ ಮೊದಲಿನಿಂದಲೂ ಮೋಹ. ಅವುಗಳ ಘನರೂಪದಲ್ಲಿ ಅದೆಂಥ ಚುಂಬಕಶಕ್ತಿ ಅಡಗಿದೆ! ಎಲ್ಲಾದರೂ ನಾನು ಹೋಗುತ್ತಿರುವಾಗ ಅಥವಾ ಪ್ರಯಾಣ ಮಾಡುತ್ತಿರುವಾಗ ನನ್ನ ದೃಷ್ಟಿ ಹಾಯುವುದು ಬೆಟ್ಟಗುಡ್ಡಗಳಲ್ಲಿ ಬಿಗುಮಾನದಿಂದ ಬಿಮ್ಮಗೆ ಮಲಗಿರುವ ಬಂಡೆಗಳತ್ತ. ಅವಕ್ಕಿರುವುದು ನಾಚಿಕೆಯೋ ಬಿಂಕವೋ ಅಥವಾ ಯಾರ ತಂಟೆಯೂ ನಮಗೆ ಬೇಡ ಎಂಬ ನಿರ್ಲಿಪ್ತ ಭಾವವೋ– ಇದೊಂದು ನನಗಿನ್ನೂ ಅರ್ಥವಾಗಿಲ್ಲ. ನಮ್ಮನ್ನು ನೀವು ಅರ್ಥ ಮಾಡಿಕೊಳ್ಳುವುದು ಬೇಡ ಎಂಬಂತೆ ಅವು ಆಮೆಯ ಹಾಗೆ ಅಥವಾ ಬಸವನಹುಳುವಿನ ಹಾಗೆ– ಎಲ್ಲವನ್ನೂ ಒಳಗೆ ಸೇರಿಸಿಕೊಂಡು ಸುರುಟಿ ಉರುಟಾಗಿ ಘನರೂಪ ತಾಳಿರುವುದಂತೂ ಸತ್ಯ. ಹೀಗೆ ಗಟ್ಟಿಯಾಗಿ ಬಾಗಿಲು ಮುಚ್ಚಿಕೊಂಡರೆ ನೀವು ಯಾವ ದಾರಿಯಿಂದ ಒಳಗೆ ಪ್ರವೇಶಿಸಲು ಸಾಧ್ಯ ? ಲೋಕದ ಯಾವುದೇ ದುಗುಡ ಮತ್ತು ದುಷ್ಟಶಕ್ತಿಗಳು ತಮ್ಮ ಹತ್ತಿರ ಸುಳಿಯದಿರಲಿ ಎಂದು ಪಣತೊಟ್ಟು ಕಠೋರವಾಗಿ ಅವು ತಮ್ಮ ದಾರಿಯನ್ನು ಮುಚ್ಚಿಬಿಟ್ಟಿರಬಹುದೇ ? ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಆಡಬೇಡ, ಕೆಟ್ಟದ್ದನ್ನು ಕೇಳಬೇಡ ಎಂದು ಮಹಾತ್ಮಾ ಗಾಂಧಿ ಹೇಳಿದ ಮಾತನ್ನು ಚಾಚೂ ತಪ್ಪದೆ ಪಾಲಿಸಬೇಕೆಂಬ ಕೈಂಕರ್ಯವನ್ನು ಅವು ತೊಟ್ಟಿರಬಹುದೇ ? ವಿಶ್ವದ ಎಲ್ಲೆಡೆಗಳಿಂದಲೂ ಸಚ್ಚಿಂತನೆಗಳು ನಮ್ಮೆಡೆಗೆ ಹರಿದು ಬರಲಿ ಎಂಬ ವೇದೋಕ್ತ ಉಕ್ತಿಯನ್ನು ಬಂಡೆಗಳು ಅರ್ಥ ಮಾಡಿಕೊಂಡಿರಬಹುದೇ– ಎಂದೆಲ್ಲ ನಾನು ಯೋಚಿಸಿದ್ದಿದೆ. ಸಚ್ಚಿಂತನೆಗಳು ಎಲ್ಲ ದಿಕ್ಕುಗಳಿಂದ ಹರಿದು ಬರಬೇಕಾದರೆ ಎಲ್ಲ ಬಾಗಿಲುಗಳನ್ನು ತೆರೆದಿಡಬೇಕು. ಸಚ್ಚಿಂತನೆಗಳಿಗೆ ಬದಲಾಗಿ ದುಶ್ಚಿಂತನೆಗಳೇ ನುಗ್ಗಿ ಬರುವ ವಾತಾವರಣವಿದ್ದರೆ ಬಾಗಿಲುಗಳನ್ನು ಯಾಕೆ ತೆರೆದಿಡಬೇಕು ? ಪಾಪನಾಶಿನಿಯಾದ ಗಂಗೆಯೇ ತಾನು ಮಲಿನಗೊಂಡು ರೋಗ ಹರಡುವಂತಹ ಪರಿಸ್ಥಿತಿ ನಿರ್ಮಾಣಗೊಂಡಿರುವಾಗ ಯಃಕಶ್ಚಿತ್ ಬಂಡೆಕಲ್ಲುಗಳ ಪಾಡೇನು ? ಶ್ರೇಷ್ಠತೆಯನ್ನೂ ಪಾವಿತ್ರ್ಯವನ್ನೂ ಉಳಿಸಿಕೊಳ್ಳಲು ಹೆಣಗುವ ಶಾಸ್ತ್ರ-ಲಾಗಳ ಹಾಗೆ ಈ ಬಂಡೆಗಳೂ ತಮ್ಮ ಬಾಗಿಲುಗಳನ್ನು ಮುಚ್ಚಿಕೊಂಡಿರಬಹುದೇ ಎಂಬ ಗುಮಾನಿ ನನ್ನನ್ನು ಕಾಡುತ್ತದೆ.

ಅದೇನೇ ಇರಲಿ, ಬಂಡೆಗಳು ಮಾತ್ರ ಯಾರ ತಂಟೆಗೂ ಹೋಗುವುದಿಲ್ಲ. ಬುಸುಗುಡುವುದನ್ನು ನಿಲ್ಲಿಸಿದ ಹಾವಿಗೆ ಹುಡುಗರು ಕಲ್ಲು ಹೊಡೆದು ಹಿಂಸೆ ಮಾಡಿದರೂ ಮೌನಿಯಾಗಿದ್ದ ಹಾಗೆ, ಸುಮ್ಮನಿರುವ ಬಂಡೆಕಲ್ಲುಗಳಿಗೆ ನೀವು ತಲೆ ಘಟ್ಟಿಸಿದರೂ ಅವು ನಿರ್ಲಿಪ್ತವಾಗಿ ಇದ್ದುಬಿಡುತ್ತವೆ. ನಾನು ಸುಳ್ಳು ಹೇಳುವುದಲ್ಲ; ನೀವು ಸೂಕ್ಷ್ಮವಾಗಿ ಗಮನಿಸಿದರೆ ಈ ವಿಷಯ ಮನದಟ್ಟಾದೀತು. ಬೃಹದಾಕಾರವಾಗಿರುವ ಅವು ವರ್ಷವರ್ಷಗಳೇ ಕಳೆದರೂ ಗಾಳಿ ಮಳೆ ಚಳಿ ಬಿಸಿಲಿಗೆ ಮೈಯೊಡ್ಡಿ ಕಾಲದೊಂದಿಗೆ ಪೈಪೋಟಿ ಮಾಡುತ್ತ ಶೋಭಾಯಮಾನವಾಗಿ ನಿಂತಿರುತ್ತವೆ. ಅವುಗಳ ಸುತ್ತ ಮುತ್ತ ಬೇರು ಹಬ್ಬಬಹುದು; ಪೊದೆ ಮರಗಿಡ ಬಳ್ಳಿಗಳು ಸುತ್ತಿಕೊಳ್ಳಬಹುದು; ಯಾರೋ ಆಸಕ್ತ ಆಸ್ತಿಕರು ಮೇಲೊಂದು ಗುಡಿಕಟ್ಟಿ ಹಾಲೆರೆದು ಪೂಜಿಸಬಹುದು. ಯಾವುದಕ್ಕೂ ಗಮನ ಕೊಡದೆ ಈ ಹೆಬ್ಬಂಡೆಗಳು ಭೂಮಿಯ ಮೇಲಿನ ಅಘೋಷಿತ ಕಾವಲುಗಾರರ ಹಾಗೆ ಹಗಲೂ ರಾತ್ರಿ ಕರ್ತವ್ಯೈಕ ದೃಷ್ಟಿಯಿಂದ ಇದ್ದುಬಿಡುತ್ತವೆ. ನೀವು ದೂರಿದರೂ ಬೈದರೂ ಹೊಗಳಿದರೂ ಅವಕ್ಕೆ ಗುಮಾನಿ ಇಲ್ಲ.

ಬಿರುಸು ಮಳೆ ರಾಚುತ್ತಿದ್ದರೂ ನಿರ್ಲಕ್ಷ್ಯವಾಗಿದ್ದು ಬಿಡುವ ಮಹಾಪುರುಷೋತ್ತಮನಂತಹ ಅವುಗಳ ನಿರ್ಲಿಪ್ತತೆ ಯಾರಿಗೆ ತಾನೇ ಇಷ್ಟವಾಗಲಿಕ್ಕಿಲ್ಲ !

ಬಂಡೆಗಳು ತುಂಬ ಗೂಢವಾದ ವ್ಯಕ್ತಿತ್ವಗಳು ಎಂದೆನಲ್ಲವೇ ? ಚಿಕ್ಕ ಹರಳಿನ ರೂಪದಲ್ಲಿರಲಿ, ಹೆಬ್ಬಂಡೆಯಾಗಿರಲಿ ಅವುಗಳ ಸಾಂದ್ರ ಘನರೂಪ ಯಾರನ್ನಾದರೂ ಆಕರ್ಷಿಸಲೇಬೇಕು. ಆದರೆ ಹಾಮುಂತಹ ಹಾಗೆ ತೀರ ಸುಲಭವಾಗಿ ಅವು ತಮ್ಮ ನಿಜರೂಪವನ್ನು ತೋರಿಸಿಕೊಳ್ಳುವುದಿಲ್ಲ. ಹೊರಜಗತ್ತಿಗೆ ಅವುಗಳ ಸಮ್ಯಕ್ ದರ್ಶನ ಮಾಡಿಸಬೇಕಾದರೆ ಶ್ರೀರಾಮನಂತಹ ಪುರುಷೋತ್ತಮನ ಸ್ಪರ್ಶ ಬೇಕು. ಆಗ ಕಲ್ಲರಳಿ ಹೂವಾಗುತ್ತದೆ. ಕಾಳಿಮ ಕಳೆದು ಪುಟವಿಟ್ಟ ಬಂಗಾರದಂತೆ ಅವುಗಳ ವ್ಯಕ್ತಿತ್ವ ಥಳಥಳಿಸುತ್ತದೆ.

ತಮ್ಮನ್ನು ತಾವೇ ಪ್ರದರ್ಶಿಸಿಕೊಂಡು ಹೋಗುವ ಜಾಯಮಾನ ಖಂಡಿತ ಬಂಡೆಗಳದಲ್ಲ. ಆದರೆ ಪಾಪ, ಅವುಗಳ ಅಸ್ತಿತ್ವ ತಾನಾಗಿಯೇ ಜಗತ್ತಿಗೆ ಗೊತ್ತಾಗಿ ಬಿಡುತ್ತದೆ. ಹೆತ್ತವನಾದರೂ ದೊಡ್ಡವನಾಗಿರಬೇಕು ಎಂದಂತೆ ತಮ್ಮ ಹಿರಿದಾದ ಗಾತ್ರದಿಂದ ಬಂಡೆಗಳು ಎಲ್ಲರ ಕಣ್ಣಿಗೂ ಬೀಳುತ್ತವೆ ಎಂದು ಕೆಲವರು ಹೇಳಬಹುದು. ಆ ಮಾತನ್ನು ನಾನು ಒಪ್ಪಲಾರೆ. ಹೊಳೆಯ ಶುಭ್ರ ನೀರಿನ ತಳದಲ್ಲಿ ಸ್ಫಟಿಕದಂತಹ ಒಂದು ಸಣ್ಣ ಕಲ್ಲು ಥಟ್ಟನೆ ಗಮನ ಸೆಳೆದೀತು ಅಥವಾ ನಡೆದು ಹೋಗುತ್ತಿರುವಾಗ ಒಂದು ಬೆಣಚುಕಲ್ಲು ಸೂರ್ಯಕಿರಣವನ್ನು ಪ್ರತಿಫಲಿಸಿ ಕಣ್ಣು ಕೋರೈಸಬಹುದು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿನಂತೆ ಕಲ್ಲು ಚಿಕ್ಕದಾಗಿದ್ದರೂ ಅದರ ಗುಣವಿಶೇಷಗಳನ್ನು ಮರೆಯುವಂತಿಲ್ಲ.

ಗಂಧದ ಪರಿಮಳ ಮತ್ತು ತಣ್ಪು ತೇವಂತೆಲ್ಲ ಅನುಭವಕ್ಕೆ ಬರುವಂತೆ ಮಹಾನ್ ಬಂಡೆಕಲ್ಲುಗಳುಳ್ಳ ಬೆಟ್ಟಗಳ ಆತ್ಮದರ್ಶನ ಬಯಸಬೇಕಾದರೆ ಅಂತರ್ದೃಷ್ಟಿ ಬೇಕು. ಬಹಿಶ್ಚಕ್ಷುಗಳಿಗೆ ಕುರಿಮರಿಯಲ್ಲಿ ದೇವರನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಬೆಟ್ಟವೂ ಪಾರ್ವತೀ ಪರಮೇಶ್ವರರ ಆವಾಸಸ್ಥಾನವೆಂದು ಬಗೆದಿರುವವರಿಗೆ ಹೆಬ್ಬಂಡೆಗಳ ಬಗ್ಗೆ ಮೋಹ ಅಪರಿಮಿತ ವಿನಾಶ್ಚರ್ಯ ? ಕಡಿದಾದ ಬೋಳು ಬೆಟ್ಟವೊಂದರಲ್ಲಿ ನಿಮಗೆ ಅತಿತುಂಗಾಕೃತಿಯ ವಿರಕ್ತ ಮನ್ಮಥನನ್ನು ಕಾಣುವುದಕ್ಕೆ ಸಾಧ್ಯವೇ ? ಅದಕ್ಕೆ ಚಾವುಂಡರಾಯನೇ ಬರಬೇಕಾಯಿತು. ಗೊಮ್ಮಟಗಿರಿಯಲ್ಲಿ ಅನುಪಮ ರೂಪವಂತನಾದ, ಸ್ಮರನುದಗ್ರನಾದ, ನಿರ್ಜಿತಚಕ್ರಿಯಾದ, ಮುತ್ತುದಾರನಾದ ಮಹಾವೀರನಿದ್ದಾನೆಂದು ಊಹಿಸುವುದಕ್ಕೆ ನನ್ನಿಂದ ಸಾಧ್ಯವಿರಲಿಲ್ಲ. ಅಂತಹ ಹೆಬ್ಬಂಡೆಯಿಂದ ಎಂತಹ ತುಂಗಾಕೃತಿ ಮೂಡಿಬಂತು !

ಗೊಮ್ಮಟ ಕಲ್ಲಿನ ಒಂದು ಕೇವಲ ಪ್ರತಿಮೆಯಲ್ಲ, ತ್ಯಾಗ ವೈರಾಗ್ಯಗಳ ಅಧಿಪುರುಷ ಮಹಾವೀರನ ಯಥಾರ್ಥ ದರ್ಶನ. ಪ್ರಣವಸ್ವರೂಪನಂತೆ ಸತ್ವರೂಪದಲ್ಲಿದ್ದ ಕ್ಷಿತಿಸಂಪೂಜ್ಯ ಗೊಮ್ಮಟನನ್ನು ಬಂಡೆಯೊಳಗೆ ಕಂಡ ಕಣ್ಣು ಕೇವಲವೆಂದು ಹೇಳುತ್ತೀರೇನು ?

ಅದುವರೆಗೆ ಲೋಕದ ಜನರಿಂದ ಛೀ ಥೂ ಎಂದು ಉಗುಳಿಸಿಕೊಂಡಿದ್ದಿರಬಹುದಾದ ಮತ್ತು ಕಾಡು ಕೂಡ ಬೆಳೆದಿರಲಾರದ ಬಂಜರು ಬೋಳುಬಂಡೆಯಲ್ಲಿ ಎಂತಹ ಲೋಕಾಕರ್ಷಣೆ ! ಬಂಡೆಯೊಳಗಿಂದ ಎದ್ದು ಬಂದಿರುವ ಅದೆಂತಹ ಮೇರು ಕಲಾಕೃತಿ ! ಬರೇ ಕಲಾಕೃತಿ ಅಲ್ಲ; ತ್ಯಾಗದ ಅಮರ ಸಂದೇಶವನ್ನು ಅನಂತ ಕಾಲದ ವರೆಗೆ ಸಾರಿ ಹೇಳುವ ಭಾರತೀಯ ದರ್ಶನ ಶಾಸ್ತ್ರದ ಸಾಕಾರರೂಪ. ಪ್ರಪಂಚವನ್ನೇ ನಿಬ್ಬೆರಗುಗೊಳಿಸಿದ ಮಹಾ ಅದ್ಭುತವೊಂದು ಬಂಡೆಕಲ್ಲಿನಿಂದ ರೂಪು ಪಡೆಯಿತು ಎಂದಾಗ ಬಂಡೆಯ ಮಹಿಮೆಯಷ್ಟು ಎಂಬುದು ನಿಮಗೆ ಮನದಟ್ಟಾಯಿತು !

ಇಂತಹ ಕಲ್ಲು ಕೂಡ ಮನುಷ್ಯರ ಹಾಗೆ ಕಾಲಕಾಲಕ್ಕೆ ಬೆಳೆಯುತ್ತದೆ ಮತ್ತು ಸವೆಯುತ್ತದೆ ಎಂದರೆ ಆಶ್ಚರ್ಯದ ಸಂಗತಿಯಲ್ಲವೆ ? ನಿರಂತರವಾದ ನೀರಿನ ಹರಿವು ಮತ್ತು

ಪ್ರವಾಹ ಬಂಡೆಗಳನ್ನು ಸವೆಸಬಲ್ಲವು ಮತ್ತು ಚಿತ್ರವಿಚಿತ್ರವಾದ ಚಿತ್ತಾರಗಳನ್ನು ಕೊರೆಯಬಲ್ಲವು. ಕಾವೇರಿ ನದಿ ಮೇಕೆದಾಟು ಬಳಿಯಲ್ಲಿ ಬಂಡೆಗಳನ್ನು ಕೊರೆದು ಆಳಪ್ರಪಾತವನ್ನು ನಿರ್ಮಿಸಿದೆ. ಅಲ್ಲಿ ಅಗಲ ಕಿರಿದಾದ ಆಳ ಕಂದರದಲ್ಲಿ ಕಾವೇರಿ ರಭಸದಿಂದ ಚಿಮ್ಮುತ್ತಾಳೆ. ಹಿಂದೆ ಅಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಮೇಕೆಗಳು ದಾಟುತ್ತಿದ್ದವಂತೆ. ಅದಕ್ಕಾಗಿ ಆ ಹೆಸರು ಬಂದಿದೆ.

ನಿಶ್ಚಲ ನೀರಿನಲ್ಲಿರುವ ಮತ್ತು ಬೆಟ್ಟಗುಡ್ಡಗಳಲ್ಲಿರುವ ಬಂಡೆಕಲ್ಲುಗಳು ಕಾಲಾನುಕ್ರಮದಲ್ಲಿ ಬೆಳೆಯುತ್ತವೆ ಕೂಡ. ಕಲ್ಲು ಅಥವಾ ಶಿಲೆಗಳಲ್ಲಿರುವ ಮೂಲ ಘಟಕಗಳೆಂದರೆ ಆಮ್ಲಜನಕ, ಸಿಲಿಕಾನ್, ಅಲ್ಯುಮಿನಿಯಂ, ಕಬ್ಬಿಣ, ಕ್ಯಾಲ್ಸಿಯಂ, ಸೋಡಿಯಂ, ಪೊಟಾಸಿಯಂ ಮತ್ತು ಮ್ಯಾಗ್ನೀಶಿಯಂ. ಈ ಎಂಟು ಘಟಕಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಒಟ್ಟುಗೂಡಿದಾಗ ಶಿಲೆಗಳ ರಚನೆ ಆಗುತ್ತದೆ.

ಶಿಲೆಗಳಲ್ಲಿ ಮೂರು ವಿಧಗಳಿವೆ. ಅಗ್ನಿಶಿಲೆ, ಜಲಜಶಿಲೆ ಮತ್ತು ರೂಪಾಂತರ ಶಿಲೆ. ಭೂಮಿಯ ಒಳಗೆ ಅಧಿಕ ಉಷ್ಣತೆಯ ದೆಸೆಯಿಂದ ಈ ಮೂಲ ಘಟಕಗಳೆಲ್ಲ ಕರಗಿ ಮಂದ ದ್ರಾವಣ ರೂಪದಲ್ಲಿರುತ್ತದೆ. ಒಳಗಿನ ಒತ್ತಡ ಅಧಿಕವಾದಾಗ ಜಾಗ ಸಿಕ್ಕದಲ್ಲಿ ಈ ಶಿಲಾಪಾಕ ಮೇಲಕ್ಕೆ ಹರಿದು ಗಟ್ಟಿಯಾಗಿ ಶಿಲೆ ನಿರ್ಮಿಸಿಕೊಳ್ಳುತ್ತದೆ. ಹೊರಗೆ ಹರಿಯದೆ ಭೂಮಿಯೊಳಗೇ ಸಾವಕಾಶವಾಗಿ ಆರಿ ಸ್ಫಟಿಕರೂಪವಾಗಿ ಶಿಲೆ ರೂಪುಗೊಳ್ಳುತ್ತದೆ. ಈ ಎರಡು ಬಗೆಯ ಶಿಲೆಗಳಿಗೂ ಶಾಖವು ಕಾರಣವಾದುದರಿಂದ ಇವುಗಳಿಗೆ ಅಗ್ನಿಶಿಲೆಗಳೆಂದು ಹೆಸರು. ಅಗ್ನಿಶಿಲೆಗಳು ಸುಲಭವಾಗಿ ಸವೆಯುವುದಿಲ್ಲ. ಇವುಗಳನ್ನು ಕೆತ್ತಿ ನಮಗೆ ಬೇಕಾದಂತೆ ಒಗ್ಗಿಸಿಕೊಳ್ಳುವುದು ತುಂಬ ಕಠಿಣ ಕೆಲಸ. ಅಥವಾ ಕೆತ್ತನೆ ಕೆಲಸಗಳಿಗೆ ಇವು ಒಗ್ಗುವುದಿಲ್ಲ ಎಂದರೂ ಸರಿಯೇ.

ನಿರಂತರವಾದ ಪ್ರಾಕೃತಿಕ ಹೊಡೆತಗಳು ಮಾತ್ರ ಅಗ್ನಿಶಿಲೆಗಳನ್ನು ಕಿಂಚಿತ್ ಊನಗೊಳಿಸಬಲ್ಲವು. ಮಲ್ಪೆ ಸಮೀಪದ ನಾರಿಕೇಳ ದ್ವೀಪದಲ್ಲಿ ಷಟ್ಭುಜ ಮತ್ತು ಅಷ್ಟಭುಜಗಳ ರೂಪದಲ್ಲಿ ಭೂಮಿಯ ಗರ್ಭದಿಂದ ಚಿಮ್ಮಿ ಬಂದಿರುವ ಅಗ್ನಿಶಿಲೆಗಳು ಹತ್ತಾರು ಲಕ್ಷ ವರ್ಷಗಳಾದರೂ ವಿರೂಪಗೊಳ್ಳದೆ ಹಾಗೆಯೇ ಉಳಿದುಕೊಂಡಿವೆ. ಅಷ್ಟು ವರ್ಷಗಳ ಹಿಂದೆ ಈ ದ್ವೀಪವು ಭೂಮಿಯ ಒಂದು ಭಾಗವಾಗಿತ್ತು. ಮಣ್ಣಿನ ಭಾಗವನ್ನು ಸಮುದ್ರವು ನುಂಗಿ ಹಾಕುತ್ತ– ಈಗ ಸಮುದ್ರ ಹತ್ತಾರು ಕಿಲೋಮೀಟರ್‌ಗಳಷ್ಟು ಭೂಮಿಯನ್ನು ಒತ್ತರಿಸಿಕೊಂಡಿದೆ. ಅಗ್ನಿಶಿಲೆ ಹಾಗೆಯೇ ಉಳಿದುಕೊಂಡಿತು. ದಕ್ಷಿಣ ಪೀಠಭೂಮಿಯಲ್ಲಿ ಆ ವೇಳೆಯಲ್ಲಿ ಇನ್ನೂ ಹಲವಾರು ಜ್ವಾಲಾಮುಖಿಗಳು ಸ್ಫೋಟಗೊಂಡಿದ್ದು, ಭೂಮಿಯ ಮೇಲ್ಮೈ ಲಕ್ಷಣಗಳಲ್ಲಿ ಆಗಿರುವ ಬದಲಾವಣೆಗಳನ್ನು ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ.

ಶಿಲೆಗಳನ್ನು ಭೂಮಿಯ ಸತ್ವದ ಘನೀಭೂತ ರೂಪ ಎಂದು ಕರೆಯೋಣವೇ ? ಅದು ಅತ್ಯಂತ ಉಚಿತ ಎಂದು ತೋರುತ್ತದೆ. ಬಹು ಅಮೂಲ್ಯವಾದ ಎಂಟು ಮೂಲ ಘಟಕಗಳು ಕಲ್ಲಿನಲ್ಲಿವೆ ಮತ್ತು ಅವು ಒಂದಕ್ಕೊಂದು ಸಂಯೋಗಗೊಂಡು ರಸರೂಪದಲ್ಲಿ ಇರುತ್ತವೆ. ಆ ಬಳಿಕ ಅವು ಶಿಲೆಗಳಾಗುತ್ತವೆ.

ಭೂಗರ್ಭದಿಂದ ಚಿಮ್ಮಿಬಂದ ರಸ ಒಂದೇ ಬೆಟ್ಟವಾಗಿ ರೂಪು ಪಡೆದಿರುವುದುಂಟು. ಬೆಳ್ತಂಗಡಿ ಸಮೀಪದ ಗಡಾಯಿಕಲ್ಲು, ಮಾಗಡಿಗೆ ಸಮೀಪದ ಸಾವನದುರ್ಗ ಮತ್ತು ದಿಂಡಿಗಲ್ಲು ಬೆಟ್ಟ ನನಗೀಗ ಇಲ್ಲಿ ನೆನಪಾಗುತ್ತಿದೆ. ಈ ದುರ್ಗಮ ಬಂಡೆಗಳಲ್ಲಿ ಒಬ್ಬ ಮರ್ಯಾದಾ ಪುರುಷೋತ್ತಮನಿರಲಾರನೇ, ಪಾಶುಪತ ಹಿಡಿದ ಅರ್ಜುನ ಮೈದಳೆಯಲಾರನೇ, ಬಲಭೀಮ ಎದ್ದು ಬರಲಾರನೇ ಎಂದೆಲ್ಲ ಈ ಬೆಟ್ಟಗಳನ್ನು ನೋಡಿದಾಗ ನನಗೆ ಅನ್ನಿಸಿದ್ದಿದೆ. ಆದರೆ

ಸರ್ವಾಂತರ್ಯಾಮಿಯಾದ ಭಗವಂತ ನಿರ್ಗುಣಿ, ನಿರಾಕಾರನಾದ್ದರಿಂದ ಯಾವ ನಾಗರಿಕ ಶಾಪಗಳೂ ತಟ್ಟದೆ ಆ ಬಂಡೆಗಳು ಇದ್ದಲ್ಲಿ ಇದ್ದ ಹಾಗೆಯೇ ಕಣ್ಮನಕ್ಕೆ ತಂಪೆರೆಯಲಿ ಎಂದೂ ಅನ್ನಿಸಿದ್ದಿದೆ.

ಆದರೆ ತಂಪಾಗುವುದಾದರೂ ಹೇಗೆ ಸಾಧ್ಯ ? ಆರು ತಿಂಗಳುಗಳ ಕಾಲ ತನ್ನ ಮೇಲಾದ ನಿರಂತರ ದಾಳಿ ಮತ್ತು ಲೂಟಿಯಿಂದ ಹಂಪಿಯು ಉಗ್ರನರಸಿಂಹ ಕೈ ಕಳೆದುಕೊಂಡು ವಿರೂಪವಾಗಿಬಿಟ್ಟನಲ್ಲ ! ಬಂಡೆಯಿಂದ ಮೈದಳೆದು ಬಂದ ಅವನ ಸ್ವರೂಪವೇ ಅವನಿಗೆ ಮುಳುವಾಯಿತೆಂದ ಮೇಲೆ ಇಲ್ಲಿ ಯಾವುದೂ ಶಾಶ್ವತವಾಗಿರಲು ಸಾಧ್ಯವಿಲ್ಲ. ಆಕ್ರಮಣದಿಂದ ರಕ್ಷಿಸಿಕೊಳ್ಳುವ ಸಲುವಾಗಿಯೇ ವಿರೂಪಾಕ್ಷ ತನ್ನ ಹಿನ್ನೆಲೆಯಲ್ಲಿ ಹೆಬ್ಬಂಡೆಗಳ ರಾಶಿಯನ್ನು ಆಯುಧಾಗಾರದಂತೆ ವಿನ್ಯಾಸದಿಂದ ಜೋಡಿಸಿಟ್ಟುಕೊಂಡಿದ್ದಿರಬಹುದೇ ? ವಿಷಾದಯೋಗದ ನಡುವೆಯೂ ಗೀತೋಪದೇಶದಂತೆ ಹಂಪೆಯ ಬಂಡೆಸಾಲುಗಳು ಕವಿಕಲ್ಪನೆಯನ್ನು ಕೆಣಕಿ ವಿಲಾಸ-ವಿಭ್ರಮ ಮೆರೆಯುವುದು ಸುಳ್ಳಲ್ಲ ! ನಿಸರ್ಗವೇ ಕವಿಯಾಗಿ ಬಂಡೆಯ ರೂಪದಲ್ಲಿ ಮೈಯಾಂತು ನಿಂತಿರುವುದು ನೋಡಿದರೆ ಆ ಘನರೂಪ ನಮ್ಮನ್ನು ಮೋಹಪರವಶಗೊಳಿಸುವುದರಲ್ಲಿ ಆಶ್ಚರ್ಯವೇನಿದೆ ?

ಆ ಯೋಚನೆ ಒಂದು ಗಳಿಗೆ ಮಾತ್ರ. ಆ ಬಂಡೆಗಳನ್ನು ನೋಡಿದಾಗಲೆಲ್ಲ ನನಗೆ ತುಂಬ ಕಿರಿಕಿರಿ ಉಂಟಾಗುತ್ತದೆ. ಅಥವಾ ಅವುಗಳನ್ನು ನಾನು ಅತೀವವಾಗಿ ದ್ವೇಷಿಸುತ್ತಿದ್ದೇನೆಯೇ ? ಏನೆಂಬುದು ಗೊತ್ತಿಲ್ಲ. ತೀವ್ರವಾದ ಭಾವನೆ ಎಂಬುದಂತೂ ನಿಜ. ಷೇಕ್ಸ್‌ಪಿಯರನೋ ಮತ್ತಾರೋ ಹೇಳಿಲ್ಲವೇ : ಪ್ರೀತಿ ಮತ್ತು ದ್ವೇಷ ಒಂದೇ ನಾಣ್ಯದ ಎರಡು ಮುಖಗಳು ಎಂದು. ಹಾಗಾಗಿ ಈ ಮತ್ತು ಇಂತಹ ಏಕಶಿಲಾ ಬೆಟ್ಟಗಳು ನನ್ನ ನಿದ್ದೆಗೆಡಿಸುತ್ತವೆ.

ಎಷ್ಟು ದಿನ ನಿದ್ದೆಕೆಡಿಸಿ ಹಾಗೆ ಕಿರಿಕಿರಿ ಉಂಟು ಮಾಡುವುದಕ್ಕೆ ಸಾಧ್ಯ ? ನನ್ನ ಪುಟ್ಟಪಾದಗಳಿಂದ ಒಂದೊಂದೇ ಹೆಜ್ಜೆಯಿರಿಸಿ ಮೇಲೆ ಹೆಸರಿಸಿದ ಈ ಮೂರು ಮಹಾಬಂಡೆಗಳನ್ನು ಕಷ್ಟದಿಂದ ಏರಿದ್ದೇನೆ. ಅಬ್ಬ, ಎಷ್ಟು ಎತ್ತರ ! ರುಮುರುಮು ಬೀಸುವ ಗಾಳಿ, ಮುಗಿಲಲ್ಲೇ ತೇಲುತ್ತಿರುವ ಹಾಗೆ ! ತೋಟ ಮನೆ ಹೊಲಗಳೆಲ್ಲ ತುಂಬ ಚಿಕ್ಕದಾಗಿ ಅಲ್ಲಿಂದ ಕಾಣುತ್ತದೆ. ರಸ್ತೆ ಹನುಮಂತನ ಜನಿವಾರದ ಹಾಗೆ ಮತ್ತು ಕೆಳಗಿನ ಬೆಟ್ಟ ಗುಡ್ಡ ಕಣಿವೆ ಹಳ್ಳ ತೋಡುಗಳೆಲ್ಲ ಕಲಾವಿದ ಬಿಡಿಸಿಟ್ಟ ಚಿತ್ರದ ಹಾಗೆ ಕಾಣುತ್ತದೆ. ಕಾಲಕೆಳಗೆ ರುದ್ರಪ್ರಪಾತ. ಜಾರಿ ಉರುಳಿ ಬಿದ್ದರೆ ಎಲುಬು ಕೂಡ ಸಿಕ್ಕಲಾರದು. ಎತ್ತರ ಪ್ರದೇಶ ಅಪಾಯಕಾರಿ ಮತ್ತು ಜನರು ನಮ್ಮಿಂದ ದೂರವಾಗುತ್ತಾರೆ ಎಂದು ಅಲ್ಲಿ ಏರಿ ನಿಂತ ಮೇಲೆ ನನಗೆ ಅನಿಸಿತು. ಕೆಳಗೆ ಓಡಾಡುವ ಜನರು ಇರುವೆಗಳಂತೆ ಕೂಡ ಕಾಣುವುದಿಲ್ಲ. ಹೆಬ್ಬಂಡೆಗಳ ಬೆಟ್ಟ ಕೆಳಗಿನಿಂದ ನೋಡಲು ಮಾತ್ರ ಚಂದ. ನೀರು, ಆಹಾರ, ಸಾಮಾಜಿಕ ಸಂಸರ್ಗ ಅಲ್ಲಿ ಸಿಕ್ಕುವುದಿಲ್ಲ. ಅಲ್ಲಿ ನಿಂತು ಏನು ಮಾಡುವುದು ? ಬರೀ ಗಾಳಿ ಕುಡಿದು ಬದುಕುವುದಕ್ಕುಂಟೇ ?

ಗಾಳಿ ಕುಡಿದು ಬದುಕುವ ಋಷಿಮುನಿಗಳು ಇಂತಹ ಬೆಟ್ಟಗಳನ್ನು ತಪಸ್ಸಾಧನೆಗೆ ಬಳಸಿಕೊಂಡರು. ಹೆಬ್ಬಂಡೆಗಳ ನಡುವೆ ಇರುವ ಗುಹೆಗಳೋ ಪೊಟರೆಗಳೋ ಅವರ ಆವಾಸಸ್ಥಾನ ಆಯಿತು. ಆಹಾರ ಇಲ್ಲದೆಯೂ ಅವರು ತೇಜಸ್ವಿಗಳಾಗಿ ನೂರಾರು ವರ್ಷ ಬದುಕುತ್ತಿದ್ದರು. ಅಂದರೆ ಬೆಟ್ಟಗುಡ್ಡಗಳಲ್ಲಿ ಸಂಚರಿಸುವ ಗಾಳಿಗೆ ದೈವಿಕವಾದ ಸಂಜೀವಿನೀ ಶಕ್ತಿ ಇರಬಹುದೇ ?

ತಪಸ್ವಿಗಳನ್ನು, ಋಷಿಮುನಿಗಳನ್ನು ಆಹ್ವಾನಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ ಪೂಜಿಸಿ ಆಶೀರ್ವಾದ ಬೇಡಿ ಮನ್ನಣೆ ನೀಡಿ ಕಳುಹಿಸುತ್ತಿದ್ದ ರಾಜಮಹಾರಾಜರು ಅವರನ್ನು ಅನುಕರಿಸಲು

ಪ್ರತಿಷ್ಠಿಸುತ್ತಿದ್ದರು. ಋಷಿಮುನಿಗಳು ಆ ಪಾಷಾಣದಲ್ಲಿ ಮಹಾತ್ಮೆಯನ್ನು ಕಂಡ ರಾಜರು ಕೋಟೆ ಕೊತ್ತಲಗಳನ್ನು ಕಟ್ಟಲು ಅಂತಹ ಪ್ರದೇಶಗಳನ್ನೇ ಆರಿಸಿಕೊಂಡರು. ಯಾವುದೇ ದುರ್ಗದ ಬೆಟ್ಟಗಳನ್ನು ನೋಡಿದರೂ ಅಲ್ಲಿ ಒಂದು ಅರಸರ ಕೋಟೆಯ ಅವಶೇಷಗಳನ್ನು ನೋಡಬಹುದು.

ಹಿಂದಿನ ಕಾಲದಲ್ಲಿ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದುದು ಋಷಿಗಳು ಇಲ್ಲವೇ ಅರಸರು. ಋಷಿಮುನಿಗಳಂತೆ ತಾವೂ ಸಿದ್ಧಿಗಳಿಸಿಕೊಳ್ಳಬೇಕೆಂಬ ಅರಸರ ತೀವ್ರ ಆಕಾಂಕ್ಷೆಯ ಫಲವಾಗಿ ದುರ್ಗಗಳು ಉದಯಿಸಿರಬಹುದೇ ಎಂದು ನಾನು ಯೋಚಿಸಿದ್ದಿದೆ. "ಬ್ರಹ್ಮ ತೇಜೋ ಬಲಂ ಬಲಂ!" ಎಂಬ ನಿರ್ಧಾರ ತೆಗೆದುಕೊಂಡು ಕೌಶಿಕ ಮಹಾರಾಜ ತಪಸ್ಸಿಗೆ ಧುಮುಕಿದ ಉದಾಹರಣೆ ನಮಗೆ ಪುರಾಣದಲ್ಲಿ ಸಿಕ್ಕುತ್ತದೆ.

ಇಷ್ಟೆಲ್ಲ ಮಾತು ಯಾಕೆ? ಕಲ್ಲರಳಿ ಹೂವಾದ ಸಾಕ್ಷಾತ್ ದೃಷ್ಟಾಂತ ನಿಮಗೆ ಅಜಂತಾ, ಎಲ್ಲೋರಾದಲ್ಲಿ ಸಿಕ್ಕುವುದಿಲ್ಲವೇ? ಶಿಲಾಪರ್ವತಗಳನ್ನು ಕೊರೆದು ಅಲ್ಲಿ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದ್ದಾರೆ. ಬೇಲೂರು-ಹಳೇಬೀಡಿನಲ್ಲಿ ಕಲ್ಲಿನ ಹೂವಿಗೆ ಪರಿಮಳ ಕೂಡ ಸೇರಿಕೊಂಡಿದೆ. "ಮಾ-ನಿಷಾದ" ಎಂದದ್ದಕ್ಕೆ ವ್ಯಾಧನೊಬ್ಬ ಲೋಕೋತ್ತರವಾದ ಮಹಾಕಾವ್ಯ ಬರೆದ. ಹೆಬ್ಬಂಡೆಗಳಿಗೆ ಮಾತು ಬರುವಂತಿದ್ದರೆ ಅವು ರಾಮಾಯಣಕ್ಕಿಂತಲೂ ಶ್ರೇಷ್ಠ ಕಾವ್ಯ ಬರೆಯುತ್ತಿದ್ದವೇನೋ?

ಬಂಡೆಗಳ ಬಗ್ಗೆ ಕಾಳಜಿ ಇರುವವರು ಅಪರೂಪ. ಇತ್ತೀಚೆಗಂತೂ ಬಂಡೆಗಳನ್ನು ಯದ್ವಾತದ್ವಾ ಒಡೆದು ಬೆಟ್ಟಗಳನ್ನು ವಿರೂಪಗೊಳಿಸುತ್ತಿದ್ದಾರೆ. ಬಂಡೆಗಳನ್ನು ಒಡೆದು ಮಾರುವ ವ್ಯಾಪಾರ ಇಂದು ಯಾವ ಹಂತಕ್ಕೆ ಹೋಗಿದೆಯೆಂದರೆ ಅದಕ್ಕಾಗಿ ಕೋಟ್ಯಂತರ ರೂಪಾಯಿಯ ಯಂತ್ರೋಪಕರಣಗಳನ್ನು ಸ್ಥಾಪಿಸಲಾಗುತ್ತಿದೆ. ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದು ಮಹಡಿ ಮನೆ ಕೂಡ ಕಟ್ಟಿಸುತ್ತಿದ್ದಾರೆ. ಬಂಡೆ ವ್ಯಾಪಾರದ ಬಗ್ಗೆ ಶಾಸನ ಸಭೆಗಳಲ್ಲಿ ಪ್ರಸ್ತಾಪಗಳಾಗುತ್ತಿವೆಯೆಂದರೆ ಬಂಡೆಗಳ ಮಹತ್ವವನ್ನು ನೀವೇ ಊಹಿಸಿ.

ಬಂಡೆಗಳನ್ನು ತೀರ ನಿರುಪಯುಕ್ತ ವಸ್ತುಗಳೆಂದು ಭಾವಿಸಬೇಡಿ. ಅದು ಅಗ್ಗದಲ್ಲಿ ದೊರೆಯುವ ಚಿನ್ನ. ಮನೆ ಕಟ್ಟಿಸುವ ಶ್ರೀಮಂತರು ಅದಕ್ಕಾಗಿ ಬಾಯಿ ಬಾಯಿ ಬಿಡುತ್ತಾರೆ. ಉದಾಹರಣೆಗೆ ಗ್ರಾನೈಟ್ ಶಿಲೆಗಳನ್ನು ತೆಗೆದುಕೊಳ್ಳಿ. ಬೇರೆ ಬೇರೆ ಜಾತಿಯ ಗ್ರಾನೈಟ್ ಶಿಲೆಗಳಿವೆ. ಕೆಂಪು ಚುಕ್ಕೆಗಳಿರುವ ಗ್ರಾನೈಟ್ ಶಿಲೆಗಳಿಗೆ ನಿಜವಾದ ಚಿನ್ನದ ಬೆಲೆ ಬಂದರೆ ಆಶ್ಚರ್ಯವಿಲ್ಲ. ನಮ್ಮಲ್ಲಿಂದ ನಿರ್ಯಾತಗೊಂಡು ಗಮ್ಯಸ್ಥಾನಕ್ಕೆ ತಲುಪಿದಾಗ ಚಿನ್ನದ ಬೆಲೆಗೂ ಕೆಂಪು ಚುಕ್ಕೆಯ ಗ್ರಾನೈಟ್ ಶಿಲೆಗೂ ಆಶ್ಚರ್ಯ ಪಡುವ ವ್ಯತ್ಯಾಸ ಇರಲಾರದು.

ಶಿಲೆಯು ರತ್ನಗರ್ಭಾ ವಸುಂಧರೆಯ ಒಂದು ಅಮೂಲ್ಯ ರತ್ನ ಎಂಬುದರಲ್ಲಿ ಎರಡು ಮಾತಿಲ್ಲ. ಭೂಗರ್ಭಶಾಸ್ತ್ರಜ್ಞರಿಗೆ ಶಿಲೆ-ಕಲ್ಲುಗಳು ಪ್ರಾಕ್ತನ ವಿವರಗಳನ್ನು ಪತ್ತೆಹಚ್ಚಲು ಒದಗುವ ಕೈದೀವಿಗೆ ಎಂದು ಹೇಳಬಹುದು. ಸುಮಾರು ಹತ್ತು ಲಕ್ಷ ವರ್ಷಗಳ ಹಿಂದಿನ ಭೂಸಂರಚನೆಯ ಬಗ್ಗೆ ತಿಳಿಯಲು ನೆರವಾಗುತ್ತದೆ ಎಂಬ ಕಾರಣಕ್ಕಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಪದರ ಪದರವಾಗಿ ಬಿಚ್ಚಿಕೊಳ್ಳುವ ವಿಶಿಷ್ಟ ಶಿಲಾಬಂಡೆಯನ್ನು ಕೇಂದ್ರ ಸರಕಾರದ ಪ್ರಾಕ್ತನ ಸಂಶೋಧನಾ ಇಲಾಖೆ ಕಾಯ್ದಿರಿಸಿದೆ. ಅಷ್ಟಕೋನಾಕೃತಿಯ ಅಪೂರ್ವ ಅಗ್ನಿಶಿಲೆ ಎಂಬ ಕಾರಣಕ್ಕಾಗಿ ನಾರಿಕೇಳ ದ್ವೀಪವನ್ನು ಸಂರಕ್ಷಿಸಲಾಗಿದೆ. ಭೂಮಿಯು ಯಾವ ಯಾವ ಹಂತಗಳನ್ನು ದಾಟಿ ಬಂದಿತು, ಅದರ ಚರಿತ್ರೆ ಏನು, ಹಿಂದಿನ ಯುಗಗಳಲ್ಲಿ ನೆಲಜಲಗಳ ಹಂಚಿಕೆ ಯಾವ ರೀತಿ ಇತ್ತು, ಭೂಮಿಯ ಮೇಲೆ ಜೀವವಿಕಾಸಗೊಂಡದ್ದು ಹೇಗೆ ಎಂಬೆಲ್ಲ ವಿಷಯಗಳನ್ನು ಶಿಲಾಬಂಡೆಗಳ ಅಧ್ಯಯನದ ಮೂಲಕ ಅರಿಯಬಹುದು.

ಭೂಮಿಯ ನೆಲೆಯಿಂದ ಪರಿಭಾವಿಸುವುದಾದರೆ, ಆಕೆಗೆ ಬಂಡೆಗಳಿಗೂ ಮನುಷ್ಯರಿಗೂ ವಿಶೇಷ ವ್ಯತ್ಯಾಸ ಗೋಚರಿಸಲಾರದು. ಒಂದು ಸ್ಥಿರ ವರ್ಗವಾದರೆ ಇನ್ನೊಂದು ಚರ ವರ್ಗ. ಮನುಷ್ಯರು ಚಲಿಸುವ ಬಂಡೆಗಳು ಎಂದು ಭೂಮಿ ಭಾವಿಸಿಕೊಂಡರೆ ಆಶ್ಚರ್ಯವೇನೂ ಇಲ್ಲ. ಯಾಕೆಂದರೆ ಮನುಷ್ಯರಲ್ಲಿರುವಂತೆ ಬಂಡೆಗಳಲ್ಲಿ ನಾನಾ ಬಗೆಗಳಿವೆ. ಹಸುರು, ಖಾರ, ತೆಳು, ದಪ್ಪ, ಮೃದು, ಕಠಿಣ, ಕಪ್ಪು, ಬಿಳುಪು, ಕಂದು, ಕೆಂಪು ಹೀಗೆ ನಾನಾ ರೀತಿಯ ಬಂಡೆಗಳಿವೆ. ಹಾಗಾಗಿ ನನಗೆ ಮನುಷ್ಯರು ಮತ್ತು ಬಂಡೆಗಳ ನಡುವೆ ಕೆಲವೊಮ್ಮೆ ವ್ಯತ್ಯಾಸಗಳೇ ಗೋಚರಿಸುವುದಿಲ್ಲ.

ಅದಕ್ಕೇ ಇರಬೇಕು, ಬಂಡೆಗಳ ಬಗ್ಗೆ ನಾನೊಂದು ಪದ್ಯ ಬರೆದುಬಿಟ್ಟಿದ್ದೇನೆ. ವರ್ಷಾನುಗಟ್ಟಲೆಯಿಂದ ಅವುಗಳ ಬಗೆಗಿರುವ ನನ್ನ ಭಾವನೆ ಮಡುಗಟ್ಟಿ ಕವನರೂಪದಲ್ಲಿ ಹರಿಯಿತು :

ಬಂಡೆಗಳೆಂದರ ನನಗೂ ಹಾಗೆ / ಎಲ್ಲಿಲ್ಲದ ಪ್ರೀತಿ
ವಿಧ ವಿಧ ಬಣ್ಣಕೆ ನಾನಾ ಗಾತ್ರಕೆ / ಸಂಮ್ಮೋಹದ ಪ್ರಣತಿ

ಮನುಷ್ಯರಿಗಿಂತ ಹೆಚ್ಚಾಗಿ ನಾನು ಬಂಡೆಗಳನ್ನು ಪ್ರೀತಿಸತೊಡಗಿದ ಮೇಲೆ ಆ ಪ್ರೀತಿ ಅವ್ಯಕ್ತವಾಗಿ ಬೆಳೆಯುತ್ತ ಹೋಯಿತು.

ನನ್ನ ಭಾವನೆಗಳೆಲ್ಲ ಬತ್ತಿಹೋಗಿ ನಾನು ಬಂಡೆಯೇ ಆಗುತ್ತೇನೇನೋ ಎನ್ನುವ ಶಂಕೆ ಹುಟ್ಟುವ ವರೆಗೆ ಆ ಪ್ರೀತಿ ಬೆಳೆಯಿತು. ಬಂಡೆಗಳಿಗೆ ಪ್ರಣತಿ ಸಲ್ಲಿಸಿ ಆ ಕವನ ಬರೆದೆ :

ಭೇದ್ಯವಾದರು ದುಸ್ಸಾಧ್ಯ ಸಾಹಸ / ಹೆಬ್ಬಂಡೆಗಳ ಸುಗಿತ
ಹೆಂಟೆಯ ಬದಲಿಗೆ ಗಂಧದ ಜೊತೆ / ಗುದ್ದಿದರದೆ ಸುರತ

–ಈಗ ನೀವೇ ಹೇಳಿ, ಹೆಬ್ಬಂಡೆಗಳನ್ನು ಸುಗಿಯುವ ಸಾಹಸ ದುಸ್ಸಾಧ್ಯವಾದರೂ ಸಾಧಿಸುವ ಎದೆಗಾರನಿಗೆ ತೃಪ್ತಿ ದೊರೆಯುವುದಿಲ್ಲವೇ ?

▼

ಡಾ. ವಸಂತಕುಮಾರ ಪೆರ್ಲ, ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಯಾದವಗಿರಿ, ಮೈಸೂರು - ೫೭೦ ೦೨೦ ✆: ೦೮೨೧ - ೨೪೭ ೪೫೮೦ (ಮನೆ)

ಪುಸ್ತಕ ಪರಿಶೀಲನೆ

೧. ಬಹುಮುಖಿ ಎಂ. ಪಿ. ಪ್ರಕಾಶ್ : ಭಾರತಯಾತ್ರಾ ಕೇಂದ್ರ, ೫೬೭/೪, ೭೫ 'ಸಿ' ಕ್ರಾಸ್, ೬ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು, ಪ್ರ.ಮು. ೨೦೦೧, ಪು.೨೭೪, ರೂ.೧೫೦/-

ಮೈತುಂಬ ಜೀವನೋತ್ಸಾಹವನ್ನು ತುಂಬಿಕೊಂಡು ಸಾಹಿತ್ಯ, ಕಲೆ, ನಾಟಕ, ಧರ್ಮ, ರಾಜಕಾರಣ, ಸಮಾಜ, ವೈಚಾರಿಕತೆ ಈ ಎಲ್ಲ ಮುಖಗಳಿಂದಲೂ ಪ್ರಕಾಶ ಉಕ್ಕಿಸುತ್ತ ನಮ್ಮ ನಡುವೆ ಇರುವ ಮಾಜಿ ಸಚಿವ ಎಂ. ಪಿ. ಪ್ರಕಾಶರು, ೬೦ ವಸಂತ ಕಂಡ ಸಂಭ್ರಮಕ್ಕಾಗಿ ಅರ್ಪಿಸಿದ ಅಭಿನಂದನಗ್ರಂಥ ಇದು. ಪುಸ್ತಕದ ಶೀರ್ಷಿಕೆ 'ಬಹುಮುಖಿ' ಎಂದಿದ್ದರೆ ಹೆಚ್ಚು ಅರ್ಥಪೂರ್ಣವಾಗಿರುತ್ತಿತ್ತು.

ಈ ಕೃತಿಯಲ್ಲಿ ವಿಚಾರಲಹರಿ ಹಾಗೂ ಜೀವನಲಹರಿ ಎಂಬ ಎರಡು ಭಾಗಗಳಿವೆ. ವಿಚಾರಲಹರಿಯಲ್ಲಿ ಎಂ. ಪಿ. ಪ್ರಕಾಶರ ಆಸಕ್ತಿಯ ವಿಷಯಗಳಾದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಚಳುವಳಿಗಳ ಕುರಿತಾದ ಲೇಖನಗಳಲ್ಲದೆ ವೈಚಾರಿಕತೆ, ಸಂಸ್ಕೃತಿಯ ಕುರಿತ ಲೇಖನಗಳೂ ಇವೆ. ಬೇರೆ ಬೇರೆ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಪ್ರಕಟವಾದ ಲೇಖನಗಳನ್ನೂ

ಇಲ್ಲಿ ಸಂಕಲಿಸಿರುವುದರಿಂದ ಅವುಗಳ ಚರ್ಚೆ ಇಲ್ಲಿ ಪ್ರಸ್ತುತ. ಇಂಥ ಲೇಖನಗಳು ಏಕತ್ರ ಸಂಕಲನಗೊಂಡಿದ್ದು ಆಸಕ್ತ ಓದುಗರಿಗೆ ಅನುಕೂಲವಾಗಿದೆ.

ಇನ್ನು 'ಜೀವಲಹರಿ' ಪ್ರಕಾಶರ ವೈವಿಧ್ಯಮಯ ವ್ಯಕ್ತಿತ್ವವನ್ನು ಬಿಂಬಿಸುವ ಒಟ್ಟು ೧೩ ಲೇಖನಗಳನ್ನೊಳಗೊಂಡಿದೆ. ಅಂತಾರಾಷ್ಟ್ರೀಯ ಖ್ಯಾತಿಯ ಲೇಖಕ ಎಸ್. ಎಸ್. ನಯಪಾಲರು ಬರೆದ 'ಇಂಡಿಯ ವಿ ಮಿಲಿಯನ್ ಮ್ಯುಟಿನೀಸ್ ನವ್' ಪುಸ್ತಕದಿಂದ ಆಯ್ದ ಭಾಗವನ್ನು ಕನ್ನಡಕ್ಕೆ ಅನುವಾದಿಸಿ 'ನಾ ಕಂಡ ಎಂ. ಪಿ. ಪ್ರಕಾಶ' ಎಂಬ ಶೀರ್ಷಿಕೆಯ ಹೆಸರಿನಲ್ಲಿ ಇಂಡಸ ಜಯರಾಮ ಅವರು ಸಂಗ್ರಹಿಸಿಕೊಟ್ಟಿದ್ದಾರೆ. ಕಾದಂಬರಿಯ ಪಾತ್ರವೊಂದರಂತೆ ಚಿತ್ರಿತರಾದ ಎಂ. ಪಿ. ಪ್ರಕಾಶ ನಯಪಾಲರ ಸೂಕ್ಷ್ಮ ನಿರೀಕ್ಷಣೆಯ ನೆಪದಲ್ಲಿ ಮಿಂದು ಮಿನುಗಿದ್ದಾರೆ. ಗ್ರಾಮೀಣ ಜನರೊಂದಿಗಿನ ಅವರ ಒಡನಾಟ, ರಾಜಕೀಯದ ಬಗೆಗಿನ ಒಳನೋಟ, ಅವರ ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ ಆಸಕ್ತಿ, ಹೋರಾಟದ ಮನೋಭಾವ ಎಲ್ಲವನ್ನೂ ತುಂಬ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಇಷ್ಟಾಗಿಯೂ ಈ ಎಲ್ಲ ಉಳಿದು 'ಅವರು ವೈಯಕ್ತಿಕ ಮಟ್ಟದಲ್ಲಿ ಮಾತಾಡಿದ್ದರೆ ಚೆನ್ನಾಗಿತ್ತು, ಅದರದು ಸುಲಭವಾಗಿರಲಿಲ್ಲ' ಎಂಬ ಮಾತನ್ನು ಸೇರಿಸುತ್ತಾರೆ. ಉಳಿದಂತೆ ಕುಂ. ವೀರಭದ್ರಪ್ಪ, ಗೊ. ರು. ಚೆನ್ನಬಸಪ್ಪ, ಚಂ. ಪಾ., ಗಿರಡ್ಡಿ, ಎಂ. ಎಂ. ಕಲಬುರ್ಗಿ, ಮುದೇನೂರು ಸಂಗಣ್ಣ, ಶಾಂತರಸ, ಗದುಗಿನ ತೋಂಟದ ಶ್ರೀಗಳು, ಡಾ. ಕೆ. ರುದ್ರಪ್ಪ, ಡಾ. ಮೃತ್ಯುಂಜಯ ರುಮಾಲೆ, ನಾ. ಡಿಸೋಜ ಹಾಗೂ ಗುರುಮೂರ್ತಿ ಪೆಂಡಕೂರರಂಥ ಖ್ಯಾತನಾಮರು ಬರೆದ ವಿವಿಧ ಲೇಖನಗಳು ಪ್ರಕಾಶರ ಬಹುಮುಖ ಪ್ರತಿಭೆಯನ್ನು ಪರಿಚಯಿಸುತ್ತವೆ. ಈ ಎಲ್ಲವುಗಳ ಜತೆಗೆ ಪ್ರಕಾಶರ ಜತೆಗಿನ ಒಂದು ಸಂದರ್ಶನ ಪ್ರಕಟವಾಗಿದ್ದರೆ ಅವರ ನೇರ ಪರಿಚಯವಾಗುತ್ತಿತ್ತು. ಇದು ಇನ್ನೂ ಮೈದುಂಬಿಕೊಂಡು ಬಂದಿದ್ದರೆ ವ್ಯಕ್ತಿಯೊಬ್ಬನ ಕುರಿತ ಪುಸ್ತಕ ನಾಡಿನ ಒಂದು ಕಾಲಘಟ್ಟದ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಚರಿತ್ರೆಯೂ ಆಗಬಹುದಿತ್ತು.

– ಚಂದ್ರಶೇಖರ ವಸ್ತ್ರದ, ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

೨. ಎಲೆ ಎಸೆದ ಮರ : ಕೆ. ಪಿ. ಮೃತ್ಯುಂಜಯ ಬಾಬುಲಾಲ್ ಮೆಮೋರಿಯಲ್ ಬುಕ್ ಟ್ರಸ್ಟ್ ಕೆ.ಎಂ.ಪಿ. ಕಂಪೌಂಡ್, ೨ನೇ ಕ್ರಾಸ್, ವಿ.ವಿ.ನಗರ, ಮಂಡ್ಯ-೧, ಪು. ೧೦೪, ರೂ. ೬೫/-

'ಒಂದು ಅನುರಾಗಕ್ಕಾಗಿ ಎಷ್ಟೆಲ್ಲ' (೧೯೯೫) ಹಾಗೂ 'ಮರ್ತ್ಯ ಮೀರದ ಮಾತು' (೨೦೦೦) ಸಂಕಲನಗಳ ಕೆ. ಪಿ. ಮೃತ್ಯುಂಜಯ ಅವರು ಹೊರತಂದಿರುವ ಈ ೩ನೆಯ ಸಂಗ್ರಹದಲ್ಲಿ ೮೧ ಕವಿತೆಗಳಿವೆ. ಆತ್ಮೀಯ ಜೀವವೊಂದನ್ನು ಶಾಶ್ವತವಾಗಿ ಕಳೆದುಕೊಂಡಾಗ ಉಂಟಾದ ನೋವು-ವಿಷಾದದ ಛಾಯೆ ಒಂದಿಲ್ಲ ಒಂದು ಬಗೆಯಲ್ಲಿ ಬಹುಪಾಲು ಕವಿತೆಗಳಲ್ಲಿದೆ. 'ಜೀವ ಹೋಗುವ ಗಳಿಗೆ' ಪದ್ಯದಲ್ಲಿ ಕವಿ (ಅಯ್ಯ ಎಂದು ತಾವು ಕರೆಯುತ್ತಿದ್ದ) ತಮ್ಮ ತಂದೆಯ ಮರಣದ ನಿಕಟಪೂರ್ವ ಕ್ಷಣಗಳ ನೋಟವನ್ನು ಕವಿತೆಯಾಗಿಸಿದ್ದಾರೆ. ಎಷ್ಟೇ ನಿಶ್ಚಿತವಾದುದೆಂದರೂ, ಎಂಥ ಅಂತಿಮ ಸತ್ಯವೆಂದರೂ ಸಾವೆಂಬುದು ವಾಸ್ತವವಾದಾಗ ಉಂಟಾಗುವ ತಲ್ಲಣ ಇವುಗಳಲ್ಲಿದೆ. ಆತ್ಮೀಯರ ಸಾವು ನೇರವಾಗಿ ಕಾಡುತ್ತದೆ. ಸಾವಿನ ಅನುಭವ ವೈಯಕ್ತಿಕ ನೆಲೆಯದಾದರೂ ಸಾವೆಂಬ ವಿದ್ಯಮಾನ ದರ್ಶನವಾಗಿ, ಕಾವ್ಯವಾಗಿ, ಅಧ್ಯಾತ್ಮವಾಗಿ ಮನುಷ್ಯನ ಗ್ರಹಿಕೆಗಳಲ್ಲಿ ವ್ಯಾಪಕಗೊಳ್ಳುತ್ತದೆ. 'ದೀಪದ ಕುಡಿ ಎಲ್ಲಿತ್ತು ಹೊತ್ತಿಕೊಳ್ಳುವ ಮುನ್ನ / ಆರಿದ ಮೇಲೆ ಹೋಯಿತೆಲ್ಲಿ ?' (ಪುನರವತಾರ) ಎಂಬ ಸಾಲುಗಳು ಸಾವು ಹೊತ್ತಿಸಿದ ನೋವಿನ, ಅಗಲಿಕೆಯ, ತಬ್ಬಲಿತನದ ಕಿಚ್ಚಿನಲ್ಲಿ ಬೆಂದು ಸಾವೆನ್ನುವುದು ಒಂದು ಚಿಂತನೆಯಾದಾಗ ಗ್ರಹಿಕೆಗಳು ತಲುಪುವ ಸ್ತರಗಳಿಗೆ ಉದಾಹರಣೆ. 'ಚಂದ್ರಕಾಂತದ ತುಣುಕು ಇಲ್ಲಷ್ಟು ದಿನವಿದ್ದು ಬದುಕ ಹೋಯಿತು

ಮತ್ತೆ ಚಂದಿರನ ಕಡೆಗೆ' ಎಂದು ಸ್ವಯಂ ಸಾಂತ್ವನಗೊಳಿಸಿಕೊಂಡೂ ವಿಶಾಲ ಬಯಲು, ನೀಲಿಯಾಕಾರ, ನೂರು ಮರ, ನೂರಾರು ಹಕ್ಕಿ ಯಾವುದೂ ಮನ ಸಂತೈಸದಂತೆ ತೋರುವ ಮನಃಸ್ಥಿತಿಯ ಸಾಧಕ ಬಾಧಕಗಳ ಪ್ರಶ್ನೆ ಇಲ್ಲಿ ಗೌಣ. ಸೂರ್ಯ, ಚಂದ್ರ, ಬೆಳದಿಂಗಳು, ಹಕ್ಕಿ, ಮರ, ಎಲ್ಲೆಲ್ಲಿಯೂ 'ಅಯ್ಯ'ನನ್ನು, ಅವನ ಸಾವನ್ನು, ಅದರ ಸಂಕೇತಗಳನ್ನು, ನೆನಪುಗಳನ್ನು ಜೀವಂತವಾಗಿರಿಸಿಕೊಳ್ಳುವ ಪ್ರಜ್ಞಾಪೂರ್ವಕ ತುಡಿತ ಕಾಣಸಿಗುತ್ತದೆ. ಆ ತುಡಿತದ ಪ್ರಾಮಾಣಿಕತೆಯನ್ನು ಸಂದೇಹಿಸಬೇಕಿಲ್ಲ. ಪ್ರತಿ ಸಂದರ್ಭದಲ್ಲೂ ಅದು ವ್ಯಾಕುಲತೆಯಾಗಿಯೇ ಪರಿಣಮಿಸುವದಿಲ್ಲ. ಬೆಳದಿಂಗಳ ಒಂದು ರಾತ್ರಿಯ ಚಂದಿರ ತಂದೆಯ ಕಿರೀಟದಂತೆ ಕಂಡು ತನ್ನ ಪ್ರಕ್ಷುಬ್ಧ ಎದೆ ಶಾಂತವಾಗಿದೆಯೆಂದು ನಂಬುವ ಕವಿಮನಸು ತನ್ನ ಅಯ್ಯನ ಜೊತೆ ಭಾವನಾತ್ಮಕ ಸಾಹಚರ್ಯದ ಅನುಭೂತಿಯನ್ನು ಪಡೆಯುತ್ತದೆ ಕವಿತೆಯೊಂದರಲ್ಲಿ.

ಕವಿಯ ಮಟ್ಟಿಗೆ ಇದು ಬರಿ ದೇಹಗಳ ಸಂಬಂಧವಲ್ಲ. ಆತ್ಮಗಳ ಸಂಬಂಧ. ತಂದೆಯ ಅಂತ್ಯದ ಅತಿ ಸೂಕ್ಷ್ಮ ವಿವರಗಳೂ ಇಲ್ಲಿಯ ಹಲವು ಕವಿತೆಗಳಲ್ಲಿದೆ. ಆತನ ಜೀವಿತಾವಧಿಯಲ್ಲಿ ತನ್ನದೇ ವರ್ತನೆಗಳ ಯಾವುದೇ ಅಪಚಾರ ಅಳುಕುಗಳನ್ನು ಕವಿ ನಿವೇದಿಸಿಕೊಳ್ಳುವ ಕವಿತೆಗಳಿವೆ. ತಂದೆಯ ಕುರಿತ ಗೌರವ, ಅಕ್ಕರತೆಗಳನ್ನು ಪರಿಪರಿಯಾಗಿ ಬಿಂಬಿಸುವ ಯತ್ನ ಇನ್ನು ಕೆಲ ಕವಿತೆಗಳಲ್ಲಿದೆ. ('ನೀನು ಮರಳಿ ಬಂದು', 'ನನ್ನದು ಸಣ್ಣ ಮನಸು', 'ದಿಕ್ಕುಗಳು ನಡುಗಿ', 'ಮರುಹುಟ್ಟುಗಳು ಸಹಸ್ರಾರು', 'ಸಖ್ಯ', 'ಚೆರ್ರಿ', 'ಗೊತ್ತಾಯಿತು', 'ನೀನೊಮ್ಮೆ ಅಲೆದ ಕೊನೆಯ ನೆಟ್ಟೆ', 'ಅನೇಕಾನೇಕ' ಇತ್ಯಾದಿ.)

ಮುಖ್ಯವಾಗಿ ತಂದೆಯ ಮೃತ್ಯುವಿನ ಅಳಲೇ ನೆಪವಾಗಿ ಜೀವನ್ಮರಣಗಳ ಸಂಕೀರ್ಣ ಆಯಾಮಗಳನ್ನು ವಿವಿಧ ಛಂದೋರೂಪಗಳ ಕವಿತೆಗಳ ಮಾಧ್ಯಮದಲ್ಲಿ ಧ್ಯಾನಿಸುವ ಈ ಯತ್ನ ವಿಶಿಷ್ಟವಾಗಿದೆ. ಶೋಕಕಾವ್ಯವೆಂಬುದಾಗಿ ಒಂದು ಕಾವ್ಯಪ್ರಭೇದವಾಗಿ ನೋಡಸಿಗುತ್ತವೆ. ಏನಿದ್ದರೂ ಇಲ್ಲಿಯ ಯಾವ ಕವಿತೆಯನ್ನೂ ಕವಿತೆ ಬಯಸುವ ಗುಣಲಕ್ಷಣಗಳಿಂದ ಮೃತ್ಯುಂಜಯ ಅವರು ಎರವಾಗಿಸಿಲ್ಲ. ಒಮ್ಮೊಮ್ಮೆ ರೆಟರಿಕಲ್ ಆಗಿ, ಇನ್ನು ಕೆಲ ಸಲ ಸಹಜವಾಗಿ ನಿರ್ಮಿತವಾದ ಈ ರಚನೆಗಳಲ್ಲಿ ಕವಿತೆಗಳಾಗಿ ಯಶಸ್ವಿಯಾದ ಪದ್ಯಗಳು ಹಲವಾರು ಇವೆ.

ಈ ವಿಷಾದ, ಶೋಕಗಳನ್ನು ಜೀವಂತವಾಗಿರಿಸಿಕೊಂಡು ಹೋಗಬೇಕನ್ನುವದು ಅಬ್ಸೆಶನ್ ಆದಾಗ ಅದು ಪರಿಣಾಮದಲ್ಲಿ ನೇತ್ಯಾತ್ಮಕವೂ ಆಗಿರುವ ಸೂಚನೆಗಳು ಕೆಲ ಕವಿತೆಗಳಲ್ಲಿವೆ. 'ಇನ್ನೇನು ನನ್ನ ಆಯುಷ್ಯ ನೀಗಿ ಹೋಗುತ್ತೆ / ಹೌದು, ಮರಣಕ್ಕೆ ಮುಂಚೆಯೇ / ಮರಣವೂ ಯಾಕೆ ನನಗೆ ? / ಬದುಕಿಲ್ಲದವನಿಗೆ / ಬದುಕೇ ಇಲ್ಲದವನಿಗೆ' ('ಅಚಲವಾದ ವಾಂಛಲ್ಯವಿಲ್ಲದ ಕಣ್ಣುಗಳು') ಎಂಬ ಸಾಲುಗಳಲ್ಲಿ ವ್ಯಕ್ತವಾಗುವ ಭಾವ ಇದಕ್ಕೆ ಸೂಚನೆ. ಈ ಸಂಕಲನದ ಕವಿತೆಗಳ ಗ್ರಹಿಕೆಗೊಂದು ಸೂಕ್ತ ಪ್ರವೇಶಿಕೆಯನ್ನು ಎಚ್. ಎಸ್. ಶಿವಪ್ರಕಾಶ್ ತಮ್ಮ ಮುನ್ನುಡಿಯಲ್ಲಿ ಒದಗಿಸಿದ್ದಾರೆ.

೩. ಇಹದ ಸ್ವರ : ಲಲಿತಾ ಸಿದ್ದಬಸವಯ್ಯ, ಚಿನ್ಮಯಿ ಪ್ರಕಾಶನ, ನಂ. ೫೮೧೬, ಗುರುಸನ್ನಿಧಿ, ೨ನೆಯ ತಿರುವು, ಅಶೋಕನಗರ, ತುಮಕೂರು-೩, ಪ್ರ.ಮು. ೨೦೦೨, ಪು. ೫೩, ರೂ.೬೦/-

೨೦೦೧ ರಲ್ಲಿ 'ಮೊದಲ ಸಿರಿ' ಎಂಬ ತಮ್ಮ ಪ್ರಥಮ ಕವನ ಸಂಕಲನ ಪ್ರಕಟಿಸಿದ ಲಲಿತಾ ಸಿದ್ದಬಸವಯ್ಯ ಮರುವರ್ಷವೇ ಹಾಗವನ ಸಂಗ್ರಹ 'ಬಿಡಿ ಹರಳು' ಹಾಗೂ ಮತ್ತೊಂದು ಕವನ ಸಂಗ್ರಹ, 'ಇಹದ ಸ್ವರ' ಪ್ರಕಟಿಸಿದ್ದಾರೆ. ಕಾವ್ಯರಚನೆಯನ್ನು ತಡವಾಗಿ ಆರಂಭಿಸಿದ ಲಲಿತಾ ಅವರು ತಮ್ಮೊಳಗೆ ಸುಪ್ತವಾಗಿದ್ದ ಕಾವ್ಯಸೃಜನ ಶಕ್ತಿಯನ್ನು ತಾವು ಕಂಡುಕೊಂಡ ಬಗೆಯನ್ನು

'ಅಕ್ಕರೆ' ಎಂಬ ಪುಟ್ಟ ಕವಿತೆಯಲ್ಲಿ ಯಾವುದೇ ಹೆಚ್ಚುಗಾರಿಕೆಯ ಸೋಂಕಿಲ್ಲದ ಒಂದು ವಿಶಿಷ್ಟ ರೂಪಕದಲ್ಲಿ ಹೇಳಿಕೊಂಡಿದ್ದಾರೆ.

ಮಾಗಿದ ದಾಂಪತ್ಯ ಈ ಕವಯಿತ್ರಿಯ ಬದುಕಿನ ದೃಷ್ಟಿಕೋನವನ್ನು ಮಾಗಿರುವಂಥದು. ಕನ್ನಡದ ಇತ್ತೀಚಿನ ದಶಕಗಳ ಕವಯಿತ್ರಿಯರ ಧ್ವನಿಗಳ ಜೊತೆ ಗುರುತಿಸಿದರೂ ತುಸು ಭಿನ್ನವಾದ ಧ್ವನಿ ಇವರ ಕವಿತೆಗಳದು. ಅಹಲ್ಯೆ, ದ್ರೌಪದಿ, ಸೀತೆ, ಊರ್ಮಿಳೆಯರಂಥ ಸ್ತ್ರೀಪಾತ್ರ ಪುನರ್ವ್ಯಾಖ್ಯಾನಗಳೂ ಇಲ್ಲಿಲ್ಲ. 'ಯಾವ ರಾಮ ಬಂದರೂ ಶಾಪೋದ್ಧಾರವಾಗುವುದಕ್ಕಿಲ್ಲೇ ಇವೆ' ಎಂದು ತುಳಿಗ ಗುದ್ದಲಿ ಹಿಡಿದು ಹೊರಟು ಹೋಗುವಂತೆ ಸೂಚಿಸುವ ಒಂದು ಪದ್ಯದಲ್ಲಿ, ವಾಸ್ತವದ ಗ್ರಹಿಕೆಗಳ ನಿರುದ್ವಿಗ್ನ ನಿರೂಪಣೆ ಕಂಡುಬರುತ್ತದೆ. ಇಡೀ ಕವಿತೆಯ ಬಂಧ ಭಾಷೆ ಸಹಜವಾಗಿ ಕವಿತೆ ರೂಪಿಸುವ ಲಲಿತಾ ಅವರ ಪ್ರತಿಭೆಯ ನಿದರ್ಶನವಾಗಿದೆ.

ಈ ಸಂಕಲನದಲ್ಲಿ ಮತ್ತೆ ಮತ್ತೆ ಓದಿಸಿಕೊಳ್ಳುವ ಗುಣವಿರುವ ಪದ್ಯ 'ಅವನನ್ನು ಕರೆದು ತಾ' ಎಂಬುದು. ಎರಡನೆಯ ಮಗ ತಾನು ಪ್ರೀತಿಸಿದವಳನ್ನೇ ಮದುವೆಯಾಗುವುದಕ್ಕೆ ವ್ಯಕ್ತಪಟ್ಟ ವಿರೋಧದಿಂದ ರೋಸಿ ಮನೆ ತೊರೆದು ಹೋಗಿದ್ದಾನೆ. ಹಾಗೆ ಹೋಗಿ ಹತ್ತು ತಿಂಗಳು ಕಳೆದಿವೆ. ಅವನನ್ನು ಕರೆದು ತಾ ಎಂದು ತಾಯಿ ತನ್ನ ಹಿರಿಯ ಮಗನಿಗೆ ಬಿನ್ನವಿಸಿಕೊಳ್ಳುತ್ತಿದ್ದಾಳೆ. ಇಡೀ ಸುದೀರ್ಘ ಕವಿತೆ ಒಂದು ಸುಂದರ ಕಥನಶಿಲ್ಪವಾಗಿದ್ದು ಅದರೊಳಗಿನ ಪ್ರತಿಮೆ, ರೂಪಕ, ಉಪಮೆಗಳ ಲೋಕ ಸಮೃದ್ಧವಾಗಿದೆ. ಈ ಕವಿತೆಯಲ್ಲಿ ಮೂಡಿದ 'ತಾಯಿ'ಯ ಚಿತ್ರ ಮನ ಕಲಕುವಂಥದು. ಅಸಹಾಯಕ ಹೊಂದಾಣಿಕೆ, ಸ್ವಾಭಿಮಾನ, ಮಾತೃವಾತ್ಸಲ್ಯ, ವೈಯಕ್ತಿಕ-ಕೌಟುಂಬಿಕ ರಿವಾಜುಗಳ ಜೊತೆ ಸಂಕೀರ್ಣ ಚಿತ್ರಗಳಿಂದ ಕೂಡಿದ ಈ ಕವಿತೆ ಕನ್ನಡದ ಉತ್ತಮ ಕವಿತೆಗಳ ಸಾಲಿನಲ್ಲಿ ನಿಲ್ಲುವಂಥದ್ದಾಗಿದೆ.

ಸ್ತ್ರೀಪರವಾದ ಇವರ ಸಂವೇದನೆಗಳು ಸಾಮಾನ್ಯವಾಗಿ ಬಂಡುಪ್ರಜ್ಞೆಯ ಕವಯಿತ್ರಿಯರಲ್ಲಿ ಕಾಣುವ ಕಾವ್ಯಘೋಷಣೆಯಾಗದೆ ವ್ಯಕ್ತಿ, ಕುಟುಂಬ, ಸಮಾಜದ ಅಂತಸ್ಸಂಬಂಧಗಳ ನೆಲೆಯಲ್ಲಿ ಪಾರಂಪರಿಕ ಸಾಮಾಜಿಕ ಸಂದರ್ಭಗಳಲ್ಲಿ, ದೀರ್ಘ ಕಾಲ ಬದುಕಿ ಅನುಭವಿಸಿದ ಅನುಭವಗಳ ಪಕ್ವತೆಯಲ್ಲಿ ರೂಪುಗೊಂಡಿವೆ. 'ಕಣ್ಣು ಕಟ್ಟಿದರೂ ಬಿಡುವನ್ನ ಸ್ವಂತ ಬಿಡಿಗ ಹೊಂದಿಕೊಂಡೇ ಇರಬಯಸುವ ಇವರಿಗೆ 'ಹೊಸ ಗಾಳಿಯುಬ್ಬರ ಮೂಗುದಾರಿಯ ತುಂಬ ಮುನ್ನುಗ್ಗಿ ಉಸಿರುಗಟ್ಟಿಸೀತೆಂಬ ಆತಂಕ. ಅದು ತನ್ನ ಸುಳಿಗೆ ಸೆಳೆಯದೆ ತನ್ನನ್ನು ಹಾದು ಹೋಗಿಬಿಡಲೆಂಬ ಕೋರಿಕೆ ('ಹಾದು ಹೋಗಿ ಬಿಡು ದಮ್ಮಯ್ಯ') ಆದರೆ 'ಮಣ್ಣು ತಿನ್ನ ಮಡುವಿನಲ್ಲಿ ಕಾಯ್ದಿಟ್ಟ ನಿತ್ಯವಗ್ನಿ ಕಾರ್ಯಕ್ಕೆ ನೀರು ಹೊರಲಿ' ಎಂದು ಮಗ ಹರಸುವನ್ನು ಕೇಳುತ್ತಾಳೆ ತಾಯಿ. 'ನಿನ್ನ ಕೊಡಲಿಗೆ ಕೊರಳ ಒಡ್ಡುವುದಿಲ್ಲ / ಮಗನಾದರೆ ತಾನೇ ಏನು / ತೀರ್ಪು ಬರೆಯುವ ಹಕ್ಕು ನೀವಪ್ಪಮಕ್ಕಳ ಗುತ್ತಿಗೆಯಲ್ಲ' ಎಂಬ ಪ್ರತಿಭಟನೆಯ ಧ್ವನಿಗಳೂ ಇಲ್ಲಿವೆ.

ಎರಡು ಪೀಳಿಗೆಗಳ ಅವಸ್ಥಾಂತರದ ನಡುವಿನ ಕೊಂಡಿಯಾಗಿ ತಮಗೆ ಅನ್ನಿಸಿದ್ದನ್ನು ಕವಿತೆಯಾಗಿಸುವ ಇವರ ಪ್ರಯತ್ನ ('ಸಂಧ್ಯಾಯ ಮತ್ತೆ ಮತ್ತೆ ಅಕ್ಕಾಡೆಮ್ಮ') ಸಫಲವಾಗಿಲ್ಲ. ಎಲ್ಲವನ್ನೂ ಕವಿತೆಯಾಗಿಸುತ್ತೇನೆ ಎಂದು ಹೊರಟರೆ ಇವರು ಜಾಳುಜಾಳಾದ ಕವಿತೆ ನೇಯುತ್ತಾರೆ ಎಂಬುದಕ್ಕೆ 'ಹತ್ತಿರದ ಬಡಾವಣೆ' ಎಂಬ ಕವಿತೆಯೂ ನಿದರ್ಶನ. ಆದರೆ ಭಾಷಾಪ್ರಯೋಗ ಹಾಗೂ ಛಂದೋರೂಪಗಳಲ್ಲಿ ವೈವಿಧ್ಯವಿರುವ ಲಲಿತಾ ಅವರ ರಚನೆಗಳು ('ಕನ್ನಡದ ಪದವಿರಲಿ ತಾಯೀ', 'ರಾಮಧಾನ್ಯ ಚರಿತೆ', 'ಯಮ್ಮಾ' ಇತ್ಯಾದಿ) ಇವರ ಪ್ರಯೋಗಶೀಲತೆ ತೋರುತ್ತವೆ. ಪ್ಯಾತಲ್ ಅಪಾಯವನ್ನು ತಪ್ಪಿಸಿಯೂ ಆದರೆ ವ್ಯಥವಾದ ಧ್ವನಿಯಲ್ಲಿ ಪ್ರಶ್ನಿಸುವ ಒಂದು ಪ್ರಸಂಗವಿರುವ 'ಬಿಡಿ ಬಿಡಿಯ ನಾವು' ಈ ಸಂಕಲನದ ಇನ್ನೊಂದು ಒಳ್ಳೆಯ ಪದ್ಯ. ವ್ಯಂಗ್ಯವನ್ನು ಇವರು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಲ್ಲರೆಂಬ ಪುರಾವೆ 'ಶ್ರೀಶಾಸ್ತ್ರಪುರಾಣ

ಅಥವಾ ಬಿಳಿಲಿಲ್ಲಿ ಎಂಬ ಪ್ರಸಂಗವು' ಎನ್ನುವ ಕವಿತೆಯಲ್ಲಿವೆ. ಲಲಿತಾ ಸಿದ್ಧಬಸವಯ್ಯ ಗಮನಾರ್ಹ ಕವಯಿತ್ರಿ.

– ಡಾ. ಅಶೋಕ ಶೆಟ್ಟರ್, ಶಾಂತಿಸಾಗರ, ಪ್ಲಾಟ್ ನಂ. ೩೭, ತಪೋವನ, ಧಾರವಾಡ - ೩

೪. ಸಾಹಿತ್ಯದ ಸಪ್ತಧಾತುಗಳು : ಯಶವಂತ ಚಿತ್ತಾಲ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ - ೫೭೭ ೫೩೧, ಪ್ರ.ಮು. ೨೦೦೧, ಪು. ೧೦೮, ರೂ. ೭೦/-

ಯಶವಂತ ಚಿತ್ತಾಲರು ಮುಖ್ಯವಾಗಿ ಕತೆ, ಕಾದಂಬರಿಗಳನ್ನು ಬರೆದವರು. ಲೇಖನ ಬರೆದದ್ದು ಕಮ್ಮಿ. ಅಪರೂಪಕ್ಕೆ ಬರೆದ ಲೇಖನಗಳ, ಭಾಷಣಗಳ ಲಿಖಿತ ರೂಪ ಸೇರಿ ಆದ ಈ ಪುಸ್ತಕ ಅವರ ಎರಡನೆಯ ಪ್ರಬಂಧ ಸಂಕಲನ. ಇವರಲ್ಲಿ ಅವರ ಸಾಹಿತ್ಯಿಕ ದೃಷ್ಟಿಕೋನ, ಅವರು ಲೇಖಕರಾಗಿ ಬೆಳೆದ ಬಗೆ, ಒಂದು ಸಂದರ್ಶನ ಅಲ್ಲದೇ ಮಾಸ್ತಿ, ಗೌರೀಶ ಕಾಯ್ಕಿಣಿಯವರ ಬಗ್ಗೆ, ಸಮಕಾಲೀನ ಲೇಖಕರ ಕೃತಿಗಳಾದ ಮುಸ್ಸಂಜೆಯ ಕಥಾಪ್ರಸಂಗ, ಅವಸ್ಥೆ, ಸೃಷ್ಟಿ ಬಗ್ಗೆ ಲೇಖನಗಳಿವೆ.

ಚಿತ್ತಾಲರ ಒಟ್ಟು ಸೃಜನಶೀಲತೆ ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಈ ಲೇಖನಗಳು ಪ್ರಮುಖವಾಗಿವೆ. ಉದಾಹರಣೆಗೆ ಲೇಖಕ "ಕತೆ-ಕಾದಂಬರಿಗಳನ್ನು ಬರೆಯುವ ಮೂಲಕವೇ ಹೊಸತನ್ನು ಗ್ರಹಿಸುತ್ತಾನೆ" ಎಂಬ ವಿಚಾರ ಚಿತ್ತಾಲರ ಕಥನಕ್ರಮದ ಒಂದು ಮುಖ್ಯ ಕಾಳಜಿಯಾದ ಅನ್ವೇಷಣಾವಿಧಾನದ ಪ್ರಾಮುಖ್ಯತೆ ವಿವರಿಸುತ್ತದೆ. "ಅನುಭವ" ಮತ್ತು "ಪರಿಕಲ್ಪನೆ"ಗಳ ಮಧ್ಯೆ ಅವರು ಮಾಡುವ ವ್ಯತ್ಯಾಸ ಅಮೂರ್ತ ವಿಚಾರಗಳ ಮಂಡನೆಗಿಂತ ಕತೆ ಕಾದಂಬರಿಗಳ ಬರವಣಿಗೆಯನ್ನು ಯಾಕೆ ಆರಿಸಿಕೊಂಡರು ಎಂದು ವಿವರಿಸುತ್ತದೆ.

ಕಾಫ್ಕಾನ ಪ್ರಭಾವ ಎಂದು ಚಿತ್ತಾಲರಲ್ಲಿ ಅನೇಕರು ಗುರುತಿಸಿದ ಅಂಶ ತಾಕತಾಳೀಯ ಇರಬಹುದು ಎಂದೂ ಈ ಪುಸ್ತಕ ಓದಿದಾಗ ಅನ್ನಿಸುತ್ತದೆ. ಯಾಕೆಂದರೆ ಚಿತ್ತಾಲರ ಅನುಭವಗಳೇ ಅವರನ್ನು ಕಾಫ್ಕಾ-ಥರ ಪ್ರಪಂಚ ಸೃಷ್ಟಿಗೆ ಪ್ರೇರಿಸಿವೆ. "ಅಪ್ಪನನ್ನು ತಾನು ಅನುಭವಿಸಿದ ಕ್ರಮ" ಇಂಥಾ ಸಾಮ್ಯಕ್ಕೆ ಕಾರಣವೆಂಬ ಸೂಚನೆ ಇಲ್ಲಿನ "ಹೃದಯವುಳ್ಳ ಹಾದಿಯಲ್ಲಿ" ಎಂಬ ಲೇಖನದಲ್ಲಿದೆ.

"ಸಾಹಿತ್ಯದ ಮುಖಾಂತರ ನಾವು ಮೊದಲಿನಿಂದಲೂ ತೊಡಗಿಸಿಕೊಂಡದ್ದು ಮನುಷ್ಯರಾಗಿ ಅರಳುವ ಪ್ರಕ್ರಿಯೆಯಲ್ಲಿ"; "ಸೃಜನಶೀಲನಾಗುವವರಲ್ಲಿ ಸೋತಲ್ಲೆಲ್ಲ ಮನುಷ್ಯ ಮನುಷ್ಯನನ್ನು ಮುಟ್ಟುವ ಬದಲು, ಉಪಯೋಗಿಸಿಕೊಳ್ಳಲು ತೊಡಗುತ್ತಾನೆ. ಜಾತಿಭ್ರಷ್ಟನಾಗಿ ಕ್ರೂರನಾಗುತ್ತಾನೆ. ಸಾಹಿತ್ಯದ ಸಾಮಾಜಿಕ ಮಹತ್ವ ಇರುವುದು ಇಲ್ಲಿ ಎಂದು ನಾನು ನಂಬುತ್ತೇನೆ" ಎಂದು ಒಂದೆಡೆ (ಪುಟ ೨೫) ಚಿತ್ತಾಲರು ಬರೆಯುತ್ತಾರೆ. ಬರೆಯುವುದು ಬರಿಯ ಒಂದು ಚಟುವಟಿಕೆಯಲ್ಲ, ಜೀವದ್ರವ್ಯ ಎಂದು ತಿಳಿದಿರುವ ಲೇಖಕ ಮಾತ್ರ ಇಂಥಾ ನಿಲುವು ತೆಗೆದುಕೊಳ್ಳಬಲ್ಲ.

"ಗೌರೀಶರ ಪ್ರಶ್ನೋಪನಿಷತ್ತು" ಗೌರೀಶ ಕಾಯ್ಕಿಣಿ ಕುರಿತ ಲೇಖನ. ಗೌರೀಶರ ಸಮಗ್ರ ಸಾಹಿತ್ಯ ಪ್ರಕಟಣೆಗೆ ಕಾರಣರಾದವರು ಅಂಕೋಲಾದ ವಿಷ್ಣು ನಾಯ್ಕರು. ಅವರ ಸಾಹಸದಿಂದಾಗಿ ಗೌರೀಶರು ಧೀಮಂತ ಚಿಂತಕ ಎಂಬುದಕ್ಕೆ ಸಾಕ್ಷಿಯಾದ ಅವರ ಬರಹಗಳು ಓದಿಗೆ ಸಿಕ್ಕುವಂತಾಗಿವೆ. ಚಿತ್ತಾಲರ ಲೇಖನ ಗೌರೀಶರ ಕುರಿತ ಚರ್ಚೆಗೆ: ಶಂಬಾ, ದಾಮ್ಲೆ, ಗೌರೀಶ ಕಾಯ್ಕಿಣಿ ನಿರೂಪಿಸಿದ ವೈಚಾರಿಕ ಎತ್ತರಗಳ ತೌಲನಿಕ ಅಧ್ಯಯನಕ್ಕೆ ನಾಂದಿಯಾಗಬೇಕಾಗಿದೆ.

– **ಡಾ. ರಾಮಚಂದ್ರ ದೇವ,** ಕಲ್ಲಡ್ಕ - ೫೭೪ ೨೫೭ (ದ. ಕ.)

ನೀಡುತ್ತ ಬದುಕನ್ನು ಹಗುರಾಗಿಸುತ್ತವೆ ಎಂದಿದ್ದಾರೆ. ಸಾಮಾಜಿಕ ಪ್ರಜ್ಞೆ, ವಸ್ತುವಾದ ಜೀವನಾನುಭವ ಈ ಕವಿತೆಗಳಲ್ಲಿದೆ. ಭಾರತದ ಸಮಕಾಲೀನ ವಾಸ್ತವ ಪ್ರಪಂಚ ಗಣೇಶ ಪ್ರಸಾದರ ಕವಿತೆಗಳ ವಸ್ತು. ಬದ್ಧಿ ಹೇಳುವ ಚಪಲಕ್ಕಿಂತ ಸ್ವಂತದ ಅನುಭವ ಇಲ್ಲಿ ಕಾವ್ಯಾಭಿವ್ಯಕ್ತಿ ಪಡೆದಿದೆ. 'ಮುಂಗಾರಿನ ಹಾಡು', 'ಕಡಲ ದಂಡೆಯ ಕ್ಷಣಗಳು', 'ಆಗುವದೇ ಇಲ್ಲಿ' ಮೊದಲಾದವು ವಿಶಿಷ್ಟವಾಗಿವೆ. ಸಾಮಾಜಿಕ ಪ್ರಜ್ಞೆಯ, ಜೀವನಾನುಭವದ ಈ ಕವಿತೆಗಳು ಸ್ವಾಗತಾರ್ಹವಾಗಿವೆ.

೧೦. ತಮ : ಬಸವರಾಜ ಟಿ. ಡೋಣೂರ, ಪ್ರ. ನೀಲಪರ್ವತ ಪ್ರಕಾಶನ, ಧಾರವಾಡ, ಪ್ರ.ಮು. ೨೦೦೨, ಪು. ೧೨೪, ರೂ. ೭೫/-

ಕನ್ನಡ ಸಣ್ಣಕಥೆಗೆ ದೊಡ್ಡ ಪರಂಪರೆಯಿದೆ. ಮಾಸ್ತಿ, ಅನಂತಮೂರ್ತಿ, ಚಿತ್ತಾಲ ಮೊದಲಾದ ಕಥೆಗಾರರ ಕಥಾ ಪರಂಪರೆಯಲ್ಲಿ ಅನೇಕ ಹೊಸ ಪ್ರತಿಭೆಗಳು ಕ್ರಿಯಾಶೀಲವಾಗಿವೆ. ಪ್ರತಿವರ್ಷ ಹೊಸ ಕಥೆಗಾರರು ಸಾಹಿತ್ಯರಂಗ ಪ್ರವೇಶ ಮಾಡುತ್ತಿದ್ದಾರೆ. ಕನ್ನಡ ಸಣ್ಣಕಥೆಯ ಲೋಕಕ್ಕೆ ಹೊಸದಾಗಿ ಅಡಿಯಿಟ್ಟ ಬಸವರಾಜ ಡೋಣೂರ ತಮ್ಮ ಮೊದಲ ಕಥಾಸಂಕಲನ 'ತಮ' ಇದೀಗ ಪ್ರಕಟಿಸಿದ್ದಾರೆ. ಹತ್ತು ವರ್ಷಗಳ ಕಾಲಾವಧಿಯಲ್ಲಿ ಬಂದ ಹತ್ತು ಕಥೆಗಳ 'ತಮ' ಗ್ರಾಮೀಣ ಜೀವನ ಕಥೆಯನ್ನು ಚಿತ್ರಿಸುತ್ತದೆ. ಸಾಂಪ್ರದಾಯಿಕ ಕಥೆಯ ನಿರೂಪಣಾ ತಂತ್ರವನ್ನೇ ಬಳಸಿದ ಡೋಣೂರ ಅವರ ಕಥೆಗಳಲ್ಲಿ ವೈಯಕ್ತಿಕ ಸಂಘರ್ಷವಿದೆ. 'ನಿಷ್ಠೆ' ಕಥೆಯ 'ನಾಯಿ' ವೀರಯ್ಯ ಮನೆ ಬಿಟ್ಟು ಹೋದರೂ ಹಳೆಯ ಮನೆಯಲ್ಲೇ ಉಪವಾಸ ಬಿದ್ದು ಸಾಯುತ್ತದೆ. ಮನುಷ್ಯನ ಅಂತಃಕರಣವನ್ನು ಕಲಕುವ ನಾಯಿಯ ನಿಷ್ಠೆ ಒಂದು ಸವಾಲಾಗುತ್ತವೆ. ಶಾಂತನಾಳ ಗ್ರಾಮದ ಸುತ್ತ ಹರಡಿಕೊಂಡಿರುವ ಘಟನೆಗಳು, ಸ್ವಾದೇಶಗಳು ಗಮನಾರ್ಹವಾಗುತ್ತವೆ. ಶಿಥಿಲತೆ, ಒಂದು ಸಾವಿನ ಸುತ್ತ, ತಮ, ಎರಡು ರೊಟ್ಟಿಗಳು, 'ಹಾದಿ ಹೇಳಿದ ಕಥೆ' ಗಮನಾರ್ಹವಾಗಿವೆ. 'ತಮ' ಸಂಕಲನದ ಎಲ್ಲ ಕಥೆಗಳೂ ಕಥೆಗಾರರ ಆರಂಭದ ಪ್ರಯತ್ನವಾಗಿದ್ದು ಕುರ್ತಕೋಟಿಯವರು ಹೇಳಿದಂತೆ ಭಾಷೆಯಲ್ಲಿ ಹೊಸತನ ಸಾಧಿಸುವದು ಬಹಳವಿದೆ ಎಂದು ಅನ್ನಿಸುತ್ತವೆ.

– ಡಾ. ಜಿ. ಎಂ. ಹೆಗಡೆ, ೬ ನೇ ಕ್ರಾಸ್, ಕಲ್ಯಾಣನಗರ, ಧಾರವಾಡ - ೫೮೦ ೦೦೭

೧೧. ಇಂಗ್ಲೆಂಡ್ ಕವನಗಳು : ಡಾ. ನಾ. ದಾಮೋದರ ಶೆಟ್ಟಿ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು - ೫೭೪ ೨೦೨ (ದ. ಕ.), ಪ್ರ.ಮು. ೨೦೦೦, ಪು. ೮೪, ರೂ. ೫೦/-

ಡಾ. ನಾ. ದಾಮೋದರ ಶೆಟ್ಟಿಯವರ 'ಇಂಗ್ಲೆಂಡ್ ಕವನಗಳು' ಹೊಸ ಕಾವ್ಯ ಪ್ರಯೋಗವೊಂದನ್ನು ಸಹೃದಯರೆದುರು ತೆರೆದಿಡುತ್ತವೆ. ತಾವು ಇಂಗ್ಲೆಂಡಿಗೆ ಕೈಕೊಂಡ ಪ್ರವಾಸದಲ್ಲಿ ಕಂಡುಂಡ ಅನುಭವಗಳನ್ನು ಅವರು ಕಾವ್ಯದ ಮೂಲಕ ಅಭಿವ್ಯಕ್ತಿಸುವ ಹೊಸಬಗೆಯ ಪ್ರಯತ್ನ ಮಾಡಿದ್ದಾರೆ. ಹೀಗಾಗಿ ಇವನ್ನು 'ಪ್ರವಾಸಕಥನ ಕವನ'ಗಳೆಂದು ಕರೆಯಬಹುದು. ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃತಿ ಮಾಡಿ ಹೆಸರು ಗಳಿಸಿರುವ ದಾಮೋದರ ಶೆಟ್ಟರು ಈ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿಯಾಗಿರುವುದನ್ನು ಇಲ್ಲಿ ಗುರುತಿಸಬಹುದು. ಅವರದು ಮೂಲತಃ ಕವಿಹೃದಯವಾಗಿರುವದನ್ನು ಇಲ್ಲಿಯ ಕವಿತೆಗಳು ಎತ್ತಿ ತೋರಿಸುತ್ತವೆ. ಪ್ರವಾಸ ಕಥನವಾದುದರಿಂದ ಒಂದು ಬಗೆಯ ಲಘುಕಾವ್ಯ ಶೈಲಿಯನ್ನು ರೂಢಿಸಿಕೊಂಡಿರುವದು ಕೂಡ ಎದ್ದು ಕಾಣುತ್ತದೆ. ಈ ಶೈಲಿ ಈ ಪ್ರಯೋಗಕ್ಕೆ ಅನಿವಾರ್ಯವಾಗಿದೆ.

ಇಂಗ್ಲಿಷ್ ಜನರ ಜೀವನಶೈಲಿ. ಅವರ ಶಿಸ್ತು. ನಿಷ್ಠುರತೆ ಭಾರತೀಯ ಬದುಕಿಗೂ— ಅವರ ಬದುಕಿಗೂ ಇರುವ ಅಂತರ, ಅವರ ಕರ್ತವ್ಯಶೀಲತೆ ಇವೆಲ್ಲವನ್ನು ಹೃದ್ಯವಾಗಿ ಕವನಿಸುತ್ತ ಹೋಗುತ್ತಾರೆ. ಜೊತೆಗೆ ಭಾರತೀಯ ಮನಸ್ಸು ಅಲ್ಲಿನ ನೈತಿಕತೆಯ ಬಗ್ಗೆ ತಾಳುವ ಮುಜಗರ ಹಾಗೂ ವಿಸ್ಮಯಗಳೂ ಇಲ್ಲಿ ಸುಂದರವಾಗಿ ಧ್ವನಿತವಾಗಿವೆ. ಲಘು ಕಾವ್ಯಶೈಲಿಗೆ ಅವಶ್ಯವಾದ ಸರಳ ಲಯವನ್ನು ರೂಢಿಸಿಕೊಳ್ಳುವ ಪ್ರಯತ್ನ ಇಲ್ಲಿ ಎದ್ದು ಕಾಣುತ್ತದೆ. ಅಲ್ಲಿನ ಸ್ವಚ್ಛತೆ. ಅಹಾರಪದ್ಧತಿ, ದಾಂಪತ್ಯಜೀವನ. ಬಿರುಕು. ಪ್ರೀತಿ ಮೋಹ ಇವೆಲ್ಲವುಗಳನ್ನು ಕವನಿಸುವಲ್ಲಿ ಶೆಟ್ಟರು ಯಶಸ್ವಿಯಾಗಿದ್ದಾರೆ. ಅವರೆ ಹೇಳಬೇಕೆನ್ನುವದನ್ನು ಸಂಪೂರ್ಣವಾಗಿ ಹೇಳಲೇಬೇಕೆನ್ನುವ ಯತ್ನದಿಂದಾಗಿ ಕಾವ್ಯದ ಬಂಧ ಮೀರಿ ಅಲ್ಲಲ್ಲಿ ಗದ್ಯದ ಮಟ್ಟದಲ್ಲಿಯೇ ಕವಿತೆಗಳು ನಿಂತುಬಿಡುವ ಅಪಾಯವೂ ಕಂಡುಬರುತ್ತವೆ. ಆದರೂ ಪ್ರವಾಸದಲ್ಲುಂಟಾಗುವ ಆನಂದ, ಬೆರಗು, ಮೆಚ್ಚುಗೆ. ಸಂಕೋಚಗಳನ್ನು ಅವರು ಕಾವ್ಯದಲ್ಲಿ ಮೂರ್ತಗೊಳಿಸಲು ಹೊರಟಿರುವ ಕ್ರಿಯೆ ಮಾತ್ರ ಮೆಚ್ಚುಗೆ ಗಳಿಸುತ್ತದೆ. ಸುಂದರ ನವಿರಾದ ವರ್ಣನೆಗಳು ಅನುಭವಕ್ಕೆ ರೂಪ ಕೊಡುವಲ್ಲಿ ಯಶಸ್ವಿಯಾಗಿವೆ.

ಚುಂಬನ ಕವಿತೆಯಲ್ಲಿ ಚಿತ್ರಿತವಾಗಿರುವ ನೈತಿಕ ಮುಜುಗರ, ತಲೆಮಾರಿನ ದೃಷ್ಟಿಕೋನಗಳ ಅಂತರಗಳ ಚಿತ್ರಣ ಹೃದ್ಯವಾಗಿ ಮೂಡಿ ಬಂದಿದೆ. ಪ್ರವಾಸ ಕಥನವನ್ನು ಕಾವ್ಯವಾಗಿಸುವ ಹೊಸ ಮಾದರಿಯನ್ನು ದಾಮೋದರ ಶೆಟ್ಟರು ರಸಿಕರೆದುರು ತೆರೆದಿಟ್ಟಿದ್ದಾರೆ. ಸರಳ ನಿರೂಪಣೆಯೇ ಅವರ ಕಾವ್ಯದ ಉದ್ದೇಶವಾಗಿರುವದರಿಂದ ಸಂಕೀರ್ಣ ಕಾವ್ಯದ ಬಂಧ ಬಿಗಿತಗಳು ಇಲ್ಲಿ ಕಾಣಸಿಗುವದಿಲ್ಲ. ಬಂಧ-೧, ಬಂಧ-೨ ಕ್ಲಾಡಿಯಾ ಚುಂ-ಬನ ಹುಲ್ಲಿನ ಮನೆಗಳು 'ಪೂರ್ವ-ಪಶ್ಚಿಮ' ಮುಂತಾದವುಗಳು ಸ್ವತಂತ್ರ ಕವಿತೆಗಳಾಗಿಯೂ ಯಶಸ್ವಿಯಾಗಿವೆ.

೧೨. ಉದಕದೊಳಗಣ ಬೆಂಕಿ : ಮಹಾಂತಪ್ಪ ನಂದೂರ, ಪಟ್ಟಣ ಪ್ರಕಾಶನ, ರೇಲ್ವೆ ಕ್ವಾರ್ಟರ್ಸ್, ೧೩೦೩/ಪಿ, ಕೇಶ್ವಾಪೂರ, ಹುಬ್ಬಳ್ಳಿ-೨೩, ಪ್ರ.ಮು. ೨೦೦೨, ಪು. ೯೬, ರೂ. ೩೫/-

'ಉದಕದೊಳಗಣ ಬೆಂಕಿ' ಮಹಾಂತಪ್ಪ ನಂದೂರ ಅವರ ಮೊದಲ ಸಂಕಲನ. ಸಾಹಿತ್ಯಿಕ ಚಳುವಳಿಗಳ ಅಬ್ಬರವಿಳಿದ ಥಣ್ಣಗಿನ ಈ ಕಾಲದಲ್ಲಿ ಕಾವ್ಯ ರಚನೆಗೆ ತೊಡಗಿರುವ ಮಹಾಂತಪ್ಪ ತಮ್ಮ ಮೊದಲ ಸಂಕಲನದಲ್ಲಿಯೇ ಗಮನಾರ್ಹವೆನ್ನಿಸುವ ರಚನೆಗಳ ಮೂಲಕ ಸಹೃದಯದಲ್ಲಿ ಭರವಸೆ ಮೂಡಿಸುತ್ತಾರೆ. ಕಾವ್ಯದ ಮೋಹಕತೆಯ ಜೊತೆಗೇ ಅದರ ಇತಿಮಿತಿಗಳ ಅರಿವೂ ಅವರಿಗಿದೆ. ಬ್ರಹ್ಮಾಂಡ ಗಾತ್ರದ ಶಬ್ದ ಹೊತ್ತು / ಹಾಳು ಗುಡ್ಡವ ಹತ್ತಲು / ಕವಿತೆಯೇನು ಕತ್ತೆಯ ! / ಇಲ್ಲವೆ / ಹಗಲುಗನಸುಗಳ ಹೊತ್ತ / ಬಿಸಿಲುಗುದುರೆಯೆ !! (ಕವಿತೆ)

ಈ ಪ್ರಶ್ನೆ ಸಾರ್ವತ್ರಿಕವಾದುದು. ಆದರೆ ಮಹಾಂತಪ್ಪ ಅವರಿಗೆ ಕವಿತೆ 'ಒಡಲಾಳದ ತುಡಿತದಿ ಮಿಡಿವ ಸ್ವರ', 'ಜೀವನ ರಾಗದಿ ಹಾಡುವ' ಹಾಡಾಗುತ್ತದೆ. ಪ್ರೀತಿ ಅಂತಃಕರಣ. ಪ್ರಾಮಾಣಿಕತೆಗಳೇ ಈ ಕವಿಯ ಜೀವಾಳ. ಹೀಗಾಗಿ ಮಲಿನವಾದ ಸಾಮಾಜಿಕ ರಾಜಕೀಯ ಬದುಕಿಗೆ ಮುಖಾಮುಖಿಯಾದಾಗ ಇಂಥ ಹೃದಯ ವಿಷಾದಕ್ಕೊಳಗಾಗುತ್ತದೆ. ಇಂಥ ವಿವಾದ ವಿಡಂಬನೆಗಳೇ ಈ ಸಂಕಲನದಲ್ಲಿ ಹೃದ್ಯವಾಗಿ ಮೂಡಿಬಂದಿವೆ. ಈ ವಿಷಾದ ಅವರನ್ನು ನೇತ್ಯಾತ್ಮಕತೆಗೆ ತಳ್ಳುವದಿಲ್ಲ. ಉದಕದೊಳಗಣ ಬೆಂಕಿಯ ಹಾಗೆ ಥಣ್ಣಗೆ ಉರಿವ ವಿಷಾದ ಅವರ ಕವಿತೆಗಳಲ್ಲಿ ಹರಿದಿದೆ. 'ಪ್ರಹಾರ', 'ಮರುಭೂಯಾನ' 'ಮಸಣದ ದಾರಿಗಳು' ಮುಂತಾದವು ಈ ದಿಸೆಯಲ್ಲಿನ ಯಶಸ್ವಿ ಕವಿತೆಗಳು. ಅಪಾಥಭೂತಿತನ ಹಾಗೂ ಕೃತ್ರಿಮತೆಯನ್ನು ಅವರು ನವಿರಾಗಿ ವಿಡಂಬಿಸುವ ರೀತಿ ಕೂಡ ಸೊಗಸಾಗಿದೆ.

'ನಮ್ಮೂರು' ಇಂಥ ವಿಡಂಬನೆಯ ಚಿತ್ರಣದ ಮೂಲಕ ನಮ್ಮೆಲ್ಲರ ಊರುಗಳ ಇಂದಿನ ಕೃತ್ರಿಮ ಬದುಕಿನ ಸಾರ್ಥಕ ಪ್ರತಿಮೆಯಾಗಿದೆ. ಸುಂದರವಾದ ಅರ್ಥಪೂರ್ಣ ರೂಪಕ ಪ್ರತಿಮೆಗಳನ್ನು

ಮಹಾಂತಪ್ಪ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಹದ್ದಿನ ಹಾವಳಿ ತಪ್ಪಿಸಲಿಕ್ಕೆ ಗರುಡ ಕಾವಲು / ಕಾಲು ತಿಂದು ಕಾಲ ಮಾಡುವ ಕೋಳಿ ಕಕ್ಕಾಬಿಕ್ಕಿ / ಹದ್ದು - ಗರುಡರ ಸೋದರರ ಪಾಲು / ಈ ರೂಪಕ ಭಿಚಿತ್ರವೊಂದನ್ನು ಬಿಚ್ಚಿಡುವ ಹಾಗೆ ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. ಇಂಥ ಹಲ ಉದಾಹರಣೆಗಳು ಈ ಸಂಕಲನದ ಕವಿತೆಗಳಲ್ಲಿವೆ. ಆರಂಭದ ಕೆಲವು ರಚನೆಗಳಲ್ಲಿ ಕಾವ್ಯದ ಬಂಧ, ಸಾಲದೆನ್ನಿಸಿದರೂ ನಂತರದ ಕವನಗಳಲ್ಲಿ ಅವರು ಈ ದಿಸೆಯಲ್ಲಿ ಕಾಳಜಿ ವಹಿಸಿ ಹೃದ್ಯವಾದ ಲಯವಿರುವ ಕಾವ್ಯಬಂಧವನ್ನು ಸಾಧಿಸಲು ಪ್ರಯತ್ನಿಸಿರುವದು ಕಂಡುಬರುತ್ತದೆ. ೩, ೪, ೫ ನೆಯ ವಿಭಾಗದ ಬಹಳಷ್ಟು ಕವಿತೆಗಳು ಇದನ್ನೆ ಸ್ಪಷ್ಟಪಡಿಸುತ್ತವೆ. 'ಬಂಧ', 'ಬಸವ ಬೆಳಕು', 'ಮಸಣದ ಹೂವುಗಳು', 'ಬೆಂಕಿಗೆ ಕವಿತೆ' ಮುಂತಾದ ಕವಿತೆಗಳನ್ನಿಲ್ಲಿ ಹೆಸರಿಸಬಹುದು. ೫ ನೆಯ ಭಾಗದ ಪ್ರೀತಿ-ಪ್ರೇಮದ ಕುರಿತ ಕವನಗಳು ಭಾವಗೀತೆಯ ಗುಣ ಪಡೆದಿವೆ.

ಸಣ್ಣ ಕವಿತೆಗಳಲ್ಲಿ ಮಹಾಂತಪ್ಪ ಸಾಧಿಸುವ ಯಶಸ್ಸು ಅವರ ಕೆಲವು ದೊಡ್ಡ ಕವಿತೆಗಳಲ್ಲಿ ಸಾಧ್ಯವಾಗದಿರುವದನ್ನು ಗುರುತಿಸಬಹುದಾಗಿದೆ. ಇಲ್ಲೆಲ್ಲ ನಿರೂಪಣೆ ಶಬ್ದಗಳ ಬಳಕೆ ಅನವಶ್ಯ ಹೆಚ್ಚಾದುದನ್ನು ಕಾಣಬಹುದು. ಬೆಳೆಯುವ ಕವಿಯೊಬ್ಬನ ಸಹಜ ದೌರ್ಬಲ್ಯಗಳಿವು. ಅನುಭವಗಳ ಏಕತಾನತೆಯಿಂದ ಹೊರಬಂದು ಜೀವನ ದರ್ಶನಗಳಿಗೆ ಕಣ್ಣು ಹಾಯಿಸಿ ತಮ್ಮ ಕಾವ್ಯದ ಹರಹನ್ನೂ ವಿಸ್ತಾರಗೊಳಿಸಿಕೊಳ್ಳುವುದು ಮಹಾಂತಪ್ಪನವರಂತೆ ಹೊಸದಾಗಿ ಬರೆಯುವ ಎಲ್ಲ ಕವಿಗಳೂ ರೂಢಿಸಿಕೊಳ್ಳಬೇಕಾದ ಅಗತ್ಯವಿದೆ.

– ಜಗದೀಶ ಮಂಗಳೂರಮಠ, ೧೦೩, ಮಮತಾ, ಮಾನಸಗಿರಿ, ಕೆಇಬಿ ಲೇಔಟ್, ರಾಮಕೃಷ್ಣನಗರ ಹತ್ತಿರ, ಗೋಕುಲ ರಸ್ತೆ, ಹುಬ್ಬಳ್ಳಿ - ೫೮೦ ೦೩೦

೧೩. ಬೆಡಗಿನೆದುರಿನ ಬೆರಗು : ಮೋಹನ ನಾಗಮ್ಮನವರ, ಮಹಾಮನೆ ಪ್ರಕಾಶನ, ಸರ್ವೋದಯನಗರ, ಧಾರವಾಡ-೩, ಪ್ರ.ಮು. ೨೦೦೨, ಪು. ೧೨೬, ರೂ. ೧೦೦/-

ಇದು ಆಯ್ದ ಬರಹಗಳ ಸಂಕಲನ. ಇವರಲ್ಲಿ ವಿವಿಧ ಸಂದರ್ಭಗಳಲ್ಲಿ ಪತ್ರಿಕೆಗಳಿಗಾಗಿ ಮಾಡಿದ ಸಂದರ್ಶನಗಳು, ಲೇಖನಗಳು, ಪುಸ್ತಕ ವಿಮರ್ಶೆಗಳು, ಆಕಾಶವಾಣಿ ಹಾಗೂ ಸಭೆಗಳಲ್ಲಿ ಮಾಡಿದ ಭಾಷಣರೂಪದ ಲೇಖನಗಳಿವೆ. ಸಾಹಿತ್ಯ, ಸಾಹಿತಿ, ರಾಜಕೀಯ, ಆರ್ಥಿಕ ವಿಷಯಗಳ ಕುರಿತು ಲೇಖಕರ ಚಿಂತನೆಯು ಇಲ್ಲಿದೆ. ಹಲವು ಲೇಖನಗಳು ಸಮಕಾಲೀನ ವಿಷಯಗಳನ್ನು ವಿಶ್ಲೇಷಿಸಿದರೆ ಕೆಲವು ಗತಕಾಲದ ಸಾಹಿತ್ಯಿಕ ಸಾಮಾಜಿಕ ಸ್ಥಿತಿಗತಿಗಳನ್ನು ದಾಖಲಿಸುತ್ತವೆ. ಇಂಥ ಬೆಳವಣಿಗೆಗಳಿಗೆ ಪ್ರತ್ಯಕ್ಷದರ್ಶಿಗಳಾದ ಹಿರಿಯ ಲೇಖಕರ ವಿಚಾರಗಳು ಅವರಿಂದಲೇ ಪ್ರಕಟವಾಗಿ ಇಲ್ಲಿ ದಾಖಲಾಗಿವೆ.

ಲೇಖನಗಳನ್ನು ೪ ಭಾಗವಾಗಿ ವಿಂಗಡಿಸಲಾಗಿದೆ. ೧ ನೆಯ ಭಾಗ 'ಮುಖಾಮುಖಿ'ಯಲ್ಲಿ ಕಣವಿಯವರಿಂದ ಹಿಡಿದು ಕಾಪಸೆಯವರ ವರೆಗೆ ಐವರು ಸಾಹಿತಿಗಳು ಒಬ್ಬರು ಇತಿಹಾಸಜ್ಞರು ಹೀಗೆ ೬ ಜನರ ಪತ್ರಿಕಾಸಂದರ್ಶನಗಳಿವೆ. ಈ ಎಲ್ಲ ಲೇಖನಗಳು ವಿಶಿಷ್ಟವೂ ಮಹತ್ವದವೂ ಆಗಿದ್ದರೂ ಇಲ್ಲಿ ಸಂದರ್ಶನಕ್ಕೆ ಗುರಿಯಾದ ವ್ಯಕ್ತಿಯೇ ಅನಾವರಣಗೊಳ್ಳುವದರಿಂದ ಸಂದರ್ಶಕ ನಿಮಿತ್ತ ಮಾತ್ರವಾಗುತ್ತಾನೆ. ಅದರಿಂದ ಇವನ್ನು ಸ್ವಂತಸಾಹಿತ್ಯವೆಂದು ಭಾವಿಸುವದು ಸರಿಯಾದೀತೆ ?

'ಕೆಲಮಾತು' ಗ್ರಂಥದ ೨ ನೆಯ ಭಾಗ. ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣ, ಪ್ರಬಂಧ ಇಲ್ಲಿ ಸಂಕಲನಗೊಂಡಿವೆ. ೩ ನೆಯ ಭಾಗ 'ಚಿತ್ರ-ಚಿತ್ತಾರ'ದಲ್ಲಿ ಪಾಪು, ಲಂಕೇಶ್, ಗಿರಡ್ಡಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಗುಂಜೆಟ್ಟಿ ಇವರ ಆತ್ಮೀಯ ವ್ಯಕ್ತಿಚಿತ್ರಣಗಳಿವೆ. ಇವರೆಲ್ಲ ಬದುಕಿನ ವಿವಿಧ ಹಂತಗಳಲ್ಲಿ ಲೇಖಕರಿಗೆ ಹತ್ತಿರವಾಗಿ ತಮ್ಮ ಕಾರ್ಯ-ಸಾಧನೆ-ಗುಣವಿಶೇಷತೆಗಳಿಂದ ಗೌರವಾನ್ವಿತರೂ ಆತ್ಮೀಯರೂ ಆದವರು.

ಕೊನೆಯ ಭಾಗ 'ಪುಸ್ತಕ ಪ್ರಸ್ತಾಪ'ದಲ್ಲಿ ಕಾಲಕಾಲಕ್ಕೆ ವಿವಿಧ ಪತ್ರಿಕೆಗಳಿಗಾಗಿ ಬರೆದ ಪುಸ್ತಕ-ವಿಮರ್ಶೆಯ ಲೇಖನಗಳಿವೆ. ಕವಿತೆ, ಕತೆ, ನಾಟಕ, ಆತ್ಮಕಥೆ, ಕಾದಂಬರಿ, ವ್ಯಕ್ತಿಚಿತ್ರ ಇತ್ಯಾದಿ ವಿವಿಧ ಸಾಹಿತ್ಯ ಪ್ರಕಾರಗಳ ಹಿರಿ-ಕಿರಿಯ ಲೇಖಕರ ೨೩ ಮೌಲಿಕ ಕೃತಿಗಳ ವಿಶ್ಲೇಷಣೆಯ ಲೇಖನಗಳು ಇಲ್ಲಿವೆ.

ನಾಲ್ಕು ಭಿನ್ನ ಬಗೆಯ ಸಾಹಿತ್ಯ ಪ್ರಕಾರಗಳನ್ನು ಸಮ್ಮಿಲಿತ ರೂಪದಲ್ಲಿ ಪ್ರಕಟಿಸುವದರ ಔಚಿತ್ಯ ಸಂದೇಹಾಸ್ಪದವೇ. ಆದರೂ ಕೃತಿ ಮೋಹನರ ಸಮರ್ಥ ಗದ್ಯಲೇಖನಕ್ಕೆ ಲೇಖಕರ ಭಾಷೆ ತೀರ ಆತ್ಮೀಯವಾಗಿ ಆಕರ್ಷಕವಾಗಿ ಲವಲವಿಕೆಯಿಂದ ಕೂಡಿ ಓದಿಸಿಕೊಳ್ಳುತ್ತದೆ. 'ಕೆಲ ಮಾತು' ವಿಭಾಗದ ಭಾಷಣ ರೂಪದ ಲೇಖನಗಳಲ್ಲಿ ಉದ್ದವಾದ ಸಂಕೀರ್ಣವಾದ ಕಾವ್ಯರಚನೆಯಿಂದ ವಿಷಯಗ್ರಹಿಕೆಗೆ ತೊಂದರೆ ಆಗುತ್ತದೆ. ಆದರೆ ಪ್ರಳಯ - ಫಿತೂರಿ ಹಾಗೂ ವ್ಯಕ್ತಿಚಿತ್ರಣಗಳಲ್ಲಿ ಆಕರ್ಷಕ ಪದಪ್ರಯೋಗ, ಸಣ್ಣ ಸರಳ ವಾಕ್ಯ ರಚನೆಯು ಭಾಷಾಶೈಲಿ ಒಮ್ಮೆಲೆ ಭಿನ್ನವಾಗಿ ಮನಸೆಳೆಯುತ್ತದೆ.

ಸಾಮಾಜಿಕ ನ್ಯಾಯದ ದಲಿತ ಹಿಂದುಳಿದ ಶೋಷಿತ ವರ್ಗದ ಲೇಖಕರ ಸದಾಜಾಗೃತ ಪ್ರಜ್ಞೆ ಎಲ್ಲ ಲೇಖನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅನ್ಯಾಯದೆದುರು ಪ್ರತಿಭಟನೆಯ ಧ್ವನಿ ಕೃತಿಯ ಉದ್ದಕ್ಕೂ ಕೇಳಬರುತ್ತದೆ.

– ಅಪ್ಪಾಸಾಹೇಬ ಸನದಿ, ಮಲಪ್ರಭಾ ಗ್ರಾಮೀಣ ಬ್ಯಾಂಕ್ ಹಿಂದೆ, ಕೆಲಗೇರಿ ರಸ್ತೆ, ಧಾರವಾಡ-೧

೧೪. ಕಾಡುಕೋಳಿ-ಜೋಡಿನವಿಲು : ಕಿಕ್ಕೇರಿ ನಾರಾಯಣ, ಅಭಿರುಚಿ ಪ್ರಕಾಶನ, ಬಸ್ ನಿಲ್ದಾಣ ಕಟ್ಟಡ, ಕೆಆರ್ ವೃತ್ತ, ಮೈಸೂರು-೧, ಪ್ರ.ಮು. ೨೦೦೨, ಪು. ೮೦, ರೂ. ೫೦/-

ಕಾಡುಕೋಳಿ-ಜೋಡಿನವಿಲು ಒಂದು ವಿಶೇಷ ರೀತಿಯ ನಾಟಕ. ಜೇನುಕುರುಬರ ಬದುಕಿನ ಸುತ್ತ ಜೇನುಕುರುಬರ ಪಾತ್ರಗಳು, ಆಧುನಿಕ ಪಾತ್ರಗಳು ಮೇಳವಿಸಿ ನಡೆವ ನಾಟಕ. ಈ ನಾಟಕವನ್ನು ಜೇನುಕುರುಬ ಬುಡಕಟ್ಟಿನ ಮಕ್ಕಳೇ ರಂಗಭೂಮಿಯಲ್ಲಿ ಮತ್ತು ಟಿ.ವಿ.ಯಲ್ಲಿ ಅಭಿನಯಿಸಿದ್ದರು. ಈ ನಾಟಕದ ವಸ್ತು ಆದಿವಾಸಿಗಳ ಬದುಕು, ನಂಬಿಕೆ, ಆಚರಣೆಗಳ ಸುತ್ತ ಹೆಣೆದುಕೊಂಡಿದೆ ಎಂದು ತಿಳಿಸಲಾಗಿದೆ. ಆದರೆ ಇದು ಇದೆಲ್ಲವನ್ನೂ ದಾಟಿ ಸಾಂಸ್ಕೃತಿಕ ಸಂಘರ್ಷವನ್ನು, ಹಳತು-ಹೊಸದರ ಘರ್ಷಣೆಯನ್ನು ಸೂಚಿಸುವ ನಾಟಕವಾಗಿ ಬೆಳೆದಿದೆ. ಮನುಷ್ಯ ಸಮಾಜದಲ್ಲಿ ನಿರಂತರ ನಡೆಯುತ್ತಿರುವ ಈ ಸಂಘರ್ಷಕ್ಕೆ ಇದು ಕನ್ನಡಿಯಾಗುವ ಸಾಧ್ಯತೆ ಹೊಂದಿದೆ.

ಕಾಡಿನಲ್ಲಿ ಮರಗಳನ್ನು ಕಡಿದು. ಪ್ರಾಣಿಗಳನ್ನು ಕೊಂದು, ವ್ಯಾಪಾರ ವಹಿವಾಟು ಮಾಡಿ, ಮಹಾರಾಜರಿಗೆ ಕಪ್ಪ-ಕಾಣಿಕೆ ಸಲ್ಲಿಸಿ, ಉಳಿದ ಹಣದಿಂದ ಶ್ರೀಮಂತನಾಗಬಯಸುವ ಹೆಗಡೆ, ಕಾಡಿನಲ್ಲಿಯೇ ವಾಸ ಮಾಡುವ ಆದಿವಾಸಿ ಜೇನುಕುರುಬರನ್ನು ತನ್ನ ಕಾರ್ಯಕ್ಕೆ 'ಸಾಧನಗಳನ್ನಾಗಿ' ಮಾಡಿಕೊಳ್ಳಲು ಹವಣಿಸಿ ಬರುತ್ತಾನೆ. ಜೇನುಕುರುಬರ ಜೀವನ ರೀತಿ ನೀತಿ, ತತ್ವ ಸಿದ್ಧಾಂತ, ನಂಬಿಕೆಗಳಿಗೂ ಈ ಆಧುನಿಕ ರೀತಿ ನೀತಿಗಳಿಗೂ ಘರ್ಷಣೆ ಆಗುತ್ತದೆ. ಆಧುನಿಕತೆ ಕಾಡನ್ನು ಹಾಳುಮಾಡಲು ಬಿಟ್ಟರೆ ತಮ್ಮ ಬದುಕೇ ನಾಶವಾಗಿ ಬಿಡುತ್ತದೆಂದು ತಿಳಿದ ಜೇನುಕುರುಬರು ಕಾಡಿನ ಮರಗಳನ್ನು ಉಳಿಸಿಕೊಳ್ಳಲು ಅವುಗಳನ್ನು ತಬ್ಬಿ ನಿಂತು ವಿರೋಧ ವ್ಯಕ್ತಪಡಿಸಲು ಸಜ್ಜಾಗುವಲ್ಲಿಗೆ ನಾಟಕ ಅಂತ್ಯವಾಗುತ್ತದೆ.

ಈ ನಾಟಕದಲ್ಲಿ ಬರುವ ಪಾತ್ರಗಳು, ಅವುಗಳ ಮೂಲದ ಭಾಷೆಯಲ್ಲಿಯೇ ಮಾತನಾಡುತ್ತವೆ. ಹಾಗಾಗಿ ಆಧುನಿಕತೆ ಪ್ರತಿನಿಧಿಸುವ ಮಹಾರಾಜರ ಪ್ರತಿನಿಧಿ ಹೆಗಡೆ

ಮತ್ತು ಅವನ ಸಂಗಾತಿಗಳು ಕನ್ನಡವನ್ನೂ, ಜೇನುಕುರುಬರು ಅವರ ಭಾಷೆಯನ್ನೂ (ಅದೂ ಒಂಥರ ಕನ್ನಡವೇ!) ಬಳಸುತ್ತಾರೆ. ಇದು ಸಹಜವೇ ಆಗಿ ಸಾಗುತ್ತದೆ.

ನಾಟಕವನ್ನು ಕೇವಲ ವಾಸ್ತವತೆಗೆ ಅಂದರೆ ಭೌಗೋಳಿಕ ವಾಸ್ತವತೆಗೆ ತಳಕು ಹಾಕದೆ ಮೌಲ್ಯಗಳ ಸಂಘರ್ಷಕ್ಕೆ ಬೆಳೆಸಿದರೆ ನಾಟಕ ಹೆಚ್ಚಿನ ಅರ್ಥ ಪಡೆದುಕೊಳ್ಳುತ್ತದೆ. ಸರಿಯಾಗಿ ಅರ್ಥೈಸಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ಅಭಿನಯಿಸಿದರೆ ಇದೊಂದು ಎಲ್ಲ ಕಡೆಯೂ ನಿಲ್ಲುವ ನಾಟಕವಾಗಬಹುದು. ಈ ನಾಟಕವನ್ನು ಕಿಕ್ಕೇರಿ ನಾರಾಯಣ ಯಾವ ಉದ್ದೇಶದಿಂದಲಾದರೂ ಬರೆದಿರಲಿ ಇದರ ವಸ್ತು, ಅದರ ಉದ್ದೇಶ ಮೀರಿ ಬೆಳೆಯಬಲ್ಲ ಶಕ್ತಿ ಹೊಂದಿದೆ. ಕನ್ನಡದಲ್ಲೊಂದು ವಿಶೇಷ ರೀತಿಯ ಅಂದರೆ ಸರಳವಾದ, ಸುಂದರ, ಗಂಭೀರ ಚಿಂತನೆಗೆ ಈಡುಮಾಡುವ ನಾಟಕ ಇದು.

– ಸಂಪಿಗೆ ತೋಂಟದಾರ್ಯ, ೩೯೪, ಸಂಪಿಗೆ, ೫ನೇ ಕ್ರಾಸ್, ೭ನೇ ಮೇನ್, ಆರ್.ಪಿ.ಸಿ. ಲೇಔಟ್, ವಿಜಯನಗರ ೨ನೇ ಸ್ಟೇಜ್, ಬೆಂಗಳೂರು - ೫೬೦ ೦೪೦

೧೫. ಎಲ್ಲಿ ಕವಿತೆಗಳು : ಜಿ. ಎಸ್. ಅವಧಾನಿ, ಸಂತೋಷ ಪ್ರಕಾಶನ, 'ಚಾರಣ', ಪ್ರಭಾತನಗರ (ಕೆಇಬಿ ಹಿಂದೆ) ಹೊನ್ನಾವರ (ಉ.ಕ.) ಪ್ರ.ಮು. ೨೦೦೩, ಪು. ೧೦+೧೮೮, ರೂ. ೧೦೦/-

ಜಿ. ಎಸ್. ಅವಧಾನಿಯವರ ೧೯೭೯ ರಲ್ಲಿ ಪ್ರಕಟಿಸಿದ 'ಬೇಕು ಬೆಕ್ಕು'ಯಿಂದ ೧೯೮೯ ರಲ್ಲಿ ಪ್ರಕಟಿಸಿದ 'ಗಂಗೋತ್ರಿಯ ಹಕ್ಕಿಗಳು' ಮತ್ತು ಅನಂತರ ಬರೆದಿದ್ದ ಅಪ್ರಕಟಿತ ಕವನಗಳನ್ನು ಒಳಗೊಂಡ ಎಲ್ಲ ಕವಿತೆ ಇಲ್ಲಿವೆ. ಮಡದಿ ಅನಸೂಯ ಅವಧಾನಿ ಪ್ರಕಟಿಸಿರುವ ಅಳಿಯ ರಾಜು ಹೆಗಡೆ ಸಂಪಾದಿಸಿರುವ ಈ ಸಂಕಲನದ ಆರಂಭದಲ್ಲಿ ಅವಧಾನಿಯವರ ಸಂಕ್ಷಿಪ್ತ ಪರಿಚಯವಿದೆ. ಕೊನೆಯ ಅನುಬಂಧದಲ್ಲಿ ಅವಧಾನಿಯವರ ಒಂದು ಅಪ್ರಕಟಿತ ಲೇಖನ, ಅವರ ವಿದ್ಯಾರ್ಥಿಯೊಬ್ಬನ ಪದ್ಯ ಮತ್ತು ಗೋಪಾಲಕೃಷ್ಣ ಅಡಿಗರ ಮುನ್ನುಡಿ, ಗೌರೀಶ ಕಾಯ್ಕಿಣಿಯವರ ಹಿನ್ನುಡಿ ಇವೆ. ಪ್ರತಿ ಸಂಕಲನದ ಆರಂಭದಲ್ಲಿ ಆಕರ್ಷಕ ಚಿತ್ರಗಳಿವೆ. ಬ್ಲರ್ಬ್‌ನಲ್ಲಿ ಹಾ. ಮಾ. ನಾಯಕರು ಬರೆದ ಪ್ರೀತಿಯ ಮಾತುಗಳಿವೆ.

ಅವಧಾನಿಯವರು ಉತ್ತರ ಕನ್ನಡ ಜಿಲ್ಲೆಯಿಂದ ಬಂದ ಆಧುನಿಕ ಕವಿಗಳಲ್ಲೊಬ್ಬರು. ಬಂಡಾಯ ಮನೋಧರ್ಮದ ನವ್ಯ ಶೈಲಿಯ ಅವರ ಕವಿತೆಗಳು ಕಾಲು ಶತಮಾನದ ಕನ್ನಡ ಕವಿತೆಗಳ ಸ್ವರೂಪವನ್ನು ಸೂಚಿಸುತ್ತವೆ. ಬಂಡಾಯದಂಥ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಕಾವ್ಯದ ಕಲಾತ್ಮಕತೆ ಕುರಿತ ಅವಧಾನಿಯವರ ನಿಲುವು ಸಡಿಲವಾಗಿರಲಿಲ್ಲ. ಅಪ್ರಕಟಿತ ಕವನಗಳಲ್ಲಿ ಅವರ ಮಾಗಿದ ಅನುಭವಗಳು ಹರಳುಗಟ್ಟಿವೆ ಮತ್ತು ಕಾವ್ಯವಸ್ತುವಿನಲ್ಲೂ ಆದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ.

ಈ ಸಂಕಲನದಲ್ಲಿ ಅವಧಾನಿಯವರು ಅಲ್ಲಿಂದಿಲ್ಲಿಗೂ ಬರೆದ 'ಮಿನಿ ಪೋಯಮ್ಸ್' ಗಳನ್ನು ಒಂದೆಡೆ ನೀಡಲಾಗಿದೆ. ಇವುಗಳಲ್ಲಿ ಅನೇಕ ಚುಟುಕುಗಳು ಕಲ್ಪನೆಯ ಕಸುವಿನಿಂದ ಮಾರ್ಮಿಕವಾಗಿವೆ. ಇಂಥ ಪ್ರಬುದ್ಧ ಕವಿತೆಗಳನ್ನು ರಚಿಸಿದ ಅವಧಾನಿಯವರು ಅಕಾಲಿಕವಾಗಿ ಅಗಲಿದ್ದು ಕಾವ್ಯಪ್ರಿಯರಿಗೆ ವಿಷಾದದ ಸಂಗತಿ.

– ಆರ್.ಪಿ. ಹೆಗಡೆ, ಇಂಗ್ಲಿಷ್ ವಿಭಾಗ, ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು, ಶಿರಸಿ (ಉ.ಕ.)

೧೬. ಬಿಡಿ ಹರಳು : ಲಲಿತಾ ಸಿದ್ದಬಸವಯ್ಯ, ಚಿನ್ಮಯಿ ಪ್ರಕಾಶನ, ೫೨೧೬, ೨ನೇ ತಿರುವು, ಅಶೋಕನಗರ, ತುಮಕೂರು-೩ ಪ್ರ.ಮು. ೨೦೦೨, ಪು. ೧೨೫, ರೂ. ೬೦/-

ಈ ಹನಿಗವನಗಳ ಸಂಕಲನದ ಹೆಸರೇ ಚೋದ್ಯವಾಗಿದೆ. 'ಬಿಡಿ..... ಹರಳು' ಎಂದು ಪಕ್ಕಕ್ಕೆ ಸರಿಸಬಹುದು. 'ಓಹ್.... ಬಿಡಿ ಹರಳು' ಎಂದು ಮುದ್ದಾಗಿ ಕೈಗೆತ್ತಿಕೊಳ್ಳಬಹುದು. ಕಥೆ, ಕಾದಂಬರಿಗೆ

ಅಥವಾ ಗದ್ಯಭಾಗಕ್ಕೆ ಪ್ರವೇಶ ದೊರಕಿಸಿಕೊಡುವಂತಿದೆ ಈ ಶೀರ್ಷಿಕೆ. ಏನೇ ಆದರೂ ಇದನ್ನು ಆರಾಮವಾಗಿ ಕುಳಿತು ಓದಬಹುದು. ಪಕ್ಕಕ್ಕೆ ಸರಿಸುವಂತಿಲ್ಲ.

ಈ ಹನಿಗವನಗಳು ಅನೇಕ ರೀತಿಯಲ್ಲಿ ಮಿನುಗುತ್ತಾ ಹೋಗುತ್ತವೆ. ಸ್ತ್ರೀವಾದ, ವೈಚಾರಿಕತೆ, ಜೀವನ, ಪ್ರೀತಿ, ಭಾವನೆಗಳ ಸಂಘರ್ಷ, ಪ್ರಣಯ, ಕನಸು, ಭಾಷಾಭಿಮಾನ.... ಹೀಗೆ. ಹನಿಗವನಗಳು 'ಕನಸಿನ ರಾಣಿ'ಯಂತೆ. ಅವುಗಳನ್ನು ಹಿಡಿವುದು ಬಲು ಕಷ್ಟ. ಆದರೆ ಲಲಿತಾ ಸಿದ್ಧಬಸವಯ್ಯ ಅವರ ಲೇಖನಿಗೆ ಅದು ಕಷ್ಟವಾಗಿಲ್ಲ. ಅರ್ಥವೇ ಇಲ್ಲದ ಚುಟುಕಗಳು, ಹಾಸ್ಯಗಳನ್ನು, ಪ್ರಶ್ನೋತ್ತರಗಳನ್ನು ಹನಿಗವನ ಅಥವಾ ಚುಟುಕ ಎಂಬಂತೆ ಬರೆದು ಬಿಸಾಡುತ್ತಿರುವ ಈ ಕಾಲದಲ್ಲಿ 'ಬಿಡಿ ಹರಳು' ಒಂದು ಆಶಾದಾಯಕ ಅಂಶವಾಗಿದೆ. ಅನೇಕ ಕಲ್ಪನೆಗಳ, ಕನಸುಗಳ, ಮರೀಚಿಕೆಗಳ, ಆದರ್ಶಗಳ.... ಬೆನ್ನುಹತ್ತಿ, ಅವುಗಳನ್ನು ಹಿಡಿದು 'ಅದು-ಇದೇ' ಎಂದು ತೋರಿಸುವ ಪ್ರಯತ್ನವನ್ನು ಲೇಖಕಿ ಮಾಡಿದ್ದಾರೆ.

'ಅರ್ಜುನಾ, ಎಣ್ಣೆ ಬಂದಾಗ ಕಣ್ಣು ಮುಚ್ಚಬೇಡ.'

'ನೆನಪುಗಳೇ ಬಿಕ್ಕಳಿಕೆಯಾಗದಿರಿ !'

'ಹಕ್ಕುದಾರನು ಬಂದು ಚಕ್ಕುಬಂದಿಯ ಹೂಡಿದಾಕ್ಷಣ.'

'ಎದೆಯ ಗೂಡಲ್ಲಿ ಮುತ್ತುಗಳ ಮೊಟ್ಟೆ ಒಡೆದು' – ಹೀಗೆ ಅನೇಕಾನೇಕ ಸಾಲುಗಳು ನಮಗೆ ಆಪ್ಯಾಯಮಾನವೆನಿಸುತ್ತವೆ, ಚಿತ್ರಗಳನ್ನು ಕಟ್ಟಿಕೊಡುತ್ತವೆ.

ಪಾಂಡವರು ಪದಪ್ರೋಕ್ತಿಗಳಾಗುತ್ತಾರೆ, ಲಕ್ಷಾಂತರ ಜನ ಮಡಿದರೂ ಸಿಗದ ಸುಖ, ಸೌಗಂಧಿಕಾ ಪುಷ್ಪ ಬಯಸಿದ ಹೆಣ್ಣಿನ ಮುಡಿ ಎಂಥದ್ದು ? ಯಕ್ಷ ಬದುಕಿಸಿ ಕೊಟ್ಟ ಭಿಕ್ಷೆ ಪಾಂಡವರು ....ಹೀಗೆ ಮಹಾಭಾರತದ ಪಾತ್ರಗಳೆಲ್ಲ ವಿಶಾಲ ರೂಪು ಧರಿಸಿ ನಮ್ಮೆದುರು ನಿಲ್ಲುತ್ತವೆ.

ಹದಿಮೂರು ಹರಳುಗಳ ಈ ಹನಿಗವನಗಳ ಸಂಕಲನ ಸೃಷ್ಟಿ, ಸ್ಥಿತಿ, ಲಯಗಳ ಕಡೆಗೆಲ್ಲಾ ತನ್ನ ಸಣ್ಣ ಸಣ್ಣ ಹರಳುಗಳನ್ನು ತೂರಿದೆ. ಈ ಹರಳುಗಳು ಕೆಲವೆಡೆ ಮಿನುಗುತ್ತವೆ, ಕೆಲವೆಡೆ ಮಬ್ಬಾಗುತ್ತವೆ. ಆದರೆ ಅವು 'ಹರಳಾಗಿ ಅರಳುವುದಿಲ್ಲ'. 'ಹರಳುಗಟ್ಟಿದ ಚಿಂತನೆ' ಎಂಬ ನುಡಿಗಟ್ಟು ವಿಮರ್ಶಾಸಾಹಿತ್ಯದಲ್ಲಿ ಮೆಚ್ಚುಗೆಯ ಅಂಶವಾಗಿರಬಹುದು. ಆದರೆ ಹರಳಿನ ಗುಣಲಕ್ಷಣಗಳನ್ನು ನೋಡಿದಾಗ ಅದು ಹೂವಿನಂತೆ ಅರಳಬೇಕಾದ ಕವನಗಳಿಗೆ ಸರಿಯಾಗಿ ಹೊಂದುವುದಿಲ್ಲ ಎನಿಸುತ್ತದೆ.

ಬೀಜದಿಂದ ವೃಕ್ಷವಾಗುತ್ತದೆ. ಚಿಂತನೆಯ ಬೀಜ ಬಲು ದೊಡ್ಡ ವ್ಯಾಪ್ತಿ ಇರುವ ವೃಕ್ಷ ಸಂಕುಲಕ್ಕೆ ನಾಂದಿ ಹಾಡಬಹುದು. ಆದರೆ ಕವನಗಳು ಹರಳುಗಳಾಗಿ ಗಟ್ಟಿಕಟ್ಟಿ ನಿಲ್ಲಬೇಕಾಗಿಲ್ಲ ಅಲ್ಲವೇ ?

– ಡಾ. ಎಂ. ಆರ್. ಮುದಾರವಲ್ಲಿ. ಕೇರ್ ಜಿ.ಕೆ.ರವೀಂದ್ರಕುಮಾರ್. ಆಕಾಶವಾಣಿ. ಮೈಸೂರು-೨೦

ಸಂಕಲನ : ಅನಿಸಿಕೆ

▼ ಯಾವುದೇ ಚಳವಳಿಯ ಕಣ್ಣುಪಟ್ಟಿ ಇಲ್ಲದೆ ಸಾಹಿತ್ಯದ ಸಮಗ್ರ ದೃಷ್ಟಿಯಿಂದ ಸಂಕಲನ ಪತ್ರಿಕೆಯನ್ನು ನಡೆಸುತ್ತಿದ್ದೀರಿ. ಅಭಿನಂದನೆಗಳು.

– ಡಾ. ಎಸ್. ಎಲ್. ಭೈರಪ್ಪ, ಮೈಸೂರು

▼ ಸಂಕಲನ ಭಾಳ ಛಲೋ ಬರಾಕತ್ತೇತಿ.

– ಡಾ. ಗಿರೀಶ ಕಾರ್ನಾಡ, ಬೆಂಗಳೂರು

- ಸಂಕಲನ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. —**ಹೆಚ್. ವಿ. ಮೋಹನಶಾಸ್ತ್ರಿ, ಶಿವಮೊಗ್ಗ**

- ಸಂಕಲನ - ೧೧ ಹಲವಾರು ಸತ್ವಪೂರ್ಣ ಅಭ್ಯಾಸಪೂರ್ಣ ಲೇಖನಗಳಿಂದ ಮೈದುಂಬಿಕೊಂಡಿದೆ. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ ಬಹಳ ಚೆನ್ನಾಗಿ ಬರುತ್ತಿದೆ. ಹಳ್ಳಿಯವನಾದ ನನಗೆ ಮಾಚಕನೂರರ ಲೇಖನ ಅಪ್ಯವಾಯಿತು. ಜನಜಾಗೃತಿ ಹಾಡುಗಳು ಸರಳಪದಮಾಲೆಯಲ್ಲಿ ಮುದ ನೀಡುತ್ತವೆ. ಬಂದಗದ್ದೆ ಅವರ 'ನನ್ನನ್ನು ಎಲ್ಲಿ ಕಾಣಲಿ' ಲೇಖನ ಸತ್ಯಾಸತ್ಯತೆಗಳ ನಡುವೆ ಗೆರೆ ಹೊಡೆದು ನೈಜತೆ ತೋರಿಸುತ್ತದೆ. ಹಲ್ಲುಗಳ ಬಗ್ಗೆ ೨ - ೩ ಹಾಸ್ಯಲೇಖನ ಬರೆದ ನನಗೆ ಜೋಶಿಯವರ 'ಹಲ್ಲುಗಳ ಗುಲ್ಲು' ಹೊಸದೆನಿಸಿತು. ಪುಸ್ತಕಗಳ ಪರಿಚಯವಂತೂ ಸಾಹಿತ್ಯಾಸಕ್ತರಿಗೆ ಅತ್ಯಮೂಲ್ಯವಾಗಿದೆ. — **ಎಂ. ವಿ. ಗೋಗೇರಿ, ಹುಬ್ಬಳ್ಳಿ**

- ಮಾಚಕನೂರರು ಅಪ್ಪನ ಅಪ್ಪಟ ಚಿತ್ರವೊಂದನ್ನು ಶಬ್ದಗಳಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ೩೦ - ೪೦ ವರ್ಷಗಳ ಹಿಂದಿನ ಹಳ್ಳಿಗಳಲ್ಲಿ ಸಜ್ಜನರು ಬೇಕಾದಷ್ಟಿದ್ದರು. ಸಜ್ಜನಿಕೆಗೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲ. 'ಆ ಪುಸ್ತಕಾದು ಏನ್ ಮಾಡ್ತಿ. ಮೊದಲ ಹುಡುಗರ ಮದ್ವಿ ಮಾಡು' ಎನ್ನುವ ಮಾತಿನಲ್ಲಿ ವಿದ್ಯೆ ಬುದ್ಧಿಯ ಬಗ್ಗೆ ತಿರಸ್ಕಾರವೇನೂ ಇಲ್ಲ; ಆದರೆ ಜೀವನದಲ್ಲಿ ಯಾವುದಕ್ಕೆ ಮೊದಲ ಪ್ರಾಶಸ್ತ್ಯ ಎನ್ನುವ ಧ್ವನಿ ಇದೆ. ನೂರರ ಮೇಲೆ ಬದುಕಿರುವ ಮಾಚಕನೂರರ ಅಪ್ಪ ಕಳೆದ ಶತಮಾನದ ನಮ್ಮ ಹಳ್ಳಿಗಾಡಿನ ಗಟ್ಟಿಮುಟ್ಟ ಪ್ರತೀಕ. ಅವರನ್ನು ನೆನೆಸುವುದೆಂದರೆ, ನಾವೀಗ ಕಳೆದುಕೊಂಡದ್ದರ ಬಗೆಗಿನ ನೋವನ್ನು ನೋಡಿಕೊಳ್ಳುವುದು. ನಮಗೂ ಅವರಂತೆ ಬದುಕಲಿಕ್ಕೆ ಏಕೆ ಆಗುತ್ತಿಲ್ಲ ಎಂದು ಚಿಂತಿಸುವುದು.
'ನನ್ನ ಅವ್ವ ನನ್ನ ಅಪ್ಪ' ಲೇಖನ ಮಾಲಿಕೆ ಪ್ರಾಮಾಣಿಕ ನೆನಪಿನ ಸರಣಿಯ ಇತಿಹಾಸ.
— **ಡಾ. ಶ್ಯಾಮಸುಂದರ ಬಿದರಕುಂದಿ, ಗದಗ**

- ಮಾಚಕನೂರರ ಲೇಖನ ಓದುವಾಗ ತದ್ವತ್ತಾಗಿ ನನ್ನ ತಾಯಿ ಕಣ್ಣಮುಂದೆ ಬಂದು ನಿಂತಳು. ಆಕೆ ೧೯೯೨ ರಲ್ಲಿ ಹೋದಳು. ಪ್ರಸ್ತುತ ಲೇಖನ ಓದಿದಾಗ ಮತ್ತೆ ಬಂದು ನನ್ನ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸಿ ಹೋದಳು. — **ಡಾ. ಎಸ್. ಆರ್. ಗುಂಜಾಳ, ಬೆಳಗಾವಿ**

- ಮಾಚಕನೂರರ ಲೇಖನ ಓದಿ ತುಂಬಾ ಖುಶಿಯೆನಿಸಿತು. ಅವರು ಕೇವಲ ಮಾಚಕನೂರರ ಅಪ್ಪ ಅವ್ವಂದಿರಲ್ಲ. ಒಂದು ತಲೆಮಾರಿನ ಪ್ರತಿನಿಧಿಗಳಾಗಿರುವ ನಮ್ಮೆಲ್ಲರ ಅಪ್ಪ ಅವ್ವಂದಿರು. ಅವರಿಂದ, ಅವರ ಮೌಲ್ಯಗಳಿಂದ ನಾವು - ನಮಗಿಂತ ಹೆಚ್ಚಾಗಿ ನಮ್ಮ ಮಕ್ಕಳು ದೂರಾಗುತ್ತಿರುವುದು ತಳಮಳವನ್ನುಂಟುಮಾಡುತ್ತದೆ. — **ಡಾ. ಬಸವರಾಜ ಮಲಶೆಟ್ಟಿ, ಹೊಸಪೇಟೆ**

- ಮಾಚಕನೂರ ಅವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿದ ಮುಗ್ಧ ತಂದೆ. ಹಳ್ಳಿ, ಅಲ್ಲಿಯ ಸ್ವಚ್ಛ ಪರಿಸರ. ಆತ್ಮೀಯ ಜನಮನ. ಅವರ ಕಾಳಜಿ. ಸುತ್ತುಮುತ್ತಲಿನ ಜಾತ್ರೆ ಹಬ್ಬ ಹರಿದಿನ ಆಟ ನಾಟಕ ಮೊದಲಾದವನ್ನು ತುಂಬ ಮಾರ್ಮಿಕವಾಗಿ. ಸಹಜವಾಗಿ ವಿವರಿಸಿದ್ದಾರೆ. ಇವನ್ನು ಇನ್ನಷ್ಟು ವಿಸ್ತರಿಸಿ ಕೃತಿರೂಪದಲ್ಲಿ ಬರೆದರೆ ಅರ್ಧ ಶತಮಾನದ ಹಿಂದಿನ ಗಡಿಗ್ರಾಮ ಪರಿಸರಗಳ ಸುಂದರ ಚಿತ್ರಗಳನ್ನು ಕಟ್ಟಿಕೊಟ್ಟಂತಾಗುತ್ತದೆ. — **ಡಾ. ಬಸವರಾಜ ಜಗಜಂಪಿ, ಬೆಳಗಾವಿ**

- ಸಂಕಲನ - ೯ ರಲ್ಲಿ ಬಂದಿದ್ದ ಯು. ವೆಂಕಟ್ರಾಜ ರಾವ್ ಅವರ 'ಜಾಗತೀಕರಣ' ಕುರಿತ ಲೇಖನ ಈಗಲೂ ಯೋಚಿಸಲು ತೊಡಗಿಸುತ್ತಿದೆ. ಮನಸ್ಸು ಅಷ್ಟು ಸರಳ ಅಲ್ಲ ಅನ್ನುತ್ತಿದೆ. ನಮ್ಮ ಪುಟ್ಟ ಬಂಡವಳದ ಉದ್ದಿಮೆಗಳಿಗೆ ತೊಡಕುಗಳು ಪ್ರಾರಂಭ ಆಗಿವೆ. ಲೋಕವೇ ಹಾಹಾಕಾರದಲ್ಲಿರುವಾಗ ಅದು ಸರಿ ಎಂದು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಲೇಖನ ತುಂಬ ತರ್ಕಬದ್ಧವಾಗಿತ್ತು. ಆದ್ದರಿಂದ ಉತ್ತರ ಹೊಳೆಯುತ್ತಿಲ್ಲ. / ನೀವಿಬ್ಬರೂ ವಿದೇಶಕ್ಕೆ ಹೋಗಿಬಂದದ್ದು ಈ ಸಲದ 'ಕಡೇಪುಟ' ಓದಿ ತಿಳಿಯಿತು. ಖುಷಿಯಾಯಿತು. — **ಡಾ. ವಿಜಯಾ, ಬೆಂಗಳೂರು**

▼ ನಿಮ್ಮ 'ಕಡೀ ಪುಟ' ಭಾಳ ಛೆಂದ ಇರತೈತ್ರಿ...

– ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಸಾಣೇಹಳ್ಳಿ

▼ ಸಂಕಲನದಲ್ಲಿ ನಾನು ಮೊದಲು ಓದೋದು 'ಕಡೀ ಪುಟ'. ಸಂಕಲನ - ೧೦ ರಲ್ಲಿಯ 'ಕಡೀ ಪುಟ' ವನ್ನಂತೂ ೩-೪ ಸಲ ಓದಿದೆ. ಸಾಹಿತ್ಯ, ತತ್ತ್ವದರ್ಶನ, ವ್ಯಂಗ್ಯ, ಆತ್ಮೀಯತೆ ಎಲ್ಲ ಮೇಳವಿಸಿದ ಲೇಖನ ಇದು.

– ಡಿ. ಎಸ್. ಮುನಿಕೃಷ್ಣ, ಬೆಂಗಳೂರು

▼ ಸಿದ್ದು ದೇವರಮನಿ ಅವರ 'ಗೆಳೆತನ ಮನುಷ್ಯರನ್ನಾಗಿಸಲಿ' ಕವನ ಬಹಳ ಹಿಡಿಸಿತು.

– ಮಂಜುನಾಥ ತಿಗಡಿ, ಅಣ್ಣಿಗೇರಿ

▼ ಸಂಕಲನ ಪತ್ರಿಕೆ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಒಳಗೊಂಡು ತುಂಬಿ ಬರುತ್ತಿದೆ. ಬುದ್ಧಿಗೆ ಪ್ರಚೋದನೆ, ಮನಸ್ಸಿಗೆ ಮುದ ನೀಡುವ ಲೇಖನಗಳಿವೆ. ಇಲ್ಲಿ ಸಾಮಾನ್ಯನೂ ಬರಹದ ರೆಕ್ಕೆ ಬಿಚ್ಚಿದ್ದಾನೆ. ಬರಹದ ರೆಕ್ಕೆ ಮುದುರಿ ಕುಳಿತ ಹಕ್ಕಿಗಳೂ ಗರಿಗೆದರಿ ಹಾರಾಡುತ್ತಿವೆ. ಎಷ್ಟೋ ಸಾಹಿತ್ಯಾಸಕ್ತರಿಗೆ ಇನ್ನೂ ಸಂಕಲನದ ಮಾಹಿತಿಯೇ ಇಲ್ಲ. ಹೇಗಾದರೂ ಮಾಡಿ ಎಲ್ಲರಿಗೂ ತಿಳಿಯುವಂತೆ ಮಾಡಿರಿ. ಶ್ರೀಶ ಉಡುಪರು 'ದಶಾವತಾರ' ಲೇಖನದಲ್ಲಿ ಬುದ್ಧನ ಬಗ್ಗೆ ಹೇಳುವಾಗ 'ಒಂದು ಧರ್ಮವನ್ನು ವಿರೋಧಿಸಿ ಬೇರೆಯದೇ ಆದ ಒಂದನ್ನು ಸ್ಥಾಪಿಸಿದವನು ಅದೇ ಧರ್ಮದ ಅವತಾರಪುರುಷನಾದುದು ಹೇಗೆ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ' ಎಂದಿದ್ದಾರೆ. ಲೇಖಕರು ಸಹಿತ ಬಹಳಷ್ಟು ಜನರು ಬುದ್ಧನೆಂಬುವವ ಒಬ್ಬನೇ ಇದ್ದ ಎಂಬ ಕಲ್ಪನೆ ಹೊಂದಿದ್ದರಿಂದ ಆ ಪ್ರಶ್ನೆ ಏಳುವುದು ಸ್ವಾಭಾವಿಕ. ಆದರೆ ವಸ್ತುಸ್ಥಿತಿ ಏನೆಂದರೆ ದಶಾವತಾರದ ಪೌರಾಣಿಕ ಬುದ್ಧನೇ ಬೇರೆ, ಬೌದ್ಧ ಧರ್ಮ ಸ್ಥಾಪಿಸಿದ ಐತಿಹಾಸಿಕ ಬುದ್ಧನೇ ಬೇರೆ. ಕೆಲ ವರ್ಷಗಳ ಹಿಂದೆ ಈ ವಿಚಾರದ ಲೇಖನ ಓದಿದ ನೆನಪು. ಯಾರಾದರೂ ಇದರ ಮೇಲೆ ಹೆಚ್ಚಿನ ಬೆಳಕು ಚೆಲ್ಲಲಿ.

– ಶಿವಾನಂದ ನಾಗನೂರ, ಹಾವೇರಿ

▼ ಸಂಕಲನ ತುಂಬ ಒಳ್ಳೆಯ ಸಾಹಿತ್ಯ ದ್ವೈಮಾಸಿಕ. ಇಂಥ ಅಕೃತ್ರಿಮ ಪತ್ರಿಕೆಯೊಂದರ ಆವಶ್ಯಕತೆ ಯಾವಾಗಲೋ ಇತ್ತು. ಯಾರೂ ಮಾಡದ ಮನಸ್ಸನ್ನು ನೀವು ಮಾಡಿದ್ದೀರಿ. ನೀವು, ಗಿರಡ್ಡಿ ಮತ್ತು ಚಂಪಾ ಮೂವರೂ ಸೇರಿ ಹೊರತರುತ್ತಿದ್ದ 'ಸಂಕ್ರಮಣ' ಆ ದಿನಗಳಲ್ಲಿ ನವ್ಯಸಾಹಿತ್ಯದ ಬೆಳವಣಿಗೆಗೆ, ಪರೋಕ್ಷವಾಗಿ ನನ್ನಂಥವರ ಬರವಣಿಗೆಗೆ, ಹೊಸತಾಗಿ ಪ್ರಾರಂಭಿಸಿದವರಿಗೆ ಮಾರ್ಗದರ್ಶಕವಾಗಿತ್ತು. ಈಗ ಸಾಹಿತ್ಯಲೋಕದ ಒಟ್ಟು ವಾತಾವರಣಕ್ಕೆ ಅಂಥ ಒಂದು ಪತ್ರಿಕೆ ಮತ್ತೆ ಬೇಕಾಗಿತ್ತು. 'ಸಂಕ್ರಮಣ'ದ ಬದಲು 'ಸಂಕಲನ'. ದೊಡ್ಡ ಮನಸ್ಸು, ದೊಡ್ಡ ಸಾಧನೆ. ನಿಮಗೆ ಯಶಸ್ಸಿರಲಿ./ನೀವು ಈವರೆಗೆ ಕಳಿಸಿದ ಹತ್ತೂ ಸಂಚಿಕೆಗಳು ನನ್ನಲ್ಲಿ ಜೋಪಾನವಾಗಿವೆ. ಹೊಸತಾಗಿ ಸಾಹಿತ್ಯಕ್ಷೇತ್ರಕ್ಕೆ ಕಾಲಿಡುವವರಿಗೆ ಇದರ ಸಂಗ್ರಹ ತೀರಾ ಅನಿವಾರ್ಯ ಎಂದು. ಇಷ್ಟಕ್ಕೂ ಇಂದು ಬರುತ್ತಿರುವ ಹೊಸ ಕಾವ್ಯಕ್ಕೆ ನಿಜವಾದ ಕಾವ್ಯಮಾರ್ಗದ ಮಾರ್ಗದರ್ಶನ ಬೇಕಿದೆ. ಅದಕ್ಕೆ ಸಂಕಲನ ಮುಂದಾದರೆ ಇನ್ನಷ್ಟು ಅರ್ಥಪೂರ್ಣ ಅನಿಸಬಹುದು.
'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ ಕನ್ನಡದಲ್ಲಿ ಅದ್ಭುತ ಕೃತಜ್ಞತಾ ಮಾಲಿಕೆ.

– ಡಾ. ನಾ. ಮೊಗಸಾಲೆ, ಕಾಂತಾವರ

▼ ಸಂಕಲನ ಪತ್ರಿಕೆ ಬಲು ಚೆನ್ನಾಗಿ ಬರುತ್ತಿದೆ. ಮನುಷ್ಯರ ನಡುವೆ ಅಡ್ಡಗೋಡೆಗಳನ್ನು ಕಟ್ಟುವ, ಕಂದರಗಳನ್ನು ಅಗೆಯುವ, ಭೇದದ ವಿಷಬೀಜಗಳನ್ನು ಬಿತ್ತುವ ಸಣ್ಣತನಕ್ಕೆ ಯಾವತ್ತೂ ಇಳಿಯದೆ ಅವರ ಮಧ್ಯೆ ಸ್ನೇಹದ ಸೇತುವನ್ನು ಕಟ್ಟುವ, ತಿಳಿವಳಿಕೆಯ ಪರಿಸರವನ್ನು ಸೃಜಿಸುವ ಮತ್ತು ಏಕತೆಯ ಎಚ್ಚರವನ್ನು ಮೂಡಿಸುವ ಕೆಲಸವನ್ನು ಸಾಹಿತಿಗಳು ಮಾಡಬೇಕಾಗಿದೆ. ಸಂಕಲನ ಇದಕ್ಕೆ ಅವಕಾಶ ಒದಗಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಕನ್ನಡಿಗರು ಈ ನಿಯತಕಾಲಿಕ ಸಾಹಿತ್ಯಮಂಜರಿಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕು.

– ವಿ. ಬಿ. ಅರ್ತಿಕಜೆ, ಪುತ್ತೂರು

ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ದೇಹ ಅಯ್ತಿ ಅಂತ ಮನಸ ಆಯ್ತಿ. ಮನಸ ಆಯ್ತಿ ಅಂತ ಆತ್ಮ ಆಯ್ತಿ. ಆತ್ಮ ಆಯ್ತಿ ಅಂತ ಪರಮಾತ್ಮ ಅಯ್ತಿ. ಅಯ್, ತಡಿರಿ. ಪರಮಾತ್ಮ ಅಯ್ತಿ ಅನಬಾರದು, ಅದಾನ ಅನಬೇಕು.

ಇದೆಂಥಾದ್ದ ನೋಡ್ರಿ, ಆತ್ಮ ಅಂದರ ಅಯ್ತಿ, ಪರಮಾತ್ಮ ಅಂದರ ಅದಾನ. ಹೆಂಗಿದು ? ನಮ್ಮಲ್ಲೆ ಆತ್ಮ ನಪುಂಸಕ ಲಿಂಗ, ಪರಮಾತ್ಮ ಪುಲ್ಲಿಂಗ. ಈ ಆತ್ಮ ಆ ಆತ್ಮನೊಳಗ ಸೇರಿ ಒಂದಾದ ಮ್ಯಾಲ, ಅರ್ಥಾತ್ ನಪುಂಸಕ+ಪುರುಷ ಏಕಾಕಾರ ಆದಮ್ಯಾಲ ಅದು ಪುರುಷವಾಚಕನ್ಅ ಆಗಬೇಕಂತ ಏನರ ಅಲಿಖಿತ ನಿಯಮ, ಕಾನೂನು ನಡಕೊಂಡ ಬಂದಾವೇನು ? ಪರಮಾತ್ಮ ಅಂದರ ಪ್ರಶ್ನಾತೀತ. ಆದ್ದರಿಂದ ಉತ್ತರಾತೀತ. ಹೇಳಾಕ ಬರೂದುಲ್ಲ, ಯಾಕಂದರ ಕೇಳಾಕ ಆಗೂದುಲ್ಲ, ಕೇಳಾಕ ಬರೂದುಲ್ಲ. ಹಂಗಾರ ಏನ ಈ ಪರಮ ಆತ್ಮ ? ಉತ್ತುಂಗ, ಶ್ರೇಷ್ಠ, ಉನ್ನತ, ಉಚ್ಚ, ಉತ್ಕೃಷ್ಟ, ವಿಶುದ್ಧ, ಮುಖ್ಯ, ಆದ್ಯ, ನಿಗೂಢ ಮುಂತಾದ ಅರ್ಥಗಳನ್ನ ದ್ಯೋತಿಸುವ ವಿಶೇಷಣಗಳ ಹಿಮಗಿರಿಗಳ ಚರ್ಮಗಳನ್ನಅ ಸುತ್ತಿಕೊಂಡು ಶಿವತ್ವದ ಸಾಕ್ಷಾತ್ಕಾರ ಹಾಗೂ ವಿಸ್ಮರಣೆಗಾಗಿ ತಾಂಡವಲೀನವಾಗಿರುವ ಪರಮಾತ್ಮ ನಮಗ ತಿಳೀದಿದ್ದರ, ಹೊಳೀದಿದ್ದರ, ದಕ್ಕದಿದ್ದರ ಆ ಪರಮಾತ್ಮನಕ್ಕಿಂತ ಮೊದಲ ಹಂತದ ಆತ್ಮ'ನ' ಬಗ್ಗೆ, ಅಲ್ಲ ಆತ್ಮ'ಳ' ಸಲವಾಗಿ, ಅಲ್ಲ ಅಲ್ಲ ಆತ್ಮ'ದ' ದಸಿಂದರ ಒಂದೀಟ ತಿಳಕೊಳ್ಳೂದು ಬೇಸಿ.

ಈ ಆತ್ಮ ಪುಲ್ಲಿಂಗ ಅಲ್ಲ, ಸ್ತ್ರೀಲಿಂಗ ಅಲ್ಲ. ನಪುಂಸಕ. ಯಾಕ ಹಿಂಗ ಆಗಿರಬಹುದು ? ಅಥವಾ ನಾವ್ನಅ ಯಾಕ ನಪುಂಸಕ ಮಾಡಿರಬಾರದು ? ಅಥವಾ ನಮ್ಮ ಅಂತರ್ಮನದೊಳಗ ಹುದುಗಿರುವ ನಪುಂಸಕತ್ವವನ್ನ ನಮ್ಮ ಚಿಂತನೆಯ ಸರ್ವೋಚ್ಚ ಶಿಖರವಾಗಿರುವ ಆತ್ಮದ ಮ್ಯಾಲ ಲೇಪಿಸಿರಬಾರದ್ಯಾಕ ? ಆದರ ಬಹಿರಂಗವಾಗಿ ಹಿಂಗ ಮಾತಾಡೂದು, ವಿಚಾರ ಮಾಡೂದು ಬರೊಬ್ಬರ ಅಲ್ಲ. ನಮ್ಮೊಳಗ ನಪುಂಸಕತ್ವ ಅಯ್ತಿ ಅಂದರ, ನಾವು ನಪುಂಸಕರು ಅಂದ್ಹಂಗ. ನಾವು ಗಂಡಸೂರೂ ಅಲ್ಲ, ಹೆಂಗಸೂರೂ ಅಲ್ಲ ಅಂತ. ಆದರ ಹಿಂಗ ಬಾಯಿಬಿಟ್ಟು ಹೇಳಿದರ ಎಲ್ಲ್ಯಾರ ಬಡಿಸಿಕೊಂಡು ಬರೂ ಆಟ. ಗಂಡಸೂ ಅಲ್ಲ ಹೆಂಗಸೂ ಅಲ್ಲ ಅನ್ನೂದನ್ನ ಯಾರ ಒಪ್ಪತಾರರಿ ? ಆದ್ರೂ ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಗಂಡಸು ಎದಿ ತಟ್ಟಿ ಹೇಳಲಿ, ತಾ ಖರೇ ಪೂರಾ ಗಂಡು ಅಂತ. ಹೆಂಗಸೂ ಎದಿ ಮುಟ್ಟಿ ಹೇಳಲಿ, ತಾನು ಸಂಪೂರ್ಣ ಹೆಣ್ಣು ಅಂತ. ಬಹಿರಂಗವಾಗಿ ಬ್ಯಾಡ, ತಮ್ಮ ತಮ್ಮ ಮನಸ್ಸಿನ್ಯಾಗ್ಅ ಕೇಳಕೊಳ್ಳಲಿ.... ಖರೇ ಹಕೀಕತ್ತ ಅಂದ್ರ, ಗಂಡಿನೊಳಗ ಹೆಣ್ಣು ಕಪ್ಪುರದ್ಹಂಗ ಕರಗಿರತಯ್ತಿ, ಹೆಣ್ಣಿನೊಳಗ ಗಂಡು ಮಂಪರದ್ಹಂಗ ಒರಗಿರತಯ್ತಿ. ಹಿಂಗಾಗಿ ಗಂಡು ಅನ್ನೂದಕ್ಕ ಗಂಡ್ಹೆಣ್ಣು, ಹೆಣ್ಣು ಅನ್ನೂದಕ್ಕ ಹೆಣ್ಗಂಡು ಅನ್ನಬೇಕೇನೊ. ಅದು ಒಪ್ಪಿಗಿ ಇಲ್ಲದ್ದಕ್ಕ, ಭಾಳ ಗೌರವದಿಂದ ಇಬ್ಬರೊಳಗೂ ಇರಬಹುದಾದ ಅಥವಾ ಕಲ್ಪಿತವಾಗಿರಬಹುದಾದ ಏಕಾಕಾರವಾದ, ಏಕರೂಪವಾದ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ ಅಂತ ಪರಿಗಣಿಸಿ, ಅವ್ನನ್ನ ಅಲ್ಲ, ಆಕಿನ್ನ ಅಲ್ಲ, ಅದನ್ನ ನಪುಂಸಕ ಅಂತ ಕರೆದು ನಮ್ಮ ಮರ್ಯಾದಿ ಉಳಿಸಿಕೊಂಡೇವ್ರೋ, ಬೆಳೆಸಿಕೊಂಡೇವ್ರೋ ವಿಚಾರ ಮಾಡಬೇಕಾಗೇತಿ.

ಈ ಆತ್ಮದ ಪರಿಸ್ಥಿತಿನ್ಅ ಹಿಂಗಿದ್ದ ಮ್ಯಾಲ ಇದರೊಳಗ ಆತ್ಮೈಕ್ಯ ಆದ ಅಥವಾ ಲಿಂಗೈಕ್ಯ ಆದ ಮನಸ್ಸು ಅನ್ನೂದರ ಬಾಳೇ ಏನು ಅಂತ ? ಆ ಮನಸ್ಸಿನ ಮುಂದಿನ ಕುಡೀನ್ಅ ಈ ಆತ್ಮ. ಅಂದರ ಈ ಆತ್ಮದ ಗಿಡದ ಬಡ್ಡಿ ಅಥವಾ ಬೇರು ಮನಸು ಅಂತ ಆತು.

ಪರಮಾತ್ಮ ಎಲ್ಲೇ ಇರಲಿ, ಹೆಂಗ್ಅ ಇರಲಿ: ಒಬ್ಬ, ಏಕ ಅಂತೇವು. ಅನೇಕ ಆತ್ಮ'ಗಳು' ಪರಮನಲ್ಲಿ ಮಿಳಿತಗೊಂಡಾಗ ಅವೂ ಏಕ ಆಗಿ ಬಿಡ್ತಾವು. ಹಂಗಿದ್ದ ಮ್ಯಾಲ ಈ ಏಕರೂಪ ವಿಶುದ್ಧ ಆತ್ಮದ ಬೀಜರೋಪಣದ ಕ್ರಿಯೆಗೆ ಸಾಧನವಾಗಿರುವ ಮನಸ್ಸು ಅಥವಾ ಮನಸ್ಸುಗಳು ಸಹ ಏಪರೂಪ ಇರಬೇಕಲ್ಲ ? ಆದರ ಹಂಗಿಲ್ಲಲ್ಲ. ಒಬ್ಬರ್ಹಂಗ ಒಬ್ಬರಿಲ್ಲ. ಒಬ್ಬರ ಮನಸ್ಸಿನ್ಹಂಗ ಇನ್ನೊಬ್ಬರ ಮನಸ್ಸಿಲ್ಲ ಹಿಂಗ ಮನಸ್ಸು ಬ್ಯಾರೆ ಬ್ಯಾರೆ ಆಗಿರೂದುನ್ಅ ಮನಶ್ಯಾನ ವೈಶಿಷ್ಟ್ಯ. ಈ ವೈಶಿಷ್ಟ್ಯದಿಂದಾಗೆನ್ಅ ರೂಪ ಸ್ವರೂಪ ವಿರೂಪ ಕುರೂಪಗಳು ಮೈತಾಳಿ ಜೀವಂತ ಕುಣಿದಾಡಿ ವೈಭಿನ್ಯಗಳು ವೈವಿಧ್ಯಗಳು ಆಕಾರ ಪಡೆದುವು. ಸಾಕಾರವಾದುವು. ಕಲಾಪ್ರಕಾರಗಳು ಜೀವ್ನಾ ಪಡೆದುವು. ಒಬ್ಬನ್ಹಂಗ ಇನ್ನೊಬ್ಬ

ಮಾತಾಡೂದುಲ್ಲ, ಒಬ್ಬನ್ಹಂಗ ಇನ್ನೊಬ್ಬ ಕತೀ ಕವನ ಬರೆಯೂದುಲ್ಲ, ಹಾಡೂದುಲ್ಲ, ಬಾರಸೂದುಲ್ಲ. ಹಂಗ ಬದುಕಬಾರದು, ಬರೀಬಾರದು, ಹಾಡಬಾರದು, ನುಡೀಬಾರದು; ಪ್ರತಿಲಿಪಿ, ಪ್ರತಿಸ್ವರ, ಪ್ರತಿಧ್ವನಿ, ಪ್ರತಿವರ್ಣ, ಪ್ರತಿಲೇಖ, ಪ್ರತಿರೀತಿ, ಪ್ರತಿರೂಪ ಆಗಬಾರದು. ನಕಲುಪ್ರತಿ ಅಥವಾ ಛಾಯಾಪ್ರತಿ ಯಾ ಕಾರ್ಬನ್‌ಕಾಪಿ ಆಗೂದರಾಗ ಏನಯ್ತಿ. ಹಂಗ ಆದದ್ದಾರೆ ಆದರ ಹಂಗ ಮಾಡಾವ್ನ ಒಬ್ಬರ ಬಾಲ ಅನಿಸಿಗೋತಾನು, ಹಿಂಬಾಲಕ ಅನಿಸಿಗೋತಾನು, ಎಲ್ಲಾ ರೀತೀಲೆ ಬರೇ 'ಬಾಲ'ಕ ಆದಾನು. ಅದಕ್ಕ ಒಬ್ಬರ್ಹಂಗ ಒಬ್ಬರು ಆಗಬಾರದು. ಇದೆಂಥಾ ವಿಚಿತ್ರ ನೋಡರಿ, ತಂದೀ ಹಂಗ ಮಗ ಆಗಬಾರದು, ತಾಯೀ ಹಂಗ ಮಗಳು ಆಗಬಾರದು. ಅಥವಾ ತಾಯೀ ಹಂಗನೂ ಮಗ ಆಗಬಾರದು, ತಂದೀ ಹಂಗನೂ ಮಗಳು ಆಗಬಾರದು. ಪಡಿಯಚ್ಚಿನ್ಯಾಗ ಹಾಕಿದ ಗೊಂಬಿ ಅಥವಾ ಗಣಪತಿಮೂರ್ತಿಹಂಗ ಒಬ್ಬರ್ಹಂಗ ಒಬ್ಬರು ಆದರ ಏನು ಸಾಧಿಸಿದ್ಹಂಗಾತು.

ಹಂಗಾರ ಇಷ್ಟು ವೈವಿಧ್ಯಗಳು ಮನಸ್ಸಿನ್ಯಾಗ ಇದ್ದರ, ಕಾಣಲಾರದ, ತಿಳೀಲಾರದ, ಅರಿವಿನ ತೆಕ್ಕೆಗೆ ಸಿಗಲಾರದ ವಿವರಗಳು, ಕುತೂಹಲಗಳು, ಅದ್ಭುತಗಳು ತುಂಬಿದ ಅಂಥಾ ಮನಸ್ಸಿನ ಮೂಲಭೂಮಿಯಾದ ದೇಹದ ಮಜಕೂರು ಏನಿರಬ್ಯಾಡ ? ದೇಹ ಸಯ್ತ ಒಂದರ್ಹಂಗ ಒಂದಿಲ್ಲ, ಒಬ್ಬರ ಇಡೀ ದೇಹ ಹೋಗಲಿ, ಒಂದು ಮೂಗಿನ್ಹಂಗ ಇನ್ನೊಂದು ಮೂಗಿಲ್ಲ, ಒಂದು ಕಣ್ಣಿನ್ಹಂಗ ಮತ್ತೊಂದು ಕಣ್ಣಿಲ್ಲ, ಒಂದು ಗದ್ದ-ಬಾಯಿ ಹಂಗ ಇನ್ನೊಂದು ಗದ್ದ-ಬಾಯಿ ಇಲ್ಲ. ಇಷ್ಟು ನಮೂನಿ ದೇಹದ ವೈಚಿತ್ರ್ಯಗಳನ್ನ ಆ ವಿಧಾತ, ಮಾಡಿದಾವ್ನ, ಸೃಷ್ಟಿಯ ಕರ್ತ ಅನಿಸಿಕೊಂಡಾವ್ನ ಹೆಂಗರ ಮಾಡಿರಬಹುದು ? ಅವ್ನಗ ಎಷ್ಟರ ಕೌಶಲ ಕರ್ತೃತ್ವಶಕ್ತಿ ತಾಳ್ಮೆ ಇದ್ದಿರಬಹುದು ? ಇಷ್ಟೆಲ್ಲಾ ಮಾಡಾಕ ಅವ್ನನ ಮನಸ್ಸು ಎಂಥಾದ್ದಿರಬಹುದು... ? ಬ್ಯಾಡ, ಈಗ ಮತ್ತ ಮನಸ್ಸಿನ ಉಸಾಬರಿಗೆ ಹೋಗೂದು ಬ್ಯಾಡ. ಅವನ ಸರ್ಜನಶೀಲತೆ ಅದ್ಭುತ ಅನ್ನಲೇಬೇಕು...

ಈಗ ನಾವು ಒಬ್ಬ ಪರಮಾತ್ಮನಿಂದ ಹಿಂಬರಿಕಿ ಹೊಂಟು, ಅನೇಕ ಆತ್ಮಗಳ ಅಡವೀ ಪಾಲಾಗಿ, ಅಸಂಖ್ಯ ಮನಸ್ಸುಗಳ ಸಂದಿಗೊಂದ್ಯಾಗ ಹಾದೀ ತಪ್ಪಿಸಿಕೊಂಡು, ಸಂಖ್ಯಾತೀತ ದೇಹಗಳ ಮುಳ್ಳುಬೇಲಿಗಳ ಕಂಟಿಗಳ ನಡುವೆ ಬಂದು ನಿಂತೇವಿ. ಅನೇಕದಿಂದ ಏಕ ಆಗಬೇಕಾಗಿದ್ದು ನಮ್ಮ ಗುದ್ದಾಟದಾಗ ಏಕದಿಂದ ಸಂಖ್ಯಾತೀತದ ಕಡೆಗೆ ಬಂದೇವಿ. ಅಂದಮ್ಯಾಲ ಇಂಥಾ ಸಂಖ್ಯಾಲೋಕಪ್ರಖ್ಯಾತ ದೇಹದ ಮಹಿಮಾ ಎಂಥಾದ್ದಿರಬೇಕು... ಶರೀರ, ತನ, ತನು, ವಪು, ಕಾಯಾ ಮುಂತಾದ ಮಾಯಾಪದಗಳ ಮಧ್ಯೆ ಮಂಡಿಸಿದ ದೇಹವನ್ನ ಪಡಿಯಾಕ, ಹಡಿಯಾಕ, ನೋಡಾಕ, ಕಾಡಾಕ ಎಷ್ಟೊಂದು ಹಂಬಲಗಳ ಮಹಾಜಾಲವನ್ನ ಆ ಮನಸ್ಸು ಅನ್ನೂದು ತಯಾರಿಸೇತಿ ಅನ್ನೂದನ್ನ ವಿಚಾರ ಮಾಡಾಕುನೂ ಮತ್ತ ಆ ಮನಸ್ಸೇ ಬೇಕಾಕ್ಕತಿ. ತ್ರಿಲೋಕದೊಳಗ, ತ್ರಿಕಾಲದೊಳಗ, ತ್ರಿಮದಮತ್ತವಾಗಿ ಸದಾಕಾಲ ಇರತೇನಂತ ತಿಳಕೊಂಡಸ್ಅ ಆ ಮನಸ್ಸಿನ ಚೂಪಾದ ತ್ರಿಶೂಲವಾದ ಅಹಂಕಾರದ ತುದೀ ಮ್ಯಾಲ ನಿಂತು ಕೂಗಾಡುವ ಈ ಕ್ಷಣಭಂಗುರ, ಅಶಾಶ್ವತ ದೇಹದ ಬಗ್ಗೆ ಏನೆಂಥಾ ಮೋಹ, ಕ್ಷೋಭೆ, ಪ್ರೀತಿ, ಶಾಂತಿಗಳ ಕಣಿವೆಗಳು... ಅಬಾಬಬಾಬಾ... 'ಈ ದೇಹದೊಳಗೇನಿಲ್ಲ ?' ಅನ್ನುವ ಕುತೂಹಲದ ದನಿ ಪ್ರಶ್ನೆಯದು. 'ಈ ದೇಹದೊಳಗೇನಿಲ್ಲ !' ಅನ್ನುವ ಉದ್ಗಾರದ ಧ್ವನಿ ಸಾಂತ್ವನದ್ದು. 'ಈ ದೇಹದೊಳಗೇನಿಲ್ಲ.' ಅನ್ನುವ ಪೂರ್ಣವಿರಾಮದ ಧಣಿ ನಮ್ಮನ್ನೆಲ್ಲಾರನೂ ಸುತ್ತಿಕೊಂಡು ನಿಂತಂಥಾ ಮಹಾಶಕ್ತಿ. ಈ ಶಕ್ತಿ ಅನ್ನೂದು ನಮ್ಮಲ್ಲಿ ನಪುಂಸಕಲಿಂಗ, ಕೆಲವು ಕಡೆ ಸ್ತ್ರೀಲಿಂಗ, ಕೆಲವು ಕಡೆ ಅನ್ಯಾನ್ಯಲಿಂಗ. ಆದ್ದರಿಂದ ಪರಮಾತ್ಮ ಇದ್ದಿರಬೇಕು. ಅಂದ್ಹಾಂಗ ಈ ಪರಮಾತ್ಮ ಅಂದರ ದೇವ'ರು' ಅಂತ ಯಾವಾಗಲೂ ಬಹುವಚನದಾಗ ಬಳಸ್ತಾರಲ್ಲ ಆ ನಪುಂಸ್ತ್ರೀ ಇದ್ದಿರಬೇಕು. ಎಲ್ಲಾದುಕುನೂ ಅಗದೀ ಖಾತ್ರೀ ಮೂಲ ಅಂದರ ದೇಹ. ಅಂದಮ್ಯಾಲ ದೇಹನ್ಅ ದೇವ, ದೇಹಗಳ್ಅ ದೇವರು ಅಂತ ನಪುಂಸಕದಿಂದ ಪುಲ್ಲಿಂಗಕ್ಕ ಏರಿಕಿ ಆಗಿರಬಹುದು. ಆದ್ದರಿಂದ ದೇಹ ಅಂದರ ದೇವ, ದೇಹಾಲಯನ್ಅ ದೇವಾಲಯ ಅಂತ ಅನಿಸಿದರ, ಭಾವಿಸಿದರ, ನಡಕೊಂಡರ ಅನ್ಯ ದೇವರನ್ನ ಯಾಕ ನಂಬಬೇಕೋ ಎಲ್ಲೆಲ್ಲಿ ಹುಡುಕಬೇಕೋ ಶರಣ ಅನ್ನುವ ಪ್ರಶ್ನೆ ಉದ್ಭವಿಸತಯ್ತಿ. ಯಾಕಂದರ ಭವ ಅನ್ನೂದು ದೇಹದ ಚರ್ಮ. ಚರ್ಮ ಎಲ್ಲಾ ಮರ್ಮಗಳ ಮೂಲ. ಆದ್ದರಿಂದ ಸರ್ವಮೂಲದೇಹದಿಂದ ಉದ್ಭವಿಸಿರುವ ಮನಸ್ಸು ಆತ್ಮ ಪರಮಾತ್ಮಗಳು ಲಿಂಗಾತೀತಸರ್ವಸ್ವ ಪ್ರಶ್ನೋದ್ಗಾರವಿರಾಮಗಳು.

SANKALANA : RNI NO. KARKAN 14160/10/1/2002-TC

ಸಂಕಲನ : ಸಂಪುಟ ೨, ಸಂಚಿಕೆ ೫ : ೧೪ ಸಪ್ಟಂಬರ್ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ / ಹೇಮಾ ಪಟ್ಟಣಶೆಟ್ಟಿ

•

• ಕುಸುಮಾ ಶಾನಭಾಗ • ಜಂಬಣ್ಣ ಅಮರಚಿಂತ

• ವಾಸಂತಿ ಪ್ರಭಾಕರ ನಾಯಕ • ನಿರ್ಮಲ ವೀರಣ್ಣ

• ಮುರಳೀಧರನ್ ಟಿ. / ಪಾರ್ವತಿ ಜಿ. ಐತಾಳ್

• ಸಿ. ನಾಗಣ್ಣ • ಹಾ. ವೆಂ. ನಾಗೇಶ್

• ಲಲಿತಾ ಸಿದ್ದಬಸವಯ್ಯ • ಹರಿಯಪ್ಪ ಪೇಜಾವರ

• ಶಶಿಧರ ತೋಡಕರ • ಆರ್ಯ

• ಎಚ್. ಎಸ್. ಉಮೇಶ • ವಸಂತಕುಮಾರ ಪೆರ್ಲ

•

ಚಂದ್ರಶೇಖರ ವಸ್ತ್ರದ, ಅಶೋಕ ಶೆಟ್ಟರ್, ರಾಮಚಂದ್ರ ದೇವ

ಜಿ. ಎಂ. ಹೆಗಡೆ, ಜಗದೀಶ ಮಂಗಳೂರಮಠ, ಅಪ್ಪಾಸಾಹೇಬ ಸನದಿ

ಸಂಪಿಗೆ ತೋಂಟದಾರ್ಯ, ಆರ್. ಎಂ. ಹೆಗಡೆ

ಎಂ. ಆರ್. ಮಂದಾರವಲ್ಲಿ

•

ಎಸ್. ಎಲ್. ಭೈರಪ್ಪ, ಗಿರೀಶ ಕಾರ್ನಾಡ

ಹೆಚ್. ಡಿ. ಮೋಹನಶಾಸ್ತ್ರಿ, ಎಂ. ಡಿ. ಗೋಗೇರಿ

ಶ್ಯಾಮಸುಂದರ ಬಿದರಕುಂದಿ, ಎಸ್. ಆರ್. ಗುಂಜಾಳ

ಬಸವರಾಜ ಮಲಶೆಟ್ಟಿ, ಬಸವರಾಜ ಜಗಜಂಪಿ, ವಿಜಯಾ

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಡಿ. ಎನ್. ಮುನಿಕೃಷ್ಣ, ಮಂಜುನಾಥ ತಿಗಡಿ

ಶಿವಾನಂದ ನಾಗನೂರ, ನಾ. ಮೊಗಸಾಲೆ, ವಿ. ಬಿ. ಅರ್ತಿಕಜೆ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೫೮೦ ೦೦೪